₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 01.04.2025 ಸಂಪುಟ: 10 ಸಂಚಿಕೆ: 75 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಶ್ವನಿ ಕುಮಾರ್ ಕೈಚಳಕ, ಮುಂಬೈಗೆ ಗೆಲುವು

ಕೆಕೆಆರ್ ವಿರುದ್ಧ ಮುಂಬೈ ತಂಡ 8 ವಿಕೆಟ್‌ಗಳ ಜಯ ಸಾಧಿಸಿದೆ. ಚೊಚ್ಚಲ ಪಂದ್ಯದಲ್ಲೇ 4 ವಿಕೆಟ್ ಪಡೆದ ಅಶ್ವನಿ ಕುಮಾರ್ ಈ ಸಾಧನೆಗೈದ ವಿಶ್ವದ 10ನೇ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಎಂಎಲ್‌ಸಿ ಸ್ಥಾನ ಭರ್ತಿ, ಸಂಪುಟ ವಿಸ್ತರಣೆ, ಹನಿಟ್ರ್ಯಾಪ್ ಸೇರಿ ಹಲವು ವಿಚಾರ ಚರ್ಚೆ ಸಂಭವ

ಸಿಎಂ ನಾಳೆ ದೆಹಲಿಗೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿದಂತೆ ಪರ-ವಿರೋಧ ಚರ್ಚೆ, ಸತೀಶ್ ಜಾರಕಿಹೊಳಿ-ಕುಮಾರಸ್ವಾಮಿ ಭೇಟಿ, ಹನಿಟ್ರ್ಯಾಪ್ ಆರೋಪ, ವಿಧಾನ ಪರಿಷತ್ ಸದಸ್ಯನ ಕೊಲೆಗೆ ಯತ್ನ ಸೇರಿ ಹಲವು ವಿವಾದಗಳ ಕುರಿತು ತೀವ್ರ ಚರ್ಚೆ ನಡೆಯುತ್ತಿರುವಾಗಲೇ ಸಿಎಂ ಸಿದ್ದರಾಮಯ್ಯ ಅವರು ಬುಧವಾರ ದೆಹಲಿಗೆ ಭೇಟಿ ನೀಡುತ್ತಿದ್ದು, ಪಕ್ಷದ ವರಿಷ್ಠರೊಂದಿಗೆ ಯಾವೆಲ್ಲ ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ ಎನ್ನುವ ಕುತೂಹಲ ಮೂಡಿದೆ.

ಕರ್ನಾಟಕ ಭವನದ ಉದ್ಘಾಟನೆಗೆ ಮುಖ್ಯಮಂತ್ರಿಗಳು ದೆಹಲಿಗೆ ತೆರಳುತ್ತಿದ್ದರೂ, ಅದಾದ ಬಳಿಕ ಪಕ್ಷದ ವರಿಷ್ಠರೊಂದಿಗೆ ರಾಜ್ಯದಲ್ಲಿನ ಬೆಳವಣಿಗೆಗೆ ಸಂಬಂಧಿಸಿದಂತೆ ಚರ್ಚಿಸಲಿದ್ದಾರೆ. ಹನಿಟ್ರ್ಯಾಪ್‌ನಿಂದ ಪಕ್ಷಕ್ಕೆ ಆಗಿರುವ ಡ್ಯಾಮೇಜ್‌ಗೆ ಸಂಬಂಧಿಸಿದಂತೆಯೂ ಮಾಹಿತಿ ನೀಡಲಿದ್ದು, ಈ ಪ್ರಕರಣದ ಬಗ್ಗೆ ಯಾವ ರೀತಿಯಲ್ಲಿ ತನಿಖೆ ನಡೆಸಬೇಕು ಎನ್ನುವ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ.

ಬಿಜೆಪಿ ನಾಯಕರು ಹನಿಟ್ರ್ಯಾಪ್ ಪ್ರಕರಣದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರನ್ನು ಸಿಲುಕಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಏನೆಲ್ಲ ಸವಾಲುಗಳಿವೆ, ರಾಜಣ್ಣ ಅವರು ಈ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸುವ ಅವಶ್ಯಕತೆ ಏಕೆ ಇತ್ತು ಎನ್ನುವ ಬಗ್ಗೆ ಹೈಕಮಾಂಡ್‌ಗೆ ವಿಸ್ತೃತ ವರದಿ ನೀಡಲಿದ್ದಾರೆ. ಇದೇ ರೀತಿ ಡಿ.ಕೆ.ಶಿವಕುಮಾರ್ ಕೂಡ ಪ್ರತ್ಯೇಕ ವರದಿ ನೀಡುವ ಸಾಧ್ಯತೆಯಿದೆ. ಈ ಎರಡೂ ವರದಿಗಳನ್ನು ಆಧರಿಸಿ ಮುಂದಿನ ಹೆಜ್ಜೆಗಳ ಬಗ್ಗೆ ಹೈಕಮಾಂಡ್ ಸಿಎಂಗೆ 'ಮಾರ್ಗದರ್ಶನ' ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ನೂತನ ಕರ್ನಾಟಕ ಭವನ ಉದ್ಘಾಟನೆ

ದೆಹಲಿ ಪ್ರವಾಸದ ವೇಳೆಯೇ ಸಿಎಂ ಸಿದ್ದರಾಮಯ್ಯ ಅವರು ಚಾಣಕ್ಯಪುರಿ ಪ್ರದೇಶದಲ್ಲಿ ನಿರ್ಮಾಣವಾಗಿರುವ ನೂತನ ಕರ್ನಾಟಕ ಭವನ ಉದ್ಘಾಟಿಸಲಿದ್ದಾರೆ. 51 ವರ್ಷ ಹಳೆಯದಾದ 3 ಅಂತಸ್ತಿನ ಕಟ್ಟಡವನ್ನು ಕೆಡವಿ ಅದೇ ಜಾಗದಲ್ಲಿ ಅಂದಾಜು 82 ಕೋಟಿ ರು. ವೆಚ್ಚದಲ್ಲಿ 5 ಅಂತಸ್ತಿನ ನೂತನ ಕಟ್ಟಡ ನಿರ್ಮಿಸಲು 2019ರಲ್ಲಿ ರಾಜ್ಯ ಸರಕಾರ ಅನುಮೋದನೆ ನೀಡಿತ್ತು. ಇದೀಗ 140 ಕೋಟಿ ರು. ವೆಚ್ಚದಲ್ಲಿ ಕಟ್ಟಡ ನಿರ್ಮಾಣಗೊಂಡಿದೆ. ಉದ್ಘಾಟನೆ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ. ವಿ.ಸೋಮಣ್ಣ ಇರಲಿದ್ದಾರೆ. ನೂತನ ಭವನದ ಕಟ್ಟಡವು ರಾಜ್ಯಪಾಲರು, ಸಿಎಂ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಇತರ ವಿವಿಐಪಿಗಳಿಗೆ ವಿಶೇಷ ಸೂಟ್‌ಗಳನ್ನು ಒಳಗೊಂಡಿದೆ.

ನಾಮನಿರ್ದೇಶನದ ಬಗ್ಗೆಯೂ ಚರ್ಚೆ: ವಿಧಾನಸಭೆಯಲ್ಲಿ ಸಂಪೂರ್ಣ ಬಹುಮತವಿದ್ದರೂ, ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ಪರಿಷತ್‌ನಲ್ಲಿ ಸಂಪೂರ್ಣ ಬಹುಮತ ಪಡೆಯುವುದಕ್ಕೆ ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ. ಆದರೆ ಈಗಾಗಲೇ ಖಾಲಿಯಾಗಿರುವ 4 ವಿಧಾನ ಪರಿಷತ್ ಸ್ಥಾನಗಳಿಗೆ ನಾಮನಿರ್ದೇಶನ ಮಾಡಲು ಅವಕಾಶವಿದ್ದು, ಯಾರನ್ನು ನೇಮಿಸಬೇಕು ಎನ್ನುವ ಬಗ್ಗೆಯೂ ಹೈಕಮಾಂಡ್ ಜತೆ ಚರ್ಚಿಸಲಿದ್ದಾರೆ. ಮುಂದಿನ ಅಧಿವೇಶನದ ವೇಳೆಗೆ ನಾಮನಿರ್ದೇಶನ ಪ್ರಕ್ರಿಯೆ ಪೂರ್ಣಗೊಳಿಸಿದರೆ, ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಬಹುದು. ಈ ಮೂಲಕ ಸಭಾಪತಿ ಸ್ಥಾನವನ್ನು ಕಾಂಗ್ರೆಸ್‌ನ ಒಬ್ಬರಿಗೆ ನೀಡಬಹುದು ಎಂಬ ಲೆಕ್ಕಾಚಾರಗಳಿವೆ. ಆದ್ದರಿಂದ ಈ ಭೇಟಿಯ ವೇಳೆಯೇ, ನಾಮನಿರ್ದೇಶಿತ ಸದಸ್ಯರ ಹೆಸರುಗಳು ಅಂತಿಮವಾಗುವುದು ನಿಶ್ಚಿತ ಎನ್ನಲಾಗುತ್ತಿದೆ.

ಸಚಿವ ಸಂಪುಟದ ಬಗ್ಗೆಯೂ ಚರ್ಚೆ?: ಇನ್ನೆರಡು ತಿಂಗಳಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆಯಲಿದೆ. ಈ ಹಂತದಲ್ಲಿ ಸಚಿವ ಸಂಪುಟದಲ್ಲಿ ಕೆಲವೊಂದಿಷ್ಟು ಮಾರ್ಪಾಡು, ಪುನಾರಚನೆ ಬಗ್ಗೆ ಈಗಾಗಲೇ ಚರ್ಚೆಗಳು ಆರಂಭವಾಗಿವೆ. ಆದ್ದರಿಂದ ದೆಹಲಿ ಭೇಟಿಯ ವೇಳೆ ಸಿಎಂ, ಡಿಸಿಎಂ ಅವರು ಹೈಕಮಾಂಡ್ ಜತೆ ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸುವ ಸಾಧ್ಯತೆಯಿದೆ. ಪ್ರಮುಖವಾಗಿ ವಾಲ್ಮೀಕಿ ಹಗರಣದ ಹೊಣೆ ಹೊತ್ತು ನೈತಿಕ ರಾಜೀನಾಮೆ ನೀಡಿದ್ದ ನಾಗೇಂದ್ರ ಅವರನ್ನು ವಾಪಸು ಸಂಪುಟಕ್ಕೆ ಸೇರಿಸಿಕೊಳ್ಳಬೇಕು. ಇದರೊಂದಿಗೆ ಉತ್ತಮ ಸಾಧನೆ ತೋರದ ಕೆಲವೊಂದಷ್ಟು ಸಚಿವರನ್ನು ಬದಲಾಯಿಸುವ ಕುರಿತು ಚರ್ಚಿಸಲಿದ್ದಾರೆ ಎನ್ನಲಾಗಿದೆ.

ಹಾಲು, ವಿದ್ಯುತ್ ತುಟ್ಟಿ, ಆಸ್ತಿ ತೆರಿಗೆ ಬಾಕಿಯಾದರೆ ದುಪ್ಪಟ್ಟು ವಸೂಲಿ

ದುಬಾರಿ ದುನಿಯಾ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಣಕಾಸು ವರ್ಷದ ಇಂದಿನಿಂದ ಜನಜೀವನದ ಮೇಲೆ ಬೆಲೆ ಏರಿಕೆಯ ಭಾರ ಬೀಳಲಿದೆ.

ರಾಜ್ಯದ ಜನರು ಈಗಾಗಲೇ ಬೆಲೆ ಏರಿಕೆಯಿಂದಾಗಿ ಕಂಗಾಲಾಗಿ ಹೋಗಿದ್ದು, ಬಸ್, ಮೆಟ್ರೋ, ಹಾಲು, ಕಾಫಿ, ವಿದ್ಯುತ್, ಟೋಲ್ ದರಗಳು ಏರಿಕೆ ಕಂಡಿದೆ. ಏಪ್ರಿಲ್ 1ರಿಂದ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲೂ ಹಲವು ವಸ್ತು, ವಹಿವಾಟುಗಳಲ್ಲಿ ಪರಿಷ್ಕೃತ ದರ ಜಾರಿಗೆ ಬರಲಿದೆ.

ರಾಜ್ಯದಲ್ಲಿ ಹಾಲಿನ ದರ ಪ್ರತೀ ಲೀಟರ್‌ಗೆ 4 ರುಪಾಯಿ ಹೆಚ್ಚಳವಾಗಿದ್ದು, ಈ ಪರಿಷ್ಕೃತ ದರ ಇಂದಿನಿಂದ ಜಾರಿಯಾಗಲಿದೆ. ಗೃಹ ಹಾಗೂ ವಾಣಿಜ್ಯ ಬಳಕೆಯ ವಿದ್ಯುತ್ ದರ ಪರಿಷ್ಕರಣೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ಯೂನಿಟ್ ವಿದ್ಯುತ್ ದರ ಇಳಿಕೆಯಾಗಿದ್ದರೂ, ಗೃಹ ಬಳಕೆಯ ಫಿಕ್ಸಡ್ ದರ 120 ರಿಂದ 145 ರು.ಗೆ ಏರಿಕೆಯಾಗಲಿದೆ. ಅದರಂತೆ ಬೆಂಗಳೂರಿನಲ್ಲಿ ಕಸದ ಸೆಸ್ ಪ್ರತಿ ಕೆಜಿಗೆ 12 ರುಪಾಯಿ ವಿಧಿಸಿ ಪಾಲಿಕೆಯಿಂದ ಆದೇಶ ಹೊರಡಿಸಲಾಗಿದ್ದು, ಇಂದಿನಿಂದ ಪರಿಷ್ಕೃತ ದರ ಜಾರಿಯಾಗಲಿದೆ. ಇದಲ್ಲದೆ ಹಾಲಿನ ದರ ಲೀಟರ್‌ಗೆ 4 ರು. ಹೆಚ್ಚಳದಿಂದಾಗಿ ಟೀ, ಕಾಫಿ ದರ ಶೇ.10-15ರಷ್ಟು ದರ ಏರಿಕೆಯಾಗಲಿದೆ. ಲಿಫ್ಟ್, ಜನರೇಟರ್, ಟ್ರಾನ್ಸ್‌ಫಾರ್ಮರ್ ದರ 10 ಪಟ್ಟು ಹೆಚ್ಚಳವಾಗಿದ್ದು, ಪರಿಷ್ಕೃತ ದರ ಜಾರಿಯಾಗಲಿದೆ.

ಹೊಸ ವಾಹನ ಖರೀದಿ ಮಾಡುವವರಿಗೆ ಡಬಲ್ ಶಾಕ್ ಕಾದಿದೆ. 10 ಲಕ್ಷದೊಳಗಿನ ಹಳದಿ ಬೋರ್ಡ್ ವಾಹನ ಖರೀದಿ ಮಾಡುವವರು, ತಮ್ಮ ವಾಹನಗಳಿಗೂ ಲೈಫ್ ಟೈಮ್ ಟ್ಯಾಕ್ಸ್ ಕಟ್ಟಬೇಕಿದೆ. ಅಲ್ಲದೆ, ಹತ್ತು ಲಕ್ಷ ರುಪಾಯಿ ಬೆಲೆಬಾಳುವ ಕಾರು ಖರೀದಿ ಮಾಡಿದರೆ ಸರಕಾರಕ್ಕೆ 50 ರಿಂದ 70 ಸಾವಿರ ತೆರಿಗೆ ಪಾವತಿಸಬೇಕಾಗುತ್ತದೆ. ಕಳೆದ ವರ್ಷ ಹತ್ತು ಲಕ್ಷ ರುಪಾಯಿ ಮೇಲಿನ ಹಳದಿ ಬೋರ್ಡ್ ವಾಹನ ಖರೀದಿ ಮಾಡುವ ವಾಹನಗಳಿಗೆ ಶೇ.11ರಷ್ಟು ಲೈಫ್ ಟೈಮ್ ಟ್ಯಾಕ್ಸ್ ಹಾಕಲಾಗಿತ್ತು. ಈ ಬಾರಿಯ ಬಜೆಟ್‌ನಲ್ಲಿ ಹತ್ತು ಲಕ್ಷ ರುಪಾಯಿಯ ಒಳಗಿನ ವಾಹನಗಳಿಗೂ ಲೈಫ್ ಟೈಮ್ ಟ್ಯಾಕ್ಸ್ ಪಾವತಿವಂತೆ ಆದೇಶ ಮಾಡಲಾಗಿದೆ. ಅಲ್ಲದೇ 25 ಲಕ್ಷದ ಮೇಲಿನ ಎಲೆಕ್ಟ್ರಿಕ್ ಕಾರಿಗೆ ಶೇ.10ರಷ್ಟು ತೆರಿಗೆ ನೀಡಲಾಗಿದೆ. ಅದರಂತೆ ಉಕ್ಕಿನ ದರ ಹೆಚ್ಚಳದ ಹೆಸರಲ್ಲಿ ವಾಹನ ತಯಾರಿಕಾ ಕಂಪನಿಗಳು ಶೇ.3 ರಿಂದ ಶೇ.4 ರಷ್ಟು ದರ ಏರಿಕೆ ಮಾಡಲು ನಿರ್ಧಾರ ಮಾಡಿವೆ. → 4

ಯಾವ್ಯಾವ ದರ ಏರಿಕೆ?

- ಈಗಾಗಲೇ ಮೆಟ್ರೋ ಪ್ರಯಾಣ ದರ ಶೇ.46 ಏರಿಕೆ
- ಸರಕಾರಿ ಬಸ್ ಪ್ರಯಾಣ ದರ ಶೇ.15ರಷ್ಟು ಏರಿಕೆ
- ವಿದ್ಯುತ್ ದರ ಫಿಕ್ಸೆಡ್ ಶುಲ್ಕ ದರ ಹೆಚ್ಚಳ
- ಆಸ್ತಿ ನೋಂದಣಿ ದರ ಏರಿಕೆ

ಟೋಲ್ ಶುಲ್ಕ ಹೆಚ್ಚಳ



ಇಂದಿನಿಂದ ಹೊಸ ಟೋಲ್ ನೀತಿ ಜಾರಿಯಾಗಲಿದ್ದು, ರಾಜ್ಯಾದ್ಯಂತ ಶೇ.5ರಷ್ಟು ಟೋಲ್ ಶುಲ್ಕ ಹೆಚ್ಚಾಗಲಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ. ಬೆಲೆ ಏರಿಕೆ, ಹಣದುಬ್ಬರಕ್ಕೆ ಅನುಗುಣವಾಗಿ ವಾರ್ಷಿಕವಾಗಿ ಮಾಡುವ ದರ ಪರಿಷ್ಕರಣೆ ಪ್ರಕ್ರಿಯೆಯ ಭಾಗವಾಗಿ ಕನಿಷ್ಠ ಶೇ.3 ರಿಂದ ಗರಿಷ್ಠ 5ರಷ್ಟು ಏರಿಕೆಯಾಗಲಿದೆ. ರಾಜ್ಯದ 66 ಟೋಲ್ ಪ್ಲಾಜಾಗಳಲ್ಲಿ ಹೆಚ್ಚಿನ ಟೋಲ್‌ಗಳಿಗೆ ಪರಿಷ್ಕೃತ ದರಗಳು ಅನ್ವಯವಾಗಲಿವೆ.

ಸೊಂಪಾದ ಪುಟಗಳು

ಯತ್ನಾಳ್ ಉಚ್ಚಾಟನೆ ಆಯ್ತು, ಮುಂದೆ?
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಹಣಕಾಸು ನಿರ್ವಹಣೆ ಬಹಳ ಮುಖ್ಯ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಪರಿಸ್ಥಿತಿ ನಿಮ್ಮ ಪರವಾಗಿ ಇಲ್ಲದ ಸಮಯದಲ್ಲೂ ಮನಸ್ಸಿನ ಶಾಂತಿ ಮತ್ತು ಸಹನೆಯನ್ನು ಕಳೆದುಕೊಳ್ಳದೇ ಸಮಚಿತ್ತದಿಂದ ವರ್ತಿಸುವುದು ಅತ್ಯಂತ ಬಲಿಷ್ಠ ವ್ಯಕ್ತಿಯ ದೊಡ್ಡ ಸಾಮರ್ಥ್ಯ. ಈ ಗುಣವನ್ನು ಬೆಳೆಸಿಕೊಂಡರೆ, ಎಂಥ ಸನ್ನಿವೇಶವನ್ನಾದರೂ ಎದುರಿಸಬಹುದು.

ವಕ್ರತುಂಡೋಕ್ತಿ

ಯಾವುದೇ ಕೆಲಸವನ್ನಾದರೂ ಕೊನೆಕ್ಷಣದಲ್ಲಿ ಮಾಡುವ ಒಂದು ಪ್ರಯೋಜನವೆಂದರೆ ಅದನ್ನು ಅತ್ಯಂತ ಶೀಘ್ರವಾಗಿ ಮಾಡಿ ಮುಗಿಸಬಹುದು.

13 ಕೋಟಿ ಮೌಲ್ಯದ ಚಿನ್ನ ಕದ್ದವರ ಬಂಧನ

ದಾವಣಗೆರೆ: ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿದ್ದ ಜಿಲ್ಲೆಯ ನ್ಯಾಮತಿ ಪಟ್ಟಣದ ಎಸ್‌ಬಿಐ ಬ್ಯಾಂಕ್ ದರೋಡೆ ಪ್ರಕರಣವನ್ನು ಕೊನೆಗೂ ದಾವಣಗೆರೆ ಪೊಲೀಸರು ಬೇಧಿಸಿ 13 ಕೋಟಿ ರು. ಮೌಲ್ಯದ 17.5 ಕೆ.ಜಿ. ಚಿನ್ನಾಭರಣ ವಶಕ್ಕೆ ಪಡೆದು ಆರು ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಮೂಲತಃ ತಮಿಳುನಾಡಿನ ಮಧುರೈನ ವಿಜಯಕುಮಾರ್(30), ಅಜಯ್‌ಕುಮಾರ್(28), ಪರಮಾನಂದ (30) ಅಭಿಷೇಕ (23), ಚಂದ್ರು (23), ಮಂಜುನಾಥ್ (32) ಎಂಬುವವರನ್ನು ಬಂಧಿಸಲಾಗಿದೆ. ವರದಿ ಪುಟ → 4

ಮಾತಂದ್ರೆ ಮಾತು

ಅಧಿಕಾರದ ಕೇಂದ್ರೀಕರಣ, ವಾಣಿಜ್ಯೀಕರಣ ಮತ್ತು ಖಾಸಗಿ ವಲಯಕ್ಕೆ ಹೂಡಿಕೆಗಳ ಹೊರಗುತ್ತಿಗೆ ಮತ್ತು ಪಠ್ಯಪುಸ್ತಕಗಳ ಕೋಮುವಾದಿಕರಣ ಮೋದಿ ಸರಕಾರದ ಪ್ರಮುಖ ಅಜೆಂಡಾವಾಗಿದೆ. ಈ ಮೂರು 'ಸಿ'ಗಳು ಇಂದು ಭಾರತೀಯ ಶಿಕ್ಷಣವನ್ನು ಕಾಡುತ್ತಿವೆ. ಭಾರತದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಈ ಹತ್ಯೆ ಕೊನೆಗೊಳ್ಳಬೇಕು.

- ಸೋನಿಯಾ ಗಾಂಧಿ
ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ

ಫನ್‌ತರಂಗ
- ರಘುಪತಿ ಶೃಂಗೇರಿ -



ಏಪ್ರಿಲ್ 7ರಿಂದ ರಾಜ್ಯ ಸರಕಾರದ ವಿರುದ್ಧ ಜನಾಕ್ರೋಶ ಯಾತ್ರೆ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

ಬೆಲೆ ಏರಿಕೆ ವಿರುದ್ಧ ಇಂದು ಅಹೋರಾತ್ರಿ ಧರಣಿ

ಬೆಂಗಳೂರು: ಬೆಲೆ ಏರಿಕೆ ಸೇರಿದಂತೆ ಹಲವು ವಿಚಾರ ಮುಂದಿಟ್ಟುಕೊಂಡು ಮಂಗಳವಾರ ಅಹೋರಾತ್ರಿ ಧರಣಿ ಮಾಡಲಿರುವ ಬಿಜೆಪಿ, ರಾಜ್ಯಾದ್ಯಂತ ಜನಜಾಗೃತಿಗಾಗಿ ಏ.7ರಿಂದ ಜನಾಕ್ರೋಶ ಯಾತ್ರೆ ಆರಂಭಿಸಲಿದೆ.

ಬಡವರಿಗೆ ಬರೆ ಎಳೆಯುವ ರಾಜ್ಯದ ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ. ರಾಜ್ಯ ಸರಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯುವ ತನಕ ಹೋರಾಟ ಮಾಡಲು ನಿರ್ಧರಿಸಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರಿನ ಫ್ರೀಡಂಪಾರ್ಕಿನಲ್ಲಿ ಏಪ್ರಿಲ್ 2ರ ಬೆಳಗ್ಗೆ 11 ಗಂಟೆಯಿಂದ ಕಾಂಗ್ರೆಸ್ ಸರಕಾರದ ಬೆಲೆ ಏರಿಕೆಯ ವಿರುದ್ಧ ಅಹೋರಾತ್ರಿ ಧರಣಿ ಪ್ರಾರಂಭಿಸಲಿದ್ದೇವೆ. ಬಿಜೆಪಿಯ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು, ವಿಧಾನ ಪರಿಷತ್ ಮಾಜಿ ಸದಸ್ಯರು, ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು, ರಾಜ್ಯದ ಎಲ್ಲ ಪದಾಧಿಕಾರಿಗಳು, ಜಿಲ್ಲಾ ಅಧ್ಯಕ್ಷರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಇದಲ್ಲದೆ, ಬಿಜೆಪಿಯ 8 ಶಾಸಕರನ್ನು ಅಮಾನತು ಮಾಡಿರುವುದನ್ನು ಆಕ್ಷೇಪಿಸಿ ಅದೇ ದಿನ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸುತ್ತೇವೆ. ಅಲ್ಲದೆ, ಏ.5ರಂದು ರಾಜ್ಯದ ಎಲ್ಲ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ, ಮಂಡಲದಲ್ಲಿ ಕಾರ್ಯಕರ್ತರು ಪ್ರತಿಭಟನೆ ಮಾಡುತ್ತಾರೆ ಎಂದರು.

7ರಿಂದ ಜನಾಕ್ರೋಶ ಯಾತ್ರೆ: ಎಸ್‌ಇಪಿ-ಟಿಎಸ್‌ಪಿ ಹಣ ದುರುಪಯೋಗ ಹಾಗೂ ಮುಸ್ಲಿಂ ಮೀಸಲಾತಿ ಖಂಡಿಸಿ ಪ್ರತಿಭಟನೆ ನಡೆಸಲು ಬಿಜೆಪಿ ನಿರ್ಧರಿಸಿದ್ದು, ಏಪ್ರಿಲ್ 7ರಂದು ಮಧ್ಯಾಹ್ನ 3ಕ್ಕೆ ಮೈಸೂರಿನಿಂದ ಜನಜಾಗೃತಿ ಹೋರಾಟ ಆರಂಭವಾಗಲಿದೆ. → 4

ಬೆಲೆ ಏರಿಕೆ ಖಂಡಿಸಿ ಬಿಜೆಪಿ ಹಮ್ಮಿಕೊಂಡಿರುವ ಹೋರಾಟದ ಪೋಸ್ಟರ್‌ಗಳನ್ನು ಬೆಂಗಳೂರಿನ ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಬಿಜೆಪಿ ಮುಖಂಡರು ಬಿಡುಗಡೆಗೊಳಿಸಿದರು.

ಈ ನಾಡಿನ ಜನ ದೇಶದಲ್ಲೇ ಅತ್ಯಂತ ದುಬಾರಿ ಜೀವನ ನಡೆಸಬೇಕಾದ ದುಸ್ಥಿತಿ ಬಂದಿರುವುದಕ್ಕೆ ಕಾಂಗ್ರೆಸ್ ಕಾರಣ. ಸೇವಿಸುವ ಗಾಳಿ ಬಿಟ್ಟರೆ ಉಳಿದೆಲ್ಲವುಗಳ ದರ ಏರಿಸಲಾಗಿದೆ. ಮತದಾರರಿಗೆ ಶಾಪಗ್ರಸ್ತ ಸರಕಾರ ಇದಾಗಿದೆ.
-ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ನಿಂತ ನೀರಾಗಿವೆ. 2028ರಲ್ಲಿ ಬಿಜೆಪಿ ಸರಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕಿದೆ. ಇದಕ್ಕಾಗಿ ಪಕ್ಷದ ಸಂಘಟನೆ ಮಾಡುತ್ತೇವೆ. ನನ್ನ ಪಕ್ಷ ನನ್ನ ತಾಯಿ ಇದ್ದಂತೆ ಎಂಬ ಚಿಂತನೆ ನನ್ನದು. ಯತ್ನಾಳ್ ಅವರ ವಿಚಾರದಲ್ಲಿ ಪಕ್ಷ ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಮಾಡಲಿದೆ.
-ಬಿ.ಶ್ರೀರಾಮುಲು ಮಾಜಿ ಸಚಿವ

ಶಾಸಕ ರಾಜೇಂದ್ರ ಹತ್ಯೆಗೆ ಸುಪಾರಿ: ಐವರು ವಶಕ್ಕೆ

ತುಮಕೂರು: ಸಹಕಾರ ಸಚಿವ ಕೆ.ಎನ್ ರಾಜಣ್ಣ ಅವರ ಪುತ್ರ, ವಿಧಾನ ಪರಿಷತ್ ಸದಸ್ಯ ರಾಜೇಂದ್ರ ತಮ್ಮ ಹತ್ಯೆ ಸಂಚು ಸಂಬಂಧ ದೂರು ದಾಖಲಿಸಿದ ಬೆನ್ನಿಗೇ, ಈ ಕುರಿತ ಸಂಭಾಷಣೆಯುಳ್ಳ ಆಡಿಯೊವೊಂದು ಬಿಡುಗಡೆಯಾಗಿದೆ. ಈ ಸಂಬಂಧ ಓರ್ವ ಮಹಿಳೆ, ಇಬ್ಬರು ಯುವಕರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ರಾಜೇಂದ್ರ ಹತ್ಯೆ ಸುಪಾರಿ ಸಂಬಂಧ ಪುಷ್ಪಾ ಎಂಬಾಕೆ ರಾಕಿ ಎಂಬಾತನೊಂದಿಗೆ ಮಾತನಾಡಿರುವುದು ಬಹಿರಂಗಗೊಂಡಿದೆ. ಫೋನ್ ಸಂಭಾಷಣೆಯಲ್ಲಿ ಆರೋಪಿಗಳಾದ ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಪೊಲೀಸರು ಈ ಐವರ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಳೆದ ನವೆಂಬರ್‌ನಲ್ಲಿ ರಾಜೇಂದ್ರ ಅವರ ಮಗಳ ಹುಟ್ಟುಹಬ್ಬದ ಸಂಬಂಧ ಡೆಕೋರೇಷನ್‌ಗೆ ಜೈಪುರದ ಇಬ್ಬರು ಹುಡುಗರು ಬಂದಿದ್ದರು. ಆ ಇಬ್ಬರನ್ನೂ ಜೈಪುರ ಸೋಮ ಎಂಬಾತ ಕಳುಹಿಸಿದ್ದ ಎನ್ನಲಾಗಿದೆ. ಆಗಲೇ ಹತ್ಯೆಗೆ ಯತ್ನ ನಡೆದಿತ್ತು ಎಂದು ಆಡಿಯೊದಲ್ಲಿ ಪುಷ್ಪಾ ಮಾಹಿತಿ ನೀಡಿದ್ದಾಳೆ. ''ಸೋಮನಿಗೆ 5 ಲಕ್ಷ ಹಣ ಬಂದಿದೆ. ಪೊಲೀಸರು ಕರೆದು ವಿಚಾರಣೆ ಮಾಡಿದ್ರೆ ಎಲ್ಲವೂ ಬಹಿರಂಗವಾಗಲಿದೆ. ರಾಜೇಂದ್ರ ಅವರ ಮುಂದೆ ನಾನೇ ಹೇಳ್ತೀನಿ, ನನ್ನ ಕರೆದುಕೊಂಡು ಹೋಗು'' ಅಂತ ರಾಕಿ ಎನ್ನುವವನೊಂದಿಗೆ ಪುಷ್ಪಾ ಹೇಳಿಕೊಂಡಿದ್ದಾಳೆ. 'ಜೈಪುರದ ಮತ್ತೋರ್ವ ರೌಡಿ ಶೀಟರ್ ಪ್ರಸಿಯನ್ನೂ ಮರ್ಡರ್ ಮಾಡುವುದಾಗಿ ಸೋಮ ಹೇಳಿದ್ದಾನೆ. ಅದಕ್ಕಾಗಿ ಬೆಂಗಳೂರಿನ ಕಲಾಸಿಪಾಳ್ಯದಿಂದ ಇಬ್ಬರು ತಮಿಳು ಹುಡುಗರನ್ನು ಸೋಮ ಕರೆಸಿಕೊಳ್ತಿದ್ದಾನೆ. ಜೈಲಿನಲ್ಲಿರುವ ಸ್ಟೀಫನ್ ಗುಂಡನನ್ನು ಪೆರೋಲ್ ಮೇಲೆ ಕರೆದು ಕೊಂಡು ಬರಲು ಸೋಮ ಪ್ಲಾನ್ ಮಾಡಿದ್ದಾನೆ. ಅವನನ್ನು ಕರೆಸಿ ನೆಟ್‌ವರ್ಕ್ ಇಲ್ದೇ ಇರೋ ಜಾಗದಲ್ಲಿ ಇಡೋಕೆ ಮನೆ ಮಾಡ್ತಿದ್ದಾನೆ'. ಎಂದು ಆಡಿಯೋನಲ್ಲಿ ಪುಷ್ಪಾ ಎನ್ನುವ ಮಹಿಳೆ ಮಾಹಿತಿ ನೀಡಿದ್ದಾಳೆ.

ಎಫ್‌ಡಿಎ ಅಧಿಕಾರಿಗಳಿಂದ ದಾಳಿ, ನೋಟಿಸ್ ಜಾರಿ

ಐಸ್‌ಕ್ರೀಂನಲ್ಲಿ ಡಿಟರ್ಜೆಂಟ್

ಬೆಂಗಳೂರು: ಕಳಪೆ ಗುಣಮಟ್ಟದ ಉತ್ಪನ್ನ ಬಳಸಿ ಐಸ್‌ಕ್ರೀಂ ಮತ್ತು ತಂಪು ಪಾನೀಯ ತಯಾರಿಸುತ್ತಿರುವ ಆರೋಪದ ಮೇಲೆ ತಯಾರಿಕಾ ಘಟಕಗಳ ಮೇಲೆ ದಾಳಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ತಪಾಸಣೆಯಲ್ಲಿ ಆಘಾತಕಾರಿ ಉಲ್ಲಂಘನೆಗಳು ಪತ್ತೆಯಾಗಿವೆ. ಐಸ್‌ಕ್ರೀಮ್‌ಗಳಲ್ಲಿ ಕೆನೆ ಬಣ್ಣದ ವಿನ್ಯಾಸ ರಚಿಸಲು ಡಿಟರ್ಜೆಂಟ್ ಪೌಡರ್ ಬಳಸಲಾಗುತ್ತಿತ್ತು. ಕೂಲ್ ಡ್ರಿಂಕ್‌ಗಳಲ್ಲಿ ಮೂಳೆಗಳನ್ನು ದುರ್ಬಲಗೊಳಿಸುವ ಫಾಸ್ಪರಿಕ್ ಆಮ್ಲ ಹಾಗೂ ಫಿಜ್ ಅನ್ನು ಹೆಚ್ಚಿಸಲು ಬಳಸಲಾಗುತ್ತಿತ್ತು. 97 ಅಂಗಡಿಗಳಿಗೆ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸ್ಲೋಚ್ ಹ್ಯಾಟ್ ಬಳಕೆಯಿಂದ ಆರೋಗ್ಯಕ್ಕೆ ಹಾನಿ

ಶೀಘ್ರದಲ್ಲೇ ಪೊಲೀಸರ ಟೋಪಿ ಶೈಲಿ ಬದಲು?

ಬೆಂಗಳೂರು: ಪೊಲೀಸರಿಗೆ ಹಳೇ ಮಾದರಿಯ ಸ್ಲೋಚ್ ಹ್ಯಾಟ್ ಬದಲಿಗೆ ಪೀಕ್ ಕ್ಯಾಪ್ ನೀಡುವ ಕುರಿತು ಚರ್ಚೆ ನಡೆಸಿ ವರದಿ ನೀಡುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಸೂಚಿಸಿದ್ದು, ಈ ಸಂಬಂಧ ಏಪ್ರಿಲ್ 4ರಂದು ಪೊಲೀಸ್ ಕಿಟ್ ನಿರ್ದಿಷ್ಟತಾ ಸಮಿತಿ ಸದಸ್ಯರು ಸಭೆ ಸೇರಲಿದ್ದಾರೆ.

ಈ ಹಿಂದೆಯೂ ಕಾನ್‌ಸ್ಟೇಬಲ್‌ಗಳ ಕ್ಯಾಪ್ ಬದಲಾವಣೆ ಕುರಿತು ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲು ಹಿರಿಯ ಅಧಿಕಾರಿಗಳ ಸಭೆ ನಡೆಸಲಾಗಿತ್ತು. ಆದರೆ, ಅದಾಗಲೇ ಲಕ್ಷಾಂತರ ಸ್ಲೋಚ್ ಹ್ಯಾಟ್‌ಗಳು ಸಿದ್ಧವಾಗಿದ್ದರಿಂದ ಪೀಕ್ ಕ್ಯಾಪ್ ವಿತರಣೆಗೆ ಒಮ್ಮತದ ಅಭಿಪ್ರಾಯ ಮೂಡಿರಲಿಲ್ಲ. ಇದೀಗ ಪೀಕ್ ಕ್ಯಾಪ್ ವಿತರಣೆ ಬಗ್ಗೆ ಚರ್ಚಿಸಲು ಮತ್ತೊಮ್ಮೆ ಸಭೆ ನಡೆಯಲಿದೆ.

ಕಾರಣಗಳೇನು?: ಸ್ಲೋಚ್ ಹ್ಯಾಟ್ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳ ಬಗ್ಗೆ ಇತ್ತೀಚೆಗೆ ಕೇಂದ್ರ ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿತ್ತು. ಅಲ್ಲದೆ ಪ್ರತಿಭಟನೆ, ರ್‍ಯಾಲಿ, ಅಪರಾಧಿಗಳನ್ನು ಬೆನ್ನತ್ತುವ ಸಂದರ್ಭಗಳಲ್ಲಿ ಸ್ಲೋಚ್ ಹ್ಯಾಟ್ ಧರಿಸಿ ಕರ್ತವ್ಯ ನಿರ್ವಹಿಸುವುದು ಕಿರಿಕಿರಿಯುಂಟು ಮಾಡುತ್ತಿದೆ. ಹ್ಯಾಟ್ ಕೆಳಗೆ ಬಿದ್ದರೆ ಇಲಾಖೆ ಸಮವಸ್ತ್ರಕ್ಕೆ ಅಗೌರವ ತೋರಿದಂತಾಗುತ್ತದೆ. ಆದ್ದರಿಂದ ಹಳೇ ಮಾದರಿಯ ಹ್ಯಾಟ್ ಬದಲು ತಲೆಯ ಮೇಲೆ ಗಟ್ಟಿಯಾಗಿ ನಿಲ್ಲುವಂತಹ ಎಲಾಸ್ಟಿಕ್ ಮಾದರಿಯ ಕ್ಯಾಪ್‌ಗಳನ್ನು ನೀಡಿದರೆ ಉತ್ತಮ ಎನ್ನುವುದು ಪೊಲೀಸ್ ಸಿಬ್ಬಂದಿಯ ಬಹುದಿನಗಳ ಬೇಡಿಕೆಯಾಗಿದೆ.

ಪ್ರಸ್ತುತ ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮತ್ತಿತರ ರಾಜ್ಯಗಳ ಕಾನ್‌ಸ್ಟೇಬಲ್‌ಗಳಿಗೆ ಪೀಕ್ ಕ್ಯಾಪ್‌ಗಳನ್ನು ನೀಡಲಾಗಿದೆ. ಅದೇ ಮಾದರಿಯಲ್ಲಿ ಕರ್ನಾಟಕದ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೂ ಪೀಕ್ ಕ್ಯಾಪ್ ನೀಡುವ ಕುರಿತಾಗಿ ಪರಿಶೀಲನೆ ನಡೆಸಿ ವರದಿ ನೀಡುವಂತೆ ಡಿಜಿ ಐಜಿಪಿ ಡಾ.ಅಲೋಕ್ ಮೋಹನ್ ಸೂಚಿಸಿದ್ದಾರೆ.

- ಪೀಕ್ ಕ್ಯಾಪ್ ನೀಡುವ ಕುರಿತು ಚರ್ಚೆ ನಡೆಸಿ ವರದಿ ನೀಡುವಂತೆ ಪೊಲೀಸ್ ಮಹಾ ನಿರ್ದೇಶಕರಿಂದ ಸೂಚನೆ
- ಈ ಸಂಬಂಧ ಏಪ್ರಿಲ್ 4ರಂದು ಪೊಲೀಸ್ ಕಿಟ್ ನಿರ್ದಿಷ್ಟತಾ ಸಮಿತಿಯ ಸದಸ್ಯರ ಸಭೆ, ಸಾಧಕ ಬಾಧಕ ಚರ್ಚೆ

ರಂಜಾನ್ ಮಾಸಾಚರಣೆಯ ಅಂತಿಮ ದಿನವಾದ ಸೋಮವಾರ ಬೆಂಗಳೂರಿನ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಫೋಟೋ: ಸುಧಾಕರ್ ದೇವರಾಕ್

ನಾಳೆಯಿಂದ ರಾಜ್ಯದ ಹಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ಸುಳಿಗಾಳಿ ಹಾಗೂ ಕರ್ನಾಟಕದ ಒಳನಾಡಿನಲ್ಲಿ ಟ್ರಫ್ ಉಂಟಾಗಿರುವ ಪರಿಣಾಮ ಏ.2ರಿಂದ 4ರವರೆಗೆ ಮಳೆಯಾಗುವ ಮುನ್ಸೂಚನೆಗಳಿವೆ ಎಂದು ಭಾರತೀಯ ಹವಾಮಾನ ಇಲಾಖೆ ಬೆಂಗಳೂರು ಪ್ರಾದೇಶಿಕ ಕೇಂದ್ರದ ನಿರ್ದೇಶಕ ಸಿ.ಎಸ್.ಪಾಟೀಲ್ ತಿಳಿಸಿದ್ದಾರೆ.

ರಾಜ್ಯಾದ್ಯಂತ ಮಳೆ ಮುಂದುವರಿಯುವ ಲಕ್ಷಣಗಳಿದ್ದು, ಚದುರಿದಂತೆ ಹಗುರ ಮಳೆಯಾಗಲಿದೆ. ಕೆಲವೆಡೆ ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗಲಿದೆ, ಅಲ್ಲದೆ, ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗುವ ಸಾಧ್ಯತೆಗಳಿವೆ. ಏ.2ರಿಂದ ಏ.4ರವರೆಗೆ ಬೆಂಗಳೂರು ಸುತ್ತಮುತ್ತ ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗುವ ಸಾಧ್ಯತೆಗಳಿವೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಾವೇರಿ, ಗದಗ, ಧಾರವಾಡ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು, ಮೈಸೂರು, ಚಾಮರಾಜನಗರ ಜಿಲ್ಲೆಗಳ ಕೆಲವೆಡೆ ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗುವ ಮುನ್ಸೂಚನೆಗಳಿದ್ದು, ಈ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ದಕ್ಷಿಣ ಭಾರತದ ಅತಿ ದೊಡ್ಡ ಅಂಗಾಂಗ ಸ್ವೀಕೃತಿ ಕೇಂದ್ರ | ಸಾಗಣೆ ಅನುಕೂಲಕ್ಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೆಲಿಪ್ಯಾಡ್ | ಅಭಿವೃದ್ಧಿ, ಸ್ಥಾಪನೆಗೆ ಒಂದು ಕೋಟಿ ರು. ಮೀಸಲು

ಅಂಗಾಂಗ ಸ್ವೀಕೃತಿಗೆ ವಿಶೇಷ ಹೆಲಿಪ್ಯಾಡ್

ಬೆಂಗಳೂರು: ತುರ್ತು ಸಂದರ್ಭದಲ್ಲಿ ಅಂಗಾಂಗ ದಾನ ಇಲ್ಲವೇ ಖರೀದಿ ಸುಗಮಗೊಳಿಸಲು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಂಗಾಂಗ ಮರು ಪಡೆಯುವ ಕೇಂದ್ರ ಆರಂಭಿಸಲು ಸಿದ್ಧತೆ ನಡೆಸಿರುವ ಸರಕಾರ ಇದಕ್ಕಾಗಿ ಒಂದು ಕೋಟಿ ರು. ಮೀಸಲಿಟ್ಟಿದ್ದು, ಸಾಗಣೆಗೆ ಅನುಕೂಲವಾಗಲು ಹೆಲಿಪ್ಯಾಡ್ ನಿರ್ಮಾಣಕ್ಕೂ ಮುಂದಾಗಿದೆ. ಮುಂದಿನ ನಾಲ್ಕರಿಂದ ಆರು ತಿಂಗಳಲ್ಲಿ ಈ ಅಂಗಾಂಗ ಮರು ಪಡೆಯುವಿಕೆ ಕೇಂದ್ರವು ಕಾರ್ಯಾರಂಭ ಮಾಡಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್ ಮಾಹಿತಿ ನೀಡಿದ್ದಾರೆ.

ಮೃತ ದಾನಿಗಳಿಂದ ಅಂಗಾಂಗಗಳನ್ನು ಸಂಗ್ರಹಿಸುವ ವಿಶೇಷ ಘಟಕವಾಗಿ ಈ ಕೇಂದ್ರ ಕಾರ್ಯನಿರ್ವಹಿಸಲಿದ್ದು, ಐಸಿಯು, ಶಸ್ತ್ರಚಿಕಿತ್ಸಾ ಕೊಠಡಿ, ಪ್ರಯೋಗಾಲಯ ಸೌಲಭ್ಯಗಳು, ವಿವಿಧ ಹಂತದ ತನಿಖಾ ಸಾಮರ್ಥ್ಯಗಳನ್ನು ಹೊಂದಿರುವ ಸೇವೆ ದೊರೆಯಲಿದೆ ಎಂದರು.

ಸೌಲಭ್ಯಗಳನ್ನು ನವೀಕರಿಸಲು ಮತ್ತು ಅಂಗಾಂಗ ಮರು ಪಡೆಯುವ ಕೇಂದ್ರ ಸ್ಥಾಪಿಸಲು ವೈದ್ಯಕೀಯ ಶಿಕ್ಷಣ ಇಲಾಖೆಯು 1 ಕೋಟಿ ರು. ಅನುದಾನ ಮಂಜೂರು ಮಾಡಿದೆ. ಈ ಸಂಬಂಧ ಆದೇಶ ಕೂಡ ಹೊರಡಿಸಲಾಗಿದೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ 125ನೇ ವರ್ಷಾಚರಣೆ ಸಂದರ್ಭದಲ್ಲಿಯೇ ಈ ಮಹತ್ವದ ಕೇಂದ್ರ ಇಲ್ಲಿ ಆರಂಭವಾಗುತ್ತಿರುವುದು ಮತ್ತೊಂದು ಸಂಗತಿ. → 4

ದಾನಗಳಲ್ಲಿ ಶ್ರೇಷ್ಠ ದಾನ ಅಂಗಾಂಗ ದಾನ. ವೈದ್ಯಕೀಯ ಶಿಕ್ಷಣ ಇಲಾಖೆಯು ಈ ಅಂಗಾಂಗ ದಾನ ಯೋಜನೆಗೆ ಹೊಸ ರೂಪ ನೀಡಲು ಕ್ರಮ ಕೈಗೊಂಡಿದೆ. ಮತ್ತೊಬ್ಬರ ಬಾಳಿಗೆ ಬೆಳಕಾಗುವ ಮಹತ್ವದ ಯೋಜನೆಗೆ ಇಲಾಖೆ ಮುಂದಾಗಿದೆ.
-ಡಾ.ಶರಣ್ ಪ್ರಕಾಶ್ ಪಾಟೀಲ್ ವೈದ್ಯಕೀಯ ಶಿಕ್ಷಣ ಸಚಿವ

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಮಗ್ರ ಅಂಗಾಂಗ ಮರು ಪಡೆಯುವಿಕೆ ಕೇಂದ್ರ ಪ್ರಾರಂಭಿಸುವುದರಿಂದ ಅಂಗಾಂಗ ದಾನ ಕಾರ್ಯಕ್ರಮ ಹೆಚ್ಚಿಸಲು ನಮಗೆ ಅವಕಾಶ ಸಿಗುತ್ತದೆ. ಇದರಿಂದ ಬಡವರಿಗೆ ಅನುಕೂಲ ಕಲ್ಪಿಸಲಾಗುವುದು.
-ಡಾ.ದೀಪಕ್ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ

ಆಸ್ಪತ್ರೆಯ ವಿಶೇಷಗಳು

- ಬಡವರಿಗೆ ಮತ್ತು ಹೆಚ್ಚು ಅರ್ಹರಿಗೆ ಉಪಯೋಗ
- 70 ಐಸಿಯು ಹಾಸಿಗೆ ಲಭ್ಯ
- 1000 ಸಾಮಾನ್ಯ ಹಾಸಿಗೆ ಸೌಲಭ್ಯ
- 40 ಸಾಮೂಹಿಕ ಅಪಘಾತ ಚಿಕಿತ್ಸಾ ಹಾಸಿಗೆ ಸೌಲಭ್ಯ

ಸಮಾಚಾರ ಸಣ್ಣದಲ್ಲ

ಶಿಷ್ಯವೇತನ ಸಹಿತ ತರಬೇತಿಗೆ ಆಹ್ವಾನ

ಬೆಂಗಳೂರು: ಇಂಜಿನಿಯರಿಂಗ್ ಪದವೀಧರರಿಗೆ 2 ವಾರ ಅವಧಿಯ ಶಿಷ್ಯವೇತನ ಸಹಿತ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಐಐಎಸ್‌ಸಿ, ಐಐಟಿ ಮತ್ತು ಎನ್‌ಐಟಿ ಸಂಸ್ಥೆಗಳ ಮೂಲಕ ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಮುಂತಾದ ವೃತ್ತಿಪರ ಕೋರ್ಸುಗಳಿಗೆ ತರಬೇತಿ ನೀಡಲಾಗುವುದು. ತರಬೇತಿಯಲ್ಲಿ ಭಾಗವಹಿಸುವ ಪರಿಶಿಷ್ಟ ವರ್ಗದ 200 ಎಂಜಿಯರಿಂಗ್ ಪದವೀಧರರಿಗೆ 15,000 ರು. ಶಿಷ್ಯವೇತನ ನೀಡಲಾಗುವುದು. ಅರ್ಜಿ ಸಲ್ಲಿಸಲು ಬಿ.ಇ/ಬಿ.ಟೆಕ್ ಪದವಿ ಕೋರ್ಸ್‌ನಲ್ಲಿ ಕನಿಷ್ಠ ಶೇ.55 ರಷ್ಟು ಅಂಕ ಗಳಿಸಿರಬೇಕು. ಅರ್ಜಿ ಸಲ್ಲಿಸಲು ಏ.11 ಕೊನೆಯ ದಿನಾಂಕ. ಆಸಕ್ತರು ಅರ್ಜಿ ನಮೂನೆಗೆ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಂಪರ್ಕಿಸಬಹುದು ಎಂದು ಆನೇಕಲ್ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗರ್ಭಾಶಯ ತೊಂದರೆ ಯಶಸ್ವಿ ಶಸ್ತ್ರಚಿಕಿತ್ಸೆ

ಬೆಂಗಳೂರು: ಕ್ಲಿಷ್ಟ ಗರ್ಭಾಶಯ ತೊಂದರೆಗೆ ಸಿಲುಕಿದ್ದ ಗರ್ಭಿಣಿಗೆ ವಾಸವಿ ಆಸ್ಪತ್ರೆಯ ವೈದ್ಯರು ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಆರೋಗ್ಯ ಸಮಸ್ಯೆಯುಳ್ಳ ಗರ್ಭಿಣಿಯೊಬ್ಬರು ದೂರದ ಪ್ರಯಾಣ ಮಾಡಿದ ಬಳಿಕ ಅಪಾಯಕ್ಕೆ ಸಿಲುಕಿಕೊಂಡ ಘಟನೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಡೆದಿದೆ. 28 ವಾರ ಪೂರೈಸಿದ ಹಾಗೂ ಈಗಾಗಲೇ ಎರಡು ಬಾರಿ ಸಿಸೇರಿಯನ್‌ಗೆ ಒಳಗಾದ ಮಹಿಳೆಯೊಬ್ಬರು ಕಲಬುರಗಿಯಿಂದ ಬೆಂಗಳೂರಿಗೆ ಸುಮಾರು 600 ಕಿ.ಮೀ ಪ್ರಯಾಣ ಬೆಳೆಸಿದ್ದಾರೆ. ತದನಂತರ ಅತಿಯಾದ ನೋವಿನಿಂದ ಬಳಲುತ್ತಿದ್ದುದರಿಂದ ಕೂಡಲೆ ಆಸ್ಪತ್ರೆಗೆ ದಾಖಲಾಗಿದ್ದರು. ಈ ವೇಳೆ ಮಹಿಳೆಗೆ ಸೆಂಟ್ರಲ್ ಪ್ಲಾಸೆಂಟಾ ಪ್ರಿವಿಯಾ (ಕೇಂದ್ರ ಜರಾಯು ಪ್ರೀವಿಯಾ) ಜತೆಗೆ ಅಕ್ರೆಟಾ ಇರುವುದು ವೈದ್ಯರ ಗಮನಕ್ಕೆ ಬಂದಿದೆ. ಈ ರೀತಿಯ ಸಂದರ್ಭ ಜರಾಯು ಜನನ ಕಾಲುವೆ (ಭರ್ತ್ ಕೆನಲ್) ಬಳಿ ಇದ್ದಾಗ ಹೆರಿಗೆಗೆ ಅಡ್ಡಿಯಾದಾಗ ಕಂಡುಬರುತ್ತದೆ. ಈ ಮುಂಚೆ ವೈದ್ಯರೊಬ್ಬರು ದೂರದ ಪ್ರಯಾಣ ಸಲ್ಲದು ಎಂದು ಹೇಳಿದ್ದರೂ ಸಹ ಅದರ ಹೊರತಾಗಿಯು ಮಹಿಳೆಯು ಕಲಬುರಗಿಯಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದಾರೆ. ಅದರ ಪರಿಣಾಮ ತಾಯಿಗೆ ತೀವ್ರ ರಕ್ತಸ್ರಾವವಾಗುವುದರ ಜತೆಗೆ ತಾಯಿ ಮಗುವಿನ ಜೀವಕ್ಕೂ ಆಪತ್ತು ತಂದಿತ್ತು ಎಂದು ವಾಸವಿ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ. ನಿಶಾ ಬುಚಾಡೆ ಅವರು ತಿಳಿಸಿದ್ದಾರೆ.

ಜನವರಿಯಲ್ಲೇ 14.56 ಕೆ.ಜಿ ಅಕ್ರಮ ಚಿನ್ನ ಸಾಗಿಸಿದ್ದ ನಟಿ ರನ್ಯಾ ರಾವ್ | ಎ3 ಸಾಹಿಲ್ ವಿಚಾರಣೆ ವೇಳೆ ಸ್ಫೋಟಕ ವಿಚಾರ ಬಹಿರಂಗ | ಚಿನ್ನ ಖರೀದಿಗೆ ರನ್ಯಾಗೆ ಹವಾಲ ಹಣ ನೀಡಿದ ಶಂಕೆ, ತನಿಖೆ ಚುರುಕು

ಚಿನ್ನ ಕಳ್ಳಸಾಗಣೆ: ಡಿಜಿಟಲ್ ಸಾಕ್ಷ್ಯದಲ್ಲಿ ಸ್ಮಗ್ಲಿಂಗ್ ರಹಸ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಹವಾಲ ದಂಧೆಯ ಮೂಲಕ ಹಣ ವರ್ಗಾವಣೆಯಾಗಿರುವುದು ಬಯಲಾಗಿದ್ದು, ಮೂರನೇ ಆರೋಪಿ ಸಾಹಿಲ್ ಜೈನ್ ವಿಚಾರಣೆ ವೇಳೆ ಹಲವು ಮಹತ್ವದ ವಿಚಾರ ಬೆಳಕಿಗೆ ಬಂದಿದೆ ಎಂದು ಡಿಆರ್‌ಐ ಮೂಲಗಳು ತಿಳಿಸಿವೆ.

ಡಿಆರ್‌ಐ ಗೆ ಸಿಕ್ಕಿರುವ ಡಿಜಿಟಲ್ ಸಾಕ್ಷ್ಯದಲ್ಲಿ ಚಿನ್ನ ಕಳ್ಳಸಾಗಣೆ ರಹಸ್ಯ ಬಯಲಾಗಿದೆ. ಇಷ್ಟೇ ಅಲ್ಲದೆ, ಕಳ್ಳಸಾಗಣೆ ಮಾಡಿದ್ದ ಚಿನ್ನ ಮಾರಾಟಕ್ಕೆ ಸಹಾಯ ಮಾಡಿರುವುದಾಗಿ ಸಾಹಿಲ್ ಜೈನ್ ಒಪ್ಪಿಕೊಂಡಿದ್ದಾನೆ. ಈ ಹಿಂದೆ ಹಲವು ಬಾರಿ ಚಿನ್ನ ಕಳ್ಳಸಾಗಣೆಗೆ ಸಹಾಯ ಮಾಡಿದ್ದಾಗಿಯೂ ಹೇಳಿಕೆ ನೀಡಿದ್ದಾನೆ. ಸಾಹಿಲ್ ವಾಟ್ಸ್ಆ್ಯಪ್ ಚಾಟ್‌ನಲ್ಲಿ ದುಬೈಗೆ ಹಣ ವರ್ಗಾವಣೆ ಮಾಡಿದ್ದನ್ನು ಡಿಆರ್‌ಐ ಪತ್ತೆ ಮಾಡಿದೆ. ಚಿನ್ನ ಮಾರಾಟ ಮಾಡಿದ್ದು ಕೂಡ ವಾಟ್ಸ್ಆ್ಯಪ್ ಚಾಟ್‌ನಿಂದ ಬಹಿರಂಗವಾಗಿದೆ. ಮಾರ್ಚ್ 3ರಂದು ರನ್ಯಾ ರಾವ್, ದುಬೈ ನಂಬರ್‌ನಿಂದ ಸಾಹಿಲ್‌ಗೆ ಕರೆ ಮಾಡಿದ್ದ ವೇಳೆ ಚಿನ್ನ ವಿಲೇವಾರಿ ಮಾಡುವ ಬಗ್ಗೆ ಮಾತುಕತೆ ನಡೆಸಿದ್ದು ಪತ್ತೆಯಾಗಿದೆ. ಮತ್ತೊಂದೆಡೆ, ಹವಾಲಾ ದಂಧೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾಗಿ ಜೈನ್ ತನಿಖಾಧಿಕಾರಿಗಳ ಬಳಿ ಹೇಳಿಕೆ ನೀಡಿದ್ದಾನೆ. ಇದರಿಂದಾಗಿ, ದುಬೈನಲ್ಲಿ ಚಿನ್ನ ಖರೀದಿಗೆ ಹವಾಲಾ ಮೂಲಕ ಹಣ ನೀಡಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

ಯಾರು ಈ ಸಾಹಿಲ್ ಜೈನ್?: ಬಳ್ಳಾರಿ ಮೂಲದ ಸಾಹಿಲ್ ಜೈನ್ ಜ್ಯುವೆಲ್ಲರಿ ಅಂಗಡಿ ಮಾಲೀಕ. ಮಹೇಂದ್ರ ಜೈನ್ ಎಂಬ ಬಟ್ಟೆ ವ್ಯಾಪಾರಿಯ ಮಗನಾಗಿರುವ ಸಾಹಿಲ್, ಆರಂಭದಲ್ಲಿ ಸೋದರಮಾವನ ಜೊತೆ ಮುಂಬೈನಲ್ಲಿ ವಾಸವಿದ್ದ. ನಂತರ ಚಿನ್ನದ ಉದ್ಯಮ ಆರಂಭಿಸಿದ್ದ. ಆ ಸಂದರ್ಭದಲ್ಲಿ ಸ್ಮಗ್ಲಿಂಗ್ ಪ್ರಕರಣವೊಂದರಲ್ಲಿ ಆತನನ್ನು ಮುಂಬೈ ವಿಮಾನ ನಿಲ್ದಾಣದಲ್ಲಿ ಡಿಆರ್‌ಐ ಅಧಿಕಾರಿಗಳು ಬಂಧಿಸಿದ್ದರು. ನಂತರ ಪ್ರಕರಣದಿಂದ ಬಚಾವಾಗಿದ್ದ ಸಾಹಿಲ್ ಜೈನ್ ಇದೀಗ ರನ್ಯಾ ಪ್ರಕರಣದಲ್ಲೂ ಚಿನ್ನ ಮಾರಾಟಕ್ಕೆ ಸಹಾಯ ಮಾಡಿರುವ ಆರೋಪ ಕೇಳಿ ಬಂದಿತ್ತು. ಹೀಗಾಗಿ ಆತನನ್ನು ಡಿಆರ್‌ಐ ಅಧಿಕಾರಿಗಳು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಸದ್ಯ ಸಾಹಿಲ್ ಡಿಆರ್‌ಐ ಕಸ್ಟಡಿಯಲ್ಲಿದ್ದಾನೆ.

ರನ್ಯಾಗೆ ಇಡಿ, ಸಿಬಿಐ ಸೆರೆ ಭೀತಿ: ಚಿನ್ನ ಕಳ್ಳಸಾಗಾಣಿಕೆ ಪ್ರಕರಣವನ್ನು ಜಾರಿ ನಿರ್ದೇಶನಾಲಯ ಮತ್ತು ಸಿಬಿಐ ತನಿಖಾ ಸಂಸ್ಥೆಗಳು ಕೂಡ ತನಿಖೆ ನಡೆಸುತ್ತಿವೆ. ಬಂಧಿತ ನಟಿ ರನ್ಯಾ ರಾವ್ ಜಾಮೀನು ಅರ್ಜಿ ತಿರಸ್ಕೃತಗೊಂಡ ಬೆನ್ನಲ್ಲೇ ಇಡಿ, ಸಿಬಿಐನಿಂದ ಬಂಧನ ಭೀತಿ ಎದುರಾಗಿದೆ. ಪ್ರಕರಣದಲ್ಲಿ ಹೆಚ್ಚಿನ ವಿಚಾರಣೆಗೆ ರನ್ಯಾ ರಾವ್‌ರನ್ನು ಮೊದಲು ಇಡಿ ಅಧಿಕಾರಿಗಳು ಬಳಿಕ ಸಿಬಿಐ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆಗೊಳಪಡಿಸುವ ಸಾಧ್ಯತೆ ಇದೆ.

ಸರಕಾರಿ ವಾಹನದಲ್ಲೇ ಚಿನ್ನ ಸಾಗಿಸಿದ್ದ ರನ್ಯಾ

ರನ್ಯಾ ರಾವ್ ಚಿನ್ನವನ್ನು ಅಕ್ರಮವಾಗಿ ವಿಮಾನ ನಿಲ್ದಾಣದಿಂದ ಹೇಗೆ ಸಾಗಿಸುತ್ತಿದ್ದಳು ಎಂಬುದನ್ನು ಪತ್ತೆಹಚ್ಚಿದ್ದಾರೆ. ದುಬೈನಿಂದ ಅಕ್ರಮವಾಗಿ ತಂದ ಚಿನ್ನವನ್ನು ನಟಿ ರನ್ಯಾರಾವ್ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸರಕಾರಿ ವಾಹನದಲ್ಲಿ ಸಾಗಿಸುತ್ತಿದ್ದರು ಎಂಬುವುದು ಡಿಆರ್‌ಐ ತನಿಖೆ ವೇಳೆ ಬಹಿರಂಗವಾಗಿತ್ತು. ರಾಜ್ಯ ಪೊಲೀಸ್ ಇಲಾಖೆಯಲ್ಲಿ ಐಪಿಎಸ್ ಅಧಿಕಾರಿಗಳಿಗೆ ಎರಡು ಹೆಚ್ಚುವರಿ ಕಾರುಗಳನ್ನು ನೀಡಲಾಗುತ್ತದೆ. ಈ ಹೆಚ್ಚುವರಿ ಕಾರು ಅಧಿಕಾರಿಯ ಕುಟುಂಬದವರಿಗೆ ಬಳಕೆಯಾಗುತ್ತದೆ. ಅದೇ ರೀತಿ, ಡಿಜಿಪಿ ರಾಮಚಂದ್ರ ರಾವ್ ಅವರಿಗೂ ಸರಕಾರ ಹೆಚ್ಚುವರಿ ಕಾರು ನೀಡಿತ್ತು. ಸರಕಾರಿ ವಾಹನದಲ್ಲೇ ರನ್ಯಾರಾವ್ ಚಿನ್ನ ಸಾಗಿಸಿದ್ದಾರೆ. ರನ್ಯಾ ಇದೇ ವಾಹನದಲ್ಲಿ ಹಲವು ಬಾರಿ ವಿಮಾನ ನಿಲ್ದಾಣಕ್ಕೆ ಓಡಾಡುತಿದ್ದರು ಎಂದು ತನಿಖೆ ವೇಳೆ ತಿಳಿದುಬಂದಿತ್ತು.

ಪೊಲೀಸ್ ಪ್ರೋಟೋಕಾಲ್ ಬಳಕೆ

ಪೊಲೀಸ್ ಪ್ರೋಟೋಕಾಲ್ ಬಳಕೆಗೆ ರನ್ಯಾ ರಾವ್ ಮಲತಂದೆ, ಡಿಜಿಪಿ ರಾಮಚಂದ್ರರಾವ್ ಸೂಚಿಸಿರಲಿಲ್ಲ. ಆದರೆ, ರನ್ಯಾ ರಾವ್ ಪ್ರೋಟೋಕಾಲ್ ಬಳಕೆ ಮಾಡುತ್ತಿದ್ದು ಗೊತ್ತಿತ್ತು ಎಂದು ವಿಚಾರಣೆ ವೇಳೆ ಹೇಳಿದ್ದಾರೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ದುರ್ಬಳಕೆ ಹಾಗೂ ಇದರಲ್ಲಿ ಡಿಜಿಪಿ ರಾಮಚಂದ್ರರಾವ್ ಅವರ ಪಾತ್ರ ಕುರಿತು ತನಿಖೆ ಪೂರ್ಣಗೊಳಿಸಿರುವ ಹಿರಿಯ ಐಎಎಸ್ ಅಧಿಕಾರಿ ಗೌರವ್ ಗುಪ್ತ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ 230 ಪುಟಗಳ ವರದಿ ಸಲ್ಲಿಸಿದ್ದಾರೆ.

ಎಂಇಐ ಸಂಸ್ಥೆಯ ಡೈರಿ, ಕ್ಯಾಲೆಂಡರ್ ಬಿಡುಗಡೆ

ಬೆಂಗಳೂರು: ಇಂಧನ ಸಚಿವ ಕೆ.ಜೆ.ಜಾರ್ಜ್ ಸೋಮವಾರ ಗೃಹ ಕಚೇರಿಯಲ್ಲಿ 2025-26ನೇ ಸಾಲಿನ ಎಂಇಐ ಸಂಸ್ಥೆಯ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ ಮಾಡಿದರು.

2024-25ನೇ ಸಾಲಿನಲ್ಲಿ 120 ಕೋಟಿ ಉತ್ಪಾದನೆಗೆ ಆದೇಶವನ್ನು ನೀಡಲಾಗಿದ್ದು, ಅದರಂತೆ ಎಂಇಐ ಸಂಸ್ಥೆಯು ಕೆಪಿಟಿಸಿಎಲ್ ನೀಡಿದ್ದ ಖರೀದಿ ಆದೇಶದಂತೆ ನಿಗಧಿತ ಅವಧಿಯೊಳಗೆ ಉತ್ಪಾದಿಸಿ ರವಾನಿಸಿದೆ. ಎಂಇಐ ಸಂಸ್ಥೆಯಲ್ಲಿ ಪ್ರಸ್ತುತ ಮಾರ್ಚ್ ತಿಂಗಳಿನಲ್ಲಿ ಸುಮಾರು 24 ಕೋಟಿ 39 ಲಕ್ಷ ರು.ಗಳಷ್ಟು ಉತ್ಪಾದನೆ ಮಾಡಿ ರವಾನೆ ಮಾಡಿರುವುದು ದಾಖಲೆಯಾಗಿದೆ ಎಂದು ಸಚಿವರು ಅಭಿನಂದನೆ ಸಲ್ಲಿಸಿದರು.

ಎಂಇಐ ಸಂಸ್ಥೆ ಉತ್ಪಾದಿಸುತ್ತಿರುವ 14 ಕೆವಿ ಸ್ವಿಚ್ ಗೇರ್‌ಗಳನ್ನು ಇನ್ನೂ ಹೆಚ್ಚಿನ ಸಂಖ್ಯೆ ಯಲ್ಲಿ ಉತ್ಪಾದಿಸಿ ಗುಣಮಟ್ಟವನ್ನು ಕಾಯ್ದುಕೊಂಡು ಕೆಪಿಟಿಸಿಎಲ್ ಸಂಸ್ಥೆಗೆ ಹಾಗೂ ಇತರೆ ಹೆಸ್ಕಾಂಗಳಿಗೆ ನೀಡಬೇಕು ಎಂದು ಇಂಧನ ಸಚಿವರಿಗೆ ಅಧ್ಯಕ್ಷರು ಹಾಗೂ ಎಲ್ಲ ಅಧಿಕಾರಿಗಳು ಎಂಇಐ ಸಂಸ್ಥೆಗೆ ಅತಿಹೆಚ್ಚು ಉತ್ಪಾದನೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಹಾಗೂ 25-26 ಸಾಲಿನಲ್ಲಿ ಕೆಪಿಟಿಸಿಎಲ್ ಸಂಸ್ಥೆಗೆ ಹೆಚ್ಚಿನ ಖರೀದಿ ಆದೇಶ ನೀಡಲು ಸೂಚಿಸಿದಕ್ಕಾಗಿ ಎಂಇಬಿ ಸಂಸ್ಥೆಯ ಅಧ್ಯಕ್ಷ ಎಸ್. ಮನೋಹರ್ ಧನ್ಯವಾದ ಸಲ್ಲಿಸಿದರು.

ವ್ಯಕ್ತಿ ವಿರುದ್ಧದ ಪ್ರಕರಣ ರದ್ದು ಮಾಡಿದ ವಿಚಾರಣಾ ನ್ಯಾಯಾಲಯ

ಅಪ್ರಾಪ್ತ ಅನಾಥೆಯ ವಿವಾಹ ಪೋಕ್ಸೋ ಪ್ರಕರಣ ರದ್ದು

ಬೆಂಗಳೂರು: ಅನಾಥೆಯೊಬ್ಬಳಿಗೆ ಜೀವನ ಕೊಡುವ ಭರದಲ್ಲಿ ಅಪ್ರಾಪ್ತ ವಯಸ್ಸಿನವಳು ಎಂಬುದನ್ನು ನೋಡದೆ, ಮದುವೆಯಾದ ಪರಿಣಾಮ ಪೋಕ್ಸೋ ಮತ್ತು ಕ್ರಿಮಿನಲ್ ಪ್ರಕರಣಗಳ ವಿಚಾರಣೆಗೆ ಗುರಿಯಾಗಿದ್ದ ವ್ಯಕ್ತಿಯ ನೆರವಿಗೆ ಧಾವಿಸಿರುವ ಹೈಕೋರ್ಟ್, ಬಾಲಕಿಯ ಪ್ರಮಾಣಪತ್ರ ಆಧರಿಸಿ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದುಪಡಿಸಿ ಆದೇಶ ಹೊರಡಿಸಿದೆ.

ತಮ್ಮ ವಿರುದ್ಧ ಮಾಸ್ತಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ಮತ್ತು ಕೋಲಾರದ ತ್ವರಿತಗತಿ ನ್ಯಾಯಾಲಯ ತೆಗೆದುಕೊಂಡಿದ್ದ ಕಾಗ್ನಿಜೆನ್ಸ್ ಪ್ರಶ್ನಿಸಿ, ಕೋಲಾರ ಜಿಲ್ಲೆಯ ಮಾಲೂರಿನ ಮಂಜುನಾಥ್ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ಪತ್ನಿಗೆ ಪೋಷಕರು ಇಲ್ಲವಾಗಿದ್ದಾರೆ. ಜತೆಗೆ, ಇಡೀ ಕುಟುಂಬಕ್ಕೆ ಅರ್ಜಿದಾರರೇ ಜೀವನಾಧಾರವಾಗಿದ್ದಾರೆ. ಆದ್ದರಿಂದ ಪ್ರಕರಣ ಮುಂದುವರಿಸಿದಲ್ಲಿ ಅರ್ಜಿದಾರರು ಮತ್ತವರ ಕುಟುಂಬ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯಿದೆ ಎಂದು ಪೀಠ ತಿಳಿಸಿದೆ.

ಮತ್ತೆ ಅನಾಥೆಯನ್ನಾಗಿ ಮಾಡಿದರೆ ಪ್ರಕರಣ ಮುಂದುವರಿಕೆ: ಜತೆಗೆ, ಅರ್ಜಿದಾರರನ್ನು ಪ್ರಕರಣದಿಂದ ಖುಲಾಸೆ ಮಾಡಬಹುದು ಎಂದು ಖುದ್ದು ಅವರ ಪತ್ನಿ ಪ್ರಮಾಣಪತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಇದೊಂದೇ ಕಾರಣದಿಂದ ಪ್ರಕರಣ ರದ್ದುಪಡಿಸಲಾಗುತ್ತಿದೆ. ಪ್ರಕರಣ ರದ್ದಾದ ಬಳಿಕ ಪತ್ನಿಯನ್ನು ಸೂಕ್ತ ಕಾರಣವಿಲ್ಲದೆ ಅನಾಥೆಯನ್ನಾಗಿ (ಬಿಟ್ಟ ಬಿಡುವ ಕೃತ್ಯ) ಮಾಡಿದರೆ, ಮತ್ತೆ ಪ್ರಕರಣದ ವಿಚಾರಣೆ ಮುಂದುವರಿಯಬಹುದುಎಂದು ಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಪ್ರಕರಣದ ಹಿನ್ನೆಲೆ

ಅರ್ಜಿದಾರರಾದ ಮುನಿರಾಜು 2023ರ ಮೇ 14ರಂದು ಅನಾಥೆಯೊಬ್ಬರನ್ನು ವಿವಾಹವಾಗಿದ್ದರು. ಬಳಿಕ ಅರ್ಜಿದಾರರ ಪತ್ನಿ ಗರ್ಭ ಧರಿಸಿದ್ದು, ಇದಕ್ಕಾಗಿ ಸಾಮಾನ್ಯ ಪರಿಶೀಲನೆಗಾಗಿ ಸ್ಥಳೀಯ ಆಸ್ಪತ್ರೆಗೆ ಹೋಗಿದ್ದರು. ಆಕೆಯ ವಿವಾಹವಾಗಿರುವ ಅಂಶ ಮತ್ತು ಆಧಾರ್ ಕಾರ್ಡ್ ಅನ್ನು ಪರಿಶೀಲಿಸಿದ್ದ ವೈದ್ಯರು, 17 ವರ್ಷ 8 ತಿಂಗಳಿಗೆ ಗರ್ಭ ಧರಿಸುವ ಸಂಬಂಧ ಮಾಲೂರಿನ ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಗೆ ಮಾಹಿತಿ ನೀಡಿದ್ದರು.

ತ್ಯಾಗರಾಜ ನಗರದ ಸಾಯಿ ಆಧ್ಯಾತ್ಮಿಕ ಕೇಂದ್ರದ 70 ರ ಸಂಭ್ರಮ ನಿಮಿತ್ತ ಸೋಮವಾರ ಸಂಜೆ ಸಾಯಿ ದೇವಸ್ಥಾನದ ಆವರಣದಲ್ಲಿ ಎಂ.ಡಿ.ಪಲ್ಲವಿ ಅವರು ಭಕ್ತಿ ಗೀತೆಗಳ ಮೂಲಕ ಭಕ್ತರನ್ನು ರಂಜಿಸಿದರು.

PUBLIC NOTICE

Notice is hereby given that our client **Mr. MANOJ JOHN** s/o. Ouseph john Aged about 53 years Residing at No. A-13-101, 1st Floor, Provident Harmony, Sri Balajikrupa Layout, Chokkanahalli R.K. Hegadenagar, Bangalore-560077 intends to purchase the property described in the schedule herein from Smt. K.V. Shanthakumari . W/o. B.Nagaraj residing at No.21,2md Cross Road, MCHS Layout, Shivaramakarathnagar Bangalore-560077. She is the absolute owner of the same.

Any person or persons having objections to the above transactions are required forward same to the under signed along with the relevant materials. within 10 days today in the absence of any objections within the above said period it shall be deemed that there are no objections or that they have been waived and the sale deed will be executed in favor of our client without any further reference in this regard.

SCHEDULE PROPERTY

All that piece and parcel of the immovable Property bearing Residential Site No.27, PID.No.5228030209, formed in Sy No.39/4, of Sampigehalli Village, situated at 3rd Block, Arkavathi Layout, Bangalore, measuring East to West:09.00 Mtrs and North to South: 12.00 Mtrs totally measuring 108.00 Square Mtr ., and bounded on the :- East by : Site No.28, West by : Site No.26, North by : Private Property, South by : Road.

P.N. RAMAKRISHNAPPA MA ., LL.B.
M. HEMAVATHI MA ., LL.B.
H.R.V. ASSOCIATES, ADVOCATES
No. 99, B.G.S. Layout, Jakkur,
Amruthahalli Main Road, Bangalore-560 064.

IN THE COURT OF THE CITY CIVIL AND SESSION JUDGE (CCH-02) AT: BANGALORE
O.S. No. 1671/2024

BETWEEN:
Sri. Vinod Kumar P Jain
S/o. P.Parasmal
aged about 50 years,
Residing at No. 211, 13/5,
Appu Rao Street, K.G.Nagar,
Chamarajpet,
Bengaluru-560018
....**PLAINTIFF**

AND:
Sri. D Suresh Kumar
And others
.....**DEFENDANTS**

SUMMONS TO DEFENDANT UNDER ORDER V RULE 20(1-A) OF CIVIL PROCEDURE CODE

1. Sri. D Suresh Kumar
Aged about 67 years
S/o. Late Dasharathan.
2. Smt. Anupama
W/o. D. Suresh Kumar
Aged about 54 years
3. Sri Akshat
S/o. D.Suresh Kumar, Aged Major
Sl.No. 1 to 3 are R/at: 396/1-16.
Raghava Royal Apartment,
Housing Board Society,
Vyalikaval, Bangalore -560004

Whereas, the above named Plaintiff instituted a suit against you for permanent injunction over the schedule property.

You are hereby summoned to appear before the City Civil and Sessions Judge (CCH-02) at Bengaluru on 15.04.2025 at 11.00 am, in person or through advocate/pleader to answer the questions to the same duly instructed on **15.04.2025 at 11 a.m.,** to answer the same. Failing which the suit will be heard and determined as Ex-parte.

SCHEDULE PROPERTY

All that piece and parcel of the residential Flat bearing No.201, 3 BHK, 2nd floor, having super built up area of 1600 sq.feet, in a multistoried residential building called as **"RAGHAV ROYAL"** along with any such common area with vitrified tiles, walldropes, doors and windows, together with one covered car parking in the basement and boundaries situated at 1st Main Road, Main Vilas Garden, Kamalanagar, No.16, Vrushabhavthi Nagar, near Veerabhadreshwara Theatre, Bangalore-560079 and bounded on the East by: Open Space, West by: Flat No.202, North by : Open Space, South by : Passage

Given under my hand and seal of the court this **27th day of March 2025.**

By order of the Court
Senior Shirastedar
City Civil Court Bengaluru

ADVOCATE FOR PLAINTIFF
SUBRAHMANYA HEGDE,
Advocate.
ANANDA & HEGDE LAW ASSOCIATES
No. 76-77, Krishna Krupa Building
Ground Floor, 2nd Main Road,
Sheshadripuram, Bangalore- 560020.

ಕೆಎಟಿ ಆದೇಶದ ವಿರುದ್ಧ ಮೇಲ್ಮನವಿ ವಿಚಾರಣೆ

ಇನ್ಸ್‌ಪೆಕ್ಟರ್ ವಿರುದ್ಧ ಕ್ರಿಮಿನಲ್ ಪ್ರಕರಣದ ಜತೆ ಶಿಸ್ತು ಕ್ರಮ ರದ್ದು

ಬೆಂಗಳೂರು: ಅತ್ತಿಬೆಲೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದ ಬಿ.ಕೆ.ಕಿಶೋರ್ ಕುಮಾರ್ ಎಂಬುವವರ ವಿರುದ್ಧದ ಕ್ರಿಮಿನಲ್ ಪ್ರಕರಣ, ಆರ್ಥಿಕ ಪಿತೂರಿ ಆರೋಪದ ಪ್ರಕರಣಗಳು ರದ್ದಾಗಿರುವ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿ ಆದೇಶ ಹೊರಡಿಸಿದೆ.

ಶಿಸ್ತು ಕ್ರಮ ರದ್ದುಗೊಳಿಸಲು ನಿರಾಕರಿಸಿದ ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣ (ಕೆಎಟಿ) ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ಸೋಮಶೇಖರ್ ಮತ್ತು ನ್ಯಾಯಮೂರ್ತಿ ವೆಂಕಟೇಶ್ ಟಿ.ನಾಯಕ್ ಅವರಿದ್ದ ವಿಭಾಗೀಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಈಗಾಗಲೇ ನ್ಯಾಯಾಲಯ ಅರ್ಜಿ ದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಿದೆ. ಇಲಾಖೆ ಶಿಸ್ತು ಕ್ರಮ ಜರುಗಿಸಲು ಆ ಕ್ರಿಮಿನಲ್ ಪ್ರಕರಣ ಆಧಾರ ವಾಗಿದೆ. ಸದ್ಯ ಆ ಪ್ರಕರಣ ಇಲ್ಲದಿರುವ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಮುಂದುವರಿಸಲಾಗದು ಮತ್ತು ಸೇವೆಯಿಂದ ಅಮಾನತುಗೊಳಿಸುವ ಆದೇಶ ಊರ್ಜಿತವಾಗದು ಎಂದು ಪೀಠ ಆದೇಶದಲ್ಲಿ ತಿಳಿಸಿದೆ. ಅಲ್ಲದೆ, ಅರ್ಜಿದಾರರಿಗೆ ಕಾನೂನು ಪ್ರಕಾರ ನೀಡಬೇಕಾದ ಎಲ್ಲ ವೇತನ ಮತ್ತು ಭತ್ಯೆಗಳನ್ನು ನೀಡುವಂತೆ ಸರಕಾರಕ್ಕೆ ನಿರ್ದೇಶನ ನೀಡಿದೆ.

ಪ್ರಕರಣದ ಹಿನ್ನೆಲೆ

ಅರ್ಜಿದಾರ ಬಿ.ಕೆ. ಕಿಶೋರ್ ಕುಮಾರ್ 2022ರಲ್ಲಿ ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಆಗ ಸುಮಾರು 5.5 ಕೋಟಿ ಜನರಿಗೆ ಸೇರಿದ 49 ಸಾವಿರ ಕೋಟಿ ಠೇವಣಿ ಹಣ ದುರ್ಬಳಕೆ ಮಾಡಿಕೊಂಡಿದ್ದ ಪರ್ಲ್ಸ್ ಆಗ್ರೋಟೆಕ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗೆ ಸೇರಿದ ಕೆಲವು ಆಸ್ತಿಗಳನ್ನು ಪರಭಾರೆ ಮಾಡದಂತೆ ಸುಪ್ರಿಂಕೋರ್ಟ್‌ನ ಆದೇಶವಿದ್ದರೂ ಸಹ ಇನ್ಸ್‌ಪೆಕ್ಟರ್ ಮತ್ತಿತರರು ಸೇರಿ ಆಸ್ತಿ ಮಾರಾಟ ಮಾಡಲು ಸಹಕರಿಸಿದ್ದರು ಎಂದು ಆರೋಪಿಸಲಾಗಿತ್ತು.

25 ವರ್ಷಗಳಿಂದಲೂ ಹಂಗಾಮಿ ನೌಕರರಾಗಿ ಸೇವೆ ಸಲ್ಲಿಕೆ

ಸೇವೆ ಕಾಯಂ: ಹೈ ಮೆಟ್ಟಿಲೇರಿದ ಅಂಗನವಾಡಿ ಕಾರ್ಯಕರ್ತೆಯರು

ಬೆಂಗಳೂರು: ಕಳೆದ ಹಲವು ವರ್ಷಗಳಿಂದ ಹಂಗಾಮಿಯಾಗಿ ಸಲ್ಲಿಸುತ್ತಿರುವ ತಮ್ಮ ಸೇವೆ ಕಾಯಂಗೊಳಿಸಬೇಕು ಎಂದು ಕೋರಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಐರಿನ್ ಡಿಸಾ ಹಾಗೂ ಮತ್ತಿತರ 99 ಮಂದಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ಪೀಠ, ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ನೋಟಿಸ್ ಜಾರಿಗೊಳಿಸಿ ಆಕ್ಷೇಪಣೆ ಸಲ್ಲಿಸಲು ಸೂಚನೆ ನೀಡಿ, ವಿಚಾರಣೆ ಮುಂದೂಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಅರ್ಜಿದಾರರೆಲ್ಲರೂ ಕಳೆದ 25 ವರ್ಷಕ್ಕೂ ಹೆಚ್ಚು ಕಾಲದಿಂದ ಕೇಂದ್ರ ಸರಕಾರಿ ಪ್ರಾಯೋಜಿತ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸದ್ಯ ಸರಕಾರಗಳು ಅಂಗನವಾಡಿ ಕಾರ್ಯಕರ್ತೆಯರಿಗೆ 11,500 ರು. ಹಾಗೂ ಸಹಾಯಕಿಯರಿಗೆ 7,500 ರು. ಗೌರವಧನ ನೀಡುತ್ತಿದೆ ಎಂದು ತಿಳಿಸಿದರು.

ಸರಕಾರಗಳಿಂದ ಮನವಿಗೆ ಸ್ಪಂದನೆ ಸಿಕ್ಕಿಲ್ಲ

20ಕ್ಕೂ ಅಧಿಕ ವರ್ಷಗಳಿಂದ ನಿರಂತರವಾಗಿ ಹೋರಾಡುತ್ತಾ ಸೇವೆ ಕಾಯಂಗಾಗಿ ಮನವಿ ಮಾಡಿಕೊಳ್ಳುತ್ತಿದ್ದರೂ ಸರಕಾರಗಳು ತಮ್ಮ ಮನವಿ ಪುರಸ್ಕರಿಸಿಲ್ಲ. ಇತ್ತೀಚೆಗೆ ಗುಜರಾತ್ ಹೈಕೋರ್ಟ್, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸೇವೆಯನ್ನು ಸರ್ಕಾರಿ ನೌಕರರ ಸೇವೆಯನ್ನಾಗಿ ಪರಿಗಣಿಸಬೇಕು ಎಂದು ಕೇಂದ್ರ ಮತ್ತು ಗುಜರಾತ್ ರಾಜ್ಯ ಸರಕಾರಗಳಿಗೆ ನಿರ್ದೇಶನ ನೀಡಿದೆ. ಆ ತೀರ್ಪನ್ನು ಆಧರಿಸಿ ನ್ಯಾಯಾಲಯ, ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ ಸೇವೆ ಕಾಯಂಗೆ ಸೂಚನೆ ನೀಡಬೇಕು ಎಂದು ವಕೀಲರು ಕೋರಿದರು.

ಅಲ್ಲದೆ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸರಕಾರಿ ನೌಕರರು ಮಾಡುವ ಕೆಲಸಗಳಿಗಿಂತಲೂ ಅಧಿಕ ಕೆಲಸ ಮಾಡುತ್ತಿದ್ದಾರೆ. ಆದರೆ, ತಾನೇ ನಿಗದಿಪಡಿಸಿರುವ ಕನಿಷ್ಠ ಕೂಲಿಗಿಂತಲೂ ಕಡಿಮೆ ಮೊತ್ತದ ಗೌರವಧನ ನೀಡುತ್ತಿರುವುದು ಶೋಷಣೆಯಾಗಿದೆ. ಹಾಗಾಗಿ, ಸರಕಾರಿ ನೌಕರರ ಸೇವೆಯ ವ್ಯಾಪ್ತಿಯಲ್ಲಿ ತಮ್ಮ ಸೇವೆ ಸೇರಿಸುವಂತೆ ಕರ್ನಾಟಕ ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು.

ಸಾಧನೆ ಮಾಡಲು ದೃಢಸಂಕಲ್ಪ ಮುಖ್ಯ: ಡಾ.ಪ್ರಿಯದರ್ಶಿನಿ

ಬೆಂಗಳೂರು: ಯಶಸ್ಸು ಸಾಧಿಸಲು ಪರಿಶ್ರಮ, ಆತ್ಮವಿಶ್ವಾಸ ಮತ್ತು ದೃಢಸಂಕಲ್ಪ ಮುಖ್ಯ ಎಂದು ಪ್ರಿಸಂ ಫೌಂಡೇಶನ್ ಮತ್ತು ರೆಕಾರ್ಡಿಂಗ್ ಸ್ಟುಡಿಯೋ ಸಹ ಸಂಸ್ಥಾಪಕಿ ಡಾ.ಪ್ರಿಯದರ್ಶಿನಿ ತಿಳಿಸಿದರು.

ಬೆಂಗಳೂರು ನಗರ ವಿವಿ ಮಹಿಳಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಯೋಚಿಸಿ ಕನಸು ಕಾಣಿ, ಆ ಕನಸನ್ನು ನನಸು ಮಾಡುವ ಕಡೆಗೆ ದಿಟ್ಟ ಹೆಜ್ಜೆಗಳನ್ನಿಡಿ ಎಂದು ಕರೆ ನೀಡಿದರು.

ಬೆಂಗಳೂರು ನಗರ ವಿವಿ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಮಾತನಾಡಿ, ಶಿಕ್ಷಣವು ವಿದ್ಯಾರ್ಥಿಗಳಿಗೆ ಸ್ತ್ರೀ ಸಬಲೀಕರಣದ ಗುರಿ ಸಾಧನೆಗೆ ಪೂರಕವಾಗಬಲ್ಲದು, ಮಹಿಳಾ ಶಿಕ್ಷಣ ಮತ್ತು ಸಬಲೀಕರಣಕ್ಕೆ ವಿಶೇಷ ಒತ್ತು ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಬೆಂಗಳೂರು ನಗರ ವಿವಿ ಕುಲಸಚಿವ ಟಿ.ಜವರೇಗೌಡ, ಮೌಲ್ಯಮಾಪನ ಕುಲಸಚಿವ ಪ್ರೊ.ರಮೇಶ್.ಬಿ, ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಡಾ.ಜ್ಯೋತಿ ವೆಂಕಟೇಶ್ ಇದ್ದರು.

ಯುಗಾದಿ ಹಬ್ಬದ ದಿನ ಸ್ನೇಹಿತರ ಜತೆ ಮದ್ಯ ಸೇವನೆ ಮಾಡುವ ವೇಳೆ ದಾಳಿ

ಎಣ್ಣೆ ಪಾರ್ಟಿಗೆ ಬಂದಿದ್ದ ರೌಡಿಶೀಟರ್ ಬರ್ಬರ ಹತ್ಯೆ

ಬೆಂಗಳೂರು: ಯುಗಾದಿ ಹಬ್ಬದ ಹಿನ್ನೆಲೆ ಸ್ನೇಹಿತರ ಆಹ್ವಾನದ ಮೇರೆಗೆ ಬಂದು ಡ್ರಿಂಕ್ಸ್ ಮಾಡುತ್ತಿದ್ದ ಕುಖ್ಯಾತ ರೌಡಿಶೀಟರ್‌ವೊಬ್ಬರ ಮೇಲೆ ದಾಳಿ ಮಾಡಿ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಹೆಬ್ಬಗೋಡಿ-ಗೊಲ್ಲಹಳ್ಳಿ ಮುಖ್ಯ ರಸ್ತೆಯ ನಿರ್ಜನ ಪ್ರದೇಶದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಮಂಜು ಅಲಿಯಾಸ್ ನೇಪಾಳಿ ಮಂಜ ಕೊಲೆಯಾದ ರೌಡಿಶೀಟರ್. ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ರೌಡಿಶೀಟರ್‌ನನ್ನು ರಾತ್ರಿ 10.40 ರಿಂದ 10.50ರ ಮಧ್ಯೆ ಹತ್ಯೆ ಮಾಡಲಾಗಿದೆ. ಈ ಮೊದಲು ಇಲ್ಲೇ ಇದ್ದ ಈತ ಈಗ ಕೆಲ ವರ್ಷಗಳಿಂದ ಕುಣಿಗಲ್‌ನಲ್ಲಿ ಕುಟುಂಬ ಸಮೇತ ವಾಸವಾಗಿದ್ದ. ಯುಗಾದಿ ಪ್ರಯುಕ್ತ ಸ್ನೇಹಿತರ ಆಹ್ವಾನದ ಮೇರೆಗೆ ಬಂದಿದ್ದ. ಮದ್ಯ ಸೇವಿಸುತ್ತಿದ್ದಾಗ ಕೆಲವರು ಬಂದು ದಾಳಿ ಮಾಡಿ ಹತ್ಯೆಮಾಡಿ ಪರಾರಿಯಾಗಿದ್ದಾರೆ. ಈ ಕುರಿತು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದೇವೆ ಎಂದು ಬೆಂಗಳೂರು ಗ್ರಾಮಾಂತರ ಎಸ್‌ಪಿ ಸಿ.ಕೆ.ಬಾಬಾ ತಿಳಿಸಿದ್ದಾರೆ.

ಚುನಾವಣೆ ವೇಳೆ ಗಡಿಪಾರು: ಕೊಲೆಯಾದ ರೌಡಿಶೀಟರ್ ವಿರುದ್ಧ ಕೊಲೆ, ಕೊಲೆ ಯತ್ನ ಮತ್ತು ದರೋಡೆ, ಗೂಂಡಾ ಆ್ಯಕ್ಟ್ ಸೇರಿದಂತೆ ಹಲವು ಪ್ರಕರಣಗಳಿದ್ದವು. ಜತೆಗೆ ಕಳೆದ ಚುನಾವಣೆ ವೇಳೆ ಈತನನ್ನು ಗಡಿಪಾರು ಕೂಡ ಮಾಡಲಾಗಿತ್ತು. ಸದ್ಯ ಕುಣಿಗಲ್‌ಗೆ ಈತ ಮನೆ ಬದಲಾಯಿಸಿದ್ದ. ಆದರೆ, ಈಗ ಸ್ನೇಹಿತರು ಕರೆದಿದ್ದಕ್ಕೆ ಬಂದು ಡ್ರಿಂಕ್ಸ್ ಮಾಡುವಾಗ ದಾಳಿ ನಡೆದಿದೆ. ಘಟನೆ ನಡೆದ ಸ್ಥಳ ನಿರ್ಜನ ಪ್ರದೇಶವಾಗಿದ್ದರಿಂದ ಪರಿಚಿತರೇ ಹಳೆಯ ವೈಷಮ್ಯದಿಂದ ಕೃತ್ಯ ಎಸಗಿರುವ ಸಾಧ್ಯತೆ ಇದ್ದು, ಈ ಕುರಿತು ತನಿಖೆ ಬಳಿಕ ಗೊತ್ತಾಗಲಿದೆ, ಸ್ಥಳದಲ್ಲಿ ಎರಡು ಬೈಕ್ ಪತ್ತೆಯಾಗಿವೆ. ಇನ್ನು ನೇಪಾಳಿ ಮಂಜನನ್ನು ಪಾರ್ಟಿಗೆ ಕರೆಸಿದ್ದ ಸ್ನೇಹಿತರಿಂದ ಮಾಹಿತಿ ಪಡೆಯುತ್ತಿದ್ದೇವೆ. ಈ ಕುರಿತು ತನಿಖೆ ಬಳಿಕ ನಿಜಾಂಶ ಗೊತ್ತಾಗಲಿದೆ ಎಂದು ಎಸ್‌ಪಿ ಸಿ.ಕೆ.ಬಾಬು ಪ್ರತಿಕ್ರಿಯೆ ನೀಡಿದ್ದಾರೆ.

ನಾಲ್ಕೈದು ಮಂದಿ ಸ್ನೇಹಿತರ ಜತೆ ಮದ್ಯ ಸೇವಿಸುತ್ತಿದ್ದ ಮಂಜು ಮೇಲೆ ಏಕಾಏಕಿ ಲಾಂಗು, ಮಚ್ಚುಗಳಿಂದ ದಾಳಿ ಮಾಡಿ ಕೊಲೆ ಮಾಡಲಾಗಿದೆ. ದಾಳಿ ವೇಳೆ ಮಂಜು ಸ್ನೇಹಿತರು ಪರಾರಿಯಾಗಿದ್ದು, ಸದ್ಯ ಪೊಲೀಸರ ವಶದಲ್ಲಿದ್ದಾರೆ. ಘಟನಾ ಸ್ಥಳಕ್ಕೆ ಎಸ್‌ಪಿ ಸಿ.ಕೆ.ಬಾಬು ಸೇರಿದಂತೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಈ ಕುರಿತು ಹೆಬ್ಬಗೋಡಿ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ.

ಕೆ.ಆರ್.ಪುರ-ಸಿಲ್ಕ್ ಬೋರ್ಡ್ ನಡುವಿನ ಸಂಪರ್ಕ ರಸ್ತೆ ವಿಶ್ವದರ್ಜೆಗೆ

22 ಕಿ.ಮೀ ಕಾರಿಡಾರ್ ರಸ್ತೆ ಶೀಘ್ರವೇ ನವೀಕರಣ

ಬೆಂಗಳೂರು: ನಗರದ ಕೆ.ಆರ್.ಪುರ ಹಾಗೂ ಸೆಂಟ್ರಲ್ ಸಿಲ್ಕ್ ಬೋರ್ಡ್ ನಡುವೆ ಸಂಪರ್ಕ ಕಲ್ಪಿಸುವ ಹೊರವರ್ತುಲ ರಸ್ತೆಯ ನವೀಕರಣಕ್ಕೆ ಪಾಲಿಕೆ ಸಜ್ಜಾಗಿದ್ದು, ಸಂಚಾರ ದಟ್ಟಣೆ ನಿರ್ವಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಈ ರಸ್ತೆಯು ವಿಶ್ವದರ್ಜೆಯ ರಸ್ತೆಯಾಗಲಿದೆ.

22 ಕಿ.ಮೀ ಕಾರಿಡಾರ್ ರಸ್ತೆ ನವೀಕರಿಸಲು ಬಿಬಿಎಂಪಿ ಬರೋಬ್ಬರಿ 400ಕೋಟಿ ರು. ಅನುದಾನ ಬಜೆಟ್‌ನಲ್ಲಿ ಘೋಷಿಸಿದ್ದು, 500ಕ್ಕೂ ಅಧಿಕ ಕಂಪನಿಗಳಿಗೆ ಈ ರಸ್ತೆಯ ನೆಲೆಯಾಗಿದೆ. ಈ ರಸ್ತೆಯು ಬಹಳ ಹಿಂದಿನಿಂದಲೂ ಕಳಪೆ ನಿರ್ವಹಣೆಯ ಸಮಸ್ಯೆ ಎದುರಿಸುತ್ತಿತ್ತು. ಪ್ರತಿ ನಿತ್ಯ ಈ ಮಾರ್ಗದಲ್ಲಿ ಸಂಚರಿಸುವವರಿಗೂ ಇದು ದೊಡ್ಡ ತಲೆನೋವಾಗಿತ್ತು. ಈ ನಿಟ್ಟಿನಲ್ಲಿ ಈ ಹೊರ ವರ್ತುಲ ರಸ್ತೆಯನ್ನು ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಪರಿಷ್ಕರಿಸಲು ಬಿಬಿಎಂಪಿ ಮುಂದಾಗಿದೆ.

ವಿಶ್ವದರ್ಜೆ ಮಾನದಂಡಗಳ ಅಳವಡಿಕೆ

ಈ ಯೋಜನೆಯನ್ನು ಕರ್ನಾಟಕ ಸರ್ಕಾರ ಹಾಗೂ ಬೆಂಗಳೂರು ಮೆಟ್ರೋ ರೈಲು ನಿಗಮದ ಸಹಯೋಗದೊಂದಿಗೆ ವಿಶ್ವ ದರ್ಜೆಯ ಮಾನದಂಡಗಳ ಪ್ರಕಾರ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ನಗರದ ರಸ್ತೆ ಮೂಲಸೌಕರ್ಯ ಸುಧಾರಿಸುವ ನಿಟ್ಟಿನಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದ್ದು, ಸಾರ್ವಜನಿಕರಿ ಗಾಗಿ 1,000 ಕಿ.ಮೀ. ಪಾದಚಾರಿ ಮಾರ್ಗಗಳನ್ನು ನಿರ್ಮಿಸುವುದಾಗಿಯೂ ಬಿಬಿಎಂಪಿ ಹೇಳಿದೆ.

ಈ ರಸ್ತೆ ಮಾತ್ರವಲ್ಲದೆ ಈಗ ನಡೆಯುತ್ತಿರುವ ಮತ್ತು ಹೊಸ ರಸ್ತೆ ಯೋಜನೆಗಳ ಬಗ್ಗೆ ಕ್ರಮ ಕೈಗೊಳ್ಳಲು ಬಿಬಿಎಂಪಿ ಮುಂದಾಗಿದ್ದು, 1,700 ಕೋಟಿ ರು. ವೆಚ್ಚದಲ್ಲಿ 157 ಕಿ.ಮೀ ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿ, 694 ಕೋಟಿ ಅಂದಾಜು ವೆಚ್ಚದಲ್ಲಿ 118 ರಸ್ತೆಗಳ ಡಾಂಬರೀಕರಣವೂ ಇದರಲ್ಲಿ ಸೇರಿದೆ. ಹೆಚ್ಚುವರಿಯಾಗಿ ಟಿಡಿಆರ್ ಬಳಸಿಕೊಂಡು ಅಗಲೀಕರಣಕ್ಕಾಗಿ ಐದು ಪ್ರಮುಖ ರಸ್ತೆಗಳನ್ನು ಕೂಡ ಗುರುತಿಸಲಾಗಿದೆ. ಅವುಗಳೆಂದರೆ ಆರ್‌ಟಿ ನಗರ ಪೊಲೀಸ್ ಠಾಣೆಯಿಂದ ಬಿ.ಆರ್. ಅಂಬೇಡ್ಕರ್ ಕಾಲೇಜಿಗೆ, ಹೆಣ್ಣೂರು ಮುಖ್ಯ ರಸ್ತೆಯಿಂದ ಪುಲಕೇಶಿನಗರದ ಶ್ಯಾಮಪುರ ಮುಖ್ಯ ರಸ್ತೆವರೆಗೆ, ಕಂಚೇನಹಳ್ಳಿ ಮುಖ್ಯ ರಸ್ತೆಗಳ ಅಗಲೀಕರಣ ನಡೆಯಲಿದೆ.

ಹೃದಯಸ್ತಂಭನ: ವೈದ್ಯರ ವರದಿ ಒಪ್ಪದ ಹೈಕೋರ್ಟ್‌ನಿಂದ ಶಿಕ್ಷೆ ರದ್ದು

ಸಹೋದರಿಯ ಕೊಲೆ ಪ್ರಕರಣ ಸಹೋದರನ ಜೀವಾವಧಿ ರದ್ದು

ಬೆಂಗಳೂರು: ಹಣಕ್ಕಾಗಿ ತನ್ನ ಸಹೋದರಿಯ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿ, ಸಾವಿಗೆ ಕಾರಣವಾಗಿದ್ದ ಆರೋಪ ಪ್ರಕರಣದಲ್ಲಿ ಸಹೋದರನಿಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ರದ್ದುಪಡಿಸಿ ಆದೇಶ ಹೊರಡಿಸಿದೆ.

ಅಣ್ಣಪ್ಪ ಭಂಡಾರಿ ಎಂಬವರು ತಮಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ಕೆ.ವಿ.ಅರವಿಂದ್ ಅವರನ್ನೊಳಗೊಂಡ ವಿಭಾಗೀಯ ಪೀಠ ಈ ಆದೇಶ ನೀಡಿದ್ದು, ಶಿಕ್ಷೆ ಮಾರ್ಪಡಿಸಿದೆ.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಗಾಯವು ಕುತ್ತಿಗೆ ಭಾಗದ ರಕ್ತನಾಳಗಳಿಗೆ ಹಾನಿಯಾಗದಂತೆ ಮೇಲ್ನೋಟಕ್ಕೆ ಕಾಣುತ್ತದೆ. ಆರಂಭಿಕ ಹಂತದಲ್ಲಿ ಗಮನಿಸಲಾದ ನಾಡಿಮಿಡಿತ ಮತ್ತು ರಕ್ತದೊತ್ತಡದಲ್ಲಿ (ಬಿಪಿ) ಯಾವುದೇ ಹೃದಯ ಸಂಬಂಧಿತ ಸಮಸ್ಯೆ ಅಥವಾ ಕಾಯಿಲೆ ನಿರೀಕ್ಷಿಸಲು ಅಸಹಜವಾಗಿ ಹೆಚ್ಚಾಗಿರಲಿಲ್ಲ. ಈ ದೃಷ್ಟಿಕೋನದಲ್ಲಿ ಮೃತ ವಿಜಯಾ ಭಂಡಾರಿಗೆ ತಮಗಾದ ಗಾಯಗಳಿಂದಾಗಿ ಹೃದಯಸ್ತಂಭನ ಸಂಭವಿಸಿದೆ ಎಂಬ ವೈದ್ಯರ ಅಭಿಪ್ರಾಯ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಪೀಠ ತಿಳಿಸಿದೆ.

ಅಲ್ಲದೆ, ವಿಜಯಾ ಭಂಡಾರಿಗೆ ಆಗಿರುವ ಗಾಯ ಮತ್ತು ಹೃದಯಸ್ತಂಭನದ ನಡುವೆ ಯಾವುದೇ ಸಂಬಂಧವಿಲ್ಲ. ಹೃದಯ ಹೃದಯಸ್ತಂಭನದಿಂದಲೇ ಸಾವು ಉಂಟಾಗಿದೆ ಎಂಬುದಾಗಿ ಪರಿಗಣಿಸುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಆರೋಪಿ ಅಣ್ಣಪ್ಪನಿಂದ ಚಾಕು ವಶಪಡಿಸಿಕೊಳ್ಳಲಾಗಿದೆ. ಮನೆಗೆ ನುಗ್ಗಿ ತನ್ನ ಸಹೋದರಿಯ ಮೇಲೆ ಹಲ್ಲೆ ಮಾಡಿದ್ದಾನೆ ಎಂಬ ಅಂಶ ಪರಿಗಣಿಸಿದ ನ್ಯಾಯಪೀಠ, ಐಪಿಸಿ ಸೆಕ್ಷನ್ 326 (ಅಪಾಯಕಾರಿ ಆಯುಧಗಳು ಅಥವಾ ವಿಧಾನಗಳಿಂದ ಸ್ವಯಂಪ್ರೇರಿತವಾಗಿ ತೀವ್ರ ಗಾಯಗೊಳಿಸುವುದು) ಮತ್ತು 448 (ಕ್ರಿಮಿನಲ್ ಅತಿಕ್ರಮಣ) ಅಡಿ ಶಿಕ್ಷೆ ಎತ್ತಿಹಿಡಿದಿದೆ.

ವಕೀಲರ ವಾದ: ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ವಿಜಯಾ ಭಂಡಾರಿ ಸಾವಿಗೆ ಹೃದಯ ಹೃದಯಸ್ತಂಭನವೇ ಕಾರಣವಾಗಿದೆ ಎಂದು ವೈದ್ಯರು ವರದಿ ನೀಡಿದ್ದಾರೆ. ಆದರೆ, ನಮ್ಮ ಕಕ್ಷಿದಾರರು ಗಾಯಪಡಿಸಿರುವುದು ನಿಜವಾದರೂ, ಅದಕ್ಕೂ ಹೃದಯ ಸ್ಥಂಭನಕ್ಕೂ ಯಾವುದೇ ಸಂಬಂಧವಿಲ್ಲ. ಅಲ್ಲದೆ, ಪ್ರಕರಣದಲ್ಲಿ ಎಲ್ಲಾ ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಲಾಗಿದೆ. ಆದರೆ, ವಿಜಯಾ ಭಂಡಾರಿಯ ಇನ್ನೊಬ್ಬ ಸಹೋದರಿ ವಿಮಲಾರ ಹೇಳಿಕೆ ದಾಖಲಿಸಿಕೊಳ್ಳುವಲ್ಲಿ ಪೊಲೀಸರು ವಿಫಲವಾಗಿದ್ದು, ಶಿಕ್ಷೆ ರದ್ದುಪಡಿಸಬೇಕು ಎಂದು ಕೋರಿದ್ದರು.

ಪ್ರಕರಣದ ಹಿನ್ನೆಲೆ

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಸಲೂನ್ ನಡೆಸುತ್ತಿದ್ದ ಅಣ್ಣಪ್ಪ ಭಂಡಾರಿ 2018ರ ಜುಲೈ 22ರಂದು ತನ್ನ ಸಹೋದರಿ ವಿಜಯ ಭಂಡಾರಿ ಜೊತೆ ಜಗಳವಾಡಿದ್ದ. ಅಣ್ಣಪ್ಪ ಭಂಡಾರಿ ತನ್ನ ಸಹೋದರಿಯಿಂದ ಹಣಕ್ಕೆ ಬೇಡಿಕೆ ಇಟ್ಟಿದ್ದು, ವಿಜಯಾ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿತ್ತು. ವಿಜಯಾರ ಎಡಭುಜದ ಬಳಿ, ಬೆನ್ನಿನ ಬಲಭಾಗದಲ್ಲಿ ಗಾಯಗಳಾಗಿದ್ದು, ಕೆಳಗೆ ಬಿದ್ದು ಮತ್ತಷ್ಟು ಗಾಯಗಳಾಗಿದ್ದವು. ಬಳಿಕ ಮಣಿಪಾಲದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೂ 2018ರ ಜುಲೈ 28ರಂದು ಅವರು ಮೃತಪಟ್ಟಿದ್ದರು.

ಸಮಾಚಾರ ಸಣ್ಣದಲ್ಲ

ಏ.4 ರಂದು ಚಿತ್ರಕಲೆ ಪ್ರದರ್ಶನ ಕಾರ್ಯಕ್ರಮ

ಬೆಂಗಳೂರು: ಚಿತ್ರ ಕಲೆ ಪ್ರದರ್ಶನ ಸಮಾರಂಭ ಏ.4 ರಂದು ಸಂಜೆ 5 ಗಂಟೆಗೆ ಬಸವನಗುಡಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನಡೆಯಲಿದೆ. ಸಮಾರಂಭದಲ್ಲಿ ಎಂ.ಟಿ.ವಿ.

ಆಚಾರ್ಯರ ಜೀವನ ಮತ್ತು ಕಲಾ ಪಯಣ ಎಂಬ ವಿಷಯದ ಕುರಿತು ವಿಶೇಷ ದೃಶ್ಯಾವಳಿ ಉಪನ್ಯಾಸ ನಡೆಯಲಿದೆ. ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಹಿರಿಯ ಕಲಾವಿದ ಚಂದ್ರನಾಥ ಆಚಾರ್ಯ, ಚಿ.ಸು.ಕೃಷ್ಣ ಸೆಟ್ಟಿ, ಗರುಡ ಫೌಂಡೇಶನ್ ಅಧ್ಯಕ್ಷೆ ಮೇದಿನಿ ಗರುಡಾಚಾರ್, ಲೇಖಕ ಎಲ್.ಶಿವಲಿಂಗಪ್ಪ, ಚಿತ್ರ ನಿರ್ದೇಶಕ ಪಿ.ಶೇಷಾದ್ರಿ ಮತ್ತು ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಕಾರ್ಯದರ್ಶಿ ಆರ್.ಜಿ.ಸಿಂಗ್ ಭಾಗವಹಿಸಲಿದ್ದಾರೆ. ಕಲಾರಸಿಕರು ಹಾಗೂ ಕಲಾ ಅಧ್ಯಯನ ಶೀಲರು ಸಮಾರಂಭದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಮಾಹಿತಿಗಾಗಿ- 9972027514 ಸಂಪರ್ಕಿಸಿ.

ನಯಾಗರಾ ಪ್ರತಿರೂಪ

ಬೆಂಗಳೂರು: ನಗರದ ಚಾಮರಾಜಪೇಟೆಯ ಇಟಿಎ ಮಾಲ್ ಬಳಿಯ ಐತಿಹಾಸಿಕ ಬಿನ್ನಿ ಮಿಲ್ ಮೈದಾನ್ದದಲ್ಲಿ 200 ಅಡಿ ಉದ್ದದ 25 ಅಡಿ ಎತ್ತರದ ವಿಶ್ವಪ್ರಸಿದ್ಧ ನಯಾಗರಾ ಜಲಪಾತದ ಪ್ರತಿರೂಪವನ್ನು ನಿರ್ಮಾಣ ಮಾಡಲಾಗಿದೆ. ಮಾ.28ರಿಂದ ಜೂನ್.1ರವರೆಗೆ ನಡೆಯುವ ಈ ಕಾರ್ನಿವಲ್‌ನಲ್ಲಿ ಮನಸೆಳೆಯುವ ಜಲಪಾತದ ಜತೆಗೆ ಎಲ್ಲಾ ವಯೋಮಾನದವರಿಗೆ ವಿವಿಧ ಮನೋರಂಜನೆಗಳನ್ನು ಆಯೋಜಿಸಲಾಗಿದೆ. ಜತೆಗೆ ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ. ಮೂಲ ನಯಾಗರಾ ಜಲಪಾತದ ನೈಜತೆ ಮತ್ತು ಸೌಂದರ್ಯವನ್ನು ಪ್ರತಿಬಿಂಬಿಸುವಂತೆ ವಿನ್ಯಾಸಗೊಳಿಸಲಾಗಿದ್ದು, ಪ್ರತಿ ಗಂಟೆಗೆ 1 ಲಕ್ಷ ಲೀಟರ್ ನೀರನ್ನು ಪಂಪ್ ಮಾಡಲಾಗುತ್ತದೆ. ನೀರಿನ ಭೋರ್ಗರೆತ, ಎಲೆಕ್ಟ್ರಿಕ್ ಬ್ಲೂಸ್‌ನಿಂದ ಉರಿಯುತ್ತಿರುವ ಕೆಂಪುಬಣ್ಣಕ್ಕೆ ಬದಲಾಗುವ ಡೈನಾಮಿಕ್ ಲೈಟಿಂಗ್‌ನೊಂದಿಗೆ ಸಂಯೋಜಿಸಲ್ಪಟ್ಟಿದೆ. ಇದರ ಮುಂದೆ ನಿಂತಾಗ, ನಿಜವಾದ ಜಲಪಾತಕ್ಕೇ ಭೇಟಿ ನೀಡಿದ್ದೇನೋ ಎಂಬಂತೆ ಭಾಸವಾಗುತ್ತದೆ. ಮಂಜು, ಧುಮ್ಮಿಕ್ಕುವ ನೀರು, ದೀಪಗಳು ಎಲ್ಲವೂ ಒಂದೆಡೆ ಸೇರಿ ಮರೆಯಲಾಗದ ಅನುಭವ ನೀಡುತ್ತದೆ. ರಾತ್ರಿಯಾಗುತ್ತಿದ್ದಂತೆ ಜಲಪಾತವು ಮಂಜು, ಬಹು-ಬಣ್ಣದ ದೀಪಗಳೊಂದಿಗೆ ಕಂಗೊಳಿಸುತ್ತದೆ.

ರೋಬೋಟಿಕ್ ಚಿಟ್ಟೆ ಪ್ರದರ್ಶನ

ಬೆಂಗಳೂರು: ರೋಬೋಟಿಕ್ ಚಿಟ್ಟೆ ಪ್ರದರ್ಶನ ಮಾ.28 ರಿಂದ ಜೂ.1 ರವರೆಗೆ ಬಿನ್ನಿಮಿಲ್ ಮೈದಾನದಲ್ಲಿ ಸಂಜೆ 4 ರಿಂದ ರಾತ್ರಿ 9 ರ ವರೆಗೆ ಏರ್ಪಟ್ಟಿದೆ. ಚಿಟ್ಟೆ ಸಂರಕ್ಷಣೆ ಕುರಿತು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಆಯೋಜಿಸಿರುವ ಪ್ರದರ್ಶನದಲ್ಲಿ, 6 ರಿಂದ 8 ಅಡಿ ಎತ್ತರದ ಅನಿಮೇಟೆಡ್ ಚಿಟ್ಟೆ, ಡ್ರಾಗನ್‌ಫ್ಲೈ, ಚೇಳು, ಮಿಡತೆಗಳು ನೈಜ ಚಿಟ್ಟೆ - ಕೀಟಗಳಂತೆ ವರ್ತಿಸುತ್ತವೆ. ಶೈಕ್ಷಣಿಕ ಪ್ರದರ್ಶನಗಳ ಮೂಲಕ ಚಿಟ್ಟೆಗಳ ಬಗ್ಗೆ ಕುತೂಹಲ ಮತ್ತು ಸಹಾನುಭೂತಿ ಹುಟ್ಟುಹಾಕುವುದು ಹಾಗು ನಾಶ ಹೊಂದುತ್ತಿರುವ ಪ್ರಭೇದಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸಮಾಜದ ಪಾತ್ರ ಸಾರುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

ಬೆಂಗಳೂರು: ಉತ್ತರಾಖಂಡದ ಡೆಹರಾಡೂನಲ್ಲಿರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ ಜನವರಿ 2026ನೇ ಅವಧಿಯ 8ನೇ ತರಗತಿ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ದಿನಾಂಕ ಏ.15ರವರೆಗೆ ವಿಸ್ತರಿಸಲಾಗಿದೆ. ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿಯರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹತಾ ಪ್ರವೇಶ ಪರೀಕ್ಷೆ ಬೆಂಗಳೂರು ಕೇಂದ್ರದಲ್ಲಿ ಜೂ.1 ರಂದು ನಡೆಸಲಾಗುವುದು. ಅರ್ಜಿಗಳನ್ನು, ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಭವನ, ನಂ.58, ಬೆಂಗಳೂರು-25 ಇವರಿಗೆ ಏಪ್ರಿಲ್ 15 ರೊಳಗಾಗಿ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-25589459 ಅಥವಾ ತಮ್ಮ ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಾರ್ಯಾಲಯ ಸಂಪರ್ಕಿಸಬಹುದು ಎಂದು ಬೆಂಗಳೂರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

ಯಶಸ್ವಿ ಜಾಥಾ

ಬೆಂಗಳೂರು: ಬ್ರೂಕ್‌ಫೀಲ್ಡ್ ಪ್ರಾಪರ್ಟೀಸ್ ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಮೊದಲ ವರ್ಷದ ಸಿಸ್ಟಾ ರನ್ 2025 ಅನ್ನು ಬೆಂಗಳೂರಿನ ತನ್ನ ಪ್ರಮುಖ ಕ್ಯಾಂಪಸ್ ಇಕೋವರ್ಲ್ಡ್ ನಲ್ಲಿ ಯಶಸ್ವಿಯಾಗಿ ಆಯೋಜಿಸಿದೆ. ಮಹಿಳೆಯರಿಗಾಗಿ ಮಾತ್ರ ಆಯೋಜಿಸಲಾಗಿದ್ದ ಈ ಓಟದ ಕಾರ್ಯಕ್ರಮದಲ್ಲಿ 2,000ಕ್ಕೂ ಹೆಚ್ಚು ವನಿತೆಯರು ಭಾಗವಹಿಸಿದ್ದರು. 10ಕೆ ಟೈಮ್ಡ್, 5ಕೆ ಟೈಮ್ಡ್ ಮತ್ತು 3ಕೆ ಫನ್ ರನ್ ಎಂಬ ಮೂರು ವಿಭಾಗಗಳಲ್ಲಿ ಓಟದ ಕಾರ್ಯಕ್ರಮವು ನಡೆಯಿತು. ಕಂಪನಿ ಸಹ ಸಂಸ್ಥಾಪಕಿ ಶ್ವೇತಾ ಸುಬ್ಬಯ್ಯ ಅವರು, ಇದು ಒಂದು ರೇಸ್ ಮಾತ್ರವೇ ಆಗಿರಲಿಲ್ಲ, ಮಹಿಳೆಯರು ಒಟ್ಟಾಗಿ ಸೇರಿ ಓಡುವುದರ ಜತೆಗೆ ಒಬ್ಬರನ್ನೊಬ್ಬರು ಬೆಂಬಲಿಸುವ ಮತ್ತು ಸ್ಫೂರ್ತಿಯಾಗುವ ಅತ್ಯುತ್ತಮ ವೇದಿಕೆಯಾಗಿತ್ತು. ಮೊದಲ ಬಾರಿಗೆ ಓಡುವವರಿಂದ ಹಿಡಿದು ಅನುಭವಿ ಕ್ರೀಡಾಪಟುಗಳವರೆಗೆ ಈ ಕಾರ್ಯಕ್ರಮದಲ್ಲಿ ಎಲ್ಲಾ ವರ್ಗಗಳ ಮಹಿಳೆಯರು ಪಾಲ್ಗೊಂಡರು ಎಂದರು.

ಇಂದಿನಿಂದ ನಗರದಲ್ಲಿ ಕಸಕ್ಕೂ ಸೆಸ್ ಜಾರಿ

ಬೆಲೆ ಏರಿಕೆಯಿಂದ ತತ್ತರಿಸಿದ ಜನರಿಗೆ ಮತ್ತೊಂದು ಆಘಾತ

ಹಾಲು, ವಿದ್ಯುತ್ ದರ ಹೆಚ್ಚಳ ನಂತರ ಈಗ ಕಸದ ಸರದಿ

ಬೆಂಗಳೂರು: ಬೆಲೆ ಏರಿಕೆಯ ಬರೆಯಿಂದ ತತ್ತರಿಸಿರುವ ಬೆಂಗಳೂರಿಗರಿಗೆ ಏಪ್ರಿಲ್ 1ರಿಂದ ಕಸ ಸೆಸ್ ಮೂಲಕ ಆಘಾತ ಎದುರಾಗಲಿದೆ.

ಈಗಾಗಲೇ ಘೋಷಿಸಿದಂತೆ ಹಾಲು, ವಿದ್ಯುತ್ ದರ ಏರಿಕೆಯು ಇಂದಿನಿಂದ (ಏ.1)ಜಾರಿಯಾಗಲಿದ್ದು, ಇದರ ಜತೆಗೆ ಎಸೆಯುವ ಕಸಕ್ಕೂ ತೆರಿಗೆ ವಿಧಿಸಲು ಬಿಬಿಎಂಪಿ ಮುಂದಾಗಿದ್ದು, ಮಂಗಳವಾರದಿಂದ ಈ ಸೆಸ್ ಜಾರಿಗೆ ಬರಲಿದೆ. ಈ ವಿಚಾರವಾಗಿ ಬಿಬಿಎಂಪಿ ಬಜೆಟ್‌ನಲ್ಲೂ ಘೋಷಿಸಲಾಗಿದ್ದು, ಈ ಮೂಲಕ 600 ಕೋಟಿ ರು. ಆದಾಯ ಸಂಗ್ರಹಕ್ಕೆ ಪಾಲಿಕೆ ಗುರಿ ಹಾಕಿಕೊಂಡಿದೆ.

ಬಿಬಿಎಂಪಿ ಕಸ ತೆರಿಗೆ ಎಷ್ಟು?: ಅಂಗಡಿ-ಮುಂಗಟ್ಟುಗಳಲ್ಲಿ ಪ್ರತಿ ಕೆಜಿ ಕಸಕ್ಕೆ 12 ರು. ತೆರಿಗೆ ವಸೂಲಿಗೆ ಪಾಲಿಕೆ ಸಜ್ಜಾಗಿದ್ದು, ಪ್ರತಿ ತಿಂಗಳು ಕಸ ಸಂಗ್ರಹ ಹಾಗೂ ವಿಲೇವಾರಿ ವೆಚ್ಚ ಹೆಚ್ಚಾಗುತ್ತಿದ್ದು,

- ಸೆಸ್ ಸಂಗ್ರಹದಿಂದ 600 ಕೋಟಿ ರು. ಆದಾಯ ನಿರೀಕ್ಷೆ
- ಅಂಗಡಿಗಳಿಂದ ಪ್ರತಿ ಕಸಕ್ಕೆ 12 ರು. ತೆರಿಗೆ ವಸೂಲಿಗೆ ಯೋಜನೆ
- ಕಟ್ಟಡಗಳ ವಿಸ್ತೀರ್ಣ ಆಧರಿಸಿ ಆಸ್ತಿ ತೆರಿಗೆ ಜತೆಗೆ ಕಸದ ಶುಲ್ಕ ನಿಗದಿ
- ಮನೆಬಾಗಿಲಿಗೆ ಕಸದ ಸಂಗ್ರಹ, ವಿಲೇವಾರಿಯಿಂದಾಗಿ ಶುಲ್ಕ ಸಂಗ್ರಹ

ಈ ಕಾರಣದಿಂದ ತೆರಿಗೆ ವಿಧಿಸಲಾಗುತ್ತಿದೆ. ಕಟ್ಟಡದ ವಿಸ್ತೀರ್ಣದ ಮೇಲೆ ಕಸದ ಶುಲ್ಕ ನಿಗದಿಪಡಿಸಲಿದ್ದು, ಆಸ್ತಿ ತೆರಿಗೆ ಜತೆಗೆ ಕಸ ತೆರಿಗೆಯನ್ನೂ ಪಾಲಿಕೆ ಸಂಗ್ರಹ ಮಾಡಲಿದೆ.

ಕಟ್ಟಡಗಳ ಗಾತ್ರದ ಮೇಲೆ ಕಸ ತೆರಿಗೆ ನಿರ್ಧಾರ: ಕಟ್ಟಡದ ವಿಸ್ತೀರ್ಣದ ಮೇಲೆ ತೆರಿಗೆ ನಿಗದಿಪಡಿಸಲಿದ್ದು, ಪಾಲಿಕೆ ಮೂಲಗಳ ಪ್ರಕಾರ, 600 ಚದರ ಅಡಿವರೆಗಿನ ಕಟ್ಟಡಗಳಿಗೆ ತಿಂಗಳಿಗೆ 10 ರು. ತೆರಿಗೆ ವಿಧಿಸಲಾಗುತ್ತದೆ. 600 ಚದರ ಅಡಿಯಿಂದ 1000 ಚದರ ಅಡಿವರೆಗಿನ ಕಟ್ಟಡಗಳಿಗೆ ತಿಂಗಳಿಗೆ 50 ರು. ತೆರಿಗೆ ನಿಗದಿಪಡಿಸಲಾಗುತ್ತದೆ. ಸಾವಿರದಿಂದ 2 ಸಾವಿರ ಚದರ ಅಡಿಗಳ ಕಟ್ಟಡಗಳಿಗೆ ತಿಂಗಳಿಗೆ 100 ರು, 2 ಸಾವಿರದಿಂದ 3 ಸಾವಿರ ಚದರ ಅಡಿಗಳ ಕಟ್ಟಡಗಳಿಗೆ ತಿಂಗಳಿಗೆ 150 ರು, 3 ಸಾವಿರ ದಿಂದ 4 ಸಾವಿರ ಚದರ ಅಡಿಗಳ ಕಟ್ಟಡಗಳಿಗೆ ತಿಂಗಳಿಗೆ 200 ರು. ಹಾಗೂ 4 ಸಾವಿರ ಚದರ ಅಡಿಗಳ ಮೇಲ್ಪಟ್ಟ ಕಟ್ಟಡಗಳಿಗೆ ತಿಂಗಳಿಗೆ 400 ರು. ಕಸ ತೆರಿಗೆ ವಿಧಿಸಲಾಗುತ್ತದೆ. ಬೆಂಗಳೂರಿನಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಸಂಸ್ಥೆ ಪ್ರತೀ ಮನೆ ಬಾಗಿಲಿಗೆ ತೆರಳಿ ತ್ಯಾಜ್ಯ ಸಂಗ್ರಹಿಸುವುದು ಮತ್ತು ವಿಲೇವಾರಿ ಮಾಡುತ್ತದೆ. ಹೀಗಾಗಿ ಈ ಶುಲ್ಕ ವಿಧಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ತಿಳಿಸಿತ್ತು.

ಆಸ್ತಿ ತೆರಿಗೆ ಪಾವತಿಸಲು ವಿಫಲವಾದರೆ ದುಪ್ಪಟ್ಟು ತೆರಿಗೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಗೆ ಸೋಮವಾರ ಕೊನೆಯ ದಿನವಾಗಿದ್ದು, ಮಾ.31ರಂದು ಪಾವತಿಸಲು ವಿಫಲವಾದರೆ ದುಪ್ಪಟ್ಟು ಮೊತ್ತ ಪಾವತಿಸಬೇಕಾಗುತ್ತದೆ ಎಂದು ಪಾಲಿಕೆ ಹೇಳಿದೆ. ಬಿಬಿಎಂಪಿ ಒಟಿಎಸ್‌ಗೆ ನೀಡಿದ್ದ ಅವಕಾಶವನ್ನು ಹಲವು ಬಾರಿ ವಿಸ್ತರಿಸಿದ್ದರೂ ಕೂಡಾ ಅಂತಿಮವಾಗಿ ಮಾ.31ರ ಗಡುವನ್ನು ವಿಧಿಸಿತ್ತು. ಆದರೆ ಸೋಮವಾರ ಆಸ್ತಿ ತೆರಿಗೆ ಪಾವತಿಗೆ ಕೊನೆಯ ದಿನವಾಗಿದ್ದು, ಪಾವತಿಸಲು ಬಾಕಿ ಉಳಿಸಿಕೊಂಡವರು ಏಪ್ರಿಲ್ 1ರಿಂದ ದುಪ್ಪಟ್ಟು ತೆರಿಗೆ ಪಾವತಿಸಬೇಕಾಗುತ್ತದೆ. ಜತೆಗೆ ಏ.9ರಷ್ಟು ಬಡ್ಡಿ ಕೂಡಾ ಪಾವತಿಸಬೇಕಾಗುತ್ತದೆ. ಪಾಲಿಕೆ ಕಾಯಿದೆಯಲ್ಲಿ ತಿದ್ದುಪಡಿ ಹಿನ್ನೆಲೆ ದುಪ್ಪಟ್ಟು ತೆರಿಗೆ ಪಾವತಿಸಬೇಕಾಗುತ್ತದೆ. ಪಾಲಿಕೆಗೆ 400 ಕೋಟಿ ರು. ಆಸ್ತಿ ತೆರಿಗೆ ಬಾಕಿ ಬರಬೇಕಿದ್ದು, ಇವುಗಳಲ್ಲಿ ಕೆಲವು ಸರಕಾರಿ ಕಟ್ಟಡಗಳ ಆಸ್ತಿ ತೆರಿಗೆ ಕೂಡ ಬಾಕಿಯಿದ್ದು,ತೆರಿಗೆ ಬಾಕಿ ಪಾವತಿಸಿಲ್ಲ ಎಂದಾದರೆ ಮುಂದಿನ ದಿನಗಳಲ್ಲಿ ಆಸ್ತಿ ಹರಾಜು ಹಾಕುವ ಸಾಧ್ಯತೆಯೂ ಇದೆ. ಪಾಲಿಕೆಯು 2024-25ನೇ ಸಾಲಿನಲ್ಲಿ ಆಸ್ತಿ ತೆರಿಗೆಯಿಂದ 5,210 ಕೋಟಿ ರು. ಸಂಗ್ರಹಿಸುವ ಗುರಿ ಹೊಂದಿತ್ತು. ಆದರೆ, ಈವರೆಗೆ 4,604 ಕೋಟಿ ರು.ವಸೂಲಿ ಆಗಿದೆ. ಮಾರ್ಚ್ 31ರೊಳಗೆ ಬಾಕಿ ಆಸ್ತಿ ತೆರಿಗೆ ಪಾವತಿಸದಿದ್ದರೆ ಡಬಲ್ ಹಣ ದಂಡದ ರೂಪದಲ್ಲಿ ವಸೂಲಿ ಮಾಡಲು ಬಿಬಿಎಂಪಿ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

ಅರಣ್ಯ ಉಳಿಸಿದರೆ ಕನ್ನಡ ಸಂಸ್ಕೃತಿ ಉಳಿವು

ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬಿಳಿಮಲೆ ಅಭಿಪ್ರಾಯ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರಿನ ಅರಣ್ಯ ಇಲಾಖೆ ಪ್ರಧಾನ ಕಚೇರಿಯಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ ನಡೆಸಿತು.

ಬೆಂಗಳೂರು: ಅರಣ್ಯ ಪರಿಸರ ನಾಶವಾಗುವುದು ಸಾಂಸ್ಕೃತಿಕ ದೃಷ್ಟಿಕೋನದಿಂದ ಒಳ್ಳೆಯ ಬೆಳವಣಿಗೆಯಲ್ಲ. ಅರಣ್ಯ ಸಂರಕ್ಷಿಸಿದರೆ ಕನ್ನಡ ಸಂಸ್ಕೃತಿ ಉಳಿಯುವುದು, ಅರಣ್ಯದ ಕುರಿತಾದ ಸಂಶೋಧನಾ ಚಟುವಟಿಕೆಗಳು ಕನ್ನಡದಲ್ಲಿ ನಿರ್ವಹಿಸಪಟ್ಟಲ್ಲಿ ಅದು ಕನ್ನಡದ ಉಳಿವಿಗೆ ತನ್ನದೇ ಕಾಣಿಕೆ ನೀಡುತ್ತದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ ಅರಣ್ಯ ಇಲಾಖೆಯ ಪ್ರಧಾನ ಕಚೇರಿಯಲ್ಲಿ ಶನಿವಾರ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಪರಿಸರ ನಾಶದ ಜತೆ ಕನ್ನಡವು ಮರೆಯಾಗುವ ಅವಕಾಶಗಳಿದ್ದು, ಭಾಷೆ ಕೊಲ್ಲಲ್ಪಟ್ಟಲ್ಲಿ ಸಂಸ್ಕೃತಿ ನಾಶವಾಗುತ್ತದೆ. ಹಾಗಾಗಿ ಕನ್ನಡದ ಅಸ್ಮಿತೆ ಕಾಯುವ ಜವಾಬ್ದಾರಿ ಬೇರೆ ಎಲ್ಲಾ ಇಲಾಖೆಗಳಿಗಿಂತಲೂ ಅರಣ್ಯ ಇಲಾಖೆಗೆ ಹೆಚ್ಚಿದೆ. ಕುವೆಂಪು, ಕಾರಂತ, ತೇಜಸ್ವಿಯಂತಹ ಕೆಲವೇ ಲೇಖಕರನ್ನು ಹೊರತುಪಡಿಸಿದರೆ ಕಾಡಿನ ಭಾಷೆಯ ಸತ್ವ ,ಶಕ್ತಿಯನ್ನು ಕನ್ನಡ ಸಾಹಿತ್ಯವು ಹಿಡಿದಿಟ್ಟಿರುವುದು ತುಂಬಾ ಕಡಿಮೆ, ಕನ್ನಡದ ಕಾಡು ಒಂದು ಜ್ಞಾನಭಂಡಾರವಾಗಿ ರೂಪಿತವಾಗಬೇಕಾದಲ್ಲಿ ಅರಣ್ಯ ಇಲಾಖೆ ಇನ್ನಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಿದೆ ಎಂದರು.

ಇಲಾಖೆ ಜಾಲತಾಣಗಳಲ್ಲಿ ಕನ್ನಡವಿರಲಿ: ಮೈಸೂರಿನ ಮೃಗಾಲಯದ ಜಾಲತಾಣ ಸೇರಿದಂತೆ ಇಲಾಖೆಯ ವಿವಿಧ ಕಚೇರಿಗಳ ಜಾಲತಾಣಗಳಲ್ಲಿ, ಕನ್ನಡಕ್ಕೆ ಆದ್ಯತೆ ನೀಡದಿರುವುದು ಬೇಸರದ ಸಂಗತಿ, ಕನ್ನಡವನ್ನು ಆದ್ಯತೆಯ ಭಾಷೆಯನ್ನಾಗಿ ಬಳಸುವ ವ್ಯವಸ್ಥೆ ಯನ್ನು ಕೂಡಲೇ ರೂಪಿಸಬೇಕು. ಸಾರ್ವಜನಿಕರೊಂದಿಗೆ ಸ್ಪಂದಿಸುವ ಪತ್ರ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ಕನ್ನಡ ಬಳಕೆಗೆ ಮುಂದಾಗಬೇಕು. ಇಲಾಖೆಯ ಜಾಲತಾಣಗಳಲ್ಲಿ ದಾಖಲಿಸಿರುವ ಆದೇಶ, ಸುತ್ತೋಲೆಗಳು ಆಂಗ್ಲ ಭಾಷೆಯಲ್ಲಿದ್ದು, ಕೂಡಲೇ ಇದನ್ನು ಸರಿಪಡಿಸಬೇಕು ಎಂದು ಸೂಚನೆ ನೀಡಿದರು.

ಇಲಾಖೆಯಲ್ಲಿ ಕನ್ನಡ ಘಟಕ ಸ್ಥಾಪಿಸಿ: ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವ ಕನ್ನಡಿಗರ ಹಿತ ಕಾಯಲು ಕೂಡಲೇ ಕನ್ನಡ ಘಟಕ ಸ್ಥಾಪಿಸುವ ಅವಶ್ಯಕತೆಯಿದೆ, ಕನ್ನಡಿಗರು ತಮ್ಮದೇ ನೆಲದಲ್ಲಿ ಅನಾಥ ಪ್ರಜ್ಞೆಯಿಂದ ನರಳದಿರಲು ಇಂತಹ ನಿಲುವುಗಳು ಅಗತ್ಯವಿದೆ. ಕಾಲಕಾಲಕ್ಕೆ ಕನ್ನಡ ಭಾಷೆ ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಕಾರ್ಯಕ್ರಮ ಆಯೋಜಿಸಬೇಕು, ಈ ರೀತಿಯ ಕನ್ನಡ ಘಟಕಗಳು ಕನ್ನಡಿಗರ ಸಂವೇದನಾಶೀಲತೆಗೆ ಸಹಕರಿಸಲಿವೆ ಎಂದರು.

ಸಭೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ಲ, ಡಾ. ವಿ.ಪಿ.ನಿರಂಜನಾರಾಧ್ಯ, ಟಿ.ಎಸ್. ಫಣಿಕುಮಾರ್, ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನ ಕೃಷಿ ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಛಾಯಾ.ಎ.ಎಂ., ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಸುಭಾಷ್. ಕೆ.ಮಾಲ್ಖಡೆ, ಸೀಮಾ ಗರ್ಗ್, ವನಶ್ರೀ ಸಿಂಗ್, ಕುಮಾರ್ ಪುಷ್ಕರ್ ಹಾಜರಿದ್ದರು.

ಲೋಕಾರಿಂದ ಅಬಕಾರಿ ಅಧಿಕಾರಿಗಳ ವಿಚಾರಣೆ

ಸಾರ್ವಜನಿಕರಿಂದ ದೂರುಗಳ ಸುರಿಮಳೆ: ನ್ಯಾ. ಬಿ.ಎಸ್. ಪಾಟೀಲ್ ಎಚ್ಚರಿಕೆ

ಬೆಂಗಳೂರು: ಸಾರ್ವಜನಿಕರಿಂದ ಹೆಚ್ಚಿನ ದೂರು ಬಂದ ಹಿನ್ನೆಲೆ ಕಳೆದ ವರ್ಷ ನಗರ ವ್ಯಾಪ್ತಿಯ 65 ಅಬಕಾರಿ ಕಚೇರಿಗಳ ಮೇಲೆ ದಾಳಿ ಮಾಡಿದ್ದ ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್ ಅವರು ಅಬಕಾರಿ ಇಲಾಖೆಯ ಅಧಿಕಾರಿಗಳನ್ನು ಕರೆಸಿ, ವಿಚಾರಣೆ ನಡೆಸಿದರು.

ಅಬಕಾರಿ ಇಲಾಖೆಯ ಇಬ್ಬರು ಜಂಟಿ ಆಯುಕ್ತರು ಹಾಗೂ ನಾಲ್ವರು ಉಪ ಆಯುಕ್ತರು ಸೇರಿದಂತೆ 150 ಅಧಿಕಾರಿಗಳನ್ನ ಕರೆಯಿಸಿ, ಇಲಾಖೆಯಲ್ಲಿ ಕಂಡುಬಂದ ಲೋಪದೋಷ ಹಾಗೂ ಕೆಲ ಸುಧಾರಣೆ ಕ್ರಮಗಳನ್ನು ಅನುಸರಿಸುವಂತೆ ಲೋಕಾಯುಕ್ತರು ತಾಕೀತು ಮಾಡಿದರು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಲೋಕಾಯುಕ್ತದವರ ನೇತೃತ್ವದಲ್ಲಿ ಅಧಿಕಾರಿಗಳು ನಗರದ 65 ಅಬಕಾರಿ ಕಚೇರಿಗಳ ಮೇಲೆ ದಾಳಿ ಮಾಡಿದ್ದರು. ದಾಳಿ ವೇಳೆ ಕಂಡು ಬಂದಿದ್ದ ನ್ಯೂನತೆಗಳ ಬಗ್ಗೆ ವರದಿ ನೀಡುವಂತೆ ಕೇಳಿದ್ದರು. ಇಂದು ವರದಿ ಪಡೆದ ಬಳಿಕ ಅಬಕಾರಿ ಅಧಿಕಾರಿಗಳಿಗೆ ಕೆಲವೊಂದು ಅಂಶಗಳನ್ನು ಅಳವಡಿಸಿಕೊಳ್ಳುವಂತೆ ತಾಕೀತು ಮಾಡಿದರು.

ಇಲಾಖೆಯ ಸುತ್ತೋಲೆ ಅನ್ವಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಸಮವಸ್ತ್ರ ಕಡ್ಡಾಯವಾಗಿ ಧರಿಸಲು ಕ್ರಮವಹಿಸಬೇಕು. ಚಲನವಲನ ಪುಸ್ತಕದಲ್ಲಿ ನಮೂದಿಸದೇ ಅನ್ಯಕಾರ್ಯ ನಿಮಿತ್ತ ಹೊರಗಡೆ ತೆರಳುವ ಅಧಿಕಾರಿ ನೌಕರರು ಕಡ್ಡಾಯವಾಗಿ ಚಲನವಲನ ವಹಿಯಲ್ಲಿ ನಮೂದಿಸುವಂತೆ ತಿಳಿಸಲಾಯಿತು. ಕಿರಾಣಿ ಅಂಗಡಿ ಹಾಗೂ ಇನ್ನಿತರ ಚಿಕ್ಕ-ಚಿಕ್ಕ ಅಂಗಡಿಗಳಲ್ಲಿ ಅನಧಿಕೃತ ಮದ್ಯ ಮಾರಾಟವನ್ನು ಕಟ್ಟುನಿಟ್ಟಾಗಿ ತಡೆಗಟ್ಟಲು ಕ್ರಮ ವಹಿಸುವಂತೆ ತಿಳಿಸಲಾಯಿತು.

ಕಡ್ಡಾಯವಾಗಿ ದಾಖಲಿಸಿ: ಅಬಕಾರಿ ಇಲಾಖೆಯ ದಾಳಿ ಸಂದರ್ಭದಲ್ಲಿ ವಶಪಡಿಸಿಕೊಂಡ ವಾಹನಗಳನ್ನು ಕಾನೂನು ಪ್ರಕಾರ ವಿಲೇವಾರಿ ಮಾಡಲು ಶೀಘ್ರ ಕ್ರಮ, ಚಲನವಲನವನ್ನು ಲಾಗ್ ಪುಸ್ತಕದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಕಚೇರಿಯಲ್ಲಿ ಸಿಸಿಟಿವಿ ಕಡ್ಡಾಯ, ಅಬಕಾರಿ ದಾಳಿ ಸಂದರ್ಭದಲ್ಲಿ ವಶಪಡಿಸಿಕೊಂಡು ಅನಧಿಕೃತ ಮದ್ಯ ಹಾಗೂ ಇನ್ನಿತರೆ ವಸ್ತುಗಳನ್ನು ಕಾನೂನಿನಂತೆ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು ಎಂದು ಲೋಕಾಯುಕ್ತರು ಸೂಚಿಸಿದ್ದಾರೆ.

ಪರವಾನಗಿ ಅಥವಾ ನವೀಕರಣ ಕೋರಿ ಸಲ್ಲಿಸುವ ಅರ್ಜಿಗಳನ್ನು ಇತ್ಯರ್ಥಪಡಿಸುವ ಸಂದರ್ಭದಲ್ಲಿ ವಿಳಂಬ ಧೋರಣೆ ಅನುಸರಿಸದೇ, ಪಾರದರ್ಶಕ ರೀತಿಯಲ್ಲಿ ನಿರ್ವಹಣೆಗಾಗಿ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರನ್ನೊಳಗೊಂಡ ಜಾಗೃತದಳ ರಚಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಿದ ಬಳಿಕ ಪರಸ್ಪರ ಶುಭಾಶಯ ಕೋರಿದರು.

ಬಿಸಿಲಿನ ಝಳ ಏರಿಕೆ ಎಳನೀರಿಗೆ ಭಾರಿ ಬೇಡಿಕೆ

ಪೂರೈಕೆ ಕೊರತೆಯಿಂದ ಬೆಲೆ 70 ರು.ಗೆ ಹೆಚ್ಚಳ

ಬೆಂಗಳೂರು: ರಾಜ್ಯಾದ್ಯಂತ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಜನರು ಎಳನೀರು, ತಂಪು ಪಾನೀಯಗಳಿಗೆ ಮೊರೆ ಹೋಗುತ್ತಿದ್ದಾರೆ.

ನಗರದಲ್ಲಿ ಬಿಸಲಿನ ಝಳ ಹೆಚ್ಚಾದಂತೆ ಎಳನೀರನ್ನು ಖರೀದಿಸುವವರ ಸಂಖ್ಯೆಯಲ್ಲೂ ಏರಿಕೆಯಾಗುತ್ತಿದ್ದು, ಪೂರೈಕೆಯ ಕೊರತೆಯಿಂದಾಗಿ ಎಳನೀರಿನ ಬೆಲೆ ಗಗನಕ್ಕೇರಿದೆ. ಅನಿವಾರ್ಯವಾಗಿ ವ್ಯಾಪಾರಿಗಳು ಕೇಳಿದಷ್ಟು ಹಣವನ್ನು ತೆತ್ತು ಎಳನೀರು ಸೇವಿಸುವ ಸ್ಥಿತಿ ನಗರವಾಸಿಗಳದ್ದಾಗಿದೆ. ಈ ಹಿಂದೆ ನಗರದಲ್ಲಿ ಒಂದು ಎಳನೀರಿಗೆ 50 ರು. ಇದ್ದು, ದಿನಕಳೆಯುತ್ತಿದ್ದಂತೆಯೇ 70 ರು. ಗೆ ಬಂದು ತಲುಪಿದೆ. ದಾಹ ತೀರಿಸುತ್ತಿದ್ದ ನೈಸರ್ಗಿಕ ಪಾನೀಯದ ಬೆಲೆ ಏಕಾಏಕಿ ಹೆಚ್ಚಳವಾಗಿರುವುದರಿಂದ ಜನರು ಅನಿವಾರ್ಯವಾಗಿಯೇ ಈ ಹೆಚ್ಚುವರಿ ಬೆಲೆ ಪಾವತಿಸುವಂತಾಗಿದೆ. ಬಿಸಿಲಿನ ಝಳ ಹೆಚ್ಚುತ್ತಿರುವುದರಿಂದ ಬೇಡಿಕೆ ಹೆಚ್ಚಾಗಿದ್ದು, ಬೆಲೆ ಕೂಡ ಹೆಚ್ಚುತ್ತಿದೆ.

25 ರಿಂದ 40 ರು.ಗಳ ಅಗ್ಗದ ದರದ ಎಳನೀರನ್ನು ಆಯ್ಕೆ ಮಾಡುವವರು, ಒಂದು ಬಾಯಿಗೆ ಸಿಗುವಷ್ಟು ನೀರು ಸಿಗುವುದಿಲ್ಲ. ಕಾಯಿ ಕೂಡ ಸಿಗುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದು, ವಾರಗಳ ಹಿಂದೆ ಎಳನೀರಿನ ಬೆಲೆ 35-40 ರು ಗಳಷ್ಟಿತ್ತು. ಈಗ ಶೇ.50ರಷ್ಟು ಏರಿಕೆಯಾಗಿದೆ. ಎಳನೀರಿನಲ್ಲಿ ನೀರಿನ ಪ್ರಮಾಣ ಕೂಡ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ನಮಗೆ ಸಿಗುವ ಹೆಚ್ಚಿನ ಎಳನೀರು ಮದ್ದೂರು, ಮಳವಳ್ಳಿ, ರಾಮನಗರ, ಮಂಡ್ಯ, ಹಾಸನ ಮತ್ತು ತುಮಕೂರಿನಿಂದ ಬರುತ್ತವೆ. ತಮಿಳುನಾಡಿನ ಕೆಲವು ಭಾಗಗಳಿಂದಲೂ ಕಾಯಿಗಳು ಬರುತ್ತವೆ. ಆದರೆ ಬೆಂಗಳೂರಿನಲ್ಲಿ ಅವುಗಳ ಪೂರೈಕೆ ಕಡಿಮೆಯಾಗಿದೆ ಎಂದು ವ್ಯಾಪಾರಿಯೊಬ್ಬರು ಹೇಳಿದರು.

ಪರ್ಯಾಯ ಪಾನೀಯಗಳತ್ತ ಜನರ ಆಕರ್ಷಣೆ: ಎಳನೀರಿನ ಬೆಲೆ ಗಗನಕ್ಕೇರುತ್ತಿದ್ದಂತೆಯೇ ನಗರವಾಸಿಗಳು ಮಜ್ಜಿಗೆ, ಹಣ್ಣಿನ ಪಾನೀಯಗಳು ಹಾಗೂ ಕತ್ತರಿಸಿದ ಹಣ್ಣುಗಳ ಸೇವನೆಯನ್ನು ಹೆಚ್ಚು ಮಾಡಿದ್ದು, ಇವುಗಳ ಬೆಲೆಯಲ್ಲಿ ಯಾವುದೇ ರೀತಿಯ ಏರಿಕೆಯಾಗಿಲ್ಲ. ಬೆಲೆ ಏರಿಕೆಗೆ ಇಳುವರಿ ಕಡಿಮೆಯಾಗಿರುವುದೂ ಕೂಡ ಒಂದು ಕಾರಣ. ಬೆಂಗಳೂರಿನಲ್ಲಿ ಕೊರತೆಗೆ ಉತ್ತರ ಭಾರತದ ಕೆಲವು ಭಾಗಗಳಿಗೆ ಸರಬರಾಜು ಮಾಡಲಾಗುತ್ತಿರುವುದು ಕಾರಣವಾಗಿದೆ. ಬೆಲೆ ಏರಿಕೆಯಿಂದಾಗಿ ಗ್ರಾಹಕರು ಈಗ ಎಳನೀರಿಗಿಂತ ಹಣ್ಣುಗಳನ್ನು ಇಷ್ಟಪಡುತ್ತಿದ್ದಾರೆ. ಕಲ್ಲಂಗಡಿ ಹಣ್ಣಿನ ಮಾರಾಟ ಹೆಚ್ಚಾಗಿದೆ ಎಂದು ಮತ್ತೊಬ್ಬ ವ್ಯಾಪಾರಿ ಹೇಳಿದ್ದಾರೆ.

ಮೆಟ್ರೋ 11 ಮಹಡಿಯ ಕಟ್ಟಡ ನಿರ್ಮಾಣ

ಬೆಂಗಳೂರು: ಟಿಕೆಟ್ ರಹಿತ ಆದಾಯ ಸಂಗ್ರಹಕ್ಕೆ ನಮ್ಮ ಮೆಟ್ರೋ ಹಲವು ಯೋಜನೆಗಳನ್ನು ರೂಪಿಸು ತ್ತಿದ್ದು, ಈ ನಿಟ್ಟಿನಲ್ಲಿ ಬೃಹತ್ ವಾಹನ ನಿಲ್ದಾಣ ಹಾಗೂ ವಾಣಿಜ್ಯ ಸಂಕೀರ್ಣದ ನಿರ್ಮಾಣಕ್ಕೆ ಮುಂದಾಗಿದೆ.

ನಮ್ಮ ಮೆಟ್ರೋದ ನಿರ್ವಹಣಾ ವೆಚ್ಚ ಹೆಚ್ಚಾಗಿದೆ ಎನ್ನುವ ಕಾರಣದಿಂದಾಗಿ ಫೆ.9ರಿಂದ ಪರಿಷ್ಕೃತ ದರವನ್ನು ಜಾರಿಗೊಳಿಸಲಾಗಿದ್ದು, ಇದಕ್ಕೆ ಸಾರ್ವಜನಿಕರಿಂದ ಭಾರೀ ವಿರೋಧ ವ್ಯಕ್ತವಾಗಿತ್ತು. ಈ ಹಿನ್ನೆಲೆ ಹಳೇ ಮದ್ರಾಸ್ ರಸ್ತೆ ಮತ್ತು ಹೊರ ವರ್ತುಲ ರಸ್ತೆಯಲ್ಲಿ ನಮ್ಮ ಮೆಟ್ರೋದ ಜಾಗವಿದ್ದು, ಈ ಜಾಗದಲ್ಲಿ ವಾಣಿಜ್ಯ ಚಟುವಟಿಕೆ ಆರಂಭಿಸಲು ಅವಕಾಶ ಮಾಡಿ ಕೊಡಲು ನಿಗಮವು ಚಿಂತನೆ ನಡೆಸಿದೆ. ಕೆಆರ್ ಪುರ ರೈಲು ನಿಲ್ದಾಣದ ಸಮೀಪ 11 ಮಹಡಿಯ ಬೃಹತ್ ಪಾರ್ಕಿಂಗ್ ಲಾಟ್ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಲಾಗುತ್ತದೆ.

11 ಮಹಡಿಗಳ ಪೈಕಿ 1 ಮತ್ತು 2ನೇ ಮಹಡಿಯನ್ನು ವಾಹನಗಳ ಪಾರ್ಕಿಂಗ್‌ಗೆ ಮೀಸಲಿಡಲಾಗುತ್ತಿದ್ದು, ಉಳಿದ ಮಹಡಿಗಳಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಿ ಅವುಗಳನ್ನು

ಬಾಡಿಗೆ ಆಧಾರದ ಮೇಲೆ ಆದಾಯ ಸಂಗ್ರಹಕ್ಕೆ ಬಳಕೆ ಮಾಡಿ ಕೊಳ್ಳಲಾಗುತ್ತದೆ. ಈ ಯೋಜನೆ ಇನ್ನೂ ಸಹ ಪ್ರಾಥಮಿಕ ಹಂತದಲ್ಲಿದೆ.

ಪಿಪಿಪಿ ಮಾದರಿಯಲ್ಲಿ ನಿರ್ಮಾಣ: ವಾಹನ ನಿಲ್ದಾಣ, ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಲ್ಲಿ 30 ವರ್ಷಗಳ ಅವಧಿ ನಿರ್ವಹಣೆ ಆಧಾರದಲ್ಲಿ ನಿರ್ಮಾಣ ಮಾಡಲು ನಮ್ಮ ಮೆಟ್ರೋ ಚಿಂತನೆ ನಡೆಸಿದ್ದು, ನೇರಳೆ ಮತ್ತು ನೀಲಿ ನಮ್ಮ ಮೆಟ್ರೋ ಇಂಟರ್ ಚೇಂಜ್ ನಿಲ್ದಾಣದ 50 ಮೀಟರ್ ದೂರದಲ್ಲಿ ಈ ಬೃಹತ್ ಕಟ್ಟಡ ನಿರ್ಮಾಣವಾಗಲಿದೆ. ಎಲ್ಲಾ ಮಾದರಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ, ಉಳಿದ ಜಾಗದಲ್ಲಿ ಶಾಪಿಂಗ್ ಮಾಲ್, ಕಚೇರಿಗಳು, ಹೋಟೆಲ್‌ಗಳಿಗೆ ಸ್ಥಳ ನಿರ್ಮಿಸಲಾಗುತ್ತದೆ. ಇದರಿಂದಾಗಿ ಸುಮಾರು 10 ಕೋಟಿ ರು. ಟಿಕೆಟ್ ರಹಿತ ಆದಾಯವನ್ನು ನಿರೀಕ್ಷಿಸಲಾಗಿದೆ.

ಈ ಮಾದರಿ ಯೋಜನೆಯ ಪ್ರಸ್ತಾವನೆ ಸಲ್ಲಿಕೆ ಮಾಡಲು ಕೆಲವು ದಿನಗಳ ಹಿಂದೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಕೆಗೆ ಮೇ 13 ಕೊನೆಯ ದಿನವಾಗಿದೆ. ಕಂಪನಿ ಯೋಜನೆಯನ್ನು ವಿನ್ಯಾಸ ಮಾಡಿ, ನಿರ್ಮಾಣ ಮಾಡಿ, ನಿರ್ವಹಿಸುವ ಒಪ್ಪಂದದ ಆಧಾರದ ಮೇಲೆ ಕಾರ್ಯ ನಿರ್ವಹಣೆ ಮಾಡಬೇಕಿದೆ.

ಯೋಜನೆ ನಿರ್ಮಾಣಕ್ಕೆ 2 ವರ್ಷಗಳು, ನಿರ್ವಹಣೆಯ ಗುತ್ತಿಗೆಯನ್ನು 30 ವರ್ಷಗಳ ಅವಧಿಗೆ ನೀಡಲು ನಮ್ಮ ಮೆಟ್ರೋ ಚಿಂತನೆ ನಡೆಸಿದ್ದು, ಈ ಯೋಜನೆಯು 2027ರಲ್ಲಿ ಪೂರ್ಣಗೊಳ್ಳಲಿದೆ ಎಂದು ಅಂದಾಜಿಸಲಾಗಿದೆ. ಈ ವೇಳೆಗೆ ನಮ್ಮ ಮೆಟ್ರೋ ನೀಲಿಮಾರ್ಗ (ಸಿಲ್ಕ್ ಬೋರ್ಡ್- ಕೆಆರ್ ಪುರ-ವಿಮಾನ ನಿಲ್ದಾಣ) ಸಂಚಾರಕ್ಕೆ ಮುಕ್ತವಾಗಲಿದೆ ಎಂದು ನಿರೀಕ್ಷೆ ಮಾಡಲಾಗಿದೆ.

ಎರಡನೇ ಟೆಂಡರ್

ನಮ್ಮ ಮೆಟ್ರೋ ಆದಾಯ ಸಂಗ್ರಹಕ್ಕಾಗಿ ವಾಣಿಜ್ಯ ಚಟುವಟಿಕೆ ಕೈಗೊಳ್ಳಲು ಕರೆದ 2ನೇ ಟೆಂಡರ್ ಇದಾಗಿದೆ. ಈ ವರ್ಷದ ಫೆಬ್ರವರಿಯಲ್ಲಿ ನಮ್ಮ ಮೆಟ್ರೋ ಇದೇ ಮಾದರಿಯ ವಾಣಿಜ್ಯ ಚಟುವಟಿಕೆಯನ್ನು ಮೆಜೆಸ್ಟಿಕ್ ರೈಲು ನಿಲ್ದಾಣದಲ್ಲಿ ಕೈಗೊಳ್ಳಲು ಟೆಂಡರ್ ಕರೆದಿತ್ತು. ಮೆಜೆಸ್ಟಿಕ್‌ನಲ್ಲಿ ಹೋಟೆಲ್, ಕಚೇರಿ, ರಿಟೇಲ್ ಶಾಪ್ ನಿರ್ಮಾಣ ಮಾಡುವ ಪ್ರಸ್ತಾವನೆ ಇದೆ. ಮೆಜೆಸ್ಟಿಕ್‌ನಲ್ಲಿ ಸದ್ಯ 260 ಬೈಕ್, 36 ಕಾರು ನಿಲ್ಲಿಸುವ ಪಾರ್ಕಿಂಗ್ ಲಾಟ್ ಇದ್ದು, ಇದಕ್ಕಿಂತ ದೊಡ್ಡ ಲಾಟ್ ನಿರ್ಮಾಣವಾಗಲಿದೆ. ಇಲ್ಲಿ 530 ಬೈಕ್‌ಗಳನ್ನು ನಿಲ್ಲಿಸಬಹುದು ಎಂದು ಅಂದಾಜಿಸಲಾಗಿದೆ. ವರ್ಷಕ್ಕೆ ಜಾಹೀರಾತು, ವಾಣಿಜ್ಯ ಚಟುವಟಿಕೆ ಮೂಲಕ 100 ಕೋಟಿ ರು. ಆದಾಯ ಸಂಗ್ರಹ ಮಾಡುವ ಗುರಿಯನ್ನು ಮೆಟ್ರೋ ನಿಗಮ ಹೊಂದಿದೆ.

ಸಾಧಕರಿಗೆ ಗೌರವ

ಬೆಂಗಳೂರು: ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಸ್ಕತ್‌ನ ಕರ್ನಾಟಕ ಸಂಘದ ಅಧ್ಯಕ್ಷ ಎಸ್.ಟಿ.ಡಿ ಪ್ರಸಾದ್, ರಾಜ್ಯದ ಚೆಸ್ ಅಸೋಸಿಯೇಷನ್ ಅಧ್ಯಕ್ಷ ಟಿ.ಎನ್.ಮಧುಕರ್, ಜನಪದ ಸಂರಕ್ಷಣಾ ಪರಿಷತ್ತಿನ ರಾಜ್ಯಾಧ್ಯಕ್ಷ ಗೋ.ನಾ.ಸ್ವಾಮಿ, ಹಾಸನದ ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ಡಾ.ತನುಜಾ, ಸಮಾಜ ಸೇವಕ ರಾಘವೇಂದ್ರ. ಎನ್ ಇವರಿಗೆ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಅವರ ಸಾರಥ್ಯದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ.ಡಿ.ಪಿ ಅನಂತ, ಹಿರಿಯ ಪತ್ರಕರ್ತ ರವೀಂದ್ರ, ಭಟ್, ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯ ಅಧ್ಯಕ್ಷೆ ಹೇಮಾ ಮತ್ತು ವಿನಾಯಕ ಪಾಟೀಲ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

45 ದಿನಗಳ ಹಿಂದೆ ತಾಯಿ, ಈಗ ಮಗನ ಸಾವು

ದೊಡ್ಡಬಳ್ಳಾಪುರ: ಸಾಲದ ಸುಳಿಗೆ ಸಿಲುಕಿ ಒಂದೂವರೆ ತಿಂಗಳ ಅವಧಿಯಲ್ಲಿ ತಾಯಿ -ಮಗ ಆತ್ಮಹತ್ಯೆಗೆ ಮಾಡಿಕೊಂಡ ಹೃದಯವಿದ್ರಾವಕ ಘಟನೆ ಕೊನಘಟ್ಟದಲ್ಲಿ ನಡೆದಿದೆ. ದೊಡ್ಡಬಳ್ಳಾಪುರ ತಾಲೂಕಿನ ನಂದಿ ಮೋರಿ ಬಳಿ ಸೋಮವಾರ ಬೆಳಗ್ಗೆ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೃತನನ್ನು ಕೊನಘಟ್ಟದ ರಕ್ಷಿತ್ ಬಾಬು (26) ಎಂದು ಗುರುತಿಸಲಾಗಿದೆ. ಮೃತ ಯುವಕ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ, ಮಾರಸಂದ್ರದ ಫೈವ್ ಸ್ಟಾರ್ , ಸ್ವಿಗ್ಗಿ ಸೇರಿದಂತೆ ಹಲವು ಕಂಪನಿಗಳ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದನೆಂದು ತಿಳಿದು ಬಂದಿದೆ.

ತಾಯಿ ಸಾವು: ತಿಂಗಳ ಹಿಂದೆ ರಕ್ಷಿತ್‌ಬಾಬುವಿನ ತಾಯಿ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿ ದ್ದರು. ಸಾಲದ ಸುಳಿಗೆ ಈ ಕುಟುಂಬ ಸಿಲುಕಿತ್ತು. ಸಾಲ ಕೊಟ್ಟವರು ಮನೆಯ ಬಳಿ ಬಂದು ಗಲಾಟೆ ಮಾಡಿದ್ದ ಕಾರಣಕ್ಕೆ ನೊಂದು ಸಾವನ್ನಪ್ಪಿದ್ದರು. ಸೋಮವಾರ ಬೆಳಗ್ಗೆ ಮಗ ಸಾವಿಗೆ ಶರಣಾಗಿದ್ದಾನೆ.

ಮೃಗಾಲಯಕ್ಕೆ ಹೊಸ ಸಿಂಹಿಣಿ

ಬೆಳಗಾವಿ: ಕಿತ್ತೂರು ರಾಣಿ ಚೆನ್ನಮ್ಮ ಕಿರು ಮೃಗಾಲಯಕ್ಕೆ ಹೊಸದಾಗಿ ಸಿಂಹಿಣಿಯೊಂದು ಸೇರ್ಪಡೆಯಾಗಿದೆ. ಇನ್ನು ಮುಂದೆ ಮೃಗಾಲಯಕ್ಕೆ ಬರುವ ಪ್ರವಾಸಿಗರು ಅದನ್ನು ಕಣ್ತುಂಬಿಕೊಳ್ಳಬಹುದು. ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಿಂದ ಈ ಸಿಂಹಿಣಿಯನ್ನು ಬೆಳಗಾವಿ ತಾಲೂಕಿನ ಭೂತರಾಮನಹಟ್ಟಿಯಲ್ಲಿರುವ ಕಿರು ಮೃಗಾಲಯಕ್ಕೆ ಕರೆತರಲಾಗಿದೆ.

9 ವರ್ಷದ ಈ ಸಿಂಹಿಣಿ ಹೆಸರು ಭೃಂಗಾ. ಫೆಬ್ರವರಿ 6ರಂದು ಕಿತ್ತೂರು ರಾಣಿ ಚೆನ್ನಮ್ಮ ಮೃಗಾಲಯದಲ್ಲಿ 'ನಿರುಪಮಾ' ಎಂಬ ಸಿಂಹಿಣಿ ಅನಾರೋಗ್ಯದಿಂದ ಮೃತಪಟ್ಟಿತ್ತು.

ನ್ಯಾಮತಿ ಪ್ರಕರಣ: ದಾವಣಗೆರೆ ಪೊಲೀಸರಿಂದ ಆರು ಕಳ್ಳರ ಬಂಧನ

ಸಾಲ ನೀಡದ ಬ್ಯಾಂಕಿಗೇ ಕನ್ನ

ದಾವಣಗೆರೆ: ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿದ್ದ ನ್ಯಾಮತಿಯ ಎಸ್‌ಬಿಐ ಬ್ಯಾಂಕ್ ದರೋಡೆ ಪ್ರಕರಣವನ್ನು ಕೊನೆಗೂ ಭೇದಿಸುವಲ್ಲಿ ಯಶಸ್ವಿಯಾಗಿರುವ ದಾವಣಗೆರೆ ಪೊಲೀಸರು, 13 ಕೋಟಿ ರೂ. ಮೌಲ್ಯದ 17.5 ಕೆ.ಜಿ. ಚಿನ್ನಾಭರಣ ವಶಕ್ಕೆ ಪಡೆದು ಆರು ಆರೋಪಿಗಳನ್ನು ಬಂಧಿಸಿದ್ದಾರೆ. ಬೇಕರಿ ಉದ್ಯಮಕ್ಕೆ ಸಾಲ ನೀಡಲು ನಿರಾಕರಿಸಿದ ಬ್ಯಾಂಕ್ ಅಧಿಕಾರಿಗಳ ವರ್ತನೆಯಿಂದ ಬೇಸತ್ತು ಆರೋಪಿಗಳು ಈ ದರೋಡೆ ನಡೆಸಿದ್ದಾರೆಂಬ ಅಂಶ ಪೊಲೀಸ್ ತನಿಖೆಯಲ್ಲಿ ಬೆಳಗೆ ಬಂದಿದೆ.

ಸೋಮವಾರ ಸುದ್ದಿಗೋಷ್ಠಿ ನಡೆಸಿದ ಪೂರ್ವ ವಲಯ ಐಜಿಪಿ ಡಾ.ಬಿ.ಆರ್.ರವಿಕಾಂತೇಗೌಡ, ತಮಿಳುನಾಡು ಮಧುರೈ ಮೂಲದ ವಿಜಯ ಕುಮಾರ್, ಅಜಯ್‌ಕುಮಾರ್ ಇಬ್ಬರು ಸಹೋದರರಾಗಿದ್ದು, ನ್ಯಾಮತಿ ತಾಲೂಕಿನ ಸುರಹೊನ್ನೆಯಲ್ಲಿ ಸಿಹಿತಿಂಡಿ ವ್ಯಾಪಾರ ಮಾಡುತ್ತಿದ್ದರು. ಪರಮಾನಂದ ಇವರಿಬ್ಬರ ತಂಗಿಯ ಗಂಡ, ಸುರಹೊನ್ನೆಯ ಅಭಿಷೇಕ, ಚಂದ್ರು, ಮಂಜುನಾಥ್ ಬಂಧಿತ ಪ್ರಮುಖ ಆರೋಪಿಗಳೆಂದು ಮಾಹಿತಿ ನೀಡಿದರು.

ಪ್ರಕರಣ ಭೇದಿಸಲು ಐದು ತಂಡ ರಚನೆ: ಈ ಪ್ರಕರಣ ಬೇಧಿಸಲು ಎಸ್‌ಪಿ ಉಮಾ ಪ್ರಶಾಂತ್ ನೇತೃತ್ವದಲ್ಲಿ ಚನ್ನಗಿರಿ ಉಪವಿಭಾಗದ ಎಎಸ್ಪಿ ಶ್ಯಾಮ್ ವರ್ಗೀಸ್ ಅವರನ್ನು ಪ್ರಕರಣದ ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ತನಿಖೆಯಲ್ಲಿ ಸಹಕರಿಸಲು ದಾವಣಗೆರೆ ಗ್ರಾಮಾಂತರ ಉಪವಿಭಾಗದ ಡಿವೈಎಸ್ಪಿ ಬಿ.ಎಸ್.ಬಸವರಾಜ್ ಅವರನ್ನೊಳಗೊಂಡ ಐದು ತಂಡ ರಚಿಸಲಾಗಿತ್ತು.

ವಿವಿಧ ರಾಜ್ಯಗಳಿಗೆ ಪೊಲೀಸರ: ಆರಂಭದಲ್ಲಿ ಎಲ್ಲಾ ರೀತಿಯ ತಾಂತ್ರಿಕ ಮತ್ತು ಭೌತಿಕ ಸಾಕ್ಷ್ಯಾಧಾರ ಪರಿಶೀಲಿಸಿದರೂ ಉಪಯುಕ್ತ ಮಾಹಿತಿ ಲಭ್ಯವಾಗಲಿಲ್ಲ. ಈ ಹಿಂದೆ ಬ್ಯಾಂಕ್ ದರೋಡೆ, ಎಟಿಎಂ ಕಳ್ಳತನ ಪ್ರಕರಣಗಳ ವಿವರ, ಹಳೆಯ ಆರೋಪಿಗಳ ವಿವರ, ಅಂತರ್ ರಾಜ್ಯ ಗ್ಯಾಂಗ್ ವಿವರ ಪಡೆದು ಈ ಪ್ರಕರಣದೊಂದಿಗೆ ತಾಳೆ ಹಾಕಿ ಪೊಲೀಸ್ ಅಧಿಕಾರಿಗಳ ತಂಡ ವಿವಿಧ ರಾಜ್ಯಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿತು.

ತಾಂತ್ರಿಕ ಮೂಲಗಳಿಂದ ದೊರೆತ ಸುಳಿವಿನಿಂದ ಹಾಗೂ ಹಿಂದೆ ನಡೆದ ಬ್ಯಾಂಕ್ ದರೋಡೆ ಪ್ರಕರಣಗಳ ತಾಳೆ ಹಾಕಿದ ನಂತರ ಎಸ್‌ಬಿಐ ಬ್ಯಾಂಕ್ ಪ್ರಕರಣದ ಉತ್ತರ ಪ್ರದೇಶದ ಕಕ್ರಾಳ ಗ್ಯಾಂಗ್ ಇರಬಹುದು ಎಂದು ಶಂಕಿಸಿ ತಂಡಗಳು ಕಕ್ರಾಳಕ್ಕೆ ಹೋಗಿ 15ಕ್ಕೂ ಹೆಚ್ಚು ಅಂತರ್ ರಾಜ್ಯ ಶಂಕಿತ ವ್ಯಕ್ತಿಗಳನ್ನು ವಶಕ್ಕೆ ಪಡೆದು ಸಂಪೂರ್ಣ ವಿವರ ಕಲೆಹಾಕಿದ್ದರು.

ಹಳೆಯ ಪ್ರಕರಣಗಳ ಪರಿಶೀಲನೆ: ನ್ಯಾಮತಿ ಪ್ರಕರಣಕ್ಕಿಂತ ಹಿಂದೆ 2024ರಲ್ಲಿ ನಡೆದ ವಿವಿಧ ರಾಜ್ಯಗಳಲ್ಲಿ ಬ್ಯಾಂಕ್ ಕಳ್ಳತನ, ದರೋಡೆ ಮತ್ತು ದರೋಡೆಗೆ ಪ್ರಯತ್ನ ಪ್ರಕರಣ ಪರಿಶೀಲಿಸಲಾಯಿತು. ಅಲ್ಲದೇ ಭದ್ರಾವತಿ ತಾಲೂಕಿನ ಹೊಳೆಹೊನ್ನೂರು ಠಾಣೆ ವ್ಯಾಪ್ತಿಯ ಎಸ್‌ಬಿಐ ಕಳ್ಳತನದ ಪ್ರಯತ್ನ ಪ್ರಕರಣ ಪರಿಶೀಲಿಸಿದಾಗ ನ್ಯಾಮತಿಗೆ 30 ಕಿ.ಮೀ. ಹತ್ತಿರವಿರುವುದು ಮತ್ತು ಬ್ಯಾಂಕ್ ಪ್ರಕರಣಕ್ಕೂ ಸಾಮ್ಯತೆ ಇತ್ತು. ಹೀಗಾಗಿ ತನಿಖಾ ತಂಡ ಮತ್ತೆ ಯುಪಿಯ ಕಕ್ರಾಳ ಗ್ಯಾಂಗ್ ಕಡೆಗೆ ಹೋಯಿತು. ಹೀಗೆ ಆರು ತಿಂಗಳ ಕಾಲ ಪರಿಶೀಲಿಸಿದಾಗ, ಸ್ಥಳೀಯರಿಂದಲೇ ಈ ಕೃತ್ಯ ನಡೆದಿದೆ ಅಂಶ ಕೊನೆಗೆ ಸಿಕ್ಕಿತು ಎಂದು ತನಿಖೆಯ ವಿವರವನ್ನು ಐಜಿಪಿ ರವಿಕಾಂತೇಗೌಡ ಬಿಚ್ಚಿಟ್ಟರು.

ದೊಡ್ಡ ಸವಾಲಾಗಿದ್ದ ಪ್ರಕರಣ: ಈ ಪ್ರಕರಣ ಬೇಧಿಸಲು ಪೊಲೀಸ್ ಇಲಾಖೆಗೆ ದೊಡ್ಡ ಸವಾಲಾಗಿತ್ತು. ಏಕೆಂದರೆ ಒಂದೇ ಒಂದು ಸುಳಿವು ಸಿಗದಂತೆ ಬಹಳ ಚಾಣಾಕ್ಷತನದಿಂದ ಈ ಆರೋಪಿಗಳು ಬ್ಯಾಂಕ್ ದರೋಡೆ ಮಾಡಿದ್ದರು. ಆದರೆ ಸಿಕ್ಕ ಸುಳಿವನ್ನು ಹಿಡಿದು ಈ ಪ್ರಕರಣ ಭೇದಿಸಿದ ಇಡೀ ತಂಡಕ್ಕೆ ಇದೇ ಸಂದರ್ಭದಲ್ಲಿ ಐಜಿಪಿ ರವಿಕಾಂತೇಗೌಡ ಅಭಿನಂದನೆ ಸಲ್ಲಿಸಿದರು. ದಾವಣಗೆರೆ ಎಸ್‌ಪಿ ಉಮಾ ಪ್ರಶಾಂತ್, ಹೆಚ್ಚುವರಿ ಎಸ್‌ಪಿಗಳಾದ ವಿಜಯಕುಮಾರ್ ಸಂತೋಷ್, ಬಿ.ಮಂಜುನಾಥ್, ತನಿಖಾಧಿಕಾರಿಗಳಾದ ಶ್ಯಾಮ್ ವರ್ಗೀಸ್, ಬಿ.ಎಸ್.ಬಸವರಾಜ್ ಸೇರಿದಂತೆ ಐದೂ ತಂಡಗಳ ಅಧಿಕಾರಿಗಳು, ಸಿಬ್ಬಂದಿ ಗೋಷ್ಠಿಯಲ್ಲಿ ಭಾಗವಹಿಸಿದ್ದರು.

ನ್ಯಾಮತಿ ಬ್ಯಾಂಕ್ ದರೋಡೆ ಮಾಡಿದ್ದ ಆರೋಪಿಗಳಿಂದ ವಶಪಡಿಸಿಕೊಂಡ ಚಿನ್ನಾಭರಣಗಳೊಂದಿಗೆ ಪೊಲೀಸ್ ಸಿಬ್ಬಂದಿ.

15 ಅಡಿ ನೀರಿನಲ್ಲಿ ಚಿನ್ನ ಬಚ್ಚಿಟ್ಟಿದ್ದ ಖದೀಮ

ಪ್ರಕರಣದ ಸೂತ್ರಧಾರ ವಿಜಯಕುಮಾರ್ ಬ್ಯಾಂಕ್ ದರೋಡೆಗೆ ಸಂಬಂಧಿಸಿದಂತೆ ಯುಟ್ಯೂಬ್ ಜತೆಗೆ ಬ್ಯಾಂಕ್ ದರೋಡೆ ಸಂಬಂಧಿತ ಸಿನಿಮಾ, ಧಾರಾವಾಹಿಗಳನ್ನು ವೀಕ್ಷಿಸಿ, ಅದರಂತೆ ತನ್ನದೇ ಆದ ಯೋಜನೆ ಸಿದ್ಧಪಡಿಸಿದ್ದ. ಅದರಂತೆ, 6 ಜನರ ತಂಡ ದರೋಡೆಗೆ ಮೊದಲೇ ಬ್ಯಾಂಕ್‌ನ ಎಲ್ಲ ಮಾಹಿತಿ ಸಂಗ್ರಹಿಸಿ ಕೃತ್ಯ ಎಸಗಿದ್ದರು. ಕದ್ದ ಅಷ್ಟೂ ಬಂಗಾರವನ್ನು, ಅದಕ್ಕಾಗಿಯೇ ಸಿದ್ಧಪಡಿಸಿದ್ದ ಲಾಕರ್‌ನಲ್ಲಿಟ್ಟು ಅದನ್ನು ಮಧುರೈನ ತನ್ನ ಗ್ರಾಮದ ತೋಟದಮನೆಯ 15 ಅಡಿ ನೀರಿರುವ ಬಾವಿಯೊಳಗೆ ಬಚ್ಚಿಟ್ಟಿದ್ದ.

ಪೊಲೀಸರಿಗೆ ಚಿನ್ನದ ಪದಕ

ಬ್ಯಾಂಕ್ ದರೋಡೆ ಪ್ರಕರಣ ಭೇದಿಸಿದ ಪೊಲೀಸ್ ತಂಡದಲ್ಲಿನ 10 ಪೊಲೀಸರಿಗೆ ಗೃಹ ಸಚಿವರು ಮುಖ್ಯಮಂತ್ರಿಗಳ ಪದಕವನ್ನು ಘೋಷಿಸಿದ್ದಾರೆ. ಜತೆಗೆ, ಇತರರಿಗೆ ನಗದು ಬಹುಮಾನ ಸಹ ಘೋಷಿ ಸಿದ್ದಾರೆ. ಅಲ್ಲದೆ, ಡಿಜಿ, ಐಜಿಪಿ ಅವರು ಸಹ ಇಡೀ ತಂಡಕ್ಕೆ ನಗದು ಬಹುಮಾನ, ಪ್ರಶಂಸನಾ ಪತ್ರ ನೀಡಿದ್ದಾರೆ.

ಕಾರ್ಯಾಚರಣೆ ನಡೆಸಿದ ತಂಡ: ಎಸ್‌ಪಿ ಉಮಾ ಪ್ರಶಾಂತ್, ಹೆಚ್ಚುವರಿ ಎಸ್‌ಪಿಗಳಾದ ವಿಜಯ ಕುಮಾರ್ ಸಂತೋಷ್, ಎಂ.ಮಂಜುನಾಥ್ ಮಾರ್ಗದರ್ಶನದಲ್ಲಿ ಎಎಸ್‌ಪಿ ಶ್ಯಾಮ್ ವರ್ಗೀಸ್, ಡಿವೈಎಸ್ಪಿ ಬಿ.ಎಸ್.ಮಂಜುನಾಥ್ ಸೇರಿದಂತೆ 40 ಹೆಚ್ಚು ಪೊಲೀಸ್ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಂಗಾಂಗ ಸ್ವೀಕೃತಿ ಕೇಂದ್ರ ಆರಂಭಕ್ಕೆ ಸಿದ್ಧತೆ

← ಮೊದಲಪುಟದಿಂದ

ಕಸಿ ಮಾಡಲು ಅಂಗಾಂಗಗಳ ಖರೀದಿಯನ್ನು ಸುಗಮ ಗೊಳಿಸುವ ಮೂಲಕ ಅಂಗಾಂಗ ಮರುಪಡೆಯುವಿಕೆ ಕೇಂದ್ರವು ಆಸ್ಪತ್ರೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಕೇಂದ್ರವು ಮೀಸಲಾದ ಸಿಬ್ಬಂದಿ, ಐಸಿಯು ಮತ್ತು ಹಾಸಿಗೆಗಳನ್ನು ಹೊಂದಿರುತ್ತದೆ. ಬೇಡಿಕೆ ಬಂದ ಕೂಡಲೇ ಕುಟುಂಬವು ಅನುಮೋದನೆ ನೀಡಿದ ನಂತರ ಐಸಿಯುಗಳಿಂದ ಮೀಸಲಾದ ಕೇಂದ್ರಕ್ಕೆ ಸ್ಥಳಾಂತರಿಸಲಾಗುತ್ತದೆ. ಸಾಗಣೆಗೆ ಅನುಕೂಲ ವಾಗಲೆಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ದಕ್ಷಿಣ ಭಾರತದ ಅತಿದೊಡ್ಡ ಆಸ್ಪತ್ರೆ: ಅಪಘಾತ ಮತ್ತು ತುರ್ತು ಆರೈಕೆ ಕೇಂದ್ರ, ಗ್ಯಾಸ್ಟ್ರೋ ಎಂಟರಾಲಜಿ ಸಂಸ್ಥೆ ಮತ್ತು ಮೂತ್ರಶಾಸ್ತ್ರ ಅಂಗಾಂಗ ಕಸಿ ಸಂಸ್ಥೆ, ಮಿಂಟೋ ಆಸ್ಪತ್ರೆಯಲ್ಲಿ ಪ್ರಾದೇಶಿಕ ನೇತ್ರ ಶಾಸ್ತ್ರ ಸಂಸ್ಥೆ ಮತ್ತು ಸ್ಕಿನ್ ಬ್ಯಾಂಕ್ ಹೀಗೆ ಎಲ್ಲವನ್ನೂ ಹೊಂದಿರುವ ಆಸ್ಪತ್ರೆಗಳ ಪೈಕಿ ವಿಕ್ಟೋರಿಯಾ ಆಸ್ಪತ್ರೆ ದಕ್ಷಿಣ ಭಾರತದ ಅತಿದೊಡ್ಡ ಆಸ್ಪತ್ರೆಗಳಲ್ಲಿ ಒಂದಾಗಿದೆ. ಇಲ್ಲಿ ಈಗ ನವೀಕೃತ ಕೇಂದ್ರ ಬರಲಿದೆ. ಸಂಭಾವ್ಯ ದಾನಿಗಳ ಗುರುತಿಸುವಿಕೆ ಮತ್ತು ಸುರಕ್ಷಿತ ಅಂಗಾಂಗ ದಾನ ಪ್ರಕ್ರಿಯೆಗೆ ಕುಟುಂಬ ಸಮಾಲೋಚನೆ, ಉನ್ನತಮಟ್ಟದ ಐಸಿಯು ಆರೈಕೆ ಮತ್ತು ಕಾನೂನು ಕ್ರಮ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಸಮಗ್ರ ಅಭಿವೃದ್ಧಿಗೆ ಅನುದಾನ ಒದಗಿಸಲಾಗಿದೆ.

ಮಾನವ ಅಸ್ಥಿಗಳು ಪತ್ತೆ

ಉಳ್ಳಾಲ: ಕುಂಪಲ ಚಿತ್ರಾಂಜಲಿ ನಗರದಲ್ಲಿ ಲಕೋಟೆಯೊಂದರಲ್ಲಿ ಸಂಸ್ಕರಿಸಿಟ್ಟ ಮಾನವ ಅಸ್ಥಿಗಳು ಶನಿವಾರ ರಾತ್ರಿ ಪತ್ತೆಯಾಗಿವೆ. ಘಟನಾ ಸ್ಥಳಕ್ಕೆ ಬಂದ ಉಳ್ಳಾಲ ಪೊಲೀಸರು ಅಸ್ಥಿಗಳ ಹಿಂದಿನ ಸತ್ಯವನ್ನು ಪತ್ತೆ ಹಚ್ಚಿದ್ದಾರೆ. ನಡುರಾತ್ರಿ ಮನೆಯ ಆವರಣದ ಬಳಿ ಪ್ರಯೋಗಾಲಯದ ಮಾದರಿಯ ಅಸ್ಥಿಗಳು ಲಕೋಟೆಯಲ್ಲಿ ಸಂಸ್ಕರಿಸಿದ ರೀತಿಯಲ್ಲಿ ಪತ್ತೆಯಾಗಿದೆ. ಈಸುದ್ದಿ ತಿಳಿದ ಜನರು ಘಟನಾ ಸ್ಥಳಕ್ಕೆ ಜಮಾಯಿಸಿದ್ದರು. ಸ್ಥಳಕ್ಕೆ ಆಗಮಿಸಿದ ಉಳ್ಳಾಲ ಪೊಲೀಸರು ಅಸ್ಥಿಗಳು ತುಂಬಿದ್ದ ಲಕೋಟೆಯನ್ನು ವಶಕ್ಕೆ ಪಡೆದಿದ್ದಾರೆ.

ಚಿತ್ರಾಂಜಲಿ ನಗರದಲ್ಲಿ ದೊರೆತ ಅಸ್ಥಿಗಳನ್ನು ಸ್ಥಳೀಯ ಮಹಿಳೆಯೇ ತನ್ನ ಮನೆಯ ಆವರಣದ ಬಳಿ ಎಸೆದಿದ್ದ ವಿಚಾರ ಪೊಲೀಸರ ವಿಚಾರಣೆಯಲ್ಲಿ ತಿಳಿದು ಬಂದಿದೆ. ನಿವೃತ್ತಿ ಹೊಂದಿದ್ದ ಮಂಗಳೂರಿನ ವೈದ್ಯರು ಮನೆ ಬಿಟ್ಟು ಹೋದಾಗ ಮನೆಯಲ್ಲಿದ್ದ ಸಂಸ್ಕರಿಸಿಡಲಾದ ಅಸ್ಥಿಗಳ ಲಕೋಟೆಯನ್ನು ಮಹಿಳೆ ಮನೆಯ ಕಾಂಪೌಡ್ ಬಳಿ ಎಸೆದಿದ್ದರೆನ್ನಲಾಗಿದೆ.

ಇಂದಿನಿಂದ ದುಬಾರಿ ದುನಿಯಾ

← ಮೊದಲಪುಟದಿಂದ

ಕಾವೇರಿ ನೀರಿನ ದರ ಏಪ್ರಿಲ್ ಅಂತ್ಯದೊಳಗೆ ಏರಿಕೆಯಾಗುವ ಸಾಧ್ಯತೆ ಇದೆ. ಈಗಾಗಲೇ ನೀರಿನ ದರ ಹೆಚ್ಚಳಕ್ಕೆ ಜಲಮಂಡಳಿಯಿಂದ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಡಿಸಿಎಂ ಡಿ.ಕೆ. ಶಿವಕುಮಾರ್ ದರ ಏರಿಕೆಯ ಸುಳಿವು ನೀಡಿದ್ದಾರೆ ಎಟಿಎಂಗಳಲ್ಲಿ ಹಣ ಪಡೆಯಲು ಮೇ 1ರಿಂದ ಎಟಿಎಂ ವಿಥ್ ಡ್ರಾ ಶುಲ್ಕ 2 ರು. ಹೆಚ್ಚಳವಾಗಲಿದೆ. ನಗರದ ಆಟೋ ಮೀಟರ್ ದರ ಕನಿಷ್ಠ ಚಾರ್ಜ್ 30 ರು. ಬದಲು 40 ರು. ಏರಿಕೆ ಸಾಧ್ಯತೆ ಇದ್ದು, ಮೇ ತಿಂಗಳಲ್ಲಿ ಜಾರಿಯಾಗುವ ಸಾಧ್ಯತೆ ಇದೆ.

ನೋಂದಣಿ ಶುಲ್ಕ ದುಬಾರಿ: ಹೊರ ರೋಗಿ ನೋಂದಣಿ ಶುಲ್ಕ 10 ರು. ನಿಂದ 20 ರು. ಗೆ ಏರಿಕೆ, ಮರಣೋತ್ತರ ಪ್ರಮಾಣಪತ್ರ 250ರಿಂದ 300 ರು., ವೈದ್ಯಕೀಯ ಪ್ರಮಾಣಪತ್ರ 250 ರಿಂದ 300 ರು., ದಾಖಲಾತಿ ಶುಲ್ಕ, ಲ್ಯಾಬ್ ಪರೀಕ್ಷಾ ಶುಲ್ಕ ಹೆಚ್ಚಿಸಲಾಗಿದೆ.

ಮುದ್ರಾಂಕ ಶುಲ್ಕದಡಿ ದತ್ತು ಸ್ವೀಕಾರ ಶುಲ್ಕ 500 ರಿಂದ 1 ಸಾವಿರ ರು., ಅಫಿಡವಿಟ್ ಮೊತ್ತ 20 ರು ನಿಂದ 100 ರು., ಕ್ಯಾನ್ಸಲೇಶನ್ ಡೀಡ್ 100 ರು. ನಿಂದ 500 ರು.ಗೆ ಏರಿಕೆ, ಅಡಮಾನ ಪತ್ರ ಶುಲ್ಕ 100ರಿಂದ 200 ರು. ಏರಿಕೆ, ವೃತ್ತಪರ ತೆರಿಗೆ 1200 ರಿಂದ 2500 ರು.

ಬೆಲೆ ಏರಿಕೆ ವಿರುದ್ಧ ಇಂದು ಅಹೋರಾತ್ರಿ ಧರಣಿ

← ಮೊದಲಪುಟದಿಂದ

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಹೋರಾಟಕ್ಕೆ ಚಾಲನೆ ನೀಡಲಿದ್ದು, ಕೇಂದ್ರ ಸಚಿವರಾದ ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಭಾಗವಹಿಸಲಿದ್ದಾರೆ.

7ರಂದು ಮೈಸೂರು, ಚಾಮರಾಜನಗರ ಜಿಲ್ಲೆ, 8ರಂದು ಬೆಳಗ್ಗೆ ಮಂಡ್ಯ, ಮಧ್ಯಾಹ್ನ ಹಾಸನ, 9ರಂದು ಕೊಡಗು, ಮಂಗಳೂರು, 10ರಂದು ಉಡುಪಿ, ಚಿಕ್ಕಮಗಳೂರಿನಲ್ಲಿ ಮೊದಲ ಹಂತದ ಹೋರಾಟ ನಡೆಯಲಿದೆ. ಇದರೊಂದಿಗೆ 13ರಿಂದ ಶಿವಮೊಗ್ಗ, ಉತ್ತರ ಕನ್ನಡದಲ್ಲಿ 2ನೇ ಹಂತದ ಹೋರಾಟವಿದ್ದು, ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಇದು ಸಂಚರಿಸಲಿದೆ. ಪ್ರತಿ ಜಿಲ್ಲಾ ಕೇಂದ್ರದಲ್ಲಿ 2-3 ಕಿ.ಮೀ ಪಾದಯಾತ್ರೆ ಬಳಿಕ ಸಭೆ ನಡೆಯಲಿದೆ ಎಂದು ವಿಜಯೇಂದ್ರ ಹೇಳಿದರು.

38,860 ಕೋಟಿ ದುರುಪಯೋಗ: ಶೋಷಿತರ ಅಭಿವೃದ್ಧಿಗೆ ಮೀಸಲಿಟ್ಟ ಎಸ್‌ಇಪಿ, ಟಿಎಸ್‌ಪಿ ಅನುದಾನದಲ್ಲಿ ಕಾಂಗ್ರೆಸ್ ಸರಕಾರ 2023-24ರಲ್ಲಿ 11,144 ಕೋಟಿ ಹಾಗೂ 2024-25ರಲ್ಲಿ 14,282 ಕೋಟಿ ಹಣ ಬೇರೆ ಕಡೆಗೆ ವರ್ಗಾಯಿಸಿದ್ದಾರೆ. 2025-26ರಲ್ಲಿ ಇದು 13,433 ಕೋಟಿ. ಒಟ್ಟಾರೆಯಾಗಿ ಕಾಂಗ್ರೆಸ್ ಸರಕಾರ 38,860 ಕೋಟಿಯಷ್ಟು ಹಣ ಬೇರೆ ಕಡೆ ವರ್ಗಾಯಿಸಿ, ದುರುಪಯೋಗ ಮಾಡಿಕೊಂಡಿದೆ.

ಪರಿಶಿಷ್ಟ ಜಾತಿ, ಪಂಗಡಗಳನ್ನು ಮತ ಬ್ಯಾಂಕ್ ಮಾಡಿಕೊಂಡ ಕಾಂಗ್ರೆಸ್ಸಿನ ವರು ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದರ ವಿರುದ್ಧ ಹೋರಾಟ ಮಾಡುತ್ತೇವೆ ಎಂದರು.

ಮುಸ್ಲಿಮರಿಗೆ ಮಾತ್ರ ಯೋಜನೆಗಳೇಕೆ?

ರಾಜ್ಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತರು, ಮುಸಲ್ಮಾನರ ಓಲೈಕೆ ಮಾತ್ರವಲ್ಲದೆ ಹಿಂದೂಗಳಿಗೆ ಅಪಮಾನ ಮಾಡಲಾಗಿದೆ. ಸರಕಾರಿ ಕಾಮಗಾರಿಗಳಲ್ಲಿ ಮುಸಲ್ಮಾನರಿಗೆ ಶೇ.4 ಮೀಸಲಾತಿ ನೀಡಿದ್ದು, ಕಾನೂನಿನ ವಿರುದ್ಧವಾಗಿದೆ. ಉನ್ನತ ಶಿಕ್ಷಣಕ್ಕಾಗಿ ಹೊರದೇಶಕ್ಕೆ ಹೋಗುವ ಮುಸಲ್ಮಾನ ವಿದ್ಯಾರ್ಥಿಗಳಿಗಿದ್ದ ಪ್ರೋತ್ಸಾಹ ಧನವನ್ನು 20 ಲಕ್ಷ ರುಪಾಯಿಯಿಂದ 30 ಲಕ್ಷಕ್ಕೆ ಏರಿಸಿದ್ದಾರೆ. ಹಿಂದೆ ಮುಸಲ್ಮಾನ ಹೆಣ್ಮಕ್ಕಳಿಗೆ ಶಾದಿ ಭಾಗ್ಯ ನೀಡಿದ್ದರು. ಇದೀಗ ಮುಸ್ಲಿಂ ಹೆಣ್ಮಕ್ಕಳ ಆತ್ಮರಕ್ಷಣೆಗೆ ನೂರಾರು ಕೋಟಿ ರು. ವೆಚ್ಚ ಮಾಡಲಾಗುತ್ತಿದೆ. ಇಮಾಮರ ವೇತನ ಹೆಚ್ಚಿಸಿರುವುದು ಸರಿಯಲ್ಲ. ಕೇವಲ ಮುಸ್ಲಿಮರಿಗೆ ಮಾತ್ರ ಇಂತಹ ಯೋಜನೆಗಳೇ? ಮೋದಿ ಅವರು ಜನಧನ ಸೇರಿ ಹಲವು ಯೋಜನೆ ಜಾರಿಗೊಳಿಸಿದ್ದು, ಎಲ್ಲರಿಗೂ ಅವಕಾಶ ನೀಡಿದ್ದಾರೆ. ಯಡಿಯೂರಪ್ಪ ಅವರು ಭಾಗ್ಯಲಕ್ಷ್ಮಿ ಯೋಜನೆಯನ್ನು ಹಿಂದೂಗಳಿಗೆ ಮಾತ್ರ ಕೊಟ್ಟಿಲ್ಲ, ಮುಸ್ಲಿಮರು ಸೇರಿ ಎಲ್ಲರಿಗೂ ಕೊಟ್ಟಿದ್ದಾರೆ. ಹಿಂದೂಗಳ ಅವಮಾನವನ್ನು ನಾವು ಖಂಡಿಸುತ್ತೇವೆ. ಸಿದ್ದರಾಮಯ್ಯನವರು ಹಾಲುಮತ ಸಮುದಾಯ, ಕಾಯಕ ಸಮುದಾಯಗಳನ್ನು ನಿರ್ಲಕ್ಷಿಸಿದ್ದಾರೆ ಎಂದು ವಿಜಯೇಂದ್ರ ಟೀಕಿಸಿದರು.

ಸೂಚನೆ: ಸ್ಪರ್ಧೆಗೆ ಕಳುಹಿಸಲಾದ ಡಾಕ್ಯುಮೆಂಟರಿ ವಿಶ್ವವಾಣಿ ಸಂಸ್ಥೆಯ ಬೌದ್ಧಿಕ ಸ್ವತ್ತು ಆಗಿರುತ್ತದೆ

ಮುಂದಿನ ಜನ್ಮದಲ್ಲೂ ಕಾಂಗ್ರೆಸ್ ಸೇರುವುದಿಲ್ಲ

ಕಾಂಗ್ರೆಸ್ ಮುಸ್ಲಿಮರ ಪಕ್ಷ, ಬಿಜೆಪಿ ಉಚ್ಚಾಟಿತ ನಾಯಕ ಯತ್ನಾಳ್ ಘರ್ಜನೆ | ವಿಜಯದಶಮಿ ನಂತರ ರಾಜಕಿಯ ನಡೆಯ ಬಗ್ಗೆ ನಿರ್ಧಾರ | ಮಾಧ್ಯಮಗಳೊಂದಿಗೆ ರೆಬೆಲ್ ಮುಖಂಡ ಜಟಾಪಟಿ

ಕೊಪ್ಪಳ: ಕಾಂಗ್ರೆಸ್ ಮುಸ್ಲಿಮರ ಪಕ್ಷವಾಗಿದ್ದು, ಈ ಜನ್ಮವಲ್ಲ, ಮುಂದಿನ ಜನ್ಮದಲ್ಲೂ ಆ ಪಕ್ಷ ಸೇರುವುದಿಲ್ಲ ಎಂದು ಬಿಜೆಪಿಯಿಂದ ಉಚ್ಚಾಟಿತಗೊಂಡಿರುವ ಭಿನ್ನಬಣದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸ್ಪಷ್ಟಪಡಿಸಿದ್ದಾರೆ.

ಸಂಸ್ಥಾನ ಗವಿಮಠಕ್ಕೆ ಸೋಮವಾರ ಭೇಟಿ ನೀಡಿದ್ದ ಯತ್ನಾಳ, ಕಾಂಗ್ರೆಸ್ ಮುಸ್ಲಿಮರ ಪಕ್ಷ. ಜನ್ಮದಲ್ಲಿಯೂ ನಾನು ಆ ಪಕ್ಷ ಹೋಗುವುದಿಲ್ಲ. ಮುಂದಿನ ಜನ್ಮವೂ ಹೋಗುವುದಿಲ್ಲ. ಈ ಕುರಿತು ಸಾಕಷ್ಟು ಅಪಪ್ರಚಾರ ನಡೆಯುತ್ತಿದೆ. ಬಿ.ವೈ. ವಿಜಯೇಂದ್ರನ ನಕಲಿ ಸಾಮಾಜಿಕ ತಾಣಗಳು ಇವೆ. ಅದರಲ್ಲಿ ನನ್ನ ಬಗ್ಗೆ ಇಂಥ ಅಪಪ್ರಚಾರ ಮಾಡುತ್ತಿದ್ದಾರೆ. ಕೆಲ ಮಾಧ್ಯಮದವರು ಕೂಡ ವಿಜಯೇಂದ್ರ ಹಾಗೂ ಯಡಿಯೂರಪ್ಪಗೆ ಬೆಂಬಲವಾಗಿ ನಿಂತು ಈ ಸುದ್ದಿ ಬಿತ್ತರಿಸುತ್ತಾರೆ ಎಂದು ಹರಿಹಾಯ್ದರು.

ಜಾರಕಿಹೊಳಿ ಈಗಲೂ ನನ್ನೊಂದಿಗೆ ಇದ್ದಾರೆ: 'ರಮೇಶ ಜಾರಕಿಹೊಳಿ ಹಾಗೂ ಕುಮಾರ ಬಂಗಾರಪ್ಪ ಈಗಲೂ ನಿಮ್ಮ ಜೊತೆಯೇ ಇದ್ದಾರೆಯೇ ಎಂದು ಪ್ರಶ್ನಿಸುತ್ತಿದ್ದಂತೆಯೇ, ರೊಚ್ಚಿಗೆದ್ದ ಅವರು, ಈ ನಾಯಕರು ಯಾವಾಗಲೂ ನನ್ನ ಜೊತೆಗೆ ಇರುತ್ತಾರೆ. ಈ ಬಗ್ಗೆ ಇತ್ತೀಚೆಗಷ್ಟೇ ಉತ್ತರ ಕೊಟ್ಟಿದ್ದೇನೆ. ಇಂಥ ಪ್ರಶ್ನೆ ಕೇಳಲು ವಿಜಯೇಂದ್ರ ನಿಮಗೆ ಹೇಳಿದ್ದನಾ? ವಿಜಯೇಂದ್ರ ವಾಟ್ಸಾಪ್ ನಲ್ಲಿ ಕಳಿಸುವ ಪ್ರಶ್ನೆಯನ್ನು ಕೇಳುತ್ತೀರಾ ಎಂದು ಪ್ರಶ್ನಿಸಿದರು. ಯಾರಾದರೂ ವಿಜಯೇಂದ್ರ ಚೇಲಾಗಳು ಇದ್ದರೆ, ನೀವು ಜೋರಾಗಿ ಮಾತನಾಡುವುದಾದರೆ ಗೇಟ್‌ಔಟ್' ಎಂದು ಮಾಧ್ಯಮಗಳ ವಿರುದ್ಧ ಸಿಡಿಮಿಡಿಗೊಂಡರು.

ವಿಜಯೇಂದ್ರನ ಚೇಲಾಗಳು

ಈ ವೇಳೆ ನಿರಂತರ ಪ್ರಶ್ನೆಗಳಿಂದ ಮಾಧ್ಯಮ ಪ್ರತಿನಿಧಿಗಳ ಮೇಲೆ ಕೆಂಡಾಮಂಡಲವಾದ ಯತ್ನಾಳ್ ಮತ್ತು ಮಾಧ್ಯಮ ಪ್ರತಿನಿಧಿಗಳ ನಡುವೆ ಜಟಾಪಟಿ ನಡೆಯಿತು. 'ನೀವೆಲ್ಲ ವಿಜಯೇಂದ್ರ ಹೇಳಿಕೊಟ್ಟಿದ್ದನ್ನು ಕೇಳಲು ಬಂದಿದ್ದೀರಿ. ವಿಜಯೇಂದ್ರ ಚೇಲಾಗಳೆಲ್ಲ ಗೆಟ್ ಔಟ್' ಎಂಬ ಯತ್ನಾಳ ಮಾತಿನಿಂದ ಆಕ್ರೋಶಗೊಂಡ ಮಾಧ್ಯಮ ಪ್ರತಿನಿಧಿಗಳು, ಯತ್ನಾಳರನ್ನು ತರಾಟೆಗೆ ತೆಗೆದುಕೊಂಡು ಅರ್ಧಕ್ಕೆ ಮೈಕ್ ವಾಪಾಸ್ ತೆಗೆದುಕೊಂಡರು. ಪೇಚಿಗೆ ಸಿಲುಕಿದ ಯತ್ನಾಳ್ ಕಾರು ಏರಿ ಹೊರಟು ಹೋದರು.

ವಿಜಯೇಂದ್ರ ಎಲ್ಲ ಕೆಟ್ಟ ಕೆಲಸ ಮಾಡಿ ಆ ವಿಡಿಯೊಗಳನ್ನು ಒಬ್ಬ ಐಪಿಎಸ್ ಅಧಿಕಾರಿ ಮೂಲಕ ಡಿಲೀಟ್ ಮಾಡಿಸಿದ್ದಾನೆ. ಆದರೆ, ವಾಲ್ಮೀಕಿ ಸಮುದಾಯದ ರಮೇಶ ಜಾರಕಿಹೊಳಿ ಅವರನ್ನು ಬಲಿಪಶು ಮಾಡಲಾಯಿತು. ಜಾರಕಿಹೊಳಿ ಪ್ರಕರಣದಲ್ಲಿ ವಿಜಯೇಂದ್ರ ಕೈವಾಡವಿದೆ. ಜಾರಕಿಹೊಳಿ ನೀರಾವರಿ ಸಚಿವರಾದಾಗ ಹಣ ಕೊಳ್ಳೆ ಹೊಡೆಯಲು ವಿಜಯೇಂದ್ರಗೆ ಅವಕಾಶ ಸಿಗಲಿಲ್ಲ. ಅದಕ್ಕೆ ಹೀಗೆ ಮಾಡಿದ್ದಾನೆ.

– **ಬಸನಗೌಡ ಪಾಟೀಲ್ ಯತ್ನಾಳ** ಬಿಜೆಪಿ ಉಚ್ಚಾಟಿತ ಶಾಸಕ

ಮೀಸಲು ತಪ್ಪಿಸಿದ್ದೇ ಅಪ್ಪ-ಮಗ : ವೀರಶೈವ-ಲಿಂಗಾಯತರಿಗೆ ಮೀಸಲು ತಪ್ಪಿಸಿದ್ದೇ ಅಪ್ಪ-ಮಗ. ನಮ್ಮನ್ನು ಜೈಲಿಗೆ ಹಾಕಿಸಲು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿನ ಲಿಂಗಾಯತ ಐಪಿಎಸ್ ಅಧಿಕಾರಿಯೊಬ್ಬನನ್ನು ವಿಜಯೇಂದ್ರ ನಮ್ಮ ಬಳಿ ಕಳುಹಿಸಿದ್ದ ಎಂದ ಯತ್ನಾಳ್, ಯಾರು ಆ ಐಪಿಎಸ್ ಅಧಿಕಾರಿ ಎಂದು ಪ್ರಶ್ನಿಸಿದ್ದಕ್ಕೆ ಸ್ಪಷ್ಟ ಉತ್ತರ ನೀಡಲಿಲ್ಲ. ಬದಲಾಗಿ ಮಾಧ್ಯಮದವರೆಲ್ಲ ನಾಟಕ ಕಂಪನಿ ಬಂದ್ ಮಾಡಿ, ನಾನು ಸಾಮಾಜಿಕ ಜಾಲತಾಣದ ಮೂಲಕ ಜನರ ಅಭಿಪ್ರಾಯ ಪಡೆದುಕೊಳ್ಳುತ್ತೇನೆ. ಅಲ್ಲಿ ನಮ್ಮ ಯುವಕರು ಹಾಗೂ ಹಿಂದೂಗಳು ಇದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಜೊತೆ ಬಿಜೆಪಿ ಹೊಂದಾಣಿಕೆ ರಾಜಕಾರಣ ಮಾಡಿಕೊಂಡಿದೆ. ರಾಜ್ಯ ಸರಕಾರ ಕೋರ್ಟ್‌ನಲ್ಲಿ ಸರಿಯಾದ ವಾದ ಮಾಡಿದರೆ ಪೋಕ್ಸೋ ಪ್ರಕರಣದಲ್ಲಿ ಯಡಿಯೂರಪ್ಪ ಜೈಲಿಗೆ ಹೋಗುತ್ತಾರೆ ಎಂದರು.

'ರಾಜ್ಯದಾದ್ಯಂತ ಸುತ್ತಾಡಿ ವಿಜಯದಶಮಿ ತನಕ ಜನರ ಅಭಿಪ್ರಾಯ ಸಂಗ್ರಹಿಸಿ ಬಳಿಕ ಮುಂದಿನ ರಾಜಕೀಯ ನಡೆ ನಿರ್ಧರಿಸುವೆ. ಕರ್ನಾಟಕದ ಎಲ್ಲ ಮಾಧ್ಯಮಗಳ ನಿಷ್ಪಕ್ಷಪಾತವಾಗಿದ್ದರೆ ಮಾತ್ರ ನನ್ನ ಬಳಿ ಮಾತನಾಡಲು ಬನ್ನಿ. ನೀವು ಯಡಿಯೂರಪ್ಪ ಹಾಗೂ ವಿಜಯೇಂದ್ರ ಬೆಂಬಲಿಗರಾದರೆ ಬರಬೇಡಿ. ಯಾವ ಮಾಧ್ಯಮದವರು ಏನು ಆಟವಾಡುತ್ತವೆ ಎನ್ನುವುದು ನನಗೆ ಗೊತ್ತಿದೆ. ಕೆಲವು ಮಾಧ್ಯಮಗಳು ತಮ್ಮಿಂದಲೇ ರಾಜ್ಯದ ಜನರ ಅಭಿಪ್ರಾಯ ರೂಪುಗೊಳ್ಳುತ್ತವೆ ಎಂದು ಭಾವಿಸಿದ್ದು ಮೂರ್ಖತನ' ಎಂದು ಆಕ್ರೋಶಗೊಂಡರು.

ವಿಜಯೇಂದ್ರ, ಬಿಜೆಪಿ ಹೆಸರಿನಲ್ಲಿ ಹತ್ತಾರು ಸಾವಿರ ಕೋಟಿ ರುಪಾಯಿ ಲೂಟಿ ಮಾಡಿದ್ದಾರೆ. ಮುಖ್ಯಮಂತ್ರಿ ಆಗಿ ಜೈಲಿಗೆ ಹೋದ ಯಡಿಯೂರಪ್ಪ, ಅಪ್ಪನ ಸಹಿ ನಕಲಿ ಮಾಡಿದ ವಿಜಯೇಂದ್ರ ಕುಟುಂಬಕ್ಕೆ ಬಿಜೆಪಿ ಹೈಕಮಾಂಡ್ ಬೆಂಬಲವಾಗಿ ನಿಂತಿದೆ. ಅವರಿಗಾಗಿ ನನ್ನನ್ನು ಉಚ್ಚಾಟಿಸಿದ್ದಾರೆ. ಹೈಕಮಾಂಡ್ ರಾಜ್ಯದಲ್ಲಿ ಬಿಜೆಪಿಯನ್ನು ಯಡಿಯೂರಪ್ಪಗೆ ಲೀಸ್ ಕೊಟ್ಟಿದೆಯಾ? ಅಥವಾ ಆ ಕುಟುಂಬಕ್ಕೆ ಮಾರಿಕೊಂಡಿದೆಯಾ ಎಂದು ವಾಗ್ದಾಳಿ ನಡೆಸಿದರು.

ದರೋಡೆ ಗ್ಯಾಂಗ್ ಮೇಲೆ ಪೊಲೀಸರಿಂದ ಗುಂಡು

ಗದಗ ಜಿಲ್ಲೆ ಮುಂಡರಗಿ ಬಳಿ ಘಟನೆ

ಗದಗ: ಹೈಟೆಕ್ ಕುಖ್ಯಾತ ದರೋಡೆಕೋರರ ಗ್ಯಾಂಗ್ ಮೇಲೆ ಪೊಲೀಸರು ಗುಂಡು ಹಾರಿಸಿದ ಘಟನೆ ಮುಂಡರಗಿ ತಾಲೂಕಿನ ಡಂಬಳ ಹಾಗೂ ಡೋಣಿ ಗ್ರಾಮದ ಮಧ್ಯೆ ನಡೆದಿದೆ.

ದರೋಡೆ ತಂಡದಿಂದ ಹಲ್ಲೆಗೊಳಗಾಗಿ ಆರೋಪಿ ಜಯಸಿಂಹ ಮೊಡಕೆರ್ ಹಾಗೂ ಪೊಲೀಸ್ ಸಿಬ್ಬಂದಿ ವೀರೇಶ್ ಬಿಸ್ನಳ್ಳಿ ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಗೆ ಗದಗ್ ಎಸ್‌ಪಿ ಬಿ.ಎಸ್ ನೇಮಗೌಡ ಭೇಟಿ ನೀಡಿದ್ದರು.

ಪಾತಕಿ ಜಯಸಿಂಹ ಮೊಡಕೆರ್ ಕಾಲಿಗೆ ಎರಡು ಸುತ್ತು ಗುಂಡು ಹಾರಿಸಲಾಗಿದೆ. ರಾಜ್ಯ, ಅಂತರರಾಜ್ಯ ಪೊಲೀಸರಿಗೆ ಬೇಕಾಗಿದ್ದ ಈ ಗ್ಯಾಂಗ್ ಮೊಬೈಲ್ ಸಂಪರ್ಕ ಬಿಟ್ಟು ಇನ್ಸ್ಟಾಗ್ರಾಂ ಮೂಲಕ ಸಂಪರ್ಕ ಹೊಂದಿದ್ದರು. ಹೀಗಾಗಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಗ್ಯಾಂಗ್‌ನವರು ಕೊನೆಗೂ ಗದಗ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆದೊಯ್ಯುವಾಗ ಪೊಲೀಸ್ ಸಿಬ್ಬಂದಿ ವೀರೇಶ್ ಬಿಸ್ನಳ್ಳಿ ಮೇಲೆ ಹಲ್ಲೆ ಮಾಡಿ ಎಸ್ಕೇಪ್ ಆಗಲು ಪ್ರಯತ್ನ ನಡೆಸಿದ್ದ ಈ ವೇಳೆ ಸಿಪಿಐ ಮಂಜುನಾಥ ಕುಸುಗಲ್ ಅವರು ಗುಂಡು ಹಾರಿಸಿದ್ದಾರೆ. ದರೋಡೆ, ಮನೆ ಕಳ್ಳತನ ಸೇರಿ ಹಲವು ಅಪರಾಧಗಳಲ್ಲಿ ಪಾಲ್ಗೊಂಡಿದ್ದ ಜಯಸಿಂಹನನ್ನು ಪೊಲೀಸರು ಭಾನುವಾರ ವಿಜಯನಗರ ಜಿಲ್ಲೆ ಯಲ್ಲಿ ವಶಕ್ಕೆ ಪಡೆದಿದ್ದರು ದರೋಡೆ ತಂಡವನ್ನು ಲಕ್ಷ್ಮೇಶ್ವರ ಠಾಣೆಗೆ ಕರೆತರುವ ವೇಳೆ ಈ ಘಟನೆ ನಡೆದಿದೆ.

ಕೈಕೋಳದಿಂದಲೇ ಹಲ್ಲೆ: ಗ್ಯಾಂಗ್‌ನಲ್ಲಿ ಮಂಜುನಾಥ ಮೊಡಕೆರ್, ಹಾಗೂ ರಮೇಶ್ ಮೊಡಕೆರ್, ಹಾಗೂ ಜಯಸಿಂಹ ಮೊಡಕೆರ್ ಅವರನ್ನು ಕರೆದುಕೊಂಡು ಬರುತ್ತಿದ್ದ ವೇಳೆ ಪೊಲೀಸ್ ವಾಹನದಲ್ಲಿ ಕೈಗೆ ಹಾಕಿದ್ದ ಬೇಡಿಯಿಂದ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ . ಈ ವೇಳೆ ಪೊಲೀಸರ ರಕ್ಷಣೆಗಾಗಿ ಫೈರಿಂಗ್ ಮಾಡಿದ್ದಾರೆ.

ಮಳೆ ಸಾಧ್ಯತೆ: ಯೆಲ್ಲೋ ಅಲರ್ಟ್ ಘೋಷಣೆ

ಬಂಗಾಳಕೊಲ್ಲಿಯಲ್ಲಿ ಸುಳಿಗಾಳಿ, ಏ. 4ರವರೆಗೆ ವರ್ಷಾಧಾರೆ | ರಾಜ್ಯಾದ್ಯಂತ ಚದುರಿದಂತೆ ಹಗುರ ಮಳೆ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ಮೇಲೆ ಸುಳಿಗಾಳಿ ಹಾಗೂ ಕರ್ನಾಟಕದ ಒಳನಾಡಿನಲ್ಲಿ ಟ್ರಫ್ ಉಂಟಾಗಿರುವ ಪರಿಣಾಮ ಏ.2ರಿಂದ ಏಪ್ರಿಲ್ ನಾಲ್ಕರವರೆಗೆ ಮಳೆಯಾಗುವ ಮುನ್ಸೂಚನೆಗಳಿವೆ ಎಂದು ಹವಾಮಾನ ಇಲಾಖೆ ಹೇಳಿದೆ.

ಭಾರತೀಯ ಹವಾಮಾನ ಇಲಾಖೆ ಬೆಂಗಳೂರು ಪ್ರಾದೇಶಿಕ ಕೇಂದ್ರದ ನಿರ್ದೇಶಕ ಸಿ.ಎಸ್.ಪಾಟೀಲ್ ಮಾಹಿತಿ ನೀಡಿ, ರಾಜ್ಯಾದ್ಯಂತ ಮಳೆ ಮುಂದುವರೆಯುವ ಲಕ್ಷಣಗಳಿದ್ದು, ಚದುರಿದಂತೆ ಹಗುರ ಮಳೆಯಾಗಲಿದೆ. ಕೆಲವೆಡೆ ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗಲಿದೆ, ಅಲ್ಲದೆ, ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

11 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್: ಏ.2ರಿಂದ ಏ.4ರವರೆಗೆ ಬೆಂಗಳೂರು ಸುತ್ತಮತ್ತ ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗುವ ಮುನ್ಸೂಚನೆಯಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಾವೇರಿ, ಗದಗ, ಧಾರವಾಡ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು, ಮೈಸೂರು, ಚಾಮರಾಜನಗರ ಜಿಲ್ಲೆಗಳ ಕೆಲವೆಡೆ ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗುವ ಮುನ್ಸೂಚನೆಗಳಿದ್ದು, ಈ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದರು.

ಮಳೆಯಾಗುವ ಸಾಧ್ಯತೆ ಇರುವುದರಿಂದ ಏ.2ರಿಂದ ಏ.5ರ ನಡುವಿನ ಅವಧಿಯಲ್ಲಿ ಗರಿಷ್ಠ ತಾಪಮಾನದಲ್ಲಿ 3ರಿಂದ 4 ಡಿ.ಸೆಂ.ನಷ್ಟು ಇಳಿಕೆಯಾಗುವ ಸಾಧ್ಯತೆ ಇದೆ. ವಾತಾವರಣದಲ್ಲಿ ಉಂಟಾಗಿರುವ ಬದಲಾವಣೆಯಿಂದ ಕರಾವಳಿ, ಉತ್ತರ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಮಳೆ ನಿರೀಕ್ಷಿಸಬಹುದಾಗಿದೆ ಎಂದರು.

ಏಪ್ರಿಲ್ 3 ಮತ್ತು 4ರಂದು ರಾಜ್ಯದ ಕೆಲವೆಡೆ ಭಾಗಶಃ ವ್ಯಾಪಕ ಹಾಗೂ ರಾಜ್ಯಾದ್ಯಂತ ಅಲ್ಲಲ್ಲಿ ಮಳೆಯಾಗುವ ಮುನ್ಸೂಚನೆಗಳಿವೆ. ಭಾನುವಾರ ರಾಜ್ಯದ ಕೆಲವೆಡೆ ಮಳೆಯಾಗಿದೆ. ಧಾರವಾಡದಲ್ಲಿ 2 ಸೆ.ಮೀ.ನಷ್ಟು ಮಳೆಯಾಗಿದೆ. ಇನ್ನೂ ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ 41 ಡಿ.ಸೆಂ.ನಷ್ಟು ದಾಖಲಾಗಿದೆ. ಬೆಂಗಳೂರಿನಲ್ಲಿ 35ಡಿ.ಸೆಂ. ನಷ್ಟು ದಾಖಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ವಾಡಿಕೆಯಂತೆ ಪೂರ್ವ ಮುಂಗಾರು ಮಳೆ ದಾಖಲು: ರಾಜ್ಯದಲ್ಲಿ ಪೂರ್ವ ಮುಂಗಾರು ಮಳೆ ವಾಡಿಕೆಯಂತಾಗಿದ್ದು, ಜನವರಿಯಿಂದ ಮಾರ್ಚ್ 30 ರ ನಡುವಿನ ಅವಧಿಯಲ್ಲಿ ವಾಡಿಕೆಯ ಮಳೆಯಾಗಿದೆ ಎಂದು ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿದೆ.

ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ವಾಡಿಕೆ ಗಿಂತ ಶೇ.50ರಷ್ಟು ಕಡಿಮೆ ಮಳೆಯಾಗಿದೆ. ದಕ್ಷಿಣ ಒಳನಾಡಿನಲ್ಲಿ ವಾಡಿಕೆ ಪ್ರಮಾಣದ ಮಳೆಯಾಗಿದೆ. ಆದರೆ, ಮಲೆನಾಡು ಹಾಗೂ ಉತ್ತರ ಒಳನಾಡು ಭಾಗದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಜನವರಿ ಒಂದರಿಂದ ಭಾನುವಾರದವರೆಗೆ 13.1 ಮಿ.ಮೀ. ವಾಡಿಕೆ ಮಳೆ ಪ್ರಮಾಣವಿದ್ದು, 13 ಎ.ಮೀ.ನಷ್ಟು ಮಳೆಯಾಗಿದೆ. ಕರಾವಳಿಯಲ್ಲಿ 10.3 ಮಿ.ಮೀ. ವಾಡಿಕೆ ಮಳೆಗೆ 23 ಮಿ.ಮೀ.ನಷ್ಟು ಮಳೆಯಾಗಿದ್ದು, ವಾಡಿಕೆಗಿಂತ ಶೇ.123ರಷ್ಟು ಅಧಿಕ ಮಳೆಯಾಗಿದೆ. ಮಲೆನಾಡು ಭಾಗದಲ್ಲಿ 17.1 ಮಿ.ಮೀ. ವಾಡಿಕೆ ಮಳೆಗೆ 22.9 ಮಿ.ಮೀ.ನಷ್ಟು ಮಳೆಯಾಗಿದ್ದು, ವಾಡಿಕೆಗಿಂತ ಶೇ.34ರಷ್ಟು ಹೆಚ್ಚು ಮಳೆಯಾಗಿದೆ. ಉತ್ತರ ಒಳನಾಡಿನಲ್ಲಿ ವಾಡಿಕೆ ಮಳೆ ಪ್ರಮಾಣ 11.4 ಮಿ.ಮೀ. ಆಗಿದ್ದು, ಕೇವಲ 5.7 ಮಿ.ಮೀ.ನಷ್ಟು ಮಾತ್ರ ಮಳೆಯಾಗಿದೆ. ವಾಡಿಕೆಗಿಂತ ಶೇ.50ರಷ್ಟು ಕಡಿಮೆ ಮಳೆ ಬಿದ್ದಿದೆ ಎಂದು ಹೇಳಿದೆ.

ದಕ್ಷಿಣ ಒಳನಾಡಿನಲ್ಲಿ 16.1 ಮಿ.ಮೀ. ವಾಡಿಕೆ ಮಳೆ ಇದ್ದು, 16.3 ಮಿ.ಮೀ.ನಷ್ಟು ಮಳೆಯಾಗಿದೆ. ಒಟ್ಟಾರೆ ವಾಡಿಕೆ ಪ್ರಮಾಣದ ಮಳೆಯಾಗಿದೆ. ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಅಕಾಲಿಕ ಅಥವಾ ಪೂರ್ವ ಮುಂಗಾರು ಮಳೆಯಾಗಲಿಲ್ಲ, ಮಾರ್ಚ್‌ನಲ್ಲಿ ಅಲ್ಲಲ್ಲಿ ಚದುರಿದಂತೆ ಮಳೆಯಾಗುತ್ತಿದೆ. ಮಾರ್ಚ್‌ನಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ರಾಜ್ಯದ ಸರಾಸರಿ ವಾಡಿಕೆ ಮಳೆ ಪ್ರಮಾಣ 8.7 ಮಿ.ಮೀ.ನಷ್ಟಿದ್ದು, 36 ಮಿ.ಮೀ.ನಷ್ಟು ಮಳೆಯಾಗಿದ್ದು, ವಾಡಿಕೆಗಿಂತ ಶೇ.36ರಷ್ಟು ಮಳೆಯಾಗಿದೆ. ಆದರೆ, ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ವಾಡಿಕೆಗಿಂತ ಶೇ.20ರಷ್ಟು ಮಳೆ ಕೊರತೆಯಾಗಿದೆ ಎಂದಿದೆ.

ಪಂಚಮಸಾಲಿ ಸಮುದಾಯ ಯತ್ನಾಳ್‌ಗೆ ಬರೆದು ಕೊಟ್ಟಿಲ್ಲ

ಬೆಳಗಾವಿ ಪ್ರತಿಭಟನೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿರುಗೇಟು | ಪಂಚಮಸಾಲಿ ಶ್ರೀಗಳ ಹೇಳಿಕೆಗೆ ಸಚಿವರ ಆಕ್ಷೇಪ

ಬೆಳಗಾವಿ: ಇಡೀ ಪಂಚಮಸಾಲಿ ಸಮುದಾಯವನ್ನು ಯತ್ನಾಳ ಅವರಿಗೆ ಬರೆದು ಕೊಟ್ಟಿಲ್ಲ. 13ರಂದು ಬೆಳಗಾವಿಯಲ್ಲಿ ಯತ್ನಾಳ ಪರವಾಗಿ ಹಮ್ಮಿಕೊಂಡಿರುವ ಪ್ರತಿಭಟನೆ ವೈಯಕ್ತಿಕವಾಗಿದೆ ಎಂದು ಕೂಡಲಸಂಗಮ ಸ್ವಾಮೀಜಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿರುಗೇಟು ಕೊಟ್ಟರು.

ಬೆಳಗಾವಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಶೇ.80ರಷ್ಟು ಪಂಚಮಸಾಲಿಗರು ಬಿಜೆಪಿಯಲ್ಲಿದ್ದಾರೆ ಎಂದು ಹೇಳಿದ್ದು ನನ್ನ ಮನಸ್ಸಿಗೆ ಬಹಳಷ್ಟು ನೋವಾಗಿದೆ. ಶ್ರೀಗಳು ಆ ರೀತಿ ಮಾತನಾಡಬಾರದಿತ್ತು. ಪಂಚಮಸಾಲಿ ಹೋರಾಟದಲ್ಲಿ ನಾವೆಲ್ಲಾ ಪಕ್ಷಾತೀತವಾಗಿ ಪಾಲ್ಗೊಂಡಿದ್ದೆವು. ಮೀಸಲು ಕ್ಷೇತ್ರ ಸೇರಿ ಇನ್ನುಳಿದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಗೆಲ್ಲಲು ಲಿಂಗಾಯತ ಪಂಚಮಸಾಲಿಗರು ಕಾರಣ ಎಂದು ಅಸಮಾಧಾನ ಹೊರ ಹಾಕಿದರು.

ಪ್ರತಿಭಟನೆಗೆ ಬೆಂಬಲ ಇಲ್ಲ: ಯತ್ನಾಳ್ ಪರ ಪ್ರತಿಭಟನೆಗೆ ಬೆಂಬಲಿಸುತ್ತಿರಾ ಎಂಬ ಪ್ರಶ್ನೆಗೆ, ನಾನು ಕಾಂಗ್ರೆಸ್ ಪಕ್ಷ, ಅವರು ಬಿಜೆಪಿಯವರು. ಸಮಾಜ ಮತ್ತು ಪಕ್ಷ ಬೇರೆ ಬೇರೆ. ಹಾಗಾಗಿ, ಅವರ ಪ್ರತಿಭಟನೆಗೆ ನಾವು ಬೆಂಬಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಸ್ಪಷ್ಟವಾಗಿ ಉತ್ತರಿಸಿದರು.

ಶೀಘ್ರವೇ ಫೆಬ್ರವರಿಯ ಗೃಹಲಕ್ಷ್ಮಿ ಹಣ

ಗೃಹಲಕ್ಷ್ಮೀ ಯೋಜನೆಯ ಜನವರಿ ತಿಂಗಳ ಕಂತಿನ ಹಣವನ್ನು ಖಜಾನೆಗೆ ಕಳಿಸಿದ್ದೇವೆ. ಇದು ಯುಗಾದಿ ಮತ್ತು ಈದ್ ಹಬ್ಬದ ಆಚರಣೆ ಸಂದರ್ಭದಲ್ಲಿ ಖುಷಿಯ ವಿಚಾರ. ಇನ್ನು ಫೆಬ್ರುವರಿ ತಿಂಗಳ ಹಣವನ್ನು ಶೀಘ್ರವೇ ಕೊಡುತ್ತೇವೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಭರವಸೆ ನೀಡಿದರು.

ಪಕ್ಷದ ಆಂತರಿಕ ವಿಚಾರದಲ್ಲಿ ಸ್ವಾಮೀಜಿಗಳು ತಲೆಹಾಕುವುದು ಎಷ್ಟು ಸರಿ ಎಂಬ ಪ್ರಶ್ನೆಗೆ, ಸರಕಾರಕ್ಕೆ ಮೊದಲಿನಿಂದಲೂ ಸ್ವಾಮೀಜಿಗಳು ಮತ್ತು ಮಠಮಾನ್ಯರು ಮಾರ್ಗದರ್ಶನ ಕೊಡಬೇಕು. ಎಲ್ಲಾದರೂ, ಏನಾದರೂ ತಪ್ಪಿದರೆ ಸಲಹೆ ನೀಡಬೇಕು. ಅದು ಇತಿಮಿತಿಯಲ್ಲಿ ಇರಬೇಕು. ಅದು ಅತಿ ಆಗಬಾರದು ಎಂದು ಸಚಿವರು ಸೂಚ್ಯವಾಗಿ ನುಡಿದರು.

ಯತ್ನಾಳ ಅವರು ನಾಲಿಗೆ ಹರಿ ಬಿಡುವುದರಿಂದ ಬಿಜೆಪಿ ಉಚ್ಚಾಟಿಸಿದೆ. ಬಹಳಷ್ಟು ಗೌರವಾನ್ವಿತರು ಮತ್ತು ನಮ್ಮ ಸಮಾಜದ ಹಿರಿಯರು ಅಂತಾ ನಮ್ಮ ಚೌಕಟ್ಟಿನಲ್ಲಿ ನಾವಿದ್ದೇವು. ಆದರೆ, ಅವರು ಮಾತಾಡೋ ರೀತಿ ನೋಡಿದರೆ ನಾಲಿಗೆ ಮತ್ತು ತಲೆಗೆ ಕನೆಕ್ಷನ್ ತಪ್ಪಿದೆ ಎಂದು ತಿರುಗೇಟು ಕೊಟ್ಟರು. ವಿಜಯದಶಮಿಗೆ ಯತ್ನಾಳ ಹೊಸಪಕ್ಷ ಕಟ್ಟುವುದಕ್ಕೆ ಅವರಿಗೆ ಒಳ್ಳೆಯದಾಗಲಿ. ಆದಷ್ಟು ಬೇಗನೇ ಹೊಸಪಕ್ಷ ಕಟ್ಟಿ ರಾಜ್ಯದಲ್ಲಿ ಸಂಘಟನೆ ಮಾಡಲಿ ಎಂದು ಹಾರೈಸಿದರು.

ಸಚಿವ ಕೆ.ಎನ್.ರಾಜಣ್ಣ ಹನಿಟ್ರ್ಯಾಪ್ ಪ್ರಕರಣದಲ್ಲಿ ಯಾವ ಹನಿಯೂ ಇಲ್ಲ. ಯಾವ ಟ್ರ್ಯಾಪ್ ಕೂಡ ಇಲ್ಲ. ಈಗಾಗಲೇ ಗೃಹ ಸಚಿವರಿಗೆ ಅವರು ದೂರು ಕೊಟ್ಟಿದ್ದಾರೆ. ಸದನದಲ್ಲಿ ಜವಾಬ್ದಾರಿಯಿಂದ ರಾಜಣ್ಣ ಮಾತನಾಡಿದ್ದಾರೆ. ಸತ್ಯಾಸತ್ಯತೆ ಹೊರಗೆ ಬರಬೇಕು.

– **ಲಕ್ಷ್ಮೀ ಹೆಬ್ಬಾಳಕರ್** ಸಚಿವೆ

ಸಂಭ್ರಮದ ರಂಜಾನ್

ರಂಜಾನ್ ಅಂಗವಾಗಿ ಬಳ್ಳಾರಿಯಲ್ಲಿ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಮುಸ್ಲಿಂ ಬಾಂಧವರು.

ಶಿವಮೊಗ್ಗ/ ಬಳ್ಳಾರಿ: ರಾಜ್ಯಾದ್ಯಂತ ಸೋಮವಾರ ಈದ್ ಉಲ್ ಫಿತರ್ (ರಂಜಾನ್) ಹಬ್ಬವನ್ನು ಸಂಭ್ರಮ - ಸಡಗರದಿಂದ ಆಚರಿಸಲಾಯಿತು. ಕಳೆದ ಒಂದು ತಿಂಗಳಿನಿಂದ ಉಪವಾಸ ಆಚರಣೆ ನಡೆಸಿದ್ದ ಮುಸ್ಲಿಂ ಬಾಂಧವರು ಹೊಸಬಟ್ಟೆ ಧರಿಸಿ ಈದ್ಗಾ ಮೈದಾನ ಮತ್ತು ಮಸೀದಿಗಳಿಗೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಶಿವಮೊಗ್ಗ , ಸಾಗರ, ಶಿಕಾರಿಪುರ, ಭದ್ರಾವತಿ, ಸೊರಬ, ಸಾಗರ, ಸೇರಿದಂತೆ ಎಲ್ಲೆಡೆ ಮುಸಲ್ಮಾನ್ ಬಾಂಧವರು ಶ್ರದ್ಧಾ ಭಕ್ತಿಯಿಂದ ಹಬ್ಬ ಆಚರಿಸಿದರು.

ಶಿವಮೊಗ್ಗದ ಸರ್.ಎಂ.ವಿಶ್ವೇಶ್ವರಯ್ಯ ರಸ್ತೆಯ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಕೆ ಬಳಿಕ ಪರಸ್ಪರ ಶುಭಾಶಯ ವಿನಿಯಮ ಮಾಡಿಕೊಂಡರು.

ಬಳ್ಳಾರಿಯಲ್ಲೂ ಸಂಭ್ರಮ: ಬಳ್ಳಾರಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮುಸ್ಲಿಂ ಬಾಂಧವರು ಶ್ರದ್ಧಾ -ಭಕ್ತಿಯೊಂದಿಗೆ ಸಂಭ್ರಮದಿಂದ ರಂಜಾನ್ ಹಬ್ಬ ಆಚರಿಸಿದರು. ಬೆಳಗ್ಗೆಯಿಂದಲೇ ನಗರದ ಎಪಿಎಂಸಿ ಬಳಿಯ ಈದ್ಗಾ ಮೈದಾನಕ್ಕೆ ತೆರಳಿದ ಬಾಂಧವರು, ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಧರ್ಮಗುರುಗಳು ಹಬ್ಬದ ಸಂದೇಶ ಸಾರಿ, ದಾನ - ಧರ್ಮದ ಮಹತ್ವ ಕುರಿತು ಬೋಧನೆ ಮಾಡಿದರು. ಸಮಾಜದಲ್ಲಿ ಎಲ್ಲರೊಂದಿಗೂ ಸಹೋದರರಂತೆ ಬಾಳುವಂತೆ ಕರೆ ನೀಡಿದರು.ಪ್ರಾರ್ಥನಾ ಸ್ಥಳದಲ್ಲಿ ಸಂಸದ ತುಕರಾಂ, ಶಾಸಕ ಭರತ್ ರೆಡ್ಡಿ ಭಾಗವಹಿಸಿ ಹಬ್ಬದ ಶುಭಾಶಯ ಕೋರಿದರು.

ಹಾಸನ: ದೇವಸ್ಥಾನದ ಭೂಮಿ ಅಕ್ರಮ ಇ-ಖಾತೆ ಆರೋಪ-ಗುಂಪು ಘರ್ಷಣೆ

ಹಾಸನ: ಅರಕಲಗೂಡು ತಾಲೂಕಿನ ಶಣವಿನಕುಪ್ಪೆ ಗ್ರಾಮದ ಅಂಜನೇಯಸ್ವಾಮಿ ದೇವಸ್ಥಾನಕ್ಕೆ ಸೇರಿದ ಭೂಮಿಯನ್ನು ಅಕ್ರಮವಾಗಿ ಇ-ಖಾತೆ ಮಾಡಿಕೊಟ್ಟ ಆರೋಪದ ಹಿನ್ನೆಲೆಯಲ್ಲಿ ಎರಡು ಗುಂಪುಗಳ ನಡುವೆ ಹೊಡೆದಾಟ ನಡೆದು ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ.

ಅಲ್ಲದೆ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಾಶ್ ಸೇರಿದಂತೆ ಸ್ಥಳಕ್ಕೆ ಆಗಮಿಸಿದ್ದ ಅಧಿಕಾರಿಗಳನ್ನು ಗ್ರಾಮಸ್ಥರು ತರಾಟೆ ತೆಗೆದುಕೊಂಡ ಪ್ರಸಂಗವೂ ನಡೆದಿದೆ. ದೇವಸ್ಥಾನದ ಜಾಗವನ್ನು ಪಂಚಾಯಿತಿ ಅಧಿಕಾರಿಗಳು ಹಾಲು ಉತ್ಪಾದಕರ ಮಹಿಳಾ ಸಂಘದ ಕಟ್ಟಡಕ್ಕಾಗಿ ಇ-ಖಾತೆ ಮಾಡಿಕೊಟ್ಟಿದ್ದಾರೆ ಎಂದು ಗ್ರಾಮಸ್ಥರು ಆಕ್ಷೇಪಿಸಿದರು. ಸಂಘದ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ ಎಂದು ಗ್ರಾಮಸ್ಥರು ಎಚ್ಚರಿಕೆ ಕೊಟ್ಟರು.

ಈ ವೇಳೆ ಗ್ರಾಮದ ಒಂದು ಬಣದವರು ನಿರ್ಮಿಸಲಾಗಿದ್ದ ತಾತ್ಕಾಲಿಕ ಶೆಡ್ ಕಿತ್ತೊಗೆಯಲು ಮುಂದಾದಾಗ, ಇದಕ್ಕೆ ಮತ್ತೊಂದು ಗುಂಪು ತೀವ್ರ ವಿರೋಧ ವ್ಯಕ್ತಪಡಿಸಿತು. ಆಗ ಎರಡೂ ಗುಂಪುಗಳ ನಡುವೆ ಗಲಾಟೆ ನಡೆಯಿತು. ಅಧಿಕಾರಿಗಳು ಮತ್ತು ಪೊಲೀಸರ ಸಮ್ಮುಖದಲ್ಲೇ ಗ್ರಾಮಸ್ಥರು ಬಡಿದಾಡಿಕೊಂಡರು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಈ ಘಟನೆಯಿಂದಾಗಿ ಶಣವಿನಕುಪ್ಪೆ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ಭದ್ರಾ ಜಲಾಶಯ: ಇಂದಿನಿಂದ 2 ಟಿಎಂಸಿ ನೀರು ಬಿಡುಗಡೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದ ರೈತಾಪಿ ಜನರಿಗೆ ಯುಗಾದಿ ಕೊಡುಗೆಯಾಗಿ ಭದ್ರಾ ಜಲಾಶಯದಿಂದ ತುಂಗಾಭದ್ರಾ ಕಾಲುವೆಗೆ ಎರಡು ಟಿಎಂಸಿ ನೀರು ಹರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ರೈತರಿಗೆ ರಾಜ್ಯ ಸರಕಾರದಿಂದ ಉಡುಗೊರೆ

ಏಪ್ರಿಲ್ 1 ರಿಂದ 5ರ ಅವಧಿಯಲ್ಲಿ ಕಾಲುವೆಗೆ ನೀರು ಹರಿಸಲು ನಿರ್ಧರಿಸಲಾಗಿದ್ದು, ಇದು ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬೆಳೆದು ನಿಂತಿರುವ ಬೆಳೆಗಳಿಗೆ ಮತ್ತು ಕುಡಿಯುವ ನೀರು ಸರಬರಾಜಿಗೆ ನೆರವಾಗಲಿದೆ.

ಮಾ. 30ರ ವರೆಗೆ ಭದ್ರಾ ಜಲಾಶಯದಲ್ಲಿ 28 ಟಿಎಂಸಿ ನೀರು ಸಂಗ್ರಹ ಲಭ್ಯವಿದೆ. ಇದರಲ್ಲಿ ಮೇ 8ರ ವರೆಗೆ ನೀರಾವರಿಗೆ 11 ಟಿಎಂಸಿ ಮತ್ತು ಕುಡಿಯುವ ನೀರಿಗಾಗಿ 14 ಟಿಎಂಸಿ ಅಗತ್ಯವಿದ್ದು, 3 ಟಿಎಂಸಿ ನೀರನ್ನು ಜಲಾಶಯದಲ್ಲಿ ಉಳಿಸಿಕೊಳ್ಳಬೇಕಾಗಿದೆ. ಏಪ್ರಿಲ್ 6 ರಿಂದ ಕಾಲುವೆಗಳನ್ನು ಕೇವಲ ಕುಡಿಯುವ ನೀರಿನ ಪೂರೈಕೆಗೆ ಮಾತ್ರ ಬಳಸಿಕೊಳ್ಳಲಾಗುವುದು. ರೈತಾಪಿ ಜನರ ಬೆಳೆಗಳಿಗೆ ಮತ್ತು ಜನರಿಗೆ ಕುಡಿಯುವ ನೀರು ಪೂರೈಸಲು ಸರಕಾರ ಎಲ್ಲ ಹಂತದಲ್ಲೂ ಬದ್ಧವಾಗಿದೆ ಎಂದು ಹೇಳಿದ್ದಾರೆ.

ಈ ಸಂಬಂಧ ಜಲಸಂಪನ್ಮೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ ನೀಡಿದ್ದಾರೆ.

ಉಳ್ಳಾಲ: ಮುತ್ತೂಟ್ ಫೈನಾನ್ಸ್ ದರೋಡೆಗೆ ಯತ್ನ, ಇಬ್ಬರ ಸೆರೆ

ಉಳ್ಳಾಲ: ದಕ್ಷಿಣ ಕನ್ನಡದ ದೇರಳಕಟ್ಟೆಯಲ್ಲಿರುವ ಮುತ್ತೂಟ್ ಫೈನಾನ್ಸ್‌ನಲ್ಲಿ ದರೋಡೆಗೆ ಯತ್ನಿಸಿದ ಮೂವರು ಆರೋಪಿಗಳ ಪೈಕಿ ಕೇರಳ ಮೂಲದ ಇಬ್ಬರನ್ನು ಕೊಣಾಜೆ ಪೊಲೀಸರು ಹಾಗೂ ಸ್ಥಳೀಯರು ಸೇರಿ ಹಿಡಿದಿದ್ದಾರೆ. ಕೇರಳದ ಮುರಳಿ ಮತ್ತು ಇರ್ಷಾದ್ ಬಂಧಿತರು.

ಶನಿವಾರ ಸಂಜೆ ರೈಲಿನಲ್ಲಿ ಬಂದಿದ್ದ ಈ ಮೂವರು ದೇರಳಕಟ್ಟೆ ಸಮೀಪ ರಾತ್ರಿವರೆಗೂ ಕಾದು , ಕೃತ್ಯ ಎಸಗಲು ಮುಂದಾಗಿದ್ದರು. ತಡರಾತ್ರಿ ಡ್ರಿಲ್ಲಿಂಗ್ ಯಂತ್ರದ ಮೂಲಕ ಬಾಗಿಲು ಮುರಿಯಲು ಯತ್ನಿಸಿದ ವೇಳೆ ಸೈರನ್ ಮೊಳಗಿದೆ. ಎಚ್ಚೆತ್ತ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸಮೀಪದಲ್ಲೇ ಗಸ್ತಿನಲ್ಲಿದ್ದ ಕೊಣಾಜೆ ಪೊಲೀಸರು ಧಾವಿಸುವಷ್ಟರಲ್ಲಿ ಆರೋಪಿಗಳು ಪರಾರಿಯಾಗಲು ಯತ್ನಿಸಿದ್ದರು. ಕೊನೆಗೆ ಪೊಲೀಸರು ಹಾಗೂ ಸ್ಥಳೀಯರು ಸೇರಿ ಇಬ್ಬರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಒಬ್ಬ ಆರೋಪಿ ತಪ್ಪಿಸಿಕೊಂಡಿದ್ದಾನೆ. ವಿಚಾರಣೆ ವೇಳೆ ಆರೋಪಿಗಳಿಬ್ಬರು ಕೇರಳದಲ್ಲಿ ವಿಜಯ ಬ್ಯಾಂಕ್‌ನಲ್ಲಿ ದರೋಡೆ ನಡೆಸಿದ್ದ ಸಂಗತಿ ಬೆಳಕಿಗೆ ಬಂದಿದೆ. ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ವೀಟೂ-ಖಾರಾ

ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರು

ನರೇಂದ್ರ ಮೋದಿ ಸರಕಾರ ಬ್ಯಾಂಕ್‌ಗಳನ್ನು 'ಕಲೆಕ್ಷನ್ ಏಜೆಂಟ್'ಗಳಾಗಿ ಮಾಡಿಕೊಂಡಿದೆ. ಬ್ಯಾಂಕುಗಳು 2018 ಮತ್ತು 2014ರ ನಡುವೆ ಕನಿಷ್ಠ ಮೊತ್ತ ಕಾಯ್ದುಕೊಳ್ಳದ ಉಳಿತಾಯ ಖಾತೆಗಳು ಮತ್ತು ಜನಧನ ಖಾತೆಗಳಿಂದ ಕನಿಷ್ಠ 43,500 ಕೋಟಿ ರು.ಗಳನ್ನು ಸಂಗ್ರಹಿಸಿದೆ.

ಗುರುರಾಜ ಪಿ. ಹೊಸೂರ್ ಬೆಂಗಳೂರು

ಈ ಹಣ ದೇಶದ ಹಲವು ಕಂಪನಿಗಳು ಮಾಡಿದ ಮೋಸದಿಂದಾದ ನಷ್ಟವನ್ನು ಸರಿದೂಗಿಸಲು ಬಳಸಿಕೊಳ್ಳಲಾಗುತ್ತಿದೆ ಎಂಬುದು ದುರದೃಷ್ಟಕರ ಸಂಗತಿ.

ವಿಶ್ವವಾಣಿ ಕ್ಲಬ್ ಹೌಸ್
01.04.2025
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶೋಭಾ ಬಿ.ಪಿ. ಹಾಗೂ ನಾಗಶ್ರೀ ಪಿ.ಜೆ.
ವಿಷಯ
ಗಾನ ಸಂಜೆ

vishwavani.news

ಸಮಾಚಾರ ಸಣ್ಣದಲ್ಲ

ಯತ್ನಾಳ್ ಉಚ್ಚಾಟನೆ: ಕಲ್ಲಡ್ಕ ಭಟ್ ಸಮರ್ಥನೆ

ಮಂಡ್ಯ: ಹಿಂದುತ್ವದ ಪ್ರತಿಪಾದಕ ಬಸನಗೌಡ ಪಾಟೀಲ್ ಯತ್ನಾಳ್‌ರನ್ನು ಬಿಜೆಪಿಯಿಂದ ಹೊರಹಾಕಿದ ಬಗ್ಗೆ ಎದ್ದ ಆಕ್ರೋಶಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಯಕ ಕಲ್ಲಡ್ಕ ಪ್ರಭಾಕರ ಭಟ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮಂಡ್ಯದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಹಿಂದುತ್ವದ ಹೆಸರಿನಲ್ಲಿ ಏನು ಬೇಕಾದರೂ ಮಾತನಾಡಬಹುದೇ..? ಸಂಘಟನೆಗೆ ಸೇರಿದ ಮೇಲೆ ಏನು ಮಾತನಾಡಬೇಕು ಎಂಬ ಪ್ರಜ್ಞೆ ಇರಬೇಕು ಎಂದು ಯತ್ನಾಳ್ ಉಚ್ಚಾಟನೆ ಕ್ರಮವನ್ನು ಸಮರ್ಥಿಸಿಕೊಂಡರು. ಸಂಘಟನೆಯ ವ್ಯಾಪ್ತಿಯೊಳಗೆ ಇದ್ದಾಗ ಎಲ್ಲೆಮೀರಿ ವರ್ತಿಸಬಾರದು. ನಿಮಗೆ ಮಾತನಾಡಲು ಅವಕಾಶವಿದೆ. ಅದಕ್ಕೆ ಬಿಜೆಪಿ ಸಮಿತಿ ಇದೆ. ಅಲ್ಲಿ ಎಷ್ಟು ಬೇಕಾದರೂ ಮಾತನಾಡಬಹುದು. ಆದರೆ ಹೊರಗೆ ಹೋಗಿ ಮಾತನಾಡುವುದು ಹಿಂದುತ್ವದ ಲಕ್ಷಣ ಅಲ್ಲ ಎಂದು ಪ್ರಭಾಕರ ಭಟ್ ಅವರು ಯತ್ನಾಳರಿಗೆ ಎಚ್ಚರಿಕೆ ಕೊಟ್ಟರು.



ಬೈಕ್ ಅಪಘಾತ: ಸತೀಶ್ ಆಚಾರ್ಯ ಸಾವು

ಬೆಳ್ತಂಗಡಿ: ಎರಡು ಬೈಕ್‌ಗಳ ನಡುವೆ ನಡೆದ ಸೋಮವಾರ ಮುಂಜಾನೆ ನಡೆದ ಡಿಕ್ಕಿಯಲ್ಲಿ ಮಂಗಳಾದೇವಿ ಮೇಳದ ಭಾಗವತರಾದ ಸತೀಶ್ ಆಚಾರ್ಯ ಅಂಡಿಂಜೆ ಮೃತಪಟ್ಟಿದ್ದಾರೆ. ಅಂಡಿಂಜೆ ಗ್ರಾಮಕ್ಕೆ ಸೇರಿದ ಯಕ್ಷಗಾನ ಭಾಗವತ ಸತೀಶ್ ಆಚಾರ್ಯ ಸುಳ್ಯದಲ್ಲಿ ನಡೆದ ಕಾರ್ಯಕ್ರಮ ಮುಗಿಸಿ ತಮ್ಮ ಬೈಕ್‌ನಲ್ಲಿ ಮನೆಗೆ ವಾಪಸಾಗುತ್ತಿದ್ದಾಗ ಅಂಡಿಂಜೆ ಕಿಲಾರ ಮಾರಿಗುಡಿ ದೇವಸ್ಥಾನ ಸಮೀಪ ತಿರುವಿನಲ್ಲಿ ಎದುರಿನಿಂದ ಬಂದ ಮತ್ತೊಂದು ಬೈಕ್ ಡಿಕ್ಕಿಯಾಗಿ ಈ ದುರ್ಘಟನೆ ನಡೆದಿದೆ. ತೀವ್ರವಾಗಿ ಗಾಯಗೊಂಡ ಸತೀಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಂದು ಬೈಕ್‌ನಲ್ಲಿದ್ದವರಿಗೂ ಗಾಯಗಳಾಗಿವೆ. ವೇಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷ್ಣಾ ನದಿಯಲ್ಲಿ ಮೂವರು ಬಾಲಕರು ನೀರುಪಾಲು

ಬಾಗಲಕೋಟೆ : ಇಲ್ಲಿನ ಕೃಷ್ಣಾ ನದಿಯಲ್ಲಿ ಯುಗಾದಿ ಪಾಡ್ಯದ ನಿಮಿತ್ತ ಸ್ನಾನಕ್ಕೆ ತೆರಳಿದ್ದ ಮೂವರು ಬಾಲಕರು ನೀರು ಪಾಲಾಗಿದ್ದಾರೆ. ಸೋಮಶೇಖರ ಬೊಮ್ಮಣ್ಣ ದೇವರಮನಿ (15), ಮಲ್ಲಪ್ಪ ಬಸಪ್ಪ ಬಗಲಿ (15) ಹಾಗೂ ಪರನಗೌಡ ಮಲ್ಲಪ್ಪ ಬೀಳಗಿ (17) ನೀರು ಪಾಲಾದವರು. ಈ ದುರ್ದೈವಿಗಳು ಬಾಗಲಕೋಟೆ ತಾಲೂಕಿನ ಇಲ್ಯಾಳ ಗ್ರಾಮದವರು. ಘಟನೆ ನಡೆದ ತಕ್ಷಣ ಮೀನುಗಾರರು ಹುಡುಕಾಟ ನಡೆಸಿ ಸೋಮಶೇಖರ ದೇವರಮನಿಯ ಮೃತದೇಹವನ್ನು ಹೊರತೆಗೆದಿದ್ದಾರೆ. ಕಾಣೆಯಾದ ಇನ್ನಿಬ್ಬರ ಹುಡುಕಾಟಕ್ಕಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಶೋಧಕಾರ್ಯ ಮುಂದುವರಿಸಿದ್ದಾರೆ. ಬಾಗಲಕೋಟೆ ಗ್ರಾಮೀಣ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿದರು.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ

ಸಂಪಾದಕೀಯ

ರಾಜ್ಯದ ನಿಲುವು ಬದಲಾಗದಿರಲಿ

ಬಂಡೀಪುರ ಅರಣ್ಯದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅವಕಾಶ ನೀಡಬೇಕೆಂಬ ಕೇರಳ ಲಾಬಿಗೆ ರಾಜ್ಯ ಸರಕಾರ ಮಣಿಯುವ ಲಕ್ಷಣಗಳು ಕಂಡುಬರುತ್ತಿವೆ. ವಯನಾಡು ಲೋಕಸಭೆ ಉಪಚುನಾವಣೆ ವೇಳೆ, ಪಕ್ಷದ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ಅವರು 'ಬಂಡೀಪುರದಲ್ಲಿ ರಾತ್ರಿ ಸಂಚಾರಕ್ಕೆ ಅವಕಾಶ ಕಲ್ಪಿಸುವ ವಿಚಾರ ನನಗೆ ಬಿಡಿ' ಎಂದು ಹೇಳಿದ್ದರು. ಇಲ್ಲಿನ ಸಂಸದೆಯಾಗಿ ಆಯ್ಕೆಯಾದ ತಮ್ಮ ನಾಯಕಿಯ ಮಾತನ್ನು ನೆರವೇರಿಸಲು ಈಗ ರಾಜ್ಯ ಸರಕಾರವೇ ಖುದ್ದು ಆಸಕ್ತಿ ವಹಿಸಿರುವಂತೆ ಕಾಣುತ್ತಿದೆ. ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್‌ರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅರಣ್ಯ ಸಚಿವ ಈಶ್ವರ್ ಬಿ ಖಂಡ್ರೆ, ಎರಡೂ ರಾಜ್ಯಗಳ ಬಾಂಧವ್ಯವನ್ನು ಗಮನದಲ್ಲಿಟ್ಟುಕೊಂಡು, ಎಲ್ಲರೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಮಾಡಲು ಕ್ರಮ ವಹಿಸಲಾಗುವುದು ಎಂದಿದ್ದಾರೆ. ಕೆಲ ತಿಂಗಳ ಹಿಂದೆ ವಯನಾಡಲ್ಲಿ ಮಾತನಾಡಿದ್ದ ಡಿಸಿಎಂ ಡಿಕೆ ಶಿವಕುಮಾರ್ ಕೂಡ ಬಂಡೀಪುರ ರಾತ್ರಿ ವಾಹನ ಸಂಚಾರ ನಿಷೇಧ ತೆರವು ಬಗ್ಗೆ ಪರಿಶೀಲಿಸುವ ಭರವಸೆ ನೀಡಿದ್ದರು. ಈ ವಿಷಯದಲ್ಲಿ ಎರಡು ರಾಜ್ಯಗಳ ಬಾಂಧವ್ಯಕ್ಕಿಂತಲೂ ಸಮಸ್ತ ಜೀವಸಂಕುಲದ ಪ್ರಶ್ನೆ ಅಡಗಿರುವುದು ಇಬ್ಬರು ಹಿರಿಯ ಸಚಿವರಿಗೆ ತಿಳಿಯದ ವಿಷಯವೇನಲ್ಲ. ರಾತ್ರಿ ವಾಹನ ಸಂಚಾರ ನಿಷೇಧಿಸಿದ ಬಳಿಕ ಈ ಹೆದ್ದಾರಿಯಲ್ಲಿ ವಾಹನಗಳಡಿ ಸಿಲುಕಿ ಸಾಯುವ ಪ್ರಾಣಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದು ಗೊತ್ತಿರುವ ವಿಚಾರ. ಮೇಲಾಗಿ ಸುಪ್ರೀಂಕೋರ್ಟ್ ಈ ಕುರಿತ ರಾಜ್ಯದ ತೀರ್ಮಾನವನ್ನು ಎತ್ತಿಹಿಡಿದಿದೆ. ಕೇರಳ ಸರಕಾರ ಈ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ಬಾಕಿ ಇದೆ. ಎರಡೂ ರಾಜ್ಯಗಳ ಬಾಂಧವ್ಯದ ಮೇಲೆ ತೀರ್ಮಾನ ಕೈಗೊಳ್ಳಲು ಈಗ ರಾಜ್ಯ ಸರಕಾರಕ್ಕೂ ಅವಕಾಶವಿಲ್ಲ. ಆದರೆ ಪ್ರಿಯಾಂಕಾ ಮಾತನ್ನು ಶಾಸನ ವಾಗಿಸಬೇಕೆಂಬ ಹಠಕ್ಕೆ ಬಿದ್ದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ಕರ್ನಾಟಕದ ವಾದವನ್ನು ದುರ್ಬಲಗೊಳಿಸಲು ಅವಕಾಶವಿದೆ. ಸದ್ಯಕ್ಕೆ ರಾಜ್ಯದ ಪರಿಸರಾಸಕ್ತರೆಲ್ಲರೂ ಸೇರಿ ರಾಜಕೀಯ ಹಿತಾಸಕ್ತಿಗಾಗಿ ನಮ್ಮ ರಾಜ್ಯದ/ದೇಶದ ಪ್ರಾಣಿಸಂಕುಲ ಬಲಿಯಾಗದಂತೆ ನೋಡಿಕೊಳ್ಳಬೇಕಾಗಿದೆ.

ಸೊಂಪಾದಕೀಯ

ದಂಡಂ ದಶಗುಣಂ

ನಮ್ಮ ಬೆಂಗಳೂರು ನಗರ ಏನಕ್ಕೆ ಫೇಮಸ್ ಅಂತ ಕೇಳಿದ್ರೆ, ಕ್ಲಾಸಿಗೆ ಹೋಗದ ಮಕ್ಕಳು ಕೂಡಾ 'ಟ್ರಾಫಿಕ್ಕಿಗೆ' ಅಂತ ಸುಲಭವಾಗಿ ಹೇಳಬಲ್ಲರು. ಅದು ನಿಜ ಕೂಡಾ. ದೇಶದ ಜನರಿಗೆ ಬದುಕಲು ಬೆಂಗಳೂರು ಎಷ್ಟು ಸುಂದರ ನಗರವೋ, ಟ್ರಾಫಿಕ್ ವಿಷಯದಲ್ಲಿ ಅಷ್ಟೇ ಕಿರಿಕಿರಿ ಮೂಡಿಸುವ ನಗರ ಕೂಡಾ ಹೌದು. ಆದರೆ ಅದರ ಜತೆಗೆ ಬೆಂಗಳೂರು ನಗರದ ನಾಗರಿಕರು ಟ್ರಾಫಿಕ್ ನಿಯಮಗಳನ್ನು ಮೀರುವುದರಲ್ಲೂ ಎತ್ತಿದ ಕೈ. ಅದಕ್ಕಾಗಿ ಎಷ್ಟೇ ದಂಡ ತೆತ್ತರೂ ಅವರು ಬುದ್ಧಿ ಕಲಿಯೋದಿಲ್ಲ. ಈಗಂತೂ ನಗರ ಟ್ರಾಫಿಕ್ ಪೊಲೀಸಿನವರು ಸಾಕಷ್ಟು ತಂತ್ರಜ್ಞಾನದ ಬಳಕೆ ಮಾಡುತ್ತಿದ್ದಾರೆ. ಆದರೆ ನಮ್ಮ ನಾಗರಿಕರು ಮಾತ್ರ ಟ್ರಾಫಿಕ್ ನಿಯಮ ಮೀರಬಾರದು ಅನ್ನೋ ಸಾಮಾನ್ಯ ಜ್ಞಾನವನ್ನು ಮಾತ್ರ ಬಳಸುತ್ತಿಲ್ಲ. ಅದರ ಪರಿಣಾಮವಾಗಿ ಕಳೆದ 7 ತಿಂಗಳಲ್ಲಿ ದಂಡ ವಸೂಲಾತಿ ಕಾರ್ಯಕ್ರಮದಿಂದಾಗಿ ಪೊಲೀಸರು ಸಾರ್ವಜನಿಕರಿಂದ ವಸೂಲಿ ಮಾಡಿರುವ ಹಣದ ಮೊತ್ತ 35 ಕೋಟಿ ರುಪಾಯಿಗೂ ಮೀರಿದೆ. ಇನ್ನು ಕಳೆದ 3 ವರ್ಷಗಳಲ್ಲಿ ಈ ದಂಡ ವಸೂಲಾತಿ ಮೊತ್ತ ಸುಮಾರು 400 ಕೋಟಿ ಆಗಿದೆ ಎಂದರೆ ನಮ್ಮ ಸಾರ್ವಜನಿಕರು ಈ ದಂಡ ವಸೂಲಾತಿ ಫಂಡ್‌ಗೆ ಅದೆಷ್ಟು ಉದಾರವಾಗಿ ದೇಣಿಗೆ ನೀಡುತ್ತಿದ್ದಾರೆ ಅನ್ನೋದರ ಅಂದಾಜು ಸಿಗುತ್ತದೆ. ಇದು ನಮ್ಮ ಊರಿನ ಜನ ರಸ್ತೆಯಲ್ಲಿ ವಾಹನ ಚಲಾಯಿಸುವಾಗ ತೋರಿಸುವ ಬೇಜವಾಬ್ದಾರಿತನ. ಇದಲ್ಲದೆ 'ರೋಡ್ ರೇಜ್' ಪ್ರಕರಣ ಕೂಡಾ ಇತ್ತೀಚೆಗೆ ತುಂಬಾ ಸದ್ದು ಮಾಡುತ್ತಿದೆ. ಸಣ್ಣ ಜಗಳದಂತೆ ಶುರುವಾಗೋ ಈ ಪ್ರಕರಣಗಳಲ್ಲಿ ಇತ್ತೀಚೆಗೆ ಕೆಲವರು ಪ್ರಾಣ ಕಳೆದುಕೊಂಡಿದ್ದೂ ಉಂಟು. ಮೊನ್ನೆ ಪಬ್‌ನ ಬೌನ್ಸರ್ ಒಬ್ಬ ತನ್ನ ಮುಂದಿನ ಗಾಡಿ ಸಡನ್ ಆಗಿ ಬ್ರೇಕ್ ಹಾಕಿದ್ದಕ್ಕೆ ಅವನ ಗಾಡಿಗೆ ತನ್ನ ಗಾಡಿ ಗುದ್ದಿ ಬೌನ್ಸ್ ಆಯಿತು ಅತ ಕಾರಿನವರ ಮೇಲೆ ಹಲ್ಲೆ ಮಾಡಿ ಪೊಲೀಸರ ಅತಿಥಿ ಆಗಿದ್ದಾನೆ. ಇನ್ನೊಬ್ಬ ಅಯೋಗ್ಯ ಬೈಕ್ ಒಂದನ್ನು ಅಟ್ಟಿಸಿಕೊಂಡು ಹೋಗಿ ಕಾರಿನಿಂದ ಗುದ್ದಿ ಬೈಕ್ ಸವಾರನ ಸಾವಿಗೆ ಕಾರಣ ಆಗಿದ್ದಾನೆ. ನಮ್ಮ ವ್ಯವಸ್ಥೆ ಈ ರೀತಿ ಹದಗೆಟ್ಟಿರೋದನ್ನು ನೋಡಿದಾಗ ಸಂಚಾರ ನಿಯಮ ಉಲ್ಲಂಘನೆ ಜತೆಗೆ ರಸ್ತೆಯಲ್ಲಿ ಧಿಮಾಕು ತೋರಿಸುವ ದುರಂಹಂಕಾರಿಗಳಿಗೂ ಸರಿಯಾದ ವ್ಯವಸ್ಥೆ ಮಾಡುವ ಅಗತ್ಯ ಇದೆ ಅನ್ನಿಸೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಕಂಪನಿಗಳಲ್ಲಿ ಬೆಳಗಿನ ಪ್ರಾರ್ಥನೆ

ನಾವು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಓದುವಾಗ ಬೆಳಗ್ಗೆ ತರಗತಿಗಳು ಆರಂಭವಾಗುವುದಕ್ಕಿಂತ ಮುನ್ನ ಪ್ರಾರ್ಥನೆ ಮಾಡುತ್ತಿದ್ದೆವಲ್ಲ, ಅದೇ ರೀತಿ ಜಪಾನಿನ ಹಲವು ಕಂಪನಿಗಳಲ್ಲಿ ಬೆಳಗಿನ ಹೊತ್ತು, ಎಲ್ಲ ಸಿಬ್ಬಂದಿ ಪ್ರಾರ್ಥನೆ ಮಾಡುತ್ತಾರಂತೆ. ಈ ವಿಷಯವನ್ನು ಬೆಂಗಳೂರಿನ ಟೊಯೋಟಾ ಸಂಸ್ಥೆಯಲ್ಲಿ ಕಳೆದ ಆರು ವರ್ಷಗಳಿಂದ ಕೆಲಸ ಮಾಡುತ್ತಿರುವ ಸ್ನೇಹಿತರಾದ ಹೊಸನಗರ ವಸಂತ ತಿಳಿಸಿದರು. ಅವರು ಜಪಾನಿಗೆ ಹೋದಾಗ ಬೆಳಗ್ಗೆ ಪಾಳಿ ಆರಂಭಕ್ಕೆ ಮುನ್ನ ಪ್ರಾರ್ಥನೆಗೆ ನಿಲ್ಲುತ್ತಿದ್ದರಂತೆ. ಈ ರೀತಿಯ ಸಂಪ್ರದಾಯವನ್ನು ಬೇರೆ ಯಾವ ದೇಶಗಳಲ್ಲೂ ನೋಡಲು ಸಾಧ್ಯವಿಲ್ಲ. ಈಗಲೂ ಅನೇಕ ಕಂಪನಿಗಳು ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುತ್ತಿವೆ. ಇದನ್ನು ಜಪಾನಿಗರು 'ಚೋರೆ' ಅಂತ ಕರೆಯುತ್ತಾರೆ. ಹಾಗಂದರೆ 'ಬೆಳಗಿನ ಸಭೆ' (ಮಾರ್ನಿಂಗ್ ಮೀಟಿಂಗ್) ಎಂದರ್ಥ. ಬೆಳಗ್ಗೆ ಕೆಲಸವನ್ನು ಆರಂಭಿಸುವುದಕ್ಕೆ ಮುನ್ನ ಸಿಬ್ಬಂದಿಯ 'ಮೂಡ್' ಅನ್ನು ಉತ್ತಮಗೊಳಿಸುವುದು, ಉದ್ಯೋಗಿಗಳು ದಿನವನ್ನು ಉತ್ಸಾಹದಿಂದ ಆರಂಭಿಸುವುದು, ಸಂಘಟನಾತ್ಮಕ ಭಾವನೆಯನ್ನು ಉತ್ತೇಜಿಸುವುದು, ಎಲ್ಲರೂ ಒಂದೇ ಎಂಬ ಗುರಿಯನ್ನು ಹೊಂದಿ ಕಾರ್ಯನಿರ್ವಹಿಸಲು ಪ್ರೇರೇಪಿಸುವುದು ಇದರ ಮುಖ್ಯ ಆಶಯ. ಇದು ಉದ್ಯೋಗಿಗಳಿಗೆ ಕಂಪನಿಯ ಮೌಲ್ಯ, ಧೋರಣೆ, ನಿಯಮ ಮತ್ತು ಗುರಿಗಳನ್ನು ಸ್ಮರಿಸುವ ಅವಕಾಶವೂ ಹೌದು. ತಕ್ಷಣದ ಮಾಹಿತಿಯನ್ನು ಹಂಚಿಕೊಳ್ಳುವುದು ಮತ್ತು ನಿರ್ದಿಷ್ಟ ದಿನದ ಕೆಲಸಗಳ ಹಾಗೂ ಉದ್ದೇಶಗಳ ಬಗ್ಗೆ ಮಾಹಿತಿ ನೀಡಲು, ವಿನಿಮಯ ಮಾಡಿಕೊಳ್ಳಲು ಸಹ ಈ ಪ್ರಾರ್ಥನಾ ಸಭೆ ಸಹಾಯಕ. ಈ ಸಭೆಯಲ್ಲಿ ಕೆಲವೊಂದು ಕಂಪನಿಗಳು ತಮ್ಮದೇ ಆದ ಸಂಸ್ಥೆಯ ಹಾಡನ್ನು ಹಾಡುತ್ತಾರೆ. ಕೆಲವೆಡೆ ಕಂಪನಿಯ ಧ್ಯೇಯೋದ್ದೇಶಗಳನ್ನು, ಘೋಷವಾಕ್ಯಗಳನ್ನು ಎಲ್ಲ ಸಿಬ್ಬಂದಿ ಗಟ್ಟಿಯಾಗಿ ಹೇಳುವುದುಂಟು. ಕೆಲವೊಮ್ಮೆ ಸಂಸ್ಥೆಯ ಹಿರಿಯ ಅಧಿಕಾರಿಗಳು 5-10 ನಿಮಿಷಗಳ ಪ್ರೇರಣಾದಾಯಕ ಭಾಷಣವನ್ನೂ ಮಾಡಬಹುದು. ಕೆಲವು ಕಂಪನಿಗಳಲ್ಲಿ ಸಿಬ್ಬಂದಿ ಆರೋಗ್ಯ ಮತ್ತು ಶಿಸ್ತು ಕಾಯ್ದುಕೊಳ್ಳಲು ಲಘು ಶಾರೀರಿಕ ವ್ಯಾಯಾಮವನ್ನು ಮಾಡಿಸುತ್ತಾರೆ. ಎಲ್ಲ ಸೇರಿ ಒಂದು ಕ್ರಿಯೆ ಮಾಡುವುದರಿಂದ ಎಲ್ಲರಲ್ಲೂ ತಾವೆಲ್ಲ ಒಂದು ಎಂಬ ಭಾವನೆ ಮೂಡುವುದರಿಂದ ಇಂಥ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾರೆ. ಜಪಾನಿ ಮೂಲದ ಟೊಯೋಟಾ, ಹೋಂಡಾ, ಹಿಟಾಚಿ, ಪ್ಯಾನಸೋನಿಕ್ ಮುಂತಾದ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಈಗಲೂ ಈ ಪದ್ಧತಿ ಜಾರಿಯಲ್ಲಿದೆ. ಇವು ತಮ್ಮ ಆಂತರಿಕ ಸಂಸ್ಕೃತಿಯನ್ನು ಕಾಪಾಡಲು ಈ ಪದ್ಧತಿಯನ್ನು ಅನುಸರಿಸುತ್ತವೆ. ಕೆಲವೊಂದು ಹೋಟೆಲ್, ರೆಸ್ಟೋರೆಂಟ್ ಮತ್ತು ಸೇವಾ ಸಂಸ್ಥೆಗಳು ಸಹ ಈ ಪದ್ಧತಿಯನ್ನು ನಿತ್ಯವೂ ಆಚರಿಸುವುದುಂಟು. ಸೇವಾ ಉದ್ಯಮಗಳಲ್ಲಿ ಗ್ರಾಹಕರ ಸೇವೆ ಉತ್ತಮಗೊಳಿಸಲು ಸಿಬ್ಬಂದಿಗೆ ಟಿಪ್ಸ್ ನೀಡಲಾಗುತ್ತದೆ. ಜಪಾನಿನಲ್ಲಿ ಶಿಸ್ತು, ಒಗ್ಗಟ್ಟಿನ ಕೆಲಸ ಮತ್ತು ಮಾನಸಿಕ ಸಿದ್ಧತೆಯನ್ನು ಮೇಲ್ದರ್ಜೆಗೆ ಏರಿಸಲು ಈ ಪದ್ಧತಿ ಸಹಕಾರಿಯಾಗಿದೆ. ಈ ಪದ್ಧತಿಯು ಸಮುರೈಗಳ ಅನುಶಾಸನದಿಂದ ಪ್ರೇರಿತವಾಗಿದೆ. ಯಾಕೆಂದರೆ ಅವರು ಪ್ರತಿ ದಿನವೂ ತಾವು ಮಾಡುವ ತತ್ತ್ವಗಳನ್ನು ಪುನರುಚ್ಚರಿಸುತ್ತಾರೆ. ಟೊಯೋಟಾ, ಸೋನಿ, ಮಿಟ್ಸುಬಿಷಿ ಮುಂತಾದ ಕಂಪನಿಗಳು ಈ ಪದ್ಧತಿಯನ್ನು ಜಪಾನಿ ಕೆಲಸದ ಪರಂಪರೆಯಂತೆ ಉಳಿಸಿಕೊಂಡಿವೆ. ಕೆಲವೊಂದು ಜಪಾನಿ ಕಂಪನಿಗಳು ಇದನ್ನು ಸುಧಾರಿಸಿ ಆಧುನಿಕ ಶೈಲಿಯ ಸ್ಟ್ಯಾಂಡ್-ಅಪ್ ಮೀಟಿಂಗ್ ಆಗಿ ಅಳವಡಿಸಿಕೊಳ್ಳುತ್ತಿವೆ. ಪಶ್ಚಿಮದ ಐಟಿ ಮತ್ತು ಟೆಕ್ ಕಂಪನಿಗಳು Stand-up meetings ಅನ್ನು ಹೆಚ್ಚು ಬಳಸುತ್ತಿವೆ. ಆದರೆ, ಪರಂಪರೆಯನ್ನು ಉಳಿಸಿಕೊಳ್ಳಲು ಹಳೆಯ ಮ್ಯಾನುಫ್ಯಾಕ್ಚರಿಂಗ್ ಮತ್ತು Traditional Business ಗಳು ಇದನ್ನು ಮುಂದುವರಿಸುತ್ತಿವೆ. ಜಪಾನಿನ ಉದ್ಯೋಗ ಸ್ಥಳಗಳಲ್ಲಿ, ಶಾಲೆಗಳು, ರೆಸ್ಟೋರೆಂಟ್‌ಗಳು ಮತ್ತು ಕಚೇರಿಗಳಲ್ಲಿ ಈ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಈ ಪದ್ಧತಿಯ ಉದ್ದೇಶವು ಉದ್ಯೋಗಿಗಳ ನಡುವೆ ಸಂವಹನವನ್ನು ಸುಧಾರಿಸಲು ಮತ್ತು ದಿನದ ಕಾರ್ಯಗಳಿಗೆ ಸಿದ್ಧತೆ ಮಾಡಿಕೊಳ್ಳಲು ಸಹ ಸಹಾಯಕವಾಗಿದೆ. ಆಧುನಿಕ ಮ್ಯಾನೇಜ್ಮೆಂಟ್ ಪದ್ಧತಿಗಳು ಬಂದರೂ, ಈ ಸಾಂಪ್ರದಾಯಕ ಪದ್ಧತಿ ಇನ್ನೂ ಚಾಲ್ತಿಯಲ್ಲಿರುವುದು ಸೋಜಿಗವೇ.

ಯತ್ನಾಳ್ ಉಚ್ಚಾಟನೆ ಆಯ್ತು, ಮುಂದೆ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ranjith.hoskere@gmail.com

ಮಾತು ಬೆಳ್ಳಿ, ಮೌನ ಬಂಗಾರ' ಎನ್ನುವ ಮಾತಿದೆ. ರಾಜಕೀಯದಲ್ಲಿ ಮಾತೇ ಬಂಡವಾಳ. ಈ ಬಂಡವಾಳವನ್ನೇ ಬಳಸಿಕೊಂಡು ಅನೇಕರು ರಾಜಕೀಯದಲ್ಲಿ ಮೇಲೆ ಬಂದಿದ್ದಾರೆ. ಆದರೆ ಅದೇ ಮಾತಿನಿಂದ ಮೇಲೇಳಲಾರದಷ್ಟು ಪಾತಾಳಕ್ಕೂ ಕುಸಿದಿರುವ ಅನೇಕರು ನಮ್ಮ ಮುಂದಿದ್ದಾರೆ. ಮಾತು ಎಷ್ಟು ಮುಖ್ಯವೋ, ಎಲ್ಲಿ-ಯಾವಾಗ-ಎಷ್ಟು ಮಾತಾಡಬೇಕು ಎನ್ನುವುದು ಕೂಡ ಪ್ರಮುಖವಾಗುತ್ತದೆ. ಆದರೆ ಕೆಲವರು ಈ ಸೂಕ್ಷ್ಮವನ್ನು ಅರಿಯದೇ ರಾಜಕೀಯ ಜೀವನದಲ್ಲಿ 'ಸಮಸ್ಯೆ'ಗೆ ಈಡಾಗುತ್ತಾರೆ.

ರಾಜಕೀಯದಲ್ಲಿ ಮಾತಿನಿಂದಾಗುವ ಸಮಸ್ಯೆಗಳ ಬಗ್ಗೆ ಈ ಹಿಂದೆ ಪ್ರಸ್ತಾಪಿಸಲಾಗಿತ್ತು. ಆದರೆ ಮತ್ತೊಮ್ಮೆ ಈ ವಿಷಯವನ್ನು ಪ್ರಸ್ತಾಪಿಸಲು ಕಾರಣ, ಕಳೆದ ವಾರ ರಾಜ್ಯ ಬಿಜೆಪಿಯಲ್ಲಿ ನಡೆದ ಪ್ರಮುಖ ಘಟನೆ. ಅದೇನೆಂದರೆ, ಕಟ್ಟರ್ ಹಿಂದುತ್ವವಾದಿ, ಪಂಚಮಸಾಲಿ ಸಮುದಾಯದ ಮುಂಚೂಣಿ ನಾಯಕ ಎನಿಸಿಕೊಂಡಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಏಕಾಏಕಿ ಪಕ್ಷದಿಂದ ಉಚ್ಚಾಟಿಸಿದ್ದು. ಈ ಉಚ್ಚಾಟನೆಯನ್ನು ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನಿಸುತ್ತಿದ್ದಾರೆ. ಆದರೆ ಅಂತಿಮವಾಗಿ ಯತ್ನಾಳ್ ವಿರುದ್ಧ ಈ ರೀತಿಯ ಕಠಿಣ ಕ್ರಮ ಕೈಗೊಳ್ಳಲು ಅವರ ಮಾತಲ್ಲದೇ ಮತ್ತೇನೂ ಕಾರಣವಲ್ಲ ಎನ್ನುವುದು ಸ್ಪಷ್ಟ.

ಹಾಗೆ ನೋಡಿದರೆ, ಯತ್ನಾಳ್ ಅವರು ಎಂದಿಗೂ ಬಿಜೆಪಿ ರಾಷ್ಟ್ರೀಯ ನಾಯಕರ ಅಥವಾ ಪಕ್ಷದ ವಿರುದ್ಧ ಮಾತಾಡಿಲ್ಲ. ಆದರೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗಲೇ ಅವರ ವಿರುದ್ಧ ವಾಗ್ದಾಳಿ ನಡೆಸಿಕೊಂಡು ಬಂದರು. ವೈಯಕ್ತಿಕ ಟೀಕೆಯನ್ನೇ ಮುನ್ನೆಲೆಗೆ ತರುವ ಮೂಲಕ ಪ್ರತಿಪಕ್ಷಗಳಿಗೆ ಗ್ರಾಸ ಒದಗಿಸಿದ್ದರು. ಅದಾದ ಬಳಿಕ ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಬಿ.ವೈ. ವಿಜಯೇಂದ್ರ ಅವರನ್ನು ಕೂರಿಸಿದ ಬಳಿಕ ನಿರಂತರವಾಗಿ ವಿಜಯೇಂದ್ರ ವಿರುದ್ಧ ಮಾತಾಡಿಕೊಂಡು ಬಂದರು. ವಿಜಯೇಂದ್ರರನ್ನು ಮುಂದುವರಿಸಬೇಕೇ ಬೇಡವೇ ಎನ್ನುವ ತೀರ್ಮಾನ ಕೈಗೊಳ್ಳುವುದಕ್ಕೂ ಆಸ್ಪದ ಕೊಡದ ರೀತಿಯಲ್ಲಿ ಟೀಕಿಸುತ್ತಾ ಹೋಗಿದ್ದೇ ಯತ್ನಾಳ್‌ರಿಗೆ ಆದ ಬಹುದೊಡ್ಡ ಹಿನ್ನಡೆ. ಆದರೆ ಕಳೆದೊಂದು ತಿಂಗಳ ಹಿಂದೆ ಯತ್ನಾಳ್ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದ ಕೆಲ ನಾಯಕರು ಸಭೆ ಸೇರಿ, ಯತ್ನಾಳ್ ಅವರು 'ಬಹಿರಂಗ ಹೇಳಿಕೆ ನೀಡದಂತೆ' ತಿಳಿಹೇಳಿದ್ದರು. ಇದನ್ನು ಕೇಳಿಸಿಕೊಂಡು ಸುಮ್ಮನಿದ್ದ ಯತ್ನಾಳ್ ಕೆಲ ದಿನಗಳಿಂದ ಮತ್ತೆ ಅದೇ ಚಾಳಿಯನ್ನು ಮುಂದುವರಿಸಿದರು.

ಯತ್ನಾಳ್ ಬಣವು ವಕ್ಫ್, ಉದಯಗಿರಿ, ವಾಲ್ಮೀಕಿ ನಿಗಮದ ಅನುದಾನ ದುರ್ಬಳಕೆ ವಿಷಯದಲ್ಲಿ ರಾಜಕೀಯವಾಗಿ ಹಾಗೂ ಕಾನೂನಾತ್ಮಕವಾಗಿ ಹೋರಾಡಿತ್ತು. ಈ ನಡೆಯನ್ನು ವರಿಷ್ಠರು ಶ್ಲಾಘಿಸಿದ್ದರು. ಆದರೆ ಆ ಒಂದು ಕಾರಣಕ್ಕೆ ನಿತ್ಯ ಬೆಳಗ್ಗೆ ಪಕ್ಷದ ರಾಜ್ಯಾಧ್ಯಕ್ಷರನ್ನು ಟೀಕಿಸುತ್ತಾ ಹೋದರೆ ಯಾವ ವರಿಷ್ಠರೂ ಸುಮ್ಮನಿರುವುದಿಲ್ಲ. ಒಂದು ಹಂತದಲ್ಲಿ ಪಕ್ಷದ ವರಿಷ್ಠರಿಗೂ 'ಕಿರಿಕಿರಿ' ಶುರುವಾಯಿತು. ಇದರೊಂದಿಗೆ ವಿಜಯೇಂದ್ರ, ಯಡಿಯೂರಪ್ಪ ಅವರನ್ನು ಟೀಕಿಸುವ ಭರದಲ್ಲಿ ಬಿಜೆಪಿ ಅವಧಿಯಲ್ಲಿ 'ಭ್ರಷ್ಟಾಚಾರ' ನಡೆದಿದೆ ಎನ್ನುವ ಮೂಲಕ ಪಕ್ಷದ ವರ್ಚಸ್ಸಿಗೆ ಡ್ಯಾಮೇಜ್ ಮಾಡಿರುವುದು ವರಿಷ್ಠರ ಕೆಂಗಣ್ಣಿಗೆ ಕಾರಣವಾಯಿತು ಎಂದರೆ ತಪ್ಪಾಗುವುದಿಲ್ಲ.

ಇದೀಗ ಯತ್ನಾಳ್ ಉಚ್ಚಾಟನೆಯ ಪ್ರಹಸನ ಮುಗಿಯುತ್ತಿದ್ದಂತೆ, ರಾಜಕೀಯದಲ್ಲಿ ಹೊಸ ಚರ್ಚೆಗಳು ಶುರುವಾಗಿವೆ. ಅದೇನೆಂದರೆ, ಈಗಾಗಲೇ ಪಕ್ಷದಿಂದ ಹೊರಬಂದಿರುವ ಕುರುಬ ಸಮುದಾಯದ ಈಶ್ವರಪ್ಪ ಹಾಗೂ ಈಗ ಉಚ್ಚಾಟನೆಯಾಗಿರುವ ಪಂಚಮಸಾಲಿ ಸಮುದಾಯ ಬಸನಗೌಡ ಪಾಟೀಲ್ ಯತ್ನಾಳ್ ಇಬ್ಬರನ್ನೂ ಸೇರಿಸಿಕೊಂಡು 'ರಾಯಣ್ಣ-ಚೆನ್ನಮ್ಮ ಬ್ರಿಗೇಡ್' ಆರಂಭಿಸಿದರೆ ತಪ್ಪೇನಿದೆ? ಎನ್ನುವುದು. ರಾಜ್ಯದಲ್ಲಿರುವ ಕುರುಬ ಸಮುದಾಯದ ಮತಗಳು ಬಹುಪಾಲು ಕ್ಷೇತ್ರದಲ್ಲಿ ಕನಿಷ್ಠ 15ರಿಂದ 20 ಸಾವಿರ ಮತಗಳಂತೆ ಚದುರಿ ಹೋಗಿರುವುದರಿಂದ ಅವು 100ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ 'ನಿರ್ಣಾಯಕ' ಪಾತ್ರವಹಿಸಲಿವೆ. ಇದೇ ರೀತಿ ಉತ್ತರ ಕರ್ನಾಟಕ ಭಾಗದಲ್ಲಿ ಪಂಚಮಸಾಲಿ ಮತಗಳು ನಿರ್ಣಾಯಕವಾಗಿರುವುದರಿಂದ ಈ ಇಬ್ಬರೂ ಒಂದಾದರೆ, ಬಿಜೆಪಿಗೆ ಬಹುದೊಡ್ಡ ಹೊಡೆತ ಕೊಡಬಹುದು ಎನ್ನುವುದು ಕೆಲವರ ಲೆಕ್ಕಾಚಾರವಾಗಿದೆ. ಆದರೆ ಈ ಹಿಂದೆ ಯಡಿಯೂರಪ್ಪ ಅವರಂಥ ನಾಯಕರೇ ಪಕ್ಷ ಬಿಟ್ಟು ಹೋದಾಗ ಅವರೊಂದಿಗೆ 10 ನಾಯಕರೂ ಹೋಗಲಿಲ್ಲ. ಹೀಗಿರುವಾಗ ಯತ್ನಾಳ್ ಬಿಜೆಪಿಯಿಂದ ದೂರಾದ ಮಾತ್ರಕ್ಕೆ ಇಡೀ ಸಮುದಾಯ ದೂರಾಗುವುದೇ ಎನ್ನುವ ತರ್ಕವೂ ಚಾಲ್ತಿಯಲ್ಲಿದೆ. ಆದರೆ ಯಡಿಯೂರಪ್ಪ ಅವರ ಹಿಡಿತದಲ್ಲಿರುವ ರಾಜ್ಯ ಬಿಜೆಪಿಯಲ್ಲಿ ಸೂಕ್ತ ಸ್ಥಾನಮಾನ ಪಡೆಯಲಾಗದೆ 'ಉಚ್ಚಾಟನೆ'ಗೊಂಡಿರುವ ಯತ್ನಾಳ್-ಈಶ್ವರಪ್ಪ ಅವರಿಗೆ 'ಗೆಲ್ಲುವ' ಶಕ್ತಿ ಇಲ್ಲದಿದ್ದರೂ, ಬಿಜೆಪಿಯ ಅಭ್ಯರ್ಥಿಗಳನ್ನು ಸೋಲಿಸುವಷ್ಟು ಶಕ್ತಿ ಸೃಷ್ಟಿಯಾಗಬಹುದು. ಈ ಮೂಲಕ ಇಬ್ಬರ ಜಗಳದಲ್ಲಿ ಲಾಭಪಡೆಯುವ ಮೂರನೇ ವ್ಯಕ್ತಿ ಯಾರು ಎನ್ನುವುದೇ ಈಗಿರುವ ಯಕ್ಷ ಪ್ರಶ್ನೆ.

ಈ ಎಲ್ಲ ರಾಜಕೀಯ ಲೆಕ್ಕಾಚಾರಗಳ ನಡುವೆಯೂ, 'ಬಸನಗೌಡ ಪಾಟೀಲ್ ಯತ್ನಾಳ್ ಅವರ ಉಚ್ಚಾಟನೆಯಿಂದ ಪಕ್ಷಕ್ಕೆ ಬಹುದೊಡ್ಡ ಡ್ಯಾಮೇಜ್' ಎನ್ನುವ ಮಾತುಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅನೇಕರು ಹೇಳಿಕೊಳ್ಳುತ್ತಿದ್ದಾರೆ. ಹಿಂದುತ್ವದ ಮತಗಳೆಲ್ಲ ಒಡೆದುಹೋಗುತ್ತವೆ ಎನ್ನುವ ರೀತಿಯಲ್ಲಿ ಅನೇಕರು ಮಾತನಾಡುತ್ತಿದ್ದಾರೆ. ಆದರೆ ಇದು ಸಾಧ್ಯವೇ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ 'ಸಾಧ್ಯವಿಲ್ಲ' ಎನ್ನುವುದು ಸ್ಪಷ್ಟವಾಗುತ್ತದೆ. ಯತ್ನಾಳ್ ಮಾತ್ರವಲ್ಲದೆ, ಯಾರೇ ಆದರೂ ಸಂಬಂಧಿಸಿದ ಪಕ್ಷದಲ್ಲಿರುವ ತನಕ ಒಂದು 'ಬ್ರ್ಯಾಂಡ್' ಹೊಂದಿರುತ್ತಾರೆ. ಆದರೆ ಒಂದು ಹಂತದಲ್ಲಿ ಆ ಬ್ರ್ಯಾಂಡ್‌ನಿಂದ ಹೊರಬಂದ ಬಳಿಕ ಅದೇ 'ಮೌಲ್ಯ' ಇರುತ್ತದೆ ಎನ್ನಲಾಗುವುದಿಲ್ಲ. ಉದಾಹರಣೆಗೆ, ಕರ್ನಾಟಕದಲ್ಲಿ ಬಿಜೆಪಿಯ ಬಾವುಟ ಕಟ್ಟಲು ಜನರಿಲ್ಲದ ಸಮಯದಲ್ಲಿ, ಬಿಜೆಪಿಯನ್ನು ಕಟ್ಟಿ ಬೆಳೆಸಿದ, ಇಂದಿಗೂ ರಾಜ್ಯ ಬಿಜೆಪಿಯ ಮೇಲೆ ಹಿಡಿತ ಹೊಂದಿರುವ ಬಿ.ಎಸ್.ಯಡಿಯೂರಪ್ಪ ಅವರು ಬಿಜೆಪಿಯೊಂದಿಗೆ ಮುನಿಸಿಕೊಂಡು ಪ್ರತ್ಯೇಕ ಪಕ್ಷ ಕಟ್ಟುವುದಾಗಿ ಹೋದರು. ಬಿಜೆಪಿಗೆ ಸಮನಾಗಿ ಕೆಜೆಪಿ ಎನ್ನುವ ಪಕ್ಷವನ್ನು ಕಟ್ಟಿದರು. ಆದರೆ ಬಿಜೆಪಿಯಿಂದ ಅಂದು ಕೆಜೆಪಿಗೆ ಹೋದ ಪ್ರಮುಖ ನಾಯಕರ ಸಂಖ್ಯೆ 10 ದಾಟುವುದಿಲ್ಲ. ಯಡಿಯೂರಪ್ಪ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಮುರುಗೇಶ್ ನಿರಾಣಿ, ಪ್ರಭಾಕರ್ ಕೋರೆ, ವಿ.ಸೋಮಣ್ಣ, ಉಮೇಶ್ ಕತ್ತಿ ಸೇರಿದಂತೆ ಆಪ್ತ ವಲಯದಲ್ಲಿದ್ದ ಬಹುತೇಕರು ಬಿಜೆಪಿಯಿಂದ ಕಾಲು ಹೊರಗಿಡಲಿಲ್ಲ. ಇನ್ನು ಕೆಲವರು 'ನೈತಿಕ' ಬೆಂಬಲ ನೀಡುವುದಾಗಿ ಘೋಷಿಸಿ ಬಿಜೆಪಿ ಹಾಗೂ ಯಡಿಯೂರಪ್ಪ ಇಬ್ಬರೊಂದಿಗೂ ಸಮಾನ ಅಂತರ ಹಾಗೂ ಆಪ್ತತೆಯನ್ನು ಕಾಯ್ದುಕೊಂಡರು. 2013ರ ವಿಧಾನಸಭಾ ಚುನಾವಣೆಯಲ್ಲಿ ಕೆಜೆಪಿ ಸ್ಪರ್ಧಿಸಿದರೂ, ಗೆದ್ದಿದ್ದು ಮಾತ್ರ ಏಳು ಕ್ಷೇತ್ರದಲ್ಲಿ. ಬಿಜೆಪಿಯನ್ನು ಕೆಡವಿ, ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ಬರುವುದಕ್ಕೆ ಕೆಜೆಪಿ ಸಹಾಯ ಮಾಡಿತ್ತೇ ಹೊರತು, ಯಡಿಯೂರಪ್ಪ ಅವರು ಅಂದುಕೊಂಡಷ್ಟು ಯಶಸ್ಸನ್ನು ಕಾಣಲಿಲ್ಲ. ಇನ್ನು ಕಳೆದ ಲೋಕಸಭಾ ಚುನಾವಣೆ ವೇಳೆ ಪುತ್ರನಿಗೆ ಟಿಕೆಟ್ ನೀಡಲಿಲ್ಲವೆಂದು ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕೆ.ಎಸ್.ಈಶ್ವರಪ್ಪ ಅವರಿಗೆ ಠೇವಣಿ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಯಿತು. ಬಿಜೆಪಿಯಲ್ಲಿದ್ದಾಗ 'ಮಾಸ್' ಲೀಡರ್ ಎನಿಸಿಕೊಂಡವರು ಪ್ರತ್ಯೇಕ ಪಕ್ಷ ಅಥವಾ ಬಂಡಾಯವೆಂದು ಹೋದಾಗ ಈ ರೀತಿಯಾಗಿರುವುದನ್ನು ನೋಡಿದ್ದೇವೆ.

ಈ ರೀತಿ ಪಕ್ಷವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಯಡಿಯೂರಪ್ಪ, ಈಶ್ವರಪ್ಪ ಅವರು ಪಕ್ಷದಿಂದ ಹೊರನಡೆದಾಗಲೇ, ಅವರೊಂದಿಗೆ ಬಹುತೇಕರು ಹೋಗಲಿಲ್ಲ. ಇನ್ನು ಇದೀಗ ಯತ್ನಾಳ್ ಅವರು ಈ ರೀತಿಯ ದುಸ್ಸಾಹಸಕ್ಕೆ ಕೈಹಾಕಿದರೆ ಅವರ ಕೈಯನ್ನು ಎಷ್ಟು ಮಂದಿ ಬಲಪಡಿಸುತ್ತಾರೆ ಎನ್ನುವುದು ಈಗಿರುವ ಕುತೂಹಲ. ಇದಿಷ್ಟೇ ಅಲ್ಲದೇ, ಇಷ್ಟು ದಿನ ಯತ್ನಾಳ್ ಅವರ ಜತೆಗಿದ್ದ 'ಬಿಜೆಪಿ' ಎನ್ನುವ ಬ್ರ್ಯಾಂಡ್ ಸಹ ಈಗಿರುವುದಿಲ್ಲ. ಹೀಗಿರುವಾಗ ಅವರೀಗ ವಿಜಯೇಂದ್ರ ಅಥವಾ ಯಡಿಯೂರಪ್ಪ ವಿರುದ್ಧ ಮತ್ತದೇ ವಾಗ್ದಾಳಿ ನಡೆಸಿದರೆ ಕೇಳಿಸಿಕೊಳ್ಳುವ 'ಕಿವಿ'ಗಳ ಸಂಖ್ಯೆಯೂ ಕುಗ್ಗಲಿದೆ ಎನ್ನುವುದು ವಾಸ್ತವ. ಈ ಕಾರಣಕ್ಕಾಗಿಯೇ ಯತ್ನಾಳ್ ಅವರ ಉಚ್ಚಾಟನೆಯನ್ನು ಮರುಪರಿಶೀಲಿಸುವಂತೆ ಅವರ ಆಪ್ತ ಹಾಗೂ ಅವರ ಬಣದೊಂದಿಗೆ ಗುರುತಿಸಿಕೊಂಡಿದ್ದ ಎಲ್ಲ ನಾಯಕರು ಮಾಡುತ್ತಿದ್ದಾರೆ.

ಆದರೆ, ಯತ್ನಾಳ್ ಉಚ್ಚಾಟನೆ ಕೇವಲ ಯತ್ನಾಳ್ ಬಣಕ್ಕೆ ಪಕ್ಷದ ವರಿಷ್ಠರು ನೀಡಿರುವ 'ಎಚ್ಚರಿಕೆ'ಯ ಸಂದೇಶವೆಂದು ವಿಜಯೇಂದ್ರ ವಿಶ್ಲೇಷಿಸಿದರೆ ಅಪಾಯ ಕಟ್ಟಿಟ್ಟಬುತ್ತಿ. ಶಿಸ್ತಿನ ಪಕ್ಷ ಎನಿಸಿರುವ ಬಿಜೆಪಿಯಲ್ಲಿ ಯತ್ನಾಳ್ ರೀತಿ ನಿತ್ಯ ವಾಗ್ದಾಳಿ ನಡೆಸುವುದಕ್ಕೆ ಅವಕಾಶವಿಲ್ಲ. ಯತ್ನಾಳ್ ವಿರುದ್ಧ ಕೈಗೊಂಡಿರುವ ನಿರ್ಣಯ ತಡವಾಗಿದೆ. ಆದರೆ ಈ ರೀತಿ ಮುಂದೆ ಯಾರೇ ಪಕ್ಷದ ಆಂತರಿಕ ವಿಷಯಗಳನ್ನು ಬಹಿರಂಗವಾಗಿ ಚರ್ಚಿಸಿದರೆ, ಇದೇ ರೀತಿಯ ಕಠಿಣ ಕ್ರಮ ಜರುಗಿಸುವ ಎಚ್ಚರಿಕೆಯನ್ನು ರವಾನಿಸಿದ್ದಾರೆ.

'ಮಾತು ಮನೆ ಕೆಡಿಸಿತು' ಎನ್ನುವ ಗಾದೆಮಾತಿಗೆ ಬಸನಗೌಡ ಪಾಟೀಲ್ ಯತ್ನಾಳ್ ಉತ್ತಮ ಉದಾಹರಣೆಯಾಗಿ ನಿಲ್ಲುತ್ತಾರೆ. ಹಾಗೆ ನೋಡಿದರೆ, ಕರ್ನಾಟಕ ಬಿಜೆಪಿಯಲ್ಲಿ ಮುಂಚೂಣಿ ನಾಯಕರಾಗಬೇಕಿದ್ದ ಯತ್ನಾಳ್‌ಗೆ ಸಣ್ಣ ವಯಸ್ಸಿಗೆ ಪಕ್ಷದಲ್ಲಿ ಏನೆಲ್ಲ ಸಿಗಬೇಕಿತ್ತೋ ಅದೆಲ್ಲ ಸಿಕ್ಕಿತ್ತು. ಅಟಲ್ ಬಿಹಾರಿ ವಾಜಪೇಯಿ ಅವರ ಕಾಲದಲ್ಲಿಯೇ ಕೇಂದ್ರದ ರೈಲ್ವೇ ರಾಜ್ಯ ಸಚಿವರಾಗಿ, ಸಂಸದರಾಗಿ ಕಾರ್ಯನಿರ್ವಹಿಸಿದ್ದ ಯತ್ನಾಳ್‌ಗೆ ಜಾತಿ ಬಲ, ಸಂಘ-ಪರಿವಾರದ ಬಲವಷ್ಟೇ ಅಲ್ಲದೇ ಕೇಂದ್ರದ ಹಲವು ಬಿಜೆಪಿ ನಾಯಕರ ಬಲವೂ ಇತ್ತು. ಆದರೆ ಈ ಎಲ್ಲವನ್ನೂ 'ಏಣಿ'ಯ ರೀತಿ ಬಳಸಿಕೊಳ್ಳದೇ ರಾಜಕೀಯ ವಿರೋಧಿಗಳ ವಿರುದ್ಧ ಹೋರಾಡಲು ಬಳಸಿಕೊಂಡಿದ್ದರಿಂದಲೇ ಉಚ್ಚಾಟನೆಯ ಶಿಕ್ಷೆಯನ್ನು 3 ಬಾರಿ ಅನುಭವಿಸಬೇಕಾಗಿದೆ. ಬಿಜೆಪಿ ಪಕ್ಷಕ್ಕೆ ಬೇಕಿರುವ ಎಲ್ಲ ವ್ಯಕ್ತಿತ್ವವನ್ನು ಹೊಂದಿದ್ದ ಯತ್ನಾಳ್‌ಗೆ ಅವರ ಮಾತೇ ಮುಳ್ಳಾಯಿತು. ಮಾತನಾಡುವ ಜಾಗದಲ್ಲಿ ಮಾತನಾಡದೇ, ಅವಕಾಶ ಸಿಕ್ಕಾಗಲೆಲ್ಲ ಪಕ್ಷದ ನಾಯಕತ್ವದ ವಿರುದ್ಧ ಮಾತಾಡುವುದು, ಯಡಿಯೂರಪ್ಪ ಕುಟುಂಬದ ವಿಷಯವಲ್ಲದೇ ಬೇರಾವ ವಿಷಯವೂ ಗೊತ್ತಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಇಳಿದಿದ್ದು, ರಾಜ್ಯದ ಯಾವುದೇ ಸಮಸ್ಯೆ ಬಗ್ಗೆ ಮಾತನಾಡಲು ಮುಂದಾದರೂ ಕೊನೆಗೆ ಅದನ್ನು ಯಡಿಯೂರಪ್ಪ ಕುಟುಂಬದ ಜತೆಗೆ 'ಲಿಂಕ್' ಮಾಡುತ್ತಾ ಬಂದಿದ್ದೇ ಅವರು ಮಾಡಿಕೊಂಡ ಎಡವಟ್ಟು. ಹೀಗಾಗಿ, 'ಉಚ್ಚಾಟನೆ' ಎನ್ನುವ ಬ್ರಹ್ಮಾಸ್ತ್ರವನ್ನು ವರಿಷ್ಠರಿಂದ ಮೂರನೇ ಬಾರಿಗೆ ಪ್ರಯೋಗ ಮಾಡಿಸಿಕೊಂಡಿದ್ದಾರೆ ಯತ್ನಾಳ್.

ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಆರು ವರ್ಷ ಉಚ್ಚಾಟನೆ ಮಾಡಿರುವ ವರಿಷ್ಠರ ತೀರ್ಮಾನವನ್ನು ಪುನರ್‌ಪರಿಶೀಲಿಸಬೇಕು ಎಂದು ಒಂದು ಬಣ ಈಗಾಗಲೇ ವರಿಷ್ಠರ ಮೇಲೆ ಒತ್ತಡ ಹೇರುತ್ತಿದೆ. ಈ ಶಿಕ್ಷೆಯನ್ನು ಮರುಪರಿಶೀಲಿಸದಿದ್ದರೆ ಶಾಸಕ ಸ್ಥಾನಕ್ಕೆ ಅವರಿಗೆ ಯಾವುದೇ ಸಮಸ್ಯೆಯಾಗದಿದ್ದರೂ, ಬಿಜೆಪಿಯೊಂದಿಗಿನ ಒಡನಾಟಕ್ಕೆ ಬಹುತೇಕ 'ಫುಲ್‌ಸ್ಟಾಪ್' ಇಡಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಯತ್ನಾಳ್ ಅವರ ಮುಂದಿನ ನಡೆ ಯಾವ ರೀತಿಯಿರುತ್ತದೆ ಎನ್ನುವುದು ಅವರಿಗೆ ಬಿಟ್ಟಿದ್ದು. ಯತ್ನಾಳ್ ಉಚ್ಚಾಟನೆಯ ತೀರ್ಮಾನದಿಂದ 'ಕಟ್ಟರ್ ಹಿಂದೂ' ಮತಗಳು ಹಾಗೂ ಪಂಚಮಸಾಲಿ ಸಮುದಾಯದ ಮತಗಳು ಆಚೀಚೆ ಹೋಗುವುದೇ ಎನ್ನುವುದಕ್ಕೆ ಮುಂದೆ ಎದುರಾಗಲಿರುವ ಸ್ಥಳೀಯ ಸಂಸ್ಥೆ ಚುನಾವಣೆಗಳೇ ಉತ್ತರಿಸಬೇಕಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಎಚ್ಚರಿಕೆಯ ಪಾಠ

ಕಳೆದ ಶುಕ್ರವಾರ ಮ್ಯಾನ್ಮಾರ್ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು, 1700ಕ್ಕೂ ಹೆಚ್ಚು ಮಂದಿ ಅಸುನೀಗಿ ಲಕ್ಷಾಂತರ ಜನ ಗಾಯಗೊಂಡಿದ್ದಾರೆ. ಸಂತ್ರಸ್ತ ಪ್ರದೇಶವಿಡೀ ಸ್ಮಶಾನವಾಗಿದೆ, ಅನೇಕರ ಬದುಕು ನಾಶವಾಗಿದೆ. ಆ ದೃಶ್ಯಗಳು ನೋಡಿದವರ ಮನವನ್ನು ಕಲಕುತ್ತವೆ. ಭಾರತ ಸೇರಿದಂತೆ ಅನೇಕ ದೇಶಗಳು ಎಂದಿನಂತೆ ಸಹಾಯಹಸ್ತ ಚಾಚಿವೆ.

ಇದು ಬೆಂಗಳೂರು ಸೇರಿದಂತೆ ದೇಶದ ಹಲವು ಮಹಾನಗರಗಳಿಗೆ ಪಾಠವಾಗಬೇಕಿದೆ. ನಿಸರ್ಗದ ವಿರುದ್ಧವಾಗಿ ಕೆರೆಗಳನ್ನು ಮುಚ್ಚುವ, ಮರಗಳನ್ನು ಕಡಿಯುವ, ಬಾನೆತ್ತರದ ಕಟ್ಟಡಗಳನ್ನು ನಿರ್ಮಿಸುವ ಪರಿಪಾಠದ ಪರಿಣಾಮ ಇದಾಗಿರಬಹುದು. 4 ದಶಕಗಳ ಹಿಂದೆ ಬೆಂಗಳೂರಿನಲ್ಲಿದ್ದುದು ಎರಡೇ ಅತಿ ಎತ್ತರದ ಕಟ್ಟಡಗಳು- ಅವೆಂದರೆ, ಎಂ.ಜಿ.ರಸ್ತೆಯ 'ಯುಟಿಲಿಟಿ ಬಿಲ್ಡಿಂಗ್' ಮತ್ತು ಅಂಬೇಡ್ಕರ್ ರಸ್ತೆಯ ವಿಶ್ವೇಶ್ವರಯ್ಯ ಟವರ್! ಇವನ್ನು ನೋಡಲೆಂದೇ ಜನ ಹೋಗುತ್ತಿದ್ದುದುಂಟು. ಅಂದಿಗೆ ಅವು ಮನಸೆಳೆಯುವಂತೆ ಇದ್ದಿದ್ದು ನಿಜ. ಈಗ ಇವನ್ನೂ ಮೀರಿಸುವಂಥ ಸಾಕಷ್ಟು ಗಗನಚುಂಬಿ ಕಟ್ಟಡಗಳು ಬೆಂಗಳೂರಿನಲ್ಲಿ ತಲೆಯೆತ್ತಿವೆ. ಇಂಥವುಗಳ ಅಗತ್ಯವಿದೆಯೇ ಎಂದು ಆಡಳಿತಗಾರರು ಮುನ್ನೆಚ್ಚರಿಕೆ ಮತ್ತು ದೂರದೃಷ್ಟಿಯೊಂದಿಗೆ ಪರಿಶೀಲಿಸಬೇಕು.

ಮಾನ್ಯ ಸಿಪಿಕೆ ಅವರ, 'ಆಚಂದ್ರ ತಾರಾರ್ಕ ಎಂಬ ಪದಕ್ಕೆ ಅರ್ಥವುಂಟೆ? ಇಡೀ ಭುವಿಗೇ ಬಾರಿಸುತ್ತಿರುವಾಗ ಮರಣಗಂಟೆ!' ಎಂಬ ಹನಿಗವನ ಇಲ್ಲಿ ನೆನಪಾಗುತ್ತದೆ. ನಿಂತ ನೆಲವೇ ಕುಸಿದುಹೋದಾಗ ಕೋಟಿ ಕೋಟಿ ಹಣ, ಅಷ್ಟೈಶ್ವರ್ಯ ಇದ್ದರೂ ಪ್ರಯೋಜನವೇನು? ಹಣವೇ ಎಲ್ಲವೂ ಅಲ್ಲ ಎಂಬುದನ್ನು ಜನಪ್ರತಿನಿಧಿಗಳೂ, ಉದ್ಯಮಿಗಳೂ ಮತ್ತು ಸಾಮಾನ್ಯ ಜನರೂ ಅರ್ಥಮಾಡಿಕೊಳ್ಳಬೇಕು. ಬೆಂಗಳೂರು ಮಹಾನಗರಿ ಸೇರಿದಂತೆ ಯಾವ ಪ್ರದೇಶವೂ ನಿಸರ್ಗದ ಕೋಪಕ್ಕೆ ತುತ್ತಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

- ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸಮರ್ಥನೆ ಸರಿ, ಆದರೆ...

ರಾಜ್ಯದಲ್ಲಿ ಮುದ್ರಾಂಕ ಮತ್ತು ನೋಂದಣಿ ಶುಲ್ಕ, ಬಸ್ ಪ್ರಯಾಣದರ, ಮದ್ಯ, ವಿದ್ಯುಚ್ಛಕ್ತಿ, ಹಾಲು ಮುಂತಾದವುಗಳ ಸರಣಿ ಬೆಲೆಯೇರಿಕೆಯಿಂದ ಜನಸಾಮಾನ್ಯರು ಹೈರಾಣಾಗಿದ್ದಾರೆ. ಹೊರೆ ಹೆಚ್ಚಾದ ಕಾರಣಕ್ಕೆ ಜೀವನ ನಡೆಸಲಾಗದೆ ಜನರು ಸರಕಾರಕ್ಕೆ ದಿನನಿತ್ಯವೂ ಹಿಡಿಶಾಪ ಹಾಕುತ್ತಿದ್ದಾರೆ. ಇಂಥ ಪ್ರತಿಯೊಂದು ಬೆಲೆಯೇರಿಕೆಯ ಸಂದರ್ಭದಲ್ಲೂ ರಾಜ್ಯ ಸರಕಾರವು ಇತರ ರಾಜ್ಯಗಳಿಗೆ ಹೋಲಿಕೆ ಮಾಡಿ 'ನಮ್ಮಲ್ಲೇ ದರ ಕಡಿಮೆ' ಎನ್ನುವ ಮೂಲಕ ಜಿದ್ದಿಗಿಳಿದಂತೆ ಸಮರ್ಥನೆ ಮಾಡಿಕೊಳ್ಳುತ್ತದೆ. ಆದರೆ ಎಲ್ಲಾ ವಿಷಯಗಳಿಗೂ ಹೋಲಿಕೆ ಮಾಡಿ ಸಮರ್ಥಿಸಿಕೊಳ್ಳುವುದು ಸಮಂಜಸವಲ್ಲ. ಹೊಸ ವಾಹನಗಳ ನೋಂದಣಿ ಶುಲ್ಕ ಬೇರೆ ರಾಜ್ಯಗಳಲ್ಲಿ ತುಂಬಾ ಕಡಿಮೆಯಿದೆ, ನಮ್ಮಲ್ಲಿಯೂ ಕಡಿಮೆ ಮಾಡಬಹುದಲ್ಲವೇ? ಅನ್ಯ ರಾಜ್ಯಗಳಿಗಿಂತ ನಮ್ಮಲ್ಲಿ ಮೆಟ್ರೋ ಪ್ರಯಾಣದರ ಜಾಸ್ತಿ, ಅದನ್ನು ತಗ್ಗಿಸಬಹುದಲ್ಲವೇ? ಹೇಳುತ್ತಾ ಹೋದರೆ ಇಂಥ ಸಾಕಷ್ಟು ಉದಾಹರಣೆಗಳನ್ನು ನೀಡಬಹುದು.

- ಮುರುಗೇಶ ಡಿ., ದಾವಣಗೆರೆ

ಹಳೇ ಗಂಡನ ಪಾದ!

ಪ್ರಜಾಪ್ರಭುತ್ವ ಬೇಡ, ಅರಸೊತ್ತಿಗೆ ಬೇಕು; ಜಾತ್ಯತೀತ ರಾಷ್ಟ್ರ ಬೇಡ, ಹಿಂದೂ ರಾಷ್ಟ್ರ ಬೇಕು' ಎಂಬ ಆಗ್ರಹದೊಂದಿಗಿನ ಹೋರಾಟ ನೇಪಾಳದಲ್ಲಿ ತೀವ್ರವಾಗಿದೆ. 16 ವರ್ಷಗಳಲ್ಲಿ 14 ಪ್ರಜಾಸತ್ತಾತ್ಮಕ ಸರಕಾರಗಳನ್ನು (?) ನೋಡಿ ರೋಸಿಹೋದ ಜನರು, ಮರಳಿ ಬಂದು ಅಧಿಕಾರದ ಸೂತ್ರ ಹಿಡಿದು ದೇಶವನ್ನು ಮುನ್ನಡೆಸುವಂತೆ ಅರಸರನ್ನು ಕರೆಯುತ್ತಿದ್ದಾರೆ. ಇದು ಒಂಥರದಲ್ಲಿ 'ಹಳೇ ಗಂಡನ ಪಾದವೇ ಗತಿ' ಎನ್ನುವಂತಿದೆ. ಭಾರತದಲ್ಲೂ ಕೆಲವು ರಾಜ್ಯಗಳಲ್ಲಿನ ರಾಜಕೀಯ ಅಸ್ಥಿರತೆ ಮತ್ತು ಆಡಳಿತದ ವೈಖರಿಯನ್ನು ನೋಡಿದರೆ, ಮುಂಬರುವ ದಿನಗಳಲ್ಲಿ ನಮ್ಮಲ್ಲೂ ಇಂಥ ದನಿ ಕೇಳಿಬರಬಹುದೇ ಎಂಬ ಆತಂಕ ಮೂಡುತ್ತದೆ.

- ರಮಾನಂದ ಎಸ್., ಬೆಂಗಳೂರು

ಕೋವಿಡ್‌ನಲ್ಲಿ ಭಾರತಕ್ಕೆ ಗೋಚರಿಸಿದ ಬೆಳ್ಳಿರೇಖೆ

ವಿಶ್ಲೇಷಣೆ

ಶಶಿ ತರೂರ್

vveditoped@gmail.com

ಜಗತ್ತಿಗೆ ಕೋವಿಡ್ ಅಪ್ಪಳಿಸಿ ಐದು ವರ್ಷ ತುಂಬಿತು. 2020ರ ಮಾರ್ಚ್ 24ರಂದು ಭಾರತ ಸರಕಾರ ಕಠಿಣಾತಿಕಠಿಣ ಲಾಕ್‌ಡೌನ್ ಜಾರಿಗೊಳಿಸಿತ್ತು. ದೇಶದಲ್ಲಿ ಯಾರೂ ಇಂದು ಕೋವಿಡ್ ಲಾಕ್‌ಡೌನ್‌ನ ಐದನೇ ವರ್ಷದ ಸಂಭ್ರಮಾಚರಣೆ ಮಾಡುತ್ತಿಲ್ಲ. ಮಹಾಮಾರಿಯ ಹೊಡೆತದಲ್ಲಿ ಬದುಕುಳಿದ ನಾವೆಲ್ಲ ಅದನ್ನೊಂದು ಕೆಟ್ಟ ಕನಸಿನಂತೆ ಮರೆಯಲು ಪ್ರಯತ್ನಿಸುತ್ತಿದ್ದೇವೆ. ದುಃಖ, ದುರಂತ, ನಷ್ಟಗಳ ಕರಾಳ ದಿನಗಳು ಅವು. ಆದರೆ ಅದೇ ಮಹಾಮಾರಿಯು ನಮ್ಮ ದೇಶದ ಇತಿಹಾಸದಲ್ಲಿ ದಾಖಲಾದ ಯಶಸ್ವಿ ಹೋರಾಟಗಳಲ್ಲಿ ಒಂದು ಎಂಬುದು ಕೂಡ ಗಮನಾರ್ಹ. ನಮ್ಮ ತಾಕತ್ತನ್ನು ಕೋವಿಡ್ ನಮಗೆ ಮನವರಿಕೆ ಮಾಡಿಕೊಟ್ಟಿತು.

ಕೋವಿಡ್ ವೇಳೆ ಭಾರತ ಸರಕಾರ ಪ್ರದರ್ಶಿಸಿದ 'ಲಸಿಕೆಯ ರಾಜತಾಂತ್ರಿಕತೆ' ಜಾಗತಿಕ ರಾಜತಾಂತ್ರಿಕ ಇತಿಹಾಸದಲ್ಲಿ ದಾಖಲಾದ ಮಹತ್ವದ ಅಧ್ಯಾಯಗಳಲ್ಲಿ ಒಂದು. ಎಲ್ಲೆಡೆ ಹರಡಿದ್ದ ಭೀತಿ ಹಾಗೂ ಭಯಾನಕ ಸನ್ನಿವೇಶದ ನಡುವೆ ಭಾರತವು ತನ್ನ ಅಂತರ್ಯದಲ್ಲಿ ಆಳವಾಗಿ ಬೇರುಬಿಟ್ಟಿದ್ದ ಅಂತಾರಾಷ್ಟ್ರೀಯ ನಾಯಕತ್ವದ ಗುಣಗಳನ್ನು ಹಾಗೂ ಏಕತೆಯನ್ನು ಯಶಸ್ವಿಯಾಗಿ ಪ್ರದರ್ಶಿಸಿತು. 100ಕ್ಕೂ ಹೆಚ್ಚು ದೇಶಗಳಿಗೆ 'ಮೇಡ್ ಇನ್ ಇಂಡಿಯಾ' ಲಸಿಕೆಗಳನ್ನು ನೀಡುವ ಮೂಲಕ ಭಾರತ ತನ್ನ ಸಾಮರ್ಥ್ಯವನ್ನೂ, ಹಾಗೆಯೇ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ತನ್ನ ಔದಾರ್ಯವನ್ನೂ ಜಗತ್ತಿಗೆ ಮನವರಿಕೆ ಮಾಡಿಕೊಟ್ಟಿತು. ಯಾರಿಗೆ ಸಹಾಯಹಸ್ತದ ಅಗತ್ಯ ಅತ್ಯಂತ ಹೆಚ್ಚಿದೆಯೋ ಅವರಿಗೆ ಸಮಯಕ್ಕೆ ಸರಿಯಾಗಿ ಸಹಾಯಹಸ್ತ ಚಾಚುವುದು ಬಹುದೊಡ್ಡ ಮಾನವೀಯ ಗುಣಗಳಲ್ಲಿ ಒಂದು.

ಕೋವಿಡ್‌ಗಿಂತಲೂ ಮೊದಲೇ ಭಾರತವು ಜಗತ್ತಿನ ಲಸಿಕೆ ತಯಾರಿಕಾ ಹಬ್ ಆಗಿತ್ತು. ಅದರ ಲಾಭ ಪಡೆದ ಭಾರತ ಸರಕಾರ 2021ರ ಜನವರಿಯಲ್ಲಿ 'ಲಸಿಕಾ ರಾಜತಾಂತ್ರಿಕತೆ' (ವ್ಯಾಕ್ಸಿನ್ ಡಿಪ್ಲೊಮೆಸಿ) ಆರಂಭಿಸಿತು. ಲಸಿಕೆಗಾಗಿ ಕಾಯುತ್ತಿದ್ದ ದೇಶಗಳಿಗೆ, ಅದರಲ್ಲೂ ಸ್ವಂತ ಲಸಿಕೆ ತಯಾರಿಸುವ ಸಾಮರ್ಥ್ಯವಿಲ್ಲದ ಅಭಿವೃದ್ಧಿಶೀಲ ಅಥವಾ ಬಡ ದೇಶಗಳಿಗೆ ಕೋವಿಡ್ ಲಸಿಕೆಯನ್ನು ನೀಡುವುದು ಆ ಕಾರ್ಯಕ್ರಮದ ಉದ್ದೇಶವಾಗಿತ್ತು. ಅದರಂತೆ ಭಾರತ ಸರಕಾರ ಲಸಿಕೆಗಳ ರಫ್ತು ಆರಂಭಿಸಿತು. ಕೆಲ ದೇಶಗಳಿಗೆ ಉಚಿತವಾಗಿ ಲಸಿಕೆ ನೀಡಿತು. ಇನ್ನು ಕೆಲ ದೇಶಗಳಿಗೆ ಹಣಕ್ಕೆ ಮಾರಾಟ ಮಾಡಿತು. ಭಾರತದಲ್ಲೇ ಲಸಿಕೆಗಳಿಗೆ ಭಾರಿ ಬೇಡಿಕೆಯಿದ್ದ ಸಮಯದಲ್ಲಿ ಮೇಡ್ ಇನ್ ಇಂಡಿಯಾ ಕೋವಿಡ್ ಲಸಿಕೆಗಳು ಪಶ್ಚಿಮ ಏಷ್ಯಾ, ಆಫ್ರಿಕಾ, ದಕ್ಷಿಣ ಅಮೆರಿಕ ಮತ್ತು ನಮ್ಮ ನೆರೆರಾಷ್ಟ್ರಗಳಿಗೆ ತಲುಪಿದವು.

ಭಾರತದಲ್ಲಿ ಪ್ರಮುಖವಾಗಿ ಎರಡು ಕೋವಿಡ್ ಲಸಿಕೆಗಳು ತಯಾರಾಗುತ್ತಿದ್ದವು. ಒಂದು ಕೋವಿಶೀಲ್ಡ್ (ಆಸ್ಟ್ರಾಜೆನೆಕಾ ಕಂಪನಿ ಕಂಡುಹಿಡಿದ ಮತ್ತು ಭಾರತದ ಸೀರಂ ಸಂಸ್ಥೆ ಉತ್ಪಾದಿಸುತ್ತಿದ್ದ ಲಸಿಕೆ) ಮತ್ತು ಇನ್ನೊಂದು ಕೋವ್ಯಾಕ್ಸಿನ್ (ಭಾರತ್ ಬಯೋಟೆಕ್‌ನ ಲಸಿಕೆ). ಈ ಎರಡು ಲಸಿಕೆಗಳನ್ನು ಭಾರತ ಸರಕಾರ 100ಕ್ಕೂ ಹೆಚ್ಚು ದೇಶಗಳಿಗೆ ಕಳುಹಿಸಿಕೊಟ್ಟಿತು. ಭೂತಾನ್, ಮಾಲ್ಡೀವ್ಸ್, ನೇಪಾಳ, ಬಾಂಗ್ಲಾದೇಶ, ಮ್ಯಾನ್ಮಾರ್, ಆಫ್ರಿಕನ್ ದೇಶಗಳಂಥ ಬಡ ಹಾಗೂ ಮಧ್ಯಮ ಆದಾಯದ ದುರ್ಬಲ ದೇಶಗಳು ಭಾರತದಿಂದ ಲಸಿಕೆ ಸ್ವೀಕರಿಸಿ ಕೋವಿಡ್ ವಿರುದ್ಧದ ಹೋರಾಟಕ್ಕೆ ಧೈರ್ಯ ತಂದುಕೊಂಡವು. 'ವಸುಧೈವ ಕುಟುಂಬಕಂ'- ಜಗತ್ತೇ ಒಂದು ಕುಟುಂಬ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದ ಭಾರತವು ಕೋವಿಡ್ ಮಹಾಮಾರಿಯ ಸಮಯದಲ್ಲಿ ಅದನ್ನು ಜಗತ್ತಿನ ಒಳಿತಿಗಾಗಿ ಇನ್ನೊಮ್ಮೆ ಪ್ರಾಕ್ಟಿಕಲ್ ಆಗಿ ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅದೇ ವೇಳೆ, ನಮಗೆ ನಮ್ಮ ನೆರೆರಾಷ್ಟ್ರಗಳು ಮೊದಲ ಆದ್ಯತೆ (ನೇಬರ್ ಫಸ್ಟ್) ಎಂಬ ಇನ್ನೊಂದು ವಿದೇಶಾಂಗ ನೀತಿಯನ್ನೂ ಭಾರತ ಕೈಬಿಡಲಿಲ್ಲ. ಭಾರತದೊಂದಿಗೆ ಗಡಿ ಹಂಚಿಕೊಂಡ ದೇಶಗಳಿಗೆ ನಮ್ಮಲ್ಲಿ ತಯಾರಾದ ಕೋವಿಡ್ ಲಸಿಕೆಗಳು ಮೊದಲು ತಲುಪಿದವು.

ರಾಜತಾಂತ್ರಿಕತೆಯಲ್ಲಿ ನಾನಾ ರೀತಿಗಳಿವೆ. ಅವುಗಳಲ್ಲಿ ಆರೋಗ್ಯ ರಾಜತಾಂತ್ರಿಕತೆಯೂ ಒಂದು. ಕೋವಿಡ್ ಲಸಿಕೆಗಳನ್ನು ನೀಡುವ ಮೂಲಕ ಭಾರತವು ಜಾಗತಿಕ ಆರೋಗ್ಯ ರಾಜತಾಂತ್ರಿಕ ಕ್ಷೇತ್ರದಲ್ಲಿ ತನ್ನ ಸಾಮರ್ಥ್ಯವನ್ನು ಎಲ್ಲರಿಗೂ ಮನದಟ್ಟು ಮಾಡಿಕೊಟ್ಟಿತು. ಜಾಗತಿಕ ಆರೋಗ್ಯ ಕ್ಷೇತ್ರದ ಸವಾಲುಗಳನ್ನು ಎದುರಿಸಲು ಭಾರತ ಸಮರ್ಥವಾಗಿದೆ ಎಂಬ ಸಂದೇಶ ಜಗತ್ತಿಗೆ ರವಾನೆಯಾಯಿತು. ಇದೇ ವೇಳೆ, ವಿಶ್ವ ಆರೋಗ್ಯ ಸಂಸ್ಥೆಯ ಕೋವ್ಯಾಕ್ಸ್ ಕಾರ್ಯಕ್ರಮಕ್ಕೂ ಭಾರತ ತನ್ನದೇ ಆದ ಕೊಡುಗೆ ನೀಡಿತು. ಲಸಿಕೆಗಳನ್ನು ತಯಾರಿಸುವ ಅಥವಾ ಖರೀದಿಸುವ ಸಾಮರ್ಥ್ಯವಿಲ್ಲದ ಬಡ ದೇಶಗಳಿಗೆ ಶ್ರೀಮಂತ ದೇಶಗಳು ಲಸಿಕೆಗಳನ್ನು ನೀಡಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯ ನೇತೃತ್ವದಲ್ಲಿ ಕೋವ್ಯಾಕ್ಸ್ ಕಾರ್ಯಕ್ರಮ ಕೆಲ ವರ್ಷಗಳಿಂದ ಜಾರಿಯಲ್ಲಿದೆ. ಆದರೆ, ಕೋವಿಡ್ ಸಮಯದಲ್ಲಿ ಶ್ರೀಮಂತ ದೇಶಗಳು ಬಡ ದೇಶಗಳನ್ನು ಮರೆತೇಬಿಟ್ಟಿದ್ದವು. ಹೀಗಾಗಿ ದುರ್ಬಲ ದೇಶಗಳು ಕೋವಿಡ್ ಮಹಾಮಾರಿಯಿಂದ ತಮ್ಮ ನಾಗರಿಕರ ಜೀವ ಉಳಿಸಿಕೊಳ್ಳಲಾಗದೆ ಕೈಚೆಲ್ಲುವ ದುಸ್ಥಿತಿ ಎದುರಾಗಿತ್ತು. ಆದರೆ ಭಾರತ ಅಂಥ ದೇಶಗಳಿಗೆ ಧೈರ್ಯ ತುಂಬಿತು. ಪಶ್ಚಿಮದ ಶ್ರೀಮಂತ ದೇಶಗಳು ಯಾವ ಬಡ ದೇಶಗಳನ್ನು ಮರೆತಿದ್ದವೋ ಅಂಥ ದೇಶಗಳಿಗೆ ಭಾರತ ಸರಕಾರ ಮೊದಲು ಲಸಿಕೆಗಳನ್ನು ಕಳುಹಿಸಿತು. ಹಾಗೆ ಮಾಡುವ ಮೂಲಕ ಜಾಗತಿಕ ನಾಯಕನಾಗುವ ತನ್ನ ಸಾಮರ್ಥ್ಯವನ್ನು ಇನ್ನೊಮ್ಮೆ ಸಾಬೀತುಪಡಿಸಿತು. ಲಸಿಕೆಯಷ್ಟೇ ಅಲ್ಲ, ಬೇರೆ ಬೇರೆ ಔಷಧಗಳು, ಆಹಾರ ವಸ್ತುಗಳು, ಆರ್ಥಿಕ ನೆರವು ಮತ್ತು ಆರೋಗ್ಯ ಸಲಕರಣೆಗಳನ್ನೂ ಅಂಥ ದೇಶಗಳಿಗೆ ಭಾರತ ಕಳುಹಿಸಿತು. ಹೀಗೆ ನಮ್ಮ ದೇಶ ಎಲ್ಲರಿಗೂ ಧೈರ್ಯ ತುಂಬುತ್ತಿದ್ದಾಗ ಶ್ರೀಮಂತ ದೇಶಗಳು ತಮ್ಮಲ್ಲಿ ತಯಾರಾದ ಲಸಿಕೆಗಳನ್ನು ಯಾರಿಗೂ ಕೊಡದೆ ತಮ್ಮದೇ ನಾಗರಿಕರಿಗಾಗಿ ದಾಸ್ತಾನು ಮಾಡಿಕೊಳ್ಳುತ್ತಿದ್ದವು. ಬಡ ದೇಶಗಳ ಜನರ ಜೀವ ಉಳಿಸಬಹುದಾಗಿದ್ದ ಆ ಲಸಿಕೆಗಳು, ನಂತರ ಅವಧಿ ಮುಗಿದ ಮೇಲೆ ವ್ಯರ್ಥವಾಗಿ ಎಸೆಯಲ್ಪಟ್ಟವು!

ಹೀಗೆ ಶ್ರೀಮಂತ ದೇಶಗಳು ಯಾವ ಕೆಲಸವನ್ನು ಮಾಡಲಿಲ್ಲವೋ ಅದನ್ನು ಭಾರತ ಮಾಡಿತು. ಲಸಿಕೆಗಳ ರಫ್ತಿನಿಂದಾಗಿ ಜಾಗತಿಕ ವೇದಿಕೆಯಲ್ಲಿ ಭಾರತದ ಇಮೇಜ್ ವೃದ್ಧಿಯಾಯಿತು. ಭಾರತದ ಕ್ರಮವನ್ನು ಎಲ್ಲಾ ದೇಶಗಳೂ ಶ್ಲಾಘಿಸಿದವು. ಜಾಗತಿಕ ನಾಯಕನಾಗಿ ಹೊರಹೊಮ್ಮುತ್ತಿರುವ ದೇಶವು ಪ್ರದರ್ಶಿಸಿದ ಜವಾಬ್ದಾರಿಯುತ ನಡೆಯನ್ನು ವಿಶ್ವ ಮಾಧ್ಯಮಗಳು ಮುಕ್ತ ಕಂಠದಿಂದ ಹೊಗಳಿದವು. ಲಸಿಕೆಯನ್ನು ಪಡೆದ ದೇಶಗಳ ಜತೆಗೆ ಭಾರತದ ವಿಶ್ವಾಸಾರ್ಹತೆ ಮತ್ತು ದ್ವಿಪಕ್ಷೀಯ ರಾಜತಾಂತ್ರಿಕತೆ ವೃದ್ಧಿಸಿತು. ಅದರಿಂದಾಗಿ ಭಾರತಕ್ಕೆ ಅಂಥ ದೇಶಗಳಲ್ಲಿ ಅಮೂಲ್ಯವಾದ ವ್ಯೂಹಾತ್ಮಕ ಬಲವೂ ದೊರಕಿತು. ದಕ್ಷಿಣ ಏಷ್ಯಾ ಮತ್ತು ಆಫ್ರಿಕಾದಲ್ಲಿ ವೃದ್ಧಿಸುತ್ತಿದ್ದ ಚೀನಾದ ಪ್ರಭಾವಕ್ಕೆ ಭಾರತವು ಲಸಿಕೆ ರಾಜತಾಂತ್ರಿಕತೆಯ ಮೂಲಕ ಹೊಡೆತ ನೀಡಿತು. ಈ ದೇಶಗಳಿಗೆ ಚೀನಾ ಕೂಡ ಲಸಿಕೆಗಳನ್ನು ನೀಡಿ ಪ್ರಭಾವ ಹೆಚ್ಚಿಸಿಕೊಳ್ಳುವುದಕ್ಕೆ ಯತ್ನಿಸಿತಾದರೂ, ಕೋವಿಡ್ ವಿಷಯದಲ್ಲಿ ಚೀನಾ ಆಡಿದ ನಾಟಕದಿಂದಾಗಿ ಯಾರೂ ಆ ದೇಶವನ್ನು ನಂಬುವ ಸ್ಥಿತಿಯಲ್ಲಿ ಇರಲಿಲ್ಲ.

ಆದರೆ ಕೋವಿಡ್‌ನ ಎರಡನೇ ಅಲೆಯಲ್ಲಿ ಭಾರತದ ಲಸಿಕೆ ರಫ್ತಿಗೆ ತಾತ್ಕಾಲಿಕವಾಗಿ ಹೊಡೆತ ಬಿದ್ದಿದ್ದು ನಿಜ. ದೇಶದಲ್ಲೇ ಲಸಿಕೆಗೆ ಭಾರಿ ಬೇಡಿಕೆಯಿತ್ತು. ಹೀಗಾಗಿ ಸ್ಥಳೀಯ ಬೇಡಿಕೆ ಮತ್ತು ಅಂತಾರಾಷ್ಟ್ರೀಯ ಬೇಡಿಕೆಯ ನಡುವೆ ಹೊಂದಾಣಿಕೆ ಸಾಧಿಸುವ ಅನಿವಾರ್ಯತೆ ಭಾರತಕ್ಕಿತ್ತು. ಆದರೂ ಲಸಿಕೆಯ ಪೂರೈಕೆಯನ್ನು ಭಾರತ ಸಂಪೂರ್ಣ ನಿಲ್ಲಿಸಲಿಲ್ಲ. ಹೀಗಾಗಿ ದೇಶದ ವಿದೇಶಾಂಗ ನೀತಿಯಲ್ಲಿ ಲಸಿಕೆಯ ರಾಜತಾಂತ್ರಿಕತೆಯು ಇಂದಿಗೂ ಒಂದು ಮಹತ್ವದ ಅಧ್ಯಾಯವಾಗಿ ಉಳಿದಿದೆ. ಮಾನವೀಯ ಅಗತ್ಯಗಳನ್ನೂ ವ್ಯೂಹಾತ್ಮಕ ಅಗತ್ಯಗಳನ್ನೂ ಹೇಗೆ ಒಟ್ಟೊಟ್ಟಿಗೇ ನಿಭಾಯಿಸಬೇಕು ಎಂಬುದಕ್ಕೆ ಭಾರತದ ನಡೆ ನಿದರ್ಶನವಾಗಿದೆ. ಲಸಿಕೆಗಳ ರಫ್ತು ಭಾರತದ 'ಸಾಫ್ಟ್ ಪವರ್' ಅನ್ನು ಇನ್ನೊಂದು ಎತ್ತರಕ್ಕೆ ಏರಿಸಿತು. ಅಗತ್ಯ ಬಂದಾಗ ಭಾರತವು ಮಾನವೀಯ ನೆರವಿಗೆ ಹೆಚ್ಚಿನ ಆದ್ಯತೆ ನೀಡುವ ಶಕ್ತಿ ಹೊಂದಿದೆ ಎಂಬುದು ಅಭಿವೃದ್ಧಿಶೀಲ ದೇಶಗಳಿಗೆ ಮನವರಿಕೆಯಾಯಿತು. ಹೀಗಾಗಿ ಜಾಗತಿಕ ವೇದಿಕೆಯಲ್ಲಿ ಭಾರತವು ತಮಗೆ ವಿಶ್ವಾಸಾರ್ಹ ಮತ್ತು ಸ್ನೇಹಶೀಲ ಪಾಲುದಾರನಾಗಲಿದೆ ಎಂಬ ನಂಬಿಕೆ ಆ ದೇಶಗಳಲ್ಲಿ ಮೂಡಿತು.

ಇಡೀ ಜಗತ್ತಿನ ಒಳಿತಿಗಾಗಿ ನಾವು ಕೆಲಸ ಮಾಡುತ್ತೇವೆ ಎಂದು ಭಾರತ ಹೇಳುತ್ತಿದ್ದ ಮಾತು ಕೋವಿಡ್‌ನ ಕರಾಳ ದಿನಗಳಲ್ಲಿ ನಿಕಷಕ್ಕೆ ಒಡ್ಡಲ್ಪಟ್ಟಿತು. ಭಾರತೀಯರ ರಕ್ಷಣೆ ಹೇಗೆ ಮುಖ್ಯವೋ ಹಾಗೆಯೇ ಜಗತ್ತಿನಲ್ಲಿರುವ ಎಲ್ಲಾ ಜನರ ರಕ್ಷಣೆಯೂ ತನಗೆ ಮುಖ್ಯ ಎಂಬುದನ್ನು ಭಾರತ ತೋರಿಸಿಕೊಟ್ಟಿತು. ಅದರಿಂದಾಗಿ ಭಾರತದ ಸಾಫ್ಟ್ ಪವರ್ ಬಗ್ಗೆ ಜಗತ್ತಿಗೆ ನಂಬಿಕೆ ಮೂಡಿತು. ಕೋವಿಡ್ ಸಮಯದಲ್ಲಿ ಲಸಿಕೆ ಪೂರೈಸುವುದಕ್ಕಷ್ಟೇ ಭಾರತದ ಪ್ರಯತ್ನಗಳು ಸೀಮಿತವಾಗಲಿಲ್ಲ. ಬದಲಿಗೆ ಆ ಸಮಯದಲ್ಲಿ ನೇಪಾಳ, ಮಾಲ್ಡೀವ್ಸ್, ಕುವೈತ್‌ನಂಥ ದೇಶಗಳಿಗೆ ಭಾರತವು ತನ್ನ ಮಿಲಿಟರಿ ಡಾಕ್ಟರ್‌ಗಳನ್ನು ಕಳುಹಿಸಿಕೊಟ್ಟಿತು. ಅಲ್ಲಿ ನಮ್ಮ ದೇಶದ ವೈದ್ಯರು ಕೋವಿಡ್ ಚಿಕಿತ್ಸಾ ಶಿಬಿರಗಳನ್ನು ತೆರೆದರು. ಸಾವಿರಾರು ಭಾರತೀಯ ವೈದ್ಯರು ಆನ್‌ಲೈನ್‌ನಲ್ಲೇ ಭಾರತದಿಂದ ಬೇರೆ ಬೇರೆ ದೇಶಗಳಿಗೆ ವೈದ್ಯಕೀಯ ಸೇವೆ ನೀಡಿದರು. ಜಗತ್ತಿನ ಅನೇಕ ದೇಶಗಳಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಇಲ್ಲಿನ ವೈದ್ಯರು ಆನ್‌ಲೈನ್‌ನಲ್ಲಿ ತರಬೇತಿ ನೀಡಿದರು. ಅದರ ಜತೆಗೆ, ಗವಿ, ಕ್ವಾಡ್, ಪ್ಯಾನ್ ಆಫ್ರಿಕಾ ಇ-ನೆಟ್‌ವರ್ಕ್‌ನಂಥ ಜಾಗತಿಕ ವೇದಿಕೆಗಳ ಮೂಲಕ ತಕ್ಷಣದ ವೈದ್ಯಕೀಯ ಅಗತ್ಯಗಳನ್ನು ಪೂರೈಸುವ ಕಾರ್ಯವನ್ನು ಕೂಡ ಭಾರತ ಮಾಡಿತು. ಅದು ದೀರ್ಘಕಾಲದ ಅಂತಾರಾಷ್ಟ್ರೀಯ ಸಹಕಾರಕ್ಕೆ ಗಟ್ಟಿಯಾದ ತಳಪಾಯ ಹಾಕಿಕೊಟ್ಟಿತು.

ಕೋವಿಡ್ ಸಮಯದಲ್ಲಿ ಭಾರತ ಪ್ರದರ್ಶಿಸಿದ ದಿಟ್ಟತನವು ಜಾಗತಿಕ ಆರೋಗ್ಯ ರಾಜತಾಂತ್ರಿಕತೆಯಲ್ಲಿ ನಮ್ಮ ದೇಶದ ಸ್ಥಾನವನ್ನು ಗಟ್ಟಿಯಾಗಿಸಿತು. ವಿಪತ್ತಿನ ಸಮಯದಲ್ಲಿ ಯಾವ ದೇಶವು ನೆರವಿಗೆ ಬರದಿದ್ದರೂ ಭಾರತ ನೆರವಿಗೆ ಬರುತ್ತದೆ ಎಂಬ ವಿಶ್ವಾಸ ಬಡ ದೇಶಗಳಲ್ಲಿ ಮೂಡಿತು. ಸಾಫ್ಟ್ ಪವರ್ ಎಂಬ ವಿಭಿನ್ನ ಮಾದರಿಯ ರಾಜತಾಂತ್ರಿಕತೆಯ ಕುರಿತೂ ಜಗತ್ತಿಗೆ ನಂಬಿಕೆ ಮೂಡಲಾರಂಭಿಸಿತು. ಸಾಫ್ಟ್ ಪವರ್ ರಾಜತಾಂತ್ರಿಕತೆಯಲ್ಲಿ ಮಿಲಿಟರಿ ಅಥವಾ ವಾಣಿಜ್ಯ ಸಂಬಂಧಗಳಿಗಿಂತ ಹೆಚ್ಚಾಗಿ ದಯೆ, ಕರುಣೆ, ಸಹಕಾರ, ಸಹಭಾಗಿತ್ವ ಹಾಗೂ ಭ್ರಾತೃತ್ವಕ್ಕೆ ಒತ್ತು ನೀಡಲಾಗುತ್ತದೆ. ಈ ಮೌಲ್ಯಗಳನ್ನು ಗೌರವಿಸುವ ದೇಶವು ಜಾಗತಿಕ ಮಟ್ಟದಲ್ಲಿ ಪ್ರಬಲವಾಗುತ್ತಾ ಹೋಗುತ್ತದೆ. ಲಸಿಕೆಗಳ ರಫ್ತಿನ ಮೂಲಕ ಭಾರತ ಬಹಳ ನಾಜೂಕಾಗಿ ಈ ಮಾದರಿಯ ರಾಜತಾಂತ್ರಿಕತೆಯ ಲಾಭ ಪಡೆಯಿತು. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆಶೋತ್ತರಗಳಿಗೆ ಶ್ರೀಮಂತ ಅಥವಾ ಈಗಾಗಲೇ ಅಭಿವೃದ್ಧಿ ಹೊಂದಿದ ದೇಶಗಳ ಸ್ನೇಹಕ್ಕಿಂತ ಭಾರತದಂಥ ದೇಶದ ಸ್ನೇಹವು ಹೊಸ ಶಕ್ತಿಯನ್ನು ತುಂಬಬಲ್ಲದು ಎಂಬ ವಿಶ್ವಾಸ ಬಡ ದೇಶಗಳಲ್ಲಿ ಮೂಡಿತು. ಇದೆಲ್ಲ ಆಗಿ ಈಗ ಐದು ವರ್ಷ ಕಳೆದಿದೆ. ಆದರೆ ಭಾರತದಿಂದ ಲಾಭ ಪಡೆದ ದೇಶಗಳು ಭಾರತದ ಔದಾರ್ಯವನ್ನು ಮರೆತಿಲ್ಲ. ಹೀಗಾಗಿ ಕೋವಿಡ್‌ನ ಕರಾಳತೆಯಲ್ಲೂ ಲಸಿಕೆಯ ರಾಜತಾಂತ್ರಿಕತೆಯು ಬೆಳ್ಳಿಯ ರೇಖೆಯಾಗಿ ಭಾರತದ ವಿದೇಶಾಂಗ ನೀತಿಯಲ್ಲಿ ಪ್ರಜ್ವಲಿಸುತ್ತಿದೆ.

(ಲೇಖಕರು ಸಂಸದರು)

ಭಟ್ಟರ್ ಸ್ಕಾಚ್

- **ರಾಘಣ್ಣ, ಮೈಸೂರು**
ಭಟ್ರೇ, ಬಿಜೆಪಿಯಲ್ಲಿ ಯಡಿಯೂರಪ್ಪನವರನ್ನು 'ರಾಜಾಹುಲಿ' ಎಂದು ಅವರ ಅಭಿಮಾನಿಗಳು ಕರೆದರೆ ಯತ್ನಾಳ್‌ರನ್ನು ಅವರ ಕಡೆಯವರು ಏನನ್ನುತ್ತಿದ್ದಾರೆ?
– **ಹುಲ್ಲುಕೋಟಿ!**

- **ರಾಜಣ್ಣ ಪರಶುರಾಮ, ಗೋಣಿಕೊಪ್ಪಲು**
ಭಟ್ರೇ, ಯತ್ನಾಳ್‌ಗೆ ಗೇಟ್‌ಪಾಸ್ ಕೊಟ್ರೆ ಏನರ್ಥ?
– **ವಿಯೋಗದ ಪಾಸ್ ಎಂದರ್ಥವಲ್ಲ!**

- **ಅನೂಪ ಗಣೇಶ ಬಿ. (ಇಮೇಲ್ ಮೂಲಕ)**
ಭಟ್ರೇ, ಯತ್ನಾಳರ ಬಾಯಿ ಮುಚ್ಚಿಸಲು ಏನು ಮಾಡಬೇಕು?
– **ಏನು ಮಾಡಿದರೂ ಅದನ್ನು ಮುಚ್ಚಿಸಲು ಮಾತ್ರ ಸಾಧ್ಯವಿಲ್ಲ!**

- **ಕರುಣಾ ಮಲ್ಲೂರು, ಹಾವೇರಿ**
ಭಟ್ರೇ, ಜಪಾನ್ ಬಗ್ಗೆ ನೀವು ಏನನ್ನೂ ಉಳಿಸಿದಂತೆ ಕಾಣುತ್ತಿಲ್ಲ?
– **ಇಲ್ಲ, ಈಗಷ್ಟೇ ವಿಷಯ ಪ್ರವೇಶವಾಗಿದೆ!**

- **ಗುಂಡೂರು ರಘು, ಚನ್ನಪಟ್ಟಣ**
ಭಟ್ರೇ, ದೂರ ದೂರ ಅಲ್ಲೇ ನಿಲ್ಲು ನನ್ನ ದೇವರೇ ಅಂತ ಹಾಡ್ತಾಳಲ್ಲ?
– **ಕರೋನಾ ಮುಗಿದು ನಾಲ್ಕು ವರ್ಷ ಆಯ್ತು ಅಂತ ಹೇಳಬಾರದೇ?!**

- **ಬಿ.ಸುಂದರರಾಜ್, ಭದ್ರಾವತಿ**
ಭಟ್ರೇ, ಬೆಂಗಳೂರಿನ ಕನ್ನಡಿಗರು ಕನ್ನಡವನ್ನೇ ಮಾತಾಡುವುದಿಲ್ಲವಲ್ಲ?
– **ಇಂಗ್ಲಿಷನ್ನು ಸಾಯಿಸಲೇಬೇಕು ಅಂತ ನಿರ್ಧರಿಸಿದ್ದಾರಂತೆ!**

- **ಸೌಮ್ಯ ದಾತಾರ, ಬೆಂಗಳೂರು**
ಭಟ್ರೇ, ಹೆಂಗಸರು ಮೇಕಪ್ ಮಾಡಿಕೊಳ್ಳದ ಕಾಲ ಬರಬಹುದಾ?
– **ಗಂಡಸರು ಕುರುಡಾದರೂ ಅದೊಂದನ್ನು ಮಾತ್ರ ಬಿಡೊಲ್ಲ!**

- **ನವೀನ ಪಿ.ಕೆ., ಗುಬ್ಬಿ**
ಭಟ್ರೇ, ಈಗ ಯಾರೂ ಹಾಸ್ಯೋತ್ಸವವನ್ನು ಏರ್ಪಡಿಸುವುದಿಲ್ಲವಲ್ಲ?
– **ಆ ಕಾರ್ಯಕ್ರಮ ಏರ್ಪಡಿಸುವವರನ್ನು ನೋಡಿ ನಗ್ತಾರಂತೆ!**

- **ಯಮುನಾ, (ಇಮೇಲ್ ಮೂಲಕ)**
ಭಟ್ರೇ, ಹಾಲಿನ ದರವನ್ನು ಏರಿಸಿದರೂ ಯಾರೂ ಪ್ರತಿಭಟಿಸಲಿಲ್ಲವಲ್ಲ?
– **ಹಾಲು ಮತ್ತು ಆಲ್ಕೋಹಾಲು ವಿಷಯದಲ್ಲಿ ಯಾಕೋ ರಿವರ್ಸ್!**

- **ರಾಜೀವ ಕುಲಕರ್ಣಿ, ಧಾರವಾಡ**
ಭಟ್ರೇ, ನನ್ನ ಅಳಿಯನಿಗೆ ಅವನ ಮ್ಯಾರೇಜ್ ಆ್ಯನಿವರ್ಸರಿಗೆ ಯಾವ ಶುಭಾಶಯ ಕಳಿಸಲಿ?
– **ಸಾರಿ, ನೋ ರಿಟರ್ನ್!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಖುಷಿ ದಾಂಪತ್ಯದ ರಹಸ್ಯವೇನು?
– **ಅದು ನಿಗೂಢ ರಹಸ್ಯ!**

ಹಣಕಾಸು ನಿರ್ವಹಣೆ ಬಹಳ ಮುಖ್ಯ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಜಾನಿ ಡೆಪ್ಪ್ ಹೆಸರು ಕೇಳದವರು ಇತ್ತೀಚೆಗೆ ವಿರಳ. ಜಾನಿ ಡೆಪ್ಪನ ಆಸ್ತಿ ಇಂದಿಗೆ, ಅಂದರೆ 2024ರಲ್ಲಿ ಒಟ್ಟೂಕ್ಕಿರಿ 150 ಮಿಲಿಯನ್ ಅಮೆರಿಕನ್ ಡಾಲರ್! ಭಾರತೀಯ ರುಪಾಯಿಯಲ್ಲಿ 1,250 ಕೋಟಿ ರುಪಾಯಿ! ಇದು ದೊಡ್ಡ ಮೊತ್ತ ಅನ್ನಿಸುತ್ತದೆ ಅಲ್ವಾ? ಆದರೆ ನಿಮಗೆ ತಿಳಿದಿರಲಿ, ಆತ ತನ್ನ ಉತ್ತುಂಗದಲ್ಲಿ 900 ಮಿಲಿಯನ್ ಡಾಲರ್ ಒಡೆಯರಾಗಿದ್ದರು. 750 ಮಿಲಿಯನ್ ಡಾಲರ್ ಸಂಪತ್ತನ್ನು ಆತ ಕಳೆದುಕೊಂಡಿದ್ದು ಏಕೆ? ಆತನ ತಪ್ಪೇನು? ಅಥವಾ ಭಾರಿ ಕುಸಿತ ಕಂಡು ಕೂಡ ಆತ ದಿವಾಳಿಯಾಗದೆ ಉಳಿದುಕೊಂಡಿದ್ದು ಹೇಗೆ? ಆತನ ಜೀವನದಿಂದ ನಾವು ಕಲಿಯಬಹುದಾದ ಪಾಠವೇನು? ಎನ್ನುವುದನ್ನು ತಿಳಿದುಕೊಳ್ಳೋಣ.

ಜಾನಿ ಡೆಪ್ಪ್ ಎಂದಾಕ್ಷಣ ನಮಗೆ ನೆನಪಿಗೆ ಬರುವುದು 'ಪೈರೇಟ್ಸ್ ಆಫ್ ಕೆರಿಬಿಯನ್' ಸಿನಿಮಾ. ಇದರಲ್ಲಿನ ಆತನ ಕ್ಯಾಪ್ಟನ್ ಸ್ಪ್ಯಾರೋ ಪಾತ್ರ ವಿಶ್ವವಿಖ್ಯಾತಿ ಪಡೆದಿದೆ. 'ಪೈರೇಟ್ಸ್ ಆಫ್ ಕೆರಿಬಿಯನ್' ಸರಣಿ ಸಿನಿಮಾ ಜಗತ್ತಿನಾದ್ಯಂತ ಗಳಿಸಿದ ಹಣ, ಹತ್ತಿರ ಹತ್ತಿರ ನಾಲ್ಕೂವರೆ ಬಿಲಿಯನ್ ಅಮೆರಿಕನ್ ಡಾಲರ್! ಅಂದರೆ, ಭಾರತೀಯ ರುಪಾಯಿಯಲ್ಲಿ 37,580 ಕೋಟಿ ರುಪಾಯಿ. ಇಷ್ಟು ದೊಡ್ಡ ಮಟ್ಟದ ಯಶಸ್ಸು ಕಂಡ ಸಿನಿಮಾದ ನಾಯಕನಾಗಿ ಜಾನಿ ಒಮ್ಮೆಲೇ ಯಶಸ್ಸು ಕಾಣಲಿಲ್ಲ.

ಜಾನಿ ಕ್ರಿಸ್ಟೋಫರ್ ಡೆಪ್ಪ್ 1963ರ ಜೂನ್ 10ರಂದು ಅಮೆರಿಕದ ಕೆಂಟುಕಿಯ ಓವೆನ್ಸ್‌ಬರೊ ಎಂಬಲ್ಲಿ ಜನಿಸಿದರು. ಅಪ್ಪ ಎಂಜಿನಿಯರ್, ಅಮ್ಮ ರೆಸ್ಟೋರೆಂಟ್ ಒಂದರಲ್ಲಿ ವೇಟ್ರೆಸ್ ಆಗಿ ದುಡಿಯುತ್ತಿರುತ್ತಾರೆ. 12ರ ಬಾಲಕನಾಗಿದ್ದಾಗ ಜಾನಿಗೆ ಅಮ್ಮನಿಂದ ಗಿಟಾರ್ ಉಡುಗೊರೆಯಾಗಿ ಸಿಗುತ್ತದೆ. ಇಲ್ಲಿಂದ ಸಂಗೀತದ ಕಡೆಗೆ ಜಾನಿ ಒಲವು ಹೆಚ್ಚಾಗುತ್ತದೆ. 3-4 ಸ್ನೇಹಿತರನ್ನು ಸೇರಿಸಿಕೊಂಡು ಜಾನಿ ತನ್ನ ಮನೆಯ ಗ್ಯಾರೇಜ್‌ನಲ್ಲಿ ಗಿಟಾರ್ ನುಡಿಸುವುದು ಮಾಡುತ್ತಿರುತ್ತಾನೆ. ಆದರೆ, ಆತನಿಗೆ ಸಂಗೀತದಲ್ಲಿ ಇದ್ದ ಆಸಕ್ತಿ ಒಲವು ಮುಂದುವರಿದ ಸಮಯದಲ್ಲಿ ಆತನ ಹೆತ್ತವರು ಬೇರೆಯಾಗುತ್ತಾರೆ. ಬೇಸರಗೊಂಡ ಜಾನಿ ಡ್ರಗ್ಸ್ ಸೇವನೆಯನ್ನು ಶುರು ಮಾಡುತ್ತಾನೆ. 16ನೇ ವಯಸ್ಸಿನಲ್ಲಿ ಶಾಲೆಯನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಣಕ್ಕೆ ತೆಗೆದುಕೊಂಡು, ಶಾಲೆಯಿಂದ 'ಡ್ರಾಪ್ ಔಟ್' ಆಗಲು ತನ್ನ ಸಂಗೀತವನ್ನು ಪೂರ್ಣಪ್ರಮಾಣದಲ್ಲಿ ತೆಗೆದುಕೊಳ್ಳಲು ನಿರ್ಧರಿಸುತ್ತಾನೆ. ಅಲ್ಲಿನ 'ದಿ ಕಿಡ್ಸ್' ಎಂಬ ಸ್ಥಳೀಯ ಬ್ಯಾಂಡ್‌ನಲ್ಲಿ ಸೇರ್ಪಡೆಯಾಗುತ್ತಾನೆ. ಅಲ್ಲಿ ಪರವಾಗಿಲ್ಲ ಎನ್ನುವ ಮಟ್ಟಿನ ಯಶಸ್ಸು ಕಾಣುತ್ತಾನೆ.

ನಿಕೋಲಸ್ ಕೇಜ್ ಎಂಬ ದೊಡ್ಡ ಹಾಲಿವುಡ್ ನಟನನ್ನು ಭೇಟಿ ಮಾಡಿದ್ದು ಜಾನಿಯ ಬದುಕಿಗೆ 'ತಿರುವಿನ ಘಟ್ಟ'ವಾಗುತ್ತದೆ. ಮ್ಯೂಸಿಕ್ ಇಂಡಸ್ಟ್ರಿಯ ದೊಡ್ಡ ಹೆಸರುಗಳನ್ನು ಜಾನಿಗೆ ಪರಿಚಯಿಸುತ್ತಾರೆ ನಿಕೋಲಸ್ ಕೇಜ್. ಜಾನಿ ಆಗ 20ರ ತರುಣ. ಯಶಸ್ಸು ಯಾರಿಗೂ ಅಷ್ಟು ಸುಲಭವಾಗಿ ಒಲಿಯುವುದಿಲ್ಲ ಎನ್ನುವುದು ಜಾನಿ ವಿಷಯದಲ್ಲೂ ನಿಜವಾಗುತ್ತದೆ. ಯಾವುದರಿಂದಲೂ ಹೇಳಿಕೊಳ್ಳುವ ಬ್ರೇಕ್ ಸಿಗುವುದಿಲ್ಲ, ಹೊಟ್ಟೆಪಾಡಿಗಾಗಿ ವಾರಕ್ಕೆ 30 ಡಾಲರ್ ಆದಾಯ ನೀಡುವ ಸೇಲ್ಸ್‌ಮ್ಯಾನ್ ವೃತ್ತಿಯನ್ನು ಜಾನಿ ಆ ದಿನಗಳಲ್ಲಿ ಮಾಡುತ್ತಾರೆ.

1984ರಲ್ಲಿ 'ನೈಟ್‌ಮೇರ್ ಆನ್ ಎಲ್ಮ್ ಸ್ಟ್ರೀಟ್' ಎನ್ನುವ ಚಿತ್ರದಲ್ಲಿ ತಮ್ಮ ನಟನಾ ಕೌಶಲವನ್ನು ಪ್ರದರ್ಶಿಸಲು ಜಾನಿಗೆ ಅವಕಾಶ ಸಿಗುತ್ತದೆ. 1990ರಲ್ಲಿ 'ಬೇಬಿ' ಎನ್ನುವ ಸಿನಿಮಾ ಅವರನ್ನು ಚಲನಚಿತ್ರೋದ್ಯಮದಲ್ಲಿ ತಳವೂರುವಂತೆ ಮಾಡುತ್ತದೆ. ಈ ಮಧ್ಯೆ ಸಾಕಷ್ಟು ಚಿತ್ರಗಳಲ್ಲಿ ಪಾತ್ರ ಗಿಟ್ಟಿಸಿಕೊಳ್ಳುವ ಜಾನಿ ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತಾ ಹೋಗುತ್ತಾರೆ. 1997ರಲ್ಲಿ ಬಂದ 'ಡಾನಿ ಬ್ರಾಸ್ಕೊ' ಎಂಬ ಚಿತ್ರ ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಗುತ್ತದೆ.

ಜಾನಿ ಡೆಪ್ಪ್ ಜೀವನದ ಅತಿದೊಡ್ಡ ಹಿಟ್, ಅತಿ ಮುಖ್ಯವಾದ 'ಪೈರೇಟ್ಸ್ ಆಫ್ ದಿ ಕೆರಿಬಿಯನ್' ಚಿತ್ರ 2003ರಲ್ಲಿ ಬಿಡುಗಡೆಯಾಗಿ, ಜಾನಿ ಜಗತ್ತಿನಾದ್ಯಂತ ಮನೆಮಾತಾಗುವಂತೆ ಮಾಡುತ್ತದೆ. ಈ ಚಿತ್ರದ 'ಕ್ಯಾಪ್ಟನ್ ಜಾಕ್' ಪಾತ್ರ ಅಥವಾ 'ಜಾಕ್ ಸ್ಪಾರೋ' ಎನ್ನುವ ಹೆಸರು ಅವರಿಗೆ ಅಡ್ಡಹೆಸರಿನಂತೆ ಅಂಟಿಕೊಂಡುಬಿಡುತ್ತದೆ. ಇಂದಿಗೂ ಕೋಟ್ಯಂತರ ಜನರು ಅವರ ನಿಜವಾದ ಹೆಸರಿಗಿಂತ 'ಜಾಕ್ ಸ್ಪಾರೋ' ಎಂದೇ ಅವರನ್ನು ಗುರುತಿಸುತ್ತಾರೆ. ನಂತರದ್ದು ಯಶಸ್ಸಿನ ಉತ್ತುಂಗದ ಕಥೆ. 2005ರಲ್ಲಿ 'ಚಾರ್ಲಿ ಆ್ಯಂಡ್ ಚಾಕೊಲೇಟ್ ಫ್ಯಾಕ್ಟರಿ' ಚಿತ್ರ ದೊಡ್ಡಮಟ್ಟದ ಯಶಸ್ಸನ್ನು ಕಾಣುತ್ತದೆ. 2006ರಲ್ಲಿ 'ಪೈರೇಟ್ಸ್ ಆಫ್ ಕೆರಿಬಿಯನ್ ಡೆಡ್ ಮ್ಯಾನ್ಸ್ ಚೆಸ್ಟ್' ಚಿತ್ರ ಹೊರಬರುತ್ತದೆ. ಈ ವೇಳೆಗೆ ಕೇವಲ ಮತ್ತು ಕೇವಲ ಜಾನಿ ಈ ಚಿತ್ರದಲ್ಲಿ ಇದ್ದಾರೆ ಎಂಬ ಒಂದೇ ಕಾರಣಕ್ಕೆ ಸಿನಿಮಾ ವೀಕ್ಷಿಸಲು ಬರುವ ಕೋಟ್ಯಂತರ ಅಭಿಮಾನಿಗಳನ್ನು ಆತ ಸಂಪಾದಿಸಿರುತ್ತಾರೆ. 2007ರಲ್ಲಿ 'ಪೈರೇಟ್ಸ್ ಆಫ್ ಕೆರಿಬಿಯನ್ ಅಟ್ ವರ್ಲ್ಡ್ಸ್ ಎಂಡ್' ಸಿನಿಮಾ ಬಿಡುಗಡೆಯಾಗುತ್ತದೆ. ಆದರೆ ಅದು ಹಿಂದಿನ 'ಕೆರಿಬಿಯನ್' ಸರಣಿಯ ಮ್ಯಾಜಿಕ್ ಅನ್ನು ಪುನರಾವರ್ತಿಸುವಲ್ಲಿ ಸೋಲುತ್ತದೆ. ಸೋಲು-ಗೆಲುವು ನೆರಳಿನಂತೆ ಸದಾ ಹಿಂದೆ ಅಥವಾ ಮುಂದೆ ಇದ್ದೇ ಇರುತ್ತವೆ. ಇದರಲ್ಲಿ ಸಮಯದ ಕರಾಮತ್ತು ಬಹಳವಿರುತ್ತದೆ. ಗೆಲುವನ್ನು ಸೋಲನ್ನಾಗಿ, ಸೋಲನ್ನು ಗೆಲುವನ್ನಾಗಿ ಮಾರ್ಪಡಿಸುವ ಶಕ್ತಿ ಸಮಯಕ್ಕಿದೆ. ಸಮಯವನ್ನು ಸರಿಯಾಗಿ ದುಡಿಸಿಕೊಳ್ಳುವ ವಿನಯ, ಬುದ್ಧಿವಂತಿಕೆ ನಮ್ಮದಾಗಿರಬೇಕು. ಜಾನಿ ಡೆಪ್ಪ್ ಎಡವಿದ್ದು ಇಲ್ಲೇ.

2000ನೇ ಇಸವಿಯಿಂದ ಒಂದು ಚಿತ್ರಕ್ಕೆ ಹತ್ತತ್ತಿರ 20 ಮಿಲಿಯನ್ ಡಾಲರ್ ಹಣವನ್ನು ಸಂಭಾವನೆಯಾಗಿ ಪಡೆಯುಲು ಶುರುಮಾಡಿದ್ದ ಜಾನಿ, ಕೆಲವೊಂದು ಸಿನಿಮಾಗಳಲ್ಲಿ 'ಪ್ರಾಫಿಟ್ ಶೇರಿಂಗ್' ಅಗ್ರಿಮೆಂಟ್ ಕೂಡ ಮಾಡಿಕೊಳ್ಳುತ್ತಾರೆ. 2010ರಲ್ಲಿ 'ಅಲಿಸ್ ಇನ್ ವಂಡರ್‌ಲ್ಯಾಂಡ್' ಸಿನಿಮಾ ಸೂಪರ್‌ಹಿಟ್ ಎನಿಸಿಕೊಳ್ಳುತ್ತದೆ. 2011ರಲ್ಲಿ 'ಪೈರೇಟ್ಸ್ ಆಫ್ ಕೆರಿಬಿಯನ್ ಸ್ಟ್ರೇಂಜರ್ ಟೈಡ್' ಸಿನಿಮಾ ಭರ್ಜರಿ ಯಶಸ್ಸು ಕಾಣುತ್ತದೆ. ಈ ಸರಣಿಯಲ್ಲಿ ಈ ಚಿತ್ರವೊಂದೇ ಜಗತ್ತಿನಾದ್ಯಂತ 1 ಬಿಲಿಯನ್ ಡಾಲರ್ ಸಂಗ್ರಹಣೆ ಮಾಡುತ್ತದೆ. ಇದು ಜಾನಿ ಬದುಕಿನ ಯಶಸ್ಸಿನ ತುಟ್ಟತುದಿ ಎನ್ನಬಹುದು. ಯಶಸ್ಸು ಪಡೆದುಕೊಳ್ಳುವುದು, ಪಡೆದುಕೊಂಡ ಯಶಸ್ಸನ್ನು ಉಳಿಸಿಕೊಳ್ಳುವುದಕ್ಕಿಂತ ಸುಲಭ. ಯಶಸ್ಸನ್ನು ದಕ್ಕಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ.

ಒಂದು ಕಾಲಕ್ಕೆ, ವಾರಕ್ಕೆ 30 ಡಾಲರ್ ಸಿಗುವ ಸೇಲ್ಸ್‌ಮ್ಯಾನ್ ವೃತ್ತಿಯಲ್ಲಿದ್ದ ಜಾನಿ ಡೆಪ್ಪ್ ಹಣಕಾಸು ನಿರ್ವಹಣೆಯಲ್ಲಿ ಸೋಲುತ್ತಾರೆ. ಬದುಕು ಸದಾ ಹೀಗೇ ಇರುವುದಿಲ್ಲ, ಅದು ಯಾವಾಗ ಬೇಕಾದರೂ ಬದಲಾಗಬಹುದು ಎನ್ನುವ ಸಾಮಾನ್ಯ ಜ್ಞಾನ ಅವರಲ್ಲಿ ಇಲ್ಲವಾಗುತ್ತದೆ. ಈ ಸಮಯದಲ್ಲಿ ಅವರ ಒಟ್ಟು ನಿವ್ವಳ ಆಸ್ತಿ 900 ಮಿಲಿಯನ್ ಡಾಲರ್ ಆಗಿರುತ್ತದೆ. ಈ ಮೊತ್ತ ಇನ್ನಷ್ಟು ಹೆಚ್ಚಾಗಿರಬಹುದಿತ್ತು. ಆದರೆ ಜಾನಿ ಡೆಪ್ಪ್ ಜೀವನಶೈಲಿ ಬದಲಾಗಿಹೋಗುತ್ತದೆ. ಅವರ ಖರ್ಚು ತಿಂಗಳಿಗೆ 4 ಮಿಲಿಯನ್ ಡಾಲರ್ (33 ಕೋಟಿ ರುಪಾಯಿ) ಎಂದರೆ ನೀವು ಊಹಿಸಿಕೊಳ್ಳಬಹುದು. ಯಾಚ್, ಪ್ರೈವೇಟ್ ಜೆಟ್, ಹೆಂಡ, ಹೆಣ್ಣು, ಐಷಾರಾಮಿ ಜೀವನ ಅವರ ಹಣವನ್ನು ಕರಗಿಸುತ್ತಾ ಹೋಗುತ್ತವೆ. ನಂತರದ ದಿನಗಳಲ್ಲಿ ಬಂದ ಚಲನಚಿತ್ರಗಳು ಹಿಂದಿನ ಯಶಸ್ಸು ನೀಡುವಲ್ಲಿ ವಿಫಲವಾಗುತ್ತವೆ. 2000ನೇ ಇಸವಿಯಿಂದಲೇ ಐಷಾರಾಮಿ ಜೀವನದಲ್ಲಿ ಲೋಲುಪ್ತನಾಗಿದ್ದ ಜಾನಿಯನ್ನು ಯಶಸ್ಸು ಕೈಹಿಡಿದಿತ್ತು. 2010ರ ನಂತರ ಯಶಸ್ಸಿನ ಶಿಖರಾಗ್ರದಲ್ಲಿ ತಪ್ಪನ್ನು ತಿದ್ದಿಕೊಳ್ಳುವ ಬದಲು ಜಾನಿ ಅದೇ ತಪ್ಪನ್ನು ಮಾಡುತ್ತಾರೆ. ಹೀಗಾಗಿ 2017ರ ವೇಳೆಗೆ ತಮ್ಮ ಸಂಪತ್ತಿನ ಬಹುಭಾಗವನ್ನು ಕಳೆದುಕೊಳ್ಳುತ್ತಾರೆ. 2010ರಿಂದ 2017ರವರೆಗಿನ ಅವಧಿಯಲ್ಲಿ ಜಾನಿ ಕಳೆದುಕೊಂಡ ಆಸ್ತಿಯ ಮೊತ್ತ 650 ಮಿಲಿಯನ್ ಡಾಲರ್. ಇದು ಭಾರತೀಯ ರುಪಾಯಿಯಲ್ಲಿ 5,428 ಕೋಟಿ!

ಸಮಯವು ನಮ್ಮ ಪರ ಇರುವವರೆಗೆ ಎಲ್ಲವೂ ಸರಿಯಾಗಿರುತ್ತದೆ, ಒಮ್ಮೆ ಅದು ಕೈಕೊಡಲು ಶುರುಮಾಡಿದರೆ ಏನಾಗುತ್ತದೆ ಎನ್ನುವುದಕ್ಕೆ ಜಾನಿ ಡೆಪ್ಪ್ ಜೀವನ ಉದಾಹರಣೆ. ಇತರರ ಜೀವನದಿಂದ/ತಪ್ಪುಗಳಿಂದ ಕಲಿಯಬೇಕು, ಆದರೆ ಕೆಲವರು ಕಲಿಯುವುದಿಲ್ಲ ಎನ್ನುವುದಕ್ಕೆ ಕೂಡ ಜಾನಿ ಉದಾಹರಣೆ. ಈ ರೀತಿ, ಒಲಿದುಬಂದ ಯಶಸ್ಸು, ಕೀರ್ತಿ, ಹಣವನ್ನು ಸರಿಯಾಗಿ ಬಳಸಿಕೊಳ್ಳದೆ ಕೈಚೆಲ್ಲಿದವರ ದೊಡ್ಡ ಪಟ್ಟಿಯಿದೆ. 2017ರಲ್ಲಿ, ಹಣಕಾಸು ಸರಿಯಾಗಿ ನಿರ್ವಹಣೆ ಮಾಡಿಲ್ಲ, ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ/ತಮ್ಮ ಅನುಕೂಲಕ್ಕೆ ಬಳಸಿಕೊಂಡಿದ್ದಾರೆ ಎನ್ನುವ ಆರೋಪಗಳನ್ನು ಮಾಡಿ ತಮ್ಮ ಬಿಸಿನೆಸ್

ಮ್ಯಾನೇಜರ್‌ಗಳಾದ ಜೋಯಲ್ ಮತ್ತು ರಾಬರ್ಟ್ ಮಂಡೇಲ ಅವರ ಮೇಲೆ ಕೇಸು ದಾಖಲಿಸುತ್ತಾರೆ. ಇದಕ್ಕೆ ಪ್ರತಿಯಾಗಿ ಆ ಮ್ಯಾನೇಜರ್‌ಗಳು ಕೂಡ ಜಾನಿ ಮಾಡುತ್ತಿದ್ದ ಖರ್ಚಿನ ಲೆಕ್ಕಾಚಾರವೆಲ್ಲವನ್ನೂ ನ್ಯಾಯಾಲಯದ ಮುಂದೆ ತೆರೆದಿಡುತ್ತಾರೆ. ''ಈ ಮಟ್ಟದ ಖರ್ಚುಮಾಡುತ್ತಾ ಹೋದರೆ ಬೀದಿಗೆ ಬರುವುದು ಗ್ಯಾರಂಟಿ ಎಂದು ಎಷ್ಟು ಹೇಳಿದರೂ ಆತ ಕೇಳಲಿಲ್ಲ, ಆತನದು ಸ್ವಾರ್ಥಭರಿತ, ಅಜಾಗರೂಕ ಮತ್ತು ಬೇಜವಾಬ್ದಾರಿಯುತ ಜೀವನಶೈಲಿ'' ಎನ್ನುವ ಪ್ರತ್ಯಾರೋಪ ಮಾಡುತ್ತಾರೆ. ನ್ಯಾಯಾಲಯವು ಈ ವಿಚಾರದಲ್ಲಿ ತೀರ್ಪುನೀಡುವ ಮುನ್ನವೇ ಜಾನಿ ಡೆಪ್ಪ್ ತಮ್ಮ ಮ್ಯಾನೇಜರ್‌ಗಳ ಜತೆ ಕುಳಿತು ಮಾತುಕತೆ ನಡೆಸುವ ಮೂಲಕ ಈ ವಿವಾದವನ್ನು ಬಗೆಹರಿಸಿಕೊಳ್ಳುತ್ತಾರೆ.

ಅಂಬರ್ ಹರ್ಡ್ ಎಂಬ ಮಹಿಳೆಯನ್ನು ಜಾನಿ ಡೆಪ್ಪ್ 2015ರಲ್ಲಿ ಮದುವೆಯಾಗಿರುತ್ತಾರೆ. ಆದರೆ, ಜಾನಿ ಡೆಪ್ಪ್ ಹೊಡೆಯುತ್ತಾರೆ, ಬೈಯುತ್ತಾರೆ ಎಂಬ ಆರೋಪವನ್ನು ಹೊರಿಸಿ ಅಂಬರ್ 2016ರಲ್ಲಿ ವಿಚ್ಛೇದನಕ್ಕೆ ಅರ್ಜಿ ಹಾಕುತ್ತಾರೆ. ಆಗ ನ್ಯಾಯಾಲಯವು, ''ಜಾನಿ ಡೆಪ್ಪ್‌ರ ಹೆಸರಿಗೆ ಕಳಂಕ ತರುವ ಸಲುವಾಗಿ ಈ ರೀತಿ ಮಾಡಲಾಗಿದೆ; ಹೀಗಾಗಿ ವಿಚ್ಛೇದನದ ಬಾಬತ್ತು 2 ಮಿಲಿಯನ್ ಡಾಲರ್ ಹಣವನ್ನು ಡೆಪ್ಪ್ ಕೊಡಬೇಕು ಹಾಗೂ ಹೆಸರು ಹಾಳು ಮಾಡಿದ ಸಲುವಾಗಿ 10 ಮಿಲಿಯನ್ ಡಾಲರ್ ಹಣವನ್ನು ಜಾನಿಗೆ ಅಂಬರ್ ಕೊಡಬೇಕು'' ಎನ್ನುವ ತೀರ್ಪನ್ನು ನೀಡುತ್ತದೆ. 'ಗೆಲ್ಲುತ್ತಿದ್ದಾಗ ರಾಜ್ಯವೆಲ್ಲಾ ಬಳಗ, ಸೋತಾಗ ಖಾಲಿ ಮನೆ' ಎನ್ನುವುದನ್ನು ಮನನ ಮಾಡಿಸುವುದೇ ಈ ವಿಷಯವನ್ನು ಇಲ್ಲಿ ಬರೆದಿದ್ದರ ಉದ್ದೇಶ.

ಜಾನಿ ಡೆಪ್ಪ್ ಸಿನಿಮಾ ಮಾಡುವುದು ನಿಲ್ಲಿಸಿಲ್ಲ, ಆತನ ಚಿತ್ರಗಳು ಬರುತ್ತಿವೆ. ಪರವಾಗಿಲ್ಲ ಎನ್ನುವ ಮಟ್ಟದ ಹೆಸರು ಮತ್ತು ಕಲೆಕ್ಷನ್ ಕೂಡ ಮಾಡುತ್ತಿವೆ. ಆದರೆ ಅಂದಿನ ಯಶಸ್ಸು ಮರಳಿ ಸಿಕ್ಕಿಲ್ಲ. ಬದುಕೆಂದರೆ ಯಾವಾಗ ಬೇಕಾದರೂ ಬದಲಾಗಬಹುದು ನೋಡಿ- ಜಾನಿ ಡೆಪ್ಪ್ ನಾಳೆ ಹಿಂದಿನ ಎತ್ತರವನ್ನು ಮರಳಿ ಏರಬಹುದು ಅಥವಾ ಅದಕ್ಕಿಂತ ಹೆಚ್ಚಿನ ಯಶಸ್ಸು ಕಾಣಬಹುದು. ಜಾನಿ ತಮ್ಮ ತಪ್ಪಿನಿಂದ ಪಾಠ ಕಲಿತಿದ್ದರೆ ಆಗ ಬದುಕನ್ನು ನಿಭಾಯಿಸುವುದು ಸುಲಭ.

ಜಾನಿ ಡೆಪ್ಪ್ ಜೀವನ ನಮಗೆ ಹಲವು ಪಾಠಗಳನ್ನು ಹೇಳುತ್ತದೆ, ಕೇಳುವ ಕಿವಿ ನಮ್ಮದಾಗಿರಬೇಕು:

- ಗೆಲುವು, ಯಶಸ್ಸು ಬಂದಾಗ ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಬಹಳ ಮುಖ್ಯ. ಹಣ ಮತ್ತು ಕೀರ್ತಿ ಎರಡೂ ಮನುಷ್ಯನ ಅತಿದೊಡ್ಡ ಶತ್ರುಗಳಾಗಿ ಬದಲಾಗಿಬಿಡುತ್ತವೆ. ಇದಕ್ಕೆ ನಾವು ನೂರಾರು ಉದಾಹರಣೆಗಳನ್ನು ಕಾಣಬಹುದು. ಇವೆರಡೂ ತಲೆಗೆ ಇಳಿಯದಂತೆ ಸಂಯಮದಿಂದ ಇದ್ದವರು ಮಾತ್ರ ನಿಜಾರ್ಥದಲ್ಲಿ ಜಯಶೀಲರಾಗುತ್ತಾರೆ.
- ಕುಳಿತು ತಿನ್ನುವವನಿಗೆ ಮಾತ್ರವಲ್ಲ, ಮಿತಿಯಿಲ್ಲದೆ ಖರ್ಚು ಮಾಡುವವರ ಕುಡಿಕೆ ಕೂಡ ಖಾಲಿಯಾಗುತ್ತದೆ. ಆದಾಯಕ್ಕೆ ಮೀರಿದ ಖರ್ಚು ಮಾಡುತ್ತಾ ಹೋದರೆ ಏನಾಗುತ್ತದೆ ಎನ್ನುವುದಕ್ಕೆ ಜಾನಿ ಅವರ ಬದುಕು ಉದಾಹರಣೆ. ಎಷ್ಟೇ ಹಣ ಸಂಪಾದಿಸಿರಲಿ ಅದರ ನಿರ್ವಹಣೆ ಸರಿಯಾಗಿ ಮಾಡಬೇಕು. ನಿರ್ವಹಣೆ ಸರಿಯಾಗಿರದಿದ್ದರೆ, ದೊಡ್ಡ ಹಡಗಿನಲ್ಲಿ ಸಣ್ಣ ರಂಧ್ರ ಮಾಡುವ ಕೆಲಸವನ್ನು ಅದು ಮಾಡುತ್ತದೆ. ಸಮಯ ಸರಿಯುತ್ತ ಹಡಗು ಮುಳುಗುತ್ತದೆ.
- ನಾವ್ಯಾರೇ ಆಗಿರಲಿ, ಎಷ್ಟೇ ಪ್ರಸಿದ್ಧರಾಗಿರಲಿ, ಹಣವಂತರಾಗಿರಲಿ ನಮ್ಮೊಳಗೆ ಒಬ್ಬ ಪುಟ್ಟ ಅಕೌಂಟೆಂಟ್ ಇರಬೇಕಾಗುತ್ತದೆ. ಈ ವರ್ಷ ನಾನು ಗಳಿಸಿದ ಹಣವೆಷ್ಟು? ಅದರಲ್ಲಿ ಖರ್ಚೆಷ್ಟು? ಯಾವ ವಿಷಯಕ್ಕೆ ಎಷ್ಟು ಖರ್ಚಾಗಿದೆ? ಉಳಿದ ಹಣವೆಷ್ಟು? ಉಳಿದಿದ್ದರೆ ಅದನ್ನು ಎಲ್ಲಿ ಹೂಡಿಕೆ ಮಾಡಲಾಗಿದೆ? ನನ್ನ ಇಂದಿನ ಹಣಕಾಸು ಸ್ಥಿತಿ ಯೇನು? ಈ ಎಲ್ಲ ಅವಲೋಕನವನ್ನು ಪ್ರಸಿದ್ಧರು, ಹಣವಂತರು ಮಾತ್ರವಲ್ಲ ಪ್ರತಿಯೊಬ್ಬರೂ ಮಾಡಬೇಕು.
- ಬದುಕು ಎಲ್ಲರಿಗೂ ಪ್ರಸಿದ್ಧಿ ಮತ್ತು ಹಣವನ್ನು ಕರುಣಿಸುವುದಿಲ್ಲ. ಅವು ಸಿಕ್ಕಾಗ ಅದನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಮನಸ್ಸಿನ ಮೇಲೆ ನಿಯಂತ್ರಣ ಹೊಂದಬೇಕು. ಮೋಜು ಮಾಡುವುದೇ ಜೀವನವಲ್ಲ. ಸಮಾಜ ಹಾಕಿರುವ ಪರಿಧಿಯಲ್ಲಿ, ನಮ್ಮ ಲಕ್ಷ್ಮಣರೇಖೆ ಎಳೆದುಕೊಂಡು ಬದುಕಬೇಕು.
- ಮಾಡಿದ ಎಲ್ಲಾ ಕೆಲಸಗಳೂ ಗೆಲ್ಲುತ್ತವೆ, ಯಶಸ್ಸು ತಂದುಕೊಡುತ್ತವೆ ಎನ್ನುವ ಗ್ಯಾರಂಟಿಯನ್ನು ಯಾರೂ ಕೊಡಲಾಗುವುದಿಲ್ಲ. ಪ್ರಯತ್ನಪಡುತ್ತಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮಾರುಕಟ್ಟೆಯಲ್ಲಿ ಇರಬೇಕು. ಇರುವಿಕೆ ಬಹಳ ಮುಖ್ಯ. 'ಕ್ವಿಟ್' ಎನ್ನದೆ ಮಾರುಕಟ್ಟೆಯಲ್ಲಿ ಇದ್ದರೆ ಸಾಕು, ಸೋಲು-ಗೆಲುವು ಎರಡೂ ಯಾವುದೋ ಒಂದು ಮೂಲೆಯಲ್ಲಿ ಜತೆಯಾಗುತ್ತವೆ.

ಅಭಿಮತ

ರಮಾನಂದ ಶರ್ಮಾ

ವಿಪರ್ಯಾಸಗಳ ಬೀಡು!

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಮತದಾರರಿಗೆ ಪಂಚ ಗ್ಯಾರಂಟಿಗಳ ಭರವಸೆ ನೀಡಿ, ಅಖಾಡದಲ್ಲಿ ಸೆಣಸಿ ಗೆದ್ದು ಅಧಿಕಾರದ ಗದ್ದುಗೆಯೇರಿದಾಗ ಇಡೀ ದೇಶವೇ ಬೆಕ್ಕಸ ಬೆರಗಾಗಿತ್ತು, ಏನೆಲ್ಲ ಲೆಕ್ಕಾಚಾರ ಹಾಕಿದ್ದ ರಾಜಕೀಯ ವಿಶ್ಲೇಷಕರೂ ಅಚ್ಚರಿಗೊಂಡಿದ್ದರು. ಚುನಾವಣೆಯಲ್ಲಿ ಜಯಗಳಿಸಲು ಕಾಂಗ್ರೆಸ್ ಹೆಣೆದಿದ್ದ ಈ ಹೊಸ ಕಾರ್ಯತಂತ್ರ ಭಾರಿ ಯಶಸ್ಸು ಗಳಿಸಿತ್ತು. ಚುನಾವಣೆಯಲ್ಲಿ ಸೋತ ಪಕ್ಷಗಳವರು, ಮಾಧ್ಯಮದವರು, ಪ್ರಗತಿಪರರು, ಪ್ರಜ್ಞಾವಂತರು, ದೇಶಪ್ರೇಮಿಗಳು, ಬುದ್ಧಿಜೀವಿಗಳೆಂಬ ಹಣೆಪಟ್ಟಿ ಅಂಟಿಸಿಕೊಂಡವರು, ಅಭಿವೃದ್ಧಿಯ ಹರಿಕಾರರು ಎಂಬ ಪೋಸು ನೀಡಿದವರು ಹೀಗೆ ಬಹುತೇಕರು ಈ 'ಗ್ಯಾರಂಟಿ' ಕೊಡುಗೆಗಳನ್ನು ಮನಸಾರೆ ಟೀಕಿಸಿದರು, ಲೇವಡಿ ಮಾಡಿದರು. ''ಇದು ಚುನಾವಣೆಯಲ್ಲ, ಮತಗಳ ಖರೀದಿ; ಇದರಿಂದ ಆರ್ಥಿಕತೆ ಹಳ್ಳ ಹಿಡಿಯುತ್ತದೆ, ದೇಶ ದಿವಾಳಿಯಾಗುತ್ತದೆ'' ಎಂದೆಲ್ಲಾ ಬೊಬ್ಬೆ ಹಾಕಿದರು.

'ಮಳೆ ನಿಂತರೂ, ಮರದಿಂದ ಹನಿ ಉದುರುವುದು ನಿಲ್ಲಲಿಲ್ಲ' ಎನ್ನುವಂತೆ ಈ ಕೂಗು ಸದ್ದು ಮಾಡುತ್ತಲೇ ಇದೆ. ವಿಪರ್ಯಾಸವೆಂದರೆ, ಹೀಗೆ ಗದ್ದಲ ಎಬ್ಬಿಸಿದವರೇ, ಲೇವಡಿ ಮಾಡಿದವರೇ, ಅಭಿವೃದ್ಧಿಯ ಹಳಿ ತಪ್ಪಿತು ಎಂದು ಬೊಬ್ಬೆ ಹಾಕಿದವರೇ ಇಂಥ 'ಗ್ಯಾರಂಟಿ'ಗಳನ್ನು ಆಶ್ರಯಿಸಿ ವಿವಿಧ ರಾಜ್ಯಗಳಲ್ಲಿನ ಇತ್ತೀಚಿನ ಚುನಾವಣೆಗಳಲ್ಲಿ ಅಧಿಕಾರದ ಗದ್ದುಗೆ ಹಿಡಿದಿದ್ದಾರೆ. ಆ ಚುನಾವಣೆಗಳನ್ನು ಬಹುತೇಕ ಎಲ್ಲರೂ 'ರಾಜಕೀಯ ಪಕ್ಷಗಳ ನಡುವಿನ ಹಣಾಹಣಿ' ಎನ್ನದೇ, 'ಉಚಿತಗಳ ಮಧ್ಯದ ಮಹಾಕಾಳಗ' ಎಂದೇ ಬಣ್ಣಿಸಿದರು. 'ತಾನು ಮಾಡಿದರೆ ಸರಿ, ಅದನ್ನೇ ಇನ್ನೊಬ್ಬ ಮಾಡಿದರೆ ತಪ್ಪು' ಎನ್ನುವ ಸಿದ್ಧಾಂತ ಮತ್ತೊಮ್ಮೆ ದೃಢೀಕರಿಸಲ್ಪಟ್ಟಿತು. ತಮಾಷೆಯೆಂದರೆ, ಹೀಗೆ ಟೀಕೆ ಮಾಡಿದವರಾರೂ 'ಉಚಿತ ಕೊಡುಗೆಗಳನ್ನು' ನಿರಾಕರಿಸದೆ ಸ್ವೀಕರಿಸಿದ್ದಾರೆ. ಯಾವುದಾದರೂ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡದಿದ್ದರೆ, ಬಿಡುಗಡೆಯಲ್ಲಿ ವಿಳಂಬವಾದರೆ, ಯಾವುದಾದರೂ ಯೋಜನೆಗಳಿಗೆ ಅನುಮತಿ ಸಿಗದಿದ್ದರೆ ಈ ಬಿಟ್ಟಿಭಾಗ್ಯಗಳನ್ನು ಹೊಣೆಮಾಡುವುದು ತೀರಾ ಮಾಮೂಲಾಗಿಬಿಟ್ಟಿದೆ.

ಮಹಾರಾಷ್ಟ್ರದಲ್ಲಿ 'ಲಡಕಿ ಬಹೆನ್' ಹೆಸರಿನಲ್ಲಿ ಮಹಿಳೆಯರಿಗೆ ಪ್ರತಿ ತಿಂಗಳೂ 1,800 ರು. ಕೊಡುತ್ತಿದ್ದು, ಚುನಾವಣೆಯ ನಂತರ ಆ ಮೊತ್ತವನ್ನು 2,100 ರು.ಗೆ ಏರಿಸುವುದಾಗಿ ಹೇಳಲಾಗಿತ್ತು. ಆದರೆ, ಹೆಚ್ಚಿಸುವ ಬದಲಿಗೆ, ತಪ್ಪು ಮಾಹಿತಿಯ ಹೆಸರಲ್ಲಿ ಸುಮಾರು 5 ಲಕ್ಷ ಫಲಾನುಭವಿಗಳನ್ನು ಪಟ್ಟಿಯಿಂದ ತೆಗೆಯುವ ಪ್ರಕ್ರಿಯೆ ಜಾರಿಯಲ್ಲಿದೆಯಂತೆ. 36,000 ಕೋಟಿ ರು. ಅಂದಾಜು ವೆಚ್ಚದ ಈ ಯೋಜನೆ ರಾಜ್ಯ ಸರಕಾರಕ್ಕೆ ಬಿಸಿತುಪ್ಪವಾಗಿದೆಯಂತೆ. ದೆಹಲಿಯಲ್ಲಿ ಮಹಿಳೆಯರಿಗೆ ನೀಡಲಾಗಿದ್ದ 'ಮಾಸಾಶನದ ಭರವಸೆ'ಗೆ ಇನ್ನೂ ಚಾಲನೆ ಸಿಕ್ಕಿಲ್ಲ ಎಂದು ಅಲ್ಲಿನ ವಿಪಕ್ಷ ಏರುದನಿಯಲ್ಲಿ ಸದ್ದುಮಾಡುತ್ತಿದೆ. 'ಉಚಿತಗಳು ಎಲ್ಲಿ?' ಎಂದು ಆಮ್ ಆದ್ಮಿ ಪಕ್ಷ ಬೊಬ್ಬಿರಿಯುತ್ತಿದೆಯಂತೆ! ಗ್ಯಾರಂಟಿಗಳಿಗೆ ಹಣ ಹೊಂದಿಸಲಾಗದೆ ತೆಲಂಗಾಣದ ಮುಖ್ಯಮಂತ್ರಿಗಳು ಪರಿತಪಿಸುತ್ತಿದ್ದರೆ, ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಕೂಡ ಪರಿಸ್ಥಿತಿ ಭಿನ್ನವಾಗಿಲ್ಲ ಎಂದು ಕೆಲ ಮಾಧ್ಯಮ ವರದಿಗಳು ಹೇಳುತ್ತಿವೆ.

ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ಇದು ಜಾರಿಯಾಗಿ ಇನ್ನೂ ವರ್ಷ ಆಗಬೇಕಾಗಿದ್ದು, ಅದರ ಪರಿಣಾಮದ ಅರಿವು ಚುಚ್ಚಲು ಇನ್ನೂ ಸ್ವಲ್ಪ ಕಾಲ ಬೇಕು ಎನ್ನಲಾಗುತ್ತದೆ. ವಿಚಿತ್ರವೆಂದರೆ, ಉಚಿತಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯದ ಹಣಕಾಸು ಸ್ಥಿತಿಯನ್ನು ಟೀಕಿಸುವವರು, ಮಹಾರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಬಗ್ಗೆ ತುಟಿಪಿಟಿಕ್ ಎನ್ನುವುದಿಲ್ಲ. ರಾಜಸ್ಥಾನದಲ್ಲಿ ಹಿಂದಿನ ಸರಕಾರ ರಚಿಸಿದ್ದ ಕೆಲವು ಜಿಲ್ಲೆಗಳನ್ನು ಈಗಿನ ಸರಕಾರವು ಆರ್ಥಿಕ ಕೊರತೆಯಿಂದಾಗಿ ರದ್ದು ಮಾಡಿದೆಯಂತೆ. ಟೀಕಿಸುವವರ ಕಣ್ಣಿಗೆ ಇದು ಕಾಣದಿರುವುದು ಆಶ್ಚರ್ಯ. ಆರ್ಥಿಕ ಪರಿಸ್ಥಿತಿಯನ್ನು ಮುಂದಿಟ್ಟುಕೊಂಡು ತೆಲಂಗಾಣ, ಕರ್ನಾಟಕ ಮತ್ತು ಹಿಮಾಚಲ ಪ್ರದೇಶವನ್ನು ಟೀಕಿಸಿದಷ್ಟು ಇತರ ರಾಜ್ಯಗಳನ್ನು ಟೀಕಿಸುತ್ತಿಲ್ಲ. ಇಂಥ ವಿಷಯಗಳಲ್ಲೂ ರಾಜಕೀಯ ಕೈಯಾಡಿಸುವುದು ತೀರಾ ವಿಚಿತ್ರ.

'ನಾನು, ನಮ್ಮವರು' ಎನ್ನುವ ಕುಟುಂಬ ರಾಜಕಾರಣಕ್ಕೆ ಭಾರತದಲ್ಲಿ ಸುದೀರ್ಘ ಇತಿಹಾಸವಿದೆ. ವಿಚಿತ್ರವೆಂದರೆ ಈ ನಿಟ್ಟಿನಲ್ಲಿ ಒಂದು ಕುಟುಂಬವನ್ನಷ್ಟೇ ಬೆರಳುಮಾಡಿ ತೋರಿಸಿ ಕುಟುಂಬ ರಾಜಕಾರಣವನ್ನು ಮನಸ್ವೀ ಟೀಕಿಸಲಾಗುತ್ತದೆ, ಇದೊಂದು ಮಹಾಪ್ರಮಾದವೆಂದು ಚಿತ್ರಿಸಲಾಗುತ್ತದೆ. ತಮ್ಮ ಹಿಂದೆ-ಮುಂದೆ, ಅಕ್ಕ-ಪಕ್ಕದಲ್ಲಿ ಮತ್ತು ಕಣ್ಣೆದುರಿಗೆ ಇರುವ ಉದಾಹರಣೆಗಳನ್ನು ಜಾಣತನದಿಂದ ಮರೆಯಲಾಗುತ್ತದೆ. ಸಾವಿಲ್ಲದ ಮನೆಯಿಂದ ಸಾಸಿವೆಯನ್ನಾದರೂ ತರಬಹುದು, ಕುಟುಂಬ ರಾಜಕಾರಣವಿಲ್ಲದ ರಾಜಕೀಯ ಸಜ್ಜಿಕೆಯನ್ನು ನೋಡಲು ಸಾಧ್ಯವೇ?

ಇನ್ನು, ವರ್ಷಗಳ ಹಿಂದೆ ರಾಜಕಾರಣಿಯೊಬ್ಬರು ಸಂವಿಧಾನ ಬದಲಾವಣೆ ಬಗ್ಗೆ ಮಾತನಾಡಿದಾಗ, ಇಡೀ ದೇಶವೇ ಅವರನ್ನು ತರಾಟೆಗೆ ತೆಗೆದುಕೊಂಡಿತ್ತು ಮತ್ತು ಅವರ ರಾಜಕೀಯ ಭವಿಷ್ಯವನ್ನು ಮೊಟಕುಗೊಳಿಸಿತ್ತು. ಅಂದು ಅವರನ್ನು ಹಿಗ್ಗಾಮುಗ್ಗಾ ಛೇಡಿಸಿದ ಪಕ್ಷದವರೇ ಈಗ ಸಂವಿಧಾನದ ಬದಲಾವಣೆ ಬಗ್ಗೆ ಮಾತನಾಡುತ್ತಿದ್ದಾರೆ (ಅವರು ಹಾಗೆ ಮಾತನಾಡಿರುವುದನ್ನು ಅಲ್ಲಗಳೆದಿದ್ದಾರೆ). 'ದ್ವಿಮುಖ ನೀತಿ' ಎಂದರೇನು ಎಂದು ತಿಳಿಯದವರಿಗೆ, ಹಾಗೆಂದರೇನು ಎಂದು ಅರಿಯಲು ಇದೊಂದು ಉದಾಹರಣೆ ಎನ್ನಬಹುದು. ಪ್ರಯಾಣ ದರ, ನೀರು, ವಿದ್ಯುತ್, ಪೆಟ್ರೋಲ್ ದರ ಏರಿಕೆ ಬಗ್ಗೆ ಟೀಕಿಸಿದವರು ಶಾಸಕರ/ಸಂಸದರ ಸಂಬಳವನ್ನು ಏರಿಸಿದರೂ ಮೌನವಾಗಿದ್ದರು. ಇಂಥ ವೇತನ ಏರಿಕೆ ಸಂಬಂಧಿತ ವಿಧೇಯಕಗಳು ಚರ್ಚೆ, ಪ್ರತಿಭಟನೆ, ಸಭಾತ್ಯಾಗ, ಅಹೋರಾತ್ರಿ ಧರಣಿ ಇಲ್ಲದೆಯೇ ಧ್ವನಿಮತದಿಂದ ಅಂಗೀಕಾರವಾಗುತ್ತವೆ. ಆರ್ಥಿಕ ಸಂಕಷ್ಟದ ಮಧ್ಯದಲ್ಲೂ ಸರಕಾರವೊಂದು ತನ್ನ ಮಂತ್ರಿಗಳಿಗಾಗಿ 10 ಕೋಟಿ ರು. ವೆಚ್ಚದಲ್ಲಿ 33 ಕಾರುಗಳನ್ನು ಖರೀದಿಸಿದಾಗ ಅಪಸ್ವರ ಕೇಳಿಬರಲಿಲ್ಲ. ತೀವ್ರ ಆರ್ಥಿಕ ಸಂಕಷ್ಟದಿಂದಾಗಿ ತೆಲಂಗಾಣ ಸರಕಾರವು ತನ್ನ ನೌಕರರಿಗೆ ಸಂಬಳ ನೀಡುವುದಕ್ಕೂ ಹೆಣಗಾಡುತ್ತಿದೆಯಂತೆ; ಆದರೆ ಹೈದರಾಬಾದ್‌ನಲ್ಲಿ ನಡೆಯುವ ಸೌಂದರ್ಯ ಸ್ಪರ್ಧೆಗೆ 200 ಕೋಟಿ ರುಪಾಯಿಯನ್ನು ಅದು ಖರ್ಚುಮಾಡುತ್ತಿದೆ ಎನ್ನುವ ಆರೋಪ ಕೇಳಿಬರುತ್ತಿದೆ. ಇದರ ಸತ್ಯಾಸತ್ಯತೆ ತಿಳಿಯದು. 'ಧರ್ಮಾಧಾರಿತ ಮೀಸಲಾತಿ ಅಸಾಂವಿಧಾನಿಕ' ಎಂದು ಹೇಳುವವರು ವಲಯವಾರು, ಭಾಷಾವಾರು ಮೀಸಲಾತಿಯ ಬಗ್ಗೆ ಮಾತನಾಡುವುದಿಲ್ಲ. ಹೈಕಮಾಂಡ್ ಪದ್ಧತಿಗೆ ಮಣೆ ಹಾಕಿರುವ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ರಾಜಕಾರಣಿಗಳಿಗೆ ಸ್ವಂತಿಕೆಯಿರದೇ, ತಮ್ಮ ಮನಸ್ಸು ಒಪ್ಪಲಿ ಬಿಡಲಿ, ಹೈಕಮಾಂಡ್‌ನ ನಿರ್ದೇಶನವನ್ನು ಅನುಸರಿಸುತ್ತಾರೆ. ಈ ಪರಿಪಾಠದ ಬಗ್ಗೆ ಅವರಿಗೆ ಕಿಂಚಿತ್ತೂ ಬೇಸರ ಇರುವುದಿಲ್ಲ. ಸದನದಲ್ಲಿ ಸರಕಾರ ಯಾವುದೇ ವಿಧೇಯಕವನ್ನು ಮಂಡಿಸಿದರೂ, ಆಡಳಿತ ಪಕ್ಷದವರು 'ವಿಪ್' ಹೆಸರಲ್ಲಿ ಕೈಜೋಡಿಸುತ್ತಾರೆ, ವಿಪಕ್ಷದವರು 'ವಿರೋಧಿಸಬೇಕು' ಎಂಬ ಒಂದೇ ಕಾರಣಕ್ಕೆ ಅದನ್ನು ವಿರೋಧಿಸುತ್ತಾರೆ. ಇಲ್ಲಿ ಬಿಚ್ಚು ಮನಸ್ಸಿನ ಚರ್ಚೆ, ವಿಶ್ಲೇಷಣೆ ಇರುವುದಿಲ್ಲ. ಸದನದಲ್ಲಿ ಕೆಲವೊಮ್ಮೆ ಖಾಲಿ ಕುರ್ಚಿಗಳನ್ನು ನೋಡಿದಾಗ, 'ಈ ಭಾಗ್ಯಕ್ಕೆ ಚುನಾವಣೆ ಮತ್ತು ಜನಪ್ರತಿನಿಧಿಗಳು ಬೇಕಿತ್ತೇ?' ಎನಿಸದಿರದು. ಇದು ನಮ್ಮ ಮಾದರಿ ಪ್ರಜಾಪ್ರಭುತ್ವದ ವೈಶಿಷ್ಟ್ಯ!

ಮೇಲೆ ಉಲ್ಲೇಖಿಸಿರುವುದು ನಮ್ಮ ಆಡಳಿತ ವ್ಯವಸ್ಥೆಯಲ್ಲಿನ ದ್ವಿಮುಖ ನೀತಿ ಮತ್ತು ವಿಪರ್ಯಾಸಗಳ ಒಂದು ಸಣ್ಣ ಝಲಕ್. ವಿಚಿತ್ರವೆಂದರೆ ಇದನ್ನು ಪ್ರಶ್ನಿಸದೆ, 'ಪಾಲಿಗೆ ಬಂದಿದ್ದು ಪಂಚಾಮೃತ' ಎನ್ನುವಂತೆ ಜನರೂ ಇದಕ್ಕೆ ಹೊಂದಿಕೊಳ್ಳುತ್ತಾರೆ. 'ನಮ್ಮ ಆಡಳಿತ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವವು ವಿಶ್ವಕ್ಕೇ ಮಾದರಿ' ಎಂಬುದಾಗಿ ಲಭ್ಯವಿರುವ ಪ್ರತಿಯೊಂದು ವೇದಿಕೆಯಲ್ಲೂ ನಾವು ಭಾಷಣ ಬಿಗಿಯುತ್ತೇವೆ. ಆದರೆ ವಾಸ್ತವದಲ್ಲಿ, ಹೇಳಲಾಗದಷ್ಟು ತಗ್ಗು-ದಿಣ್ಣೆ-ಕೊರಕಲುಗಳು ಇಲ್ಲಿ ಮೈಚೆಲ್ಲಿವೆ. ಪ್ರಸಿದ್ಧ ನ್ಯಾಯವಾದಿ ನಾನಿ ಪಾಲ್ಕಿವಾಲಾ ಅವರು ಹೇಳಿದ, ''ನಮ್ಮದು ಮೊದಲನೇ ದರ್ಜೆಯ ಸಂವಿಧಾನ, ಎರಡನೇ ದರ್ಜೆಯ ಜನಜೀವನ ಮತ್ತು ಮೂರನೇ ದರ್ಜೆಯ ರಾಜಕಾರಣ'' ಎಂಬ ಮಾತು ಬೇಡವೆಂದರೂ ನೆನಪಾಗುವುದು ಈ ಕಾರಣಕ್ಕೇ!

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಾರತದಲ್ಲಿ ಜಾತ್ಯತೀತತೆ ಸತ್ತುಹೋಗಿದೆಯೇ?

ಸಂವಿಧಾನದ ಪ್ರಕಾರ, ಭಾರತವು ಒಂದು ಜಾತ್ಯತೀತ ರಾಷ್ಟ್ರ. ಆದರೆ ನಮ್ಮಲ್ಲಿ ಜಾತ್ಯತೀತತೆ ಸತ್ತುಹೋಗಿದೆಯೇ ಮತ್ತು ಭಾರತವು ಕೊನೆಗೂ ಒಂದು ಹಿಂದೂ ರಾಷ್ಟ್ರವಾಗಿದೆಯೇ ಎಂಬುದು ನನಗೆ ಗೊತ್ತಿಲ್ಲ. ಆದರೆ, ಜಾತ್ಯತೀತತೆಯಲ್ಲಿ ಮತ್ತು ಸಂವಿಧಾನದಲ್ಲಿ ನಂಬಿಕೆ ಇರುವವರೆಲ್ಲರೂ ಗಾಢನಿದ್ರೆಯಲ್ಲಿ ಇರುವಂತೆ ಭಾಸವಾಗುತ್ತಿದೆ.

ವಿಷಾದಯೋಗ
ಯಶವಂತ್ ಸಿನ್ಹಾ
vveditoped@gmail.com

ನಮ್ಮ ಸಂವಿಧಾನದ ಪ್ರಕಾರ, ಭಾರತವು ಒಂದು ಜಾತ್ಯತೀತ ರಾಷ್ಟ್ರ. ಈ ತತ್ವವು ಸಂವಿಧಾನದ 25ರಿಂದ 28ರವರೆಗಿನ ವಿಧಿಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಇದನ್ನು ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಭಾರತ ಎಂಬ ರಾಷ್ಟ್ರಕ್ಕೆ ಯಾವುದೇ ಧರ್ಮವಿಲ್ಲ. ಹೀಗಾಗಿ, ಅದು ಎಲ್ಲ ಧರ್ಮಗಳನ್ನೂ ಸಮಾನವಾಗಿ ಪರಿಗಣಿಸುವುದು ಅಗತ್ಯವಾಗಿದೆ ಮತ್ತು ಅದು ಯಾವುದೇ ಧರ್ಮವನ್ನು ಉತ್ತೇಜಿಸಲು/ಪ್ರವರ್ತಿಸಲು/ಪ್ರಚಾರ ಮಾಡಲು ಸಾಧ್ಯವಿಲ್ಲ. ಮೂಲ ಸಂವಿಧಾನದಲ್ಲಿ ಜಾತ್ಯತೀತತೆ ಎಂಬ ಪದವನ್ನು ಉಲ್ಲೇಖಿಸಿರಲ್ಲವಾದರೂ, ಈ ಉಪಬಂಧಗಳು ಅಥವಾ ನಿಬಂಧನೆಗಳನ್ನು ಸಂವಿಧಾನದಲ್ಲಿ ಅಳವಡಿಸುವ ಮೂಲಕ, ಭಾರತವು ಯಾವುದೇ ಅಸ್ಪಷ್ಟತೆ ಅಥವಾ ಸಂದೇಹಕ್ಕೆ ಆಸ್ಪದವಿಲ್ಲದೆ ಒಂದು ಜಾತ್ಯತೀತ ರಾಷ್ಟ್ರವಾಗಿ ತನ್ನನ್ನು ತಾನು ಸ್ಥಾಪಿಸಿಕೊಂಡಿತು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮಾಡಲಾದ 42ನೇ ತಿದ್ದುಪಡಿಯ ಮೂಲಕ 'ಜಾತ್ಯತೀತ' ಎಂಬ ಪರಿಭಾಷೆಯನ್ನು ಸಂವಿಧಾನದ ಪೀಠಿಕೆಯಲ್ಲಿ ಸೇರಿಸಲಾಯಿತು. ಆ ತಿದ್ದುಪಡಿಯ ಸಿಂಧುತ್ವವನ್ನು ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ಎತ್ತಿಹಿಡಿದಿದೆ. ತುರ್ತುಪರಿಸ್ಥಿತಿಯ ಅವಧಿಯಲ್ಲಿ ಇದನ್ನು ಸಂವಿಧಾನದಲ್ಲಿ ಸೇರಿಸಲಾಗಿದ್ದರೂ, ಅದು ಹಾಗೆ ಕಳಂಕಿತವಾಗೇನೂ ಇರಲಿಲ್ಲ. ಆದ್ದರಿಂದ, ಭಾರತವು ಒಂದು 'ದೇವಪ್ರಭುತ್ವದ ರಾಷ್ಟ್ರ'ವಲ್ಲ ಮತ್ತು ಹಾಗೆ ಆಗಲು ಸಾಧ್ಯವೂ ಇಲ್ಲ.

ಈಗ, ಭಾರತದಲ್ಲಿನ ಜಾತ್ಯತೀತತೆಯ ಸ್ಥಿತಿಗತಿಯನ್ನು ಅವಲೋಕಿಸೋಣ. ಇದು 1951ರ ಕಾಲಘಟ್ಟದ ಮಾತು. ರಾಜೇಂದ್ರ ಪ್ರಸಾದರು ಭಾರತದ ರಾಷ್ಟ್ರಪತಿಯಾಗಿದ್ದರು ಮತ್ತು ಜವಾಹರಲಾಲ್ ನೆಹರು ಅವರು ಪ್ರಧಾನ ಮಂತ್ರಿಯಾಗಿದ್ದರು. ಆಗ ಗುಜರಾತಿನ ಸೌರಾಷ್ಟ್ರ ಪ್ರದೇಶದಲ್ಲಿ ಸೋಮನಾಥ ದೇವಾಲಯವನ್ನು ಮರುನಿರ್ಮಿಸಲಾಗಿತ್ತು ಮತ್ತು ಅದು ಉದ್ಘಾಟನೆಗೆ ಸಿದ್ಧವಾಗಿತ್ತು. ಸೌರಾಷ್ಟ್ರದ ರಾಜಪ್ರಮುಖರು ಈ ಮಂದಿರವನ್ನು ಉದ್ಘಾಟಿಸಲು ರಾಜೇಂದ್ರ ಪ್ರಸಾದರನ್ನು ಆಹ್ವಾನಿಸಿದ್ದರು. ಹೀಗಾಗಿ ಪ್ರಧಾನಿಯವರಿಗೆ ಪತ್ರವೊಂದನ್ನು ಬರೆದ ರಾಷ್ಟ್ರಪತಿಗಳು, ''ಮಂದಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲು ನನ್ನನ್ನು ಆಹ್ವಾನಿಸಲಾಗಿದೆ ಹಾಗೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿ ನನಗೇನೂ ಅಭ್ಯಂತರವಿಲ್ಲ'' ಎಂದು ಹೇಳಿಕೊಂಡಿದ್ದರು.

ಈ ಪತ್ರಕ್ಕೆ ಅಂದೇ ಉತ್ತರಿಸಿದ ನೆಹರು, ''ಸೋಮನಾಥ ಮಂದಿರದ ಈ ಭವ್ಯ ಉದ್ಘಾಟನೆಯಲ್ಲಿ ಸ್ವತಃ ರಾಷ್ಟ್ರಪತಿಗಳು ಪಾಲ್ಗೊಳ್ಳುವುದು/ತೊಡಗಿಸಿಕೊಳ್ಳುವುದು ನನಗೆ ಅಷ್ಟೇನೂ ಸರಿಯೆಂದು ಕಾಣುತ್ತಿಲ್ಲ'' ಎಂದು ಹೇಳಿಕೊಂಡಿದ್ದರು. ತರುವಾಯದಲ್ಲಿ ಈ ವಿಷಯದ ಕುರಿತಾಗಿ ಅವರಿಬ್ಬರ ನಡುವೆ ಹೀಗೆಯೇ ಪತ್ರ ವ್ಯವಹಾರ ನಡೆಯಿತು ಮತ್ತು ಅದರಲ್ಲಿ ಕೊನೆಗೆ ಜಯಗಳಿಸಿದ್ದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರೇ!

ಹಾಗೆ ನೋಡಿದರೆ, ಸದರಿ ಉದ್ಘಾಟನಾ ಸಮಾರಂಭಕ್ಕಾಗಿ 5 ಲಕ್ಷ ರುಪಾಯಿಗಳ ಅನುದಾನ ನೀಡಿದ್ದಕ್ಕಾಗಿ ಪ್ರಧಾನಿ ನೆಹರು ಅವರು ಅಂದಿನ ಸೌರಾಷ್ಟ್ರ ಸರಕಾರವನ್ನು ಆಕ್ಷೇಪಿಸಿದ್ದೂ ಉಂಟು. ನೆಹರು ಮಾಡಿದ ಸಾಕಷ್ಟು ಕೆಲಸಗಳು ಟೀಕೆಗೆ ಗುರಿಯಾಗಿರಬಹುದು, ಆದರೆ ಅವರೊಬ್ಬ ಬದ್ಧತೆಯುಳ್ಳ ಜಾತ್ಯತೀತವಾದಿ ಆಗಿದ್ದರು ಎಂಬುದಂತೂ ಸತ್ಯ. ಧರ್ಮವನ್ನು ರಾಜಕಾರಣದೊಂದಿಗೆ ಅಥವಾ ಸರಕಾರದೊಂದಿಗೆ ಬೆರೆಸುವ ಕಸರತ್ತನ್ನು ವಿರೋಧಿಸುತ್ತಿದ್ದ ಅವರು, ನಮ್ಮ ದೇಶದ ಸಂವಿಧಾನವನ್ನು ಅಕ್ಷರಶಃ ದಾಖಲೆಯಲ್ಲಿ ಮತ್ತು ವಾಸ್ತವದಲ್ಲಿ ಅನುಸರಿಸುವಂತಾಗಬೇಕು ಎಂದು ಬಯಸಿದ್ದರು.

ಇಷ್ಟೆಲ್ಲಾ ಪೀಠಿಕೆಯನ್ನು ನೀಡಿದ್ದೇಕೆ ಎಂಬುದು ನಿಮಗೆ ಈಗಾಗಲೇ ಗೊತ್ತಾಗಿರಬಹುದು. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಮಹಾಕುಂಭಮೇಳವು ಇತ್ತೀಚೆಗಷ್ಟೇ ಸಂಪನ್ನಗೊಂಡಿತು ಅಲ್ಲವೇ? ತಮಾಷೆಯೆಂದರೆ ಇದನ್ನೊಂದು ಅಧಿಕೃತ/ಸರಕಾರಿ ಕಾರ್ಯಕ್ರಮದ ರೀತಿಯಲ್ಲೇ ಆಚರಿಸಲಾಯಿತು; ಅಂದರೆ, ಉತ್ತರ ಪ್ರದೇಶದ ಸರಕಾರ ಮಾತ್ರವಲ್ಲದೆ, ಕೇಂದ್ರ ಸರಕಾರ ಕೂಡ ಇದಕ್ಕೆ ಒತ್ತಾಸೆಯಾಗಿ ನಿಂತಿತು, ಅದರಲ್ಲಿ ಪಾಲ್ಗೊಂಡಿತು ಮತ್ತು ಆ ಕಾರ್ಯಕ್ರಮಕ್ಕಾಗಿ ದೊಡ್ಡ ಮೊತ್ತದ ಹಣವನ್ನೇ ಖರ್ಚುಮಾಡಿತು!

ನಿಮ್ಮಲ್ಲಿ ಬಹುತೇಕರಿಗೆ ಗೊತ್ತಿರುವಂತೆ, ಜನಗಣತಿಯಂಥ ಬೃಹತ್ ಕಾರ್ಯವನ್ನು ನಾವು ಹಲವು ವರ್ಷಗಳಿಂದ ಮುಂದೂಡಿಕೊಂಡೇ ಬಂದಿದ್ದೇವೆ. ಆದರೆ, ಉತ್ತರ ಪ್ರದೇಶ ಸರಕಾರ ಮಾತ್ರ, ಸದರಿ ಮಹಾಕುಂಭಮೇಳದ ಸಂದರ್ಭದಲ್ಲಿ ಪ್ರಯಾಗ್‌ರಾಜ್‌ಗೆ ಭೇಟಿಯಿತ್ತ ಕೋಟ್ಯಂತರ ಜನರ ಪೈಕಿ ಪ್ರತಿಯೊಬ್ಬರನ್ನೂ ಎಣಿಸಿರುವಂತೆ ತೋರುತ್ತದೆ! ಇದು ಏನನ್ನು ಹೇಳುತ್ತದೆ? ಇದು ಜಾತ್ಯತೀತತೆಯ ಕುರಿತಾಗಿ ಸರಕಾರವೊಂದಕ್ಕೆ ಇರಬೇಕಾದ ಬದ್ಧತೆಯ ಪ್ರತಿಬಿಂಬವೇ?

ಸರಕಾರವೊಂದು ಶಾಸಕಾಂಗ, ನ್ಯಾಯಾಂಗ ಮತ್ತು ಎಲ್ಲಾ ಸ್ತರಗಳಲ್ಲಿನ ಕಾರ್ಯಾಂಗ ಹಾಗೂ ಮಾಧ್ಯಮಗಳು ಸೇರಿದಂತೆ ಆಳುಗ ವ್ಯವಸ್ಥೆಯ ಎಲ್ಲಾ ಅಂಗಗಳನ್ನೂ ಒಳಗೊಂಡಿರುತ್ತದೆ. ಆದ್ದರಿಂದ, ಸರಕಾರವೊಂದರ ಎಲ್ಲಾ ಅಂಗಭಾಗಗಳೂ ಧರ್ಮವನ್ನು ಒಂದು ಖಾಸಗಿ ಬಾಬತ್ತು ಅಥವಾ ಖಾಸಗಿ ವ್ಯವಹಾರ ಎಂಬಂತೆ ಪರಿಗಣಿಸಬೇಕು ಹಾಗೂ ಅದನ್ನು ಒಂದು ಬಹಿರಂಗ ಪ್ರದರ್ಶನವಾಗಿ ಕೈಗೊಳ್ಳಬಾರದು. ಹಾಗೆ ಬಹಿರಂಗ ಪ್ರದರ್ಶನಕ್ಕೆ ಮುಂದಾದಲ್ಲಿ, ಅದು ಧರ್ಮವೊಂದನ್ನು ಉತ್ತೇಜಿಸುವುದಕ್ಕೆ/ಪ್ರವರ್ತಿಸುವುದಕ್ಕೆ ಅಥವಾ ಅದರ ಕುರಿತು ಪ್ರಚಾರ ಮಾಡುವುದಕ್ಕೆ ಸಮಾನವಾಗುತ್ತದೆ. ಅದರಲ್ಲೂ ನಿರ್ದಿಷ್ಟವಾಗಿ, ಸರಕಾರದ ಆಯಕಟ್ಟಿನ ಜಾಗಗಳನ್ನು ಅಲಂಕರಿಸಿರುವವರು/ಉನ್ನತ ಸ್ತರದ ಅಧಿಕಾರಿಗಳು, ತಾವೊಂದು ನಿರ್ದಿಷ್ಟ ಧರ್ಮವನ್ನು ಪ್ರವರ್ತಿಸುತ್ತಿದ್ದೇವೆ/ಪ್ರಚಾರ ಮಾಡುತ್ತಿದ್ದೇವೆ ಎಂಬುದನ್ನು ತೋರಿಸುವಂಥ ಯಾವ ಬಾಬತ್ತಿನಲ್ಲೂ ತೊಡಗಬಾರದು.

ಈ ಮಾನದಂಡವನ್ನು ಇಟ್ಟುಕೊಂಡು ನೋಡಿದರೆ, ಭಾರತದಲ್ಲಿ ಪ್ರಸ್ತುತ ಕಾಣಬರುತ್ತಿರುವ ಪರಿಸ್ಥಿತಿಯು ಅಪೇಕ್ಷಿತ ಮಟ್ಟವನ್ನು ತಲುಪುವುದು ಇನ್ನೂ ಬಾಕಿಯಿದೆ. ಏಕೆಂದರೆ, ಭಾರತದಲ್ಲಿನ ಕಾರ್ಯಾಂಗ-ಸಜ್ಜಿಕೆಯು ತನ್ನ ಧಾರ್ಮಿಕ ನಂಬಿಕೆಗಳನ್ನು ಭವ್ಯವಾಗಿ /ಬಹಿರಂಗವಾಗಿ ಪ್ರದರ್ಶಿಸುತ್ತಿದೆ ಹಾಗೂ ಒಂದು ಧರ್ಮವನ್ನು ಅದು ಪ್ರವರ್ತಿಸುತ್ತಿರುವಂತೆ/ಪ್ರಚಾರ ಮಾಡುತ್ತಿರುವಂತೆ ತೋರುತ್ತಿದೆ. ಕಳೆದ ವರ್ಷ, ಪ್ರಧಾನಿಯವರು ಟ್ವಿಟರ್ ಮೂಲಕ ಹಂಚಿಕೊಂಡ ಒಂದಷ್ಟು ಚಿತ್ರಗಳನ್ನು ನೀವು ಗಮನಿಸಿರಬಹುದು- ಭಾರತದ ಅಂದಿನ ಮುಖ್ಯ ನ್ಯಾಯಮೂರ್ತಿಗಳು ಹಮ್ಮಿಕೊಂಡಿದ್ದ ಪೂಜಾ ಕಾರ್ಯಕ್ರಮವೊಂದರಲ್ಲಿ ಪ್ರಧಾನಿಯವರು ಪಾಲ್ಗೊಂಡಿದ್ದನ್ನು ಅವು ಅನಾವರಣಗೊಳಿಸಿದ್ದವು. ಇದು, ಮಿಕ್ಕ ಧರ್ಮಗಳ ಅನುಯಾಯಿಗಳನ್ನು ಪರಿಣಾಮಕಾರಿಯಾಗಿ ಪ್ರತ್ಯೇಕಿಸಿದಂತೆ ಬಿಂಬಿಸುವ ರೀತಿಯಲ್ಲಿತ್ತು.

ಮಸೀದಿಗಳ ಅಡಿಯಲ್ಲಿ ದೇವಾಲಯಗಳ ಕುರುಹು ಏನಾದರೂ ಇವೆಯೇ ಎಂಬುದನ್ನೂ ಕಂಡುಹಿಡಿಯಲಿಕ್ಕೆ ದೇಶದ ಹಲವೆಡೆ ಮಸೀದಿಗಳ ತಳಪಾಯಗಳನ್ನು ಅಗೆಯಲಾಗುತ್ತಿದೆ ಹಾಗೂ ಇಸ್ಲಾಂ ಧರ್ಮದೊಂದಿಗೆ ಸಂಬಂಧವನ್ನು ಹೊಂದಿರುವಂತೆ ತೋರಿದ ಕಾರಣಕ್ಕೆ ಕೆಲವೊಂದು ಸ್ಥಳಗಳ ಹೆಸರುಗಳನ್ನು ಬದಲಾಯಿಸಲಾಗಿದೆ.

ಕೇಂದ್ರದಲ್ಲಿ ಪ್ರಸ್ತುತ ಗದ್ದುಗೆ ಹಿಡಿದಿರುವ ಸರಕಾರವು, ಭೂತಕಾಲದಲ್ಲೋ ಅಥವಾ ದೂರದ ಭವಿಷ್ಯತ್ ಕಾಲದಲ್ಲೋ ಬದುಕುವಂತೆ ನಮ್ಮನ್ನು ಒತ್ತಾಯಿಸುತ್ತದೆ; ಇದರಿಂದಾಗಿ ನಮಗೆ ವರ್ತಮಾನದ ನೋವು ಅನುಭವಕ್ಕೇ ಬರುವುದಿಲ್ಲ. ನಾನೊಬ್ಬ ನಾಸ್ತಿಕ ಆಗಿರುವ ಕಾರಣದಿಂದಲೇ ಹೀಗೆಲ್ಲಾ ಹೇಳುತ್ತಿರುವೆ ಎಂದು ನೀವು ಒಂದೊಮ್ಮೆ ಭಾವಿಸುವುದಾದರೆ, ನಿಮಗೆ ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಬೇಕು. ಅದೆಂದರೆ, ಜಾರ್ಖಂಡ್‌ನ ಹಜಾರಿಬಾಗ್‌ನಲ್ಲಿ ನಮಗೆ ಸೇರಿದ ಆವರಣದಲ್ಲಿ ಒಂದು ದೇಗುಲವಿದೆ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿರುವ (ಎನ್‌ಸಿಆರ್) ನನ್ನ ಮನೆಯಲ್ಲಿ ಒಂದು ಪೂಜಾಮಂದಿರವಿದೆ. ಪ್ರತಿದಿನ ಮುಂಜಾನೆ ನಾನು ದೇವರಿಗೆ ನಿಯತವಾಗಿ ಪೂಜೆ ಸಲ್ಲಿಸುವುದುಂಟು ಮತ್ತು ಪ್ರಾರ್ಥಿಸುವುದುಂಟು. ಬಿಹಾರ-ಜಾರ್ಖಂಡ್ ಭಾಗದಲ್ಲಿ ಒಂದು ಪ್ರಸಿದ್ಧ ಯಾತ್ರಾಸ್ಥಳವಿದೆ; ಇಲ್ಲಿ ಯಾತ್ರಿಕರು, ಬಿಹಾರದ ಸುಲ್ತಾನ್‌ಗಂಜ್‌ನಿಂದ ಗಂಗಾ ಜಲವನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ ಮತ್ತು ಇಲ್ಲಿ ನದಿಯು ಉತ್ತರ ದಿಕ್ಕಿನೆಡೆಗೆ ಹರಿಯುತ್ತದೆ. ಅಂತೆಯೇ ಯಾತ್ರಿಕರು ಅಲ್ಲಿನ ಪವಿತ್ರ ನದಿಯಿಂದ ನೀರನ್ನು ಸಂಗ್ರಹಿಸಿ ಬಿದಿರಿನ ಅಡ್ಡೆಯಲ್ಲಿ ಅದನ್ನು ತಮ್ಮ ಹೆಗಲ ಮೇಲೆ ಹೊತ್ತೊಯ್ಯುತ್ತಾರೆ ಹಾಗೂ 'ಬಾಬಾ ಧಾಮ್' ಎಂದೂ ಪ್ರಸಿದ್ಧವಾಗಿರುವ ದಿಯೋಘರ್‌ವರೆಗಿನ 100 ಕಿ.ಮೀ.ಗೂ ಹೆಚ್ಚಿನ ಅಂತರವನ್ನು ಅವರು ಬರಿಗಾಲಲ್ಲೇ ಕ್ರಮಿಸುತ್ತಾರೆ. ಈ ಯಾತ್ರೆಯಲ್ಲಿ ನಾನು 5 ಬಾರಿ ಭಾಗವಹಿಸಿರುವೆ ಮತ್ತು ಅದೇ ವೇಳೆಗೆ ನಾನೊಬ್ಬ 'ಕಟ್ಟಾ ಜಾತ್ಯತೀತವಾದಿ' ಎಂದೂ ಹೇಳಲು ಬಯಸುವೆ.

ಆದರೆ, ಸರಕಾರದ ಆಯಕಟ್ಟಿನ ಸ್ಥಾನದಲ್ಲಿರುವ ಕೆಲವರು, ಒಂದೇ ಧರ್ಮದ ಬಗ್ಗೆ ತಮ್ಮ ಒಲವು ವ್ಯಕ್ತಪಡಿಸುತ್ತಿರುವುದು ಸ್ಪಷ್ಟವಾಗಿದೆ; ಇವರೆಲ್ಲ 'ಈದ್' ಹಬ್ಬದ ವೇಳೆ ಒಂದು ಮಸೀದಿಗೆ ತೆರಳಿ, ಅಲ್ಲಿರುವ ಇತರ ಭಕ್ತರೊಂದಿಗೆ ಪ್ರಾರ್ಥನೆ ಸಲ್ಲಿಸುತ್ತಾರೆಯೇ? ಅಥವಾ ಈ ದೇಶದ ಕ್ರೈಸ್ತ ಬಾಂಧವರು ಹಾಗೂ ಇತರ ಅಲ್ಪಸಂಖ್ಯಾತರ ವಿಷಯದಲ್ಲೂ ಇದೇ ಪರಿಪಾಠವನ್ನು ಅನುಸರಿಸುತ್ತಾರೆಯೇ? ನಮ್ಮಲ್ಲಿ ಜಾತ್ಯತೀತತೆ ಸತ್ತುಹೋಗಿದೆಯೇ ಮತ್ತು ಭಾರತವು ಕೊನೆಗೂ ಒಂದು ಹಿಂದೂ ರಾಷ್ಟ್ರವಾಗಿದೆಯೇ ಎಂಬುದು ನನಗೆ ಗೊತ್ತಿಲ್ಲ. ಆದರೆ, ಜಾತ್ಯತೀತತೆಯಲ್ಲಿ ಮತ್ತು ಸಂವಿಧಾನದಲ್ಲಿ ನಂಬಿಕೆ ಇರುವವರೆಲ್ಲರೂ ಗಾಢನಿದ್ರೆಯಲ್ಲಿ ಇರುವಂತೆ ಭಾಸವಾಗುತ್ತಿದೆ.

(ಲೇಖಕರು ಕೇಂದ್ರದ ಮಾಜಿ ವಿದೇಶಾಂಗ ಸಚಿವರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 77

ಸಮಾಚಾರ ಸಣ್ಣದಲ್ಲ

ಐಎಫ್ಎಸ್ ಅಧಿಕಾರಿ ಮೋದಿ ಆಪ್ತ ಕಾರ್ಯದರ್ಶಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಆಪ್ತ ಕಾರ್ಯದರ್ಶಿಯಾಗಿ ಭಾರತೀಯ ವಿದೇಶಾಂಗ ಸೇವೆ (ಐಎಫ್ಎಸ್) ಅಧಿಕಾರಿ ನಿಧಿ ತಿವಾರಿ ನೇಮಕಗೊಂಡಿದ್ದಾರೆ. 2014ನೇ ತಂಡದ ಐಎಫ್ಎಸ್ ಅಧಿಕಾರಿಯಾದ ನಿಧಿ, ಸದ್ಯ ಪ್ರಧಾನ ಮಂತ್ರಿ ಕಚೇರಿ(ಪಿಎಂಒ)ಯಲ್ಲಿ ಉಪ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ರಾಷ್ಟ್ರಪತಿ, ಪ್ರಧಾನಿ ರಂಜಾನ್ ಶುಭಾಶಯ

ದೆಹಲಿ: ರಂಜಾನ್ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಸೋಮವಾರ ಶುಭಾಶಯ ಕೋರಿದ್ದಾರೆ. ಈದ್-ಉಲ್-ಫಿತರ್ ಹಬ್ಬದ ಶುಭಾಶಯ. ರಂಜಾನ್ ಹಬ್ಬವು ಸಮಾಜದಲ್ಲಿ ಭರವಸೆ, ಸಾಮರಸ್ಯ ಮತ್ತು ದಯೆಯ ಮನೋಭಾವ ಹೆಚ್ಚಿಸಲಿ ಎಂದು 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೂ ಮುಸ್ಲಿಮ್ ಸಮುದಾಯದ ಜನತೆಗೆ ಈದ್ - ಉಲ್ - ಫಿತರ್ ಹಬ್ಬದ ಶುಭಾಶಯ ತಿಳಿಸಿದ್ದಾರೆ. ಈದ್ ಸಹಾನುಭೂತಿ ಮತ್ತು ದಾನ ಮನೋಭಾವ ಉತ್ತೇಜಿಸುವ ಸಂದರ್ಭ. ಈ ಹಬ್ಬ ಎಲ್ಲರ ಜೀವನದಲ್ಲಿ ಶಾಂತಿ, ಪ್ರಗತಿ ಮತ್ತು ಸಂತೋಷವನ್ನು ತರಲಿ ಮತ್ತು ಸಕಾರಾತ್ಮಕ ಮನೋಭಾವದಿಂದ ಮುನ್ನಡೆಯಲು ನಮಗೆ ಶಕ್ತಿ ನೀಡಲಿ. ಭಾರತ ಮತ್ತು ವಿದೇಶಗಳಲ್ಲಿರುವ ಭಾರತೀಯ ಮುಸ್ಲಿಂ ಸೋದರ ಸಹೋದರಿಯರಿಗೆ ಶುಭಾಶಯಗಳು ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಕನ್ಯತ್ವ ಪರೀಕ್ಷೆಗೆ ಒತ್ತಾಯ ಸಲ್ಲ: ಹೈ

ಬಿಲಾಸ್‌ಪುರ: ಮಹಿಳೆಯನ್ನು ಕನ್ಯತ್ವ ಪರೀಕ್ಷೆಗೆ ಬಲವಂತಪಡಿಸುವಂತಿಲ್ಲ, ಅದು ಸಂವಿಧಾನದ 21ನೇ ವಿಧಿಯಡಿ ನೀಡಲಾಗಿರುವ ಘನತೆಯ ಹಕ್ಕಿನ ಉಲ್ಲಂಘನೆ. ಕನ್ಯತ್ವ ಪರೀಕ್ಷೆಗೆ ಅನುಮತಿ ನೀಡುವುದು ಮೂಲಭೂತ ಹಕ್ಕುಗಳು ಮತ್ತು ನೈಸರ್ಗಿಕ ನ್ಯಾಯದ ಪ್ರಮುಖ ತತ್ವಗಳಿಗೆ ವಿರುದ್ಧವಾಗಿದೆ ಎಂದು ಛತ್ತೀಸಗಢ ಹೈಕೋರ್ಟ್ ಸೋಮವಾರ ಹೇಳಿದೆ. ಪತ್ನಿ ಬೇರೆ ಪುರುಷನೊಂದಿಗೆ ಸಂಬಂಧ ಹೊಂದಿದ್ದಾಳೆಂದು ಆರೋಪಿಸಿ ಕನ್ಯತ್ವ ಪರೀಕ್ಷೆಗೆ ಒಳಪಡಿಸುವಂತೆ ಕೋರಿ ಪತಿಯೊಬ್ಬ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯ ವಿಚಾರಣೆ ಸೋಮವಾರ ನಡೆಸಿದ ನ್ಯಾ.ಅರವಿಂದ್ ಕುಮಾರ್ ವರ್ಮಾ ಅವರ ಪೀಠ ಕನ್ಯತ್ವ, ಅರ್ಜಿದಾರರ ಬೇಡಿಕೆ ಸಂವಿಧಾನಬಾಹಿರ ಎಂದಿದೆ. ಪತಿ ಲೈಂಗಿಕವಾಗಿ ಅಶಕ್ತ. ಸಹಜೀವನ ನಡೆಸಲು ನಿರಾಕರಿಸಿದ್ದಾನೆ ಎಂದು ಪತ್ನಿ ಆರೋಪಿಸಿದ್ದಳು. ಪ್ರತಿಯಾಗಿ ಪತಿ, ತನ್ನ ಭಾವನೊಂದಿಗೆ ಪತ್ನಿ ಅಕ್ರಮ ಸಂಬಂಧ ಹೊಂದಿದ್ದಾಳೆ ಎಂದು ಆರೋಪಿಸಿದ್ದ.

ಎನ್ಇಪಿಯಿಂದ ಶಿಕ್ಷಣ ಹಾಳು: ಸೋನಿಯಾ

ದೆಹಲಿ: ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ)-2020ರ ಜಾರಿ ವಿರುದ್ಧ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಸೋಮವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಕೇಂದ್ರ ಸರಕಾರ ಕೇಂದ್ರೀಕರಣ, ವಾಣಿಜ್ಯೀಕರಣ ಮತ್ತು ಕೋಮುವಾದೀಕರಣದ ಮೂಲ ಕಾರ್ಯಸೂಚಿಗಾಗಿ ಎನ್ಇಪಿ-2020ಯನ್ನು ಒಂದು ಸಾಧನವಾಗಿ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿ ಪರಿಚಯ ಮಾಡುವುದರೊಂದಿಗೆ ಭಾರತ ಸರಕಾರ ದೇಶದ ಮಕ್ಕಳು ಮತ್ತು ಯುವಕರ ಶಿಕ್ಷಣದ ಬಗ್ಗೆ ತೀವ್ರ ಅಸಡ್ಡೆ ಹೊಂದಿರುವುದನ್ನು ತೋರಿಸುತ್ತಿದೆ. ಶಿಕ್ಷಣ ಕ್ಷೇತ್ರ ಕುರಿತ ಸರಕಾರ ಕಾಳಜಿ, ಅದರ ಪ್ರಾಥಮಿಕ 3 ಪ್ರಮುಖ ಕಾರ್ಯಸೂಚಿಗಳನ್ನು ಜಾರಿಗೆ ತರುವುದೇ ಆಗಿದೆ ಎಂದು ಟೀಕಿಸಿದ್ದಾರೆ. ಅಧಿಕಾರದ ಕೇಂದ್ರೀಕರಣ, ಖಾಸಗಿ ವಲಯದ ಹೊರಗುತ್ತಿಗೆ ಮೂಲಕ ವಾಣಿಜ್ಯೀಕರಣ ಮತ್ತು ಪಠ್ಯಪುಸ್ತಕಗಳು, ಪಠ್ಯಕ್ರಮ ಮತ್ತು ಸಂಸ್ಥೆಗಳ ಕೋಮುವಾದೀಕರಣವಾಗಿದೆ ಎಂದು ಪತ್ರಿಕೆಯೊಂದಕ್ಕೆ ಬರೆದ ಲೇಖನದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ದಾಳಿ ಸ್ಥಗಿತಕ್ಕೆ ರಷ್ಯಾ, ಉಕ್ರೇನ್ ಒಪ್ಪಿಗೆ

ವಾಷಿಂಗ್ಟನ್: ಅಲ್ಲದೆ, ಪರಸ್ಪರರ ಪರಮಾಣು ವಿದ್ಯುತ್ ಘಟಕಗಳ ಮೇಲಿನ ದಾಳಿಯನ್ನು ನಿಲ್ಲಿಸಲು ರಷ್ಯಾ-ಉಕ್ರೇನ್ ಒಪ್ಪಿಗೆ ಸೂಚಿಸಿವೆ.ಸೌದಿ ಅರೇಬಿಯಾದಲ್ಲಿ ನಡೆದ ಮಾತುಕತೆ ಸಂದರ್ಭ ಈ ಮಹತ್ವದ ಬೆಳವಣಿಗೆಯಾಗಿದೆ. ಬ್ಲ್ಯಾಕ್ ಸೀ(ಕಪ್ಪು ಸಮುದ್ರ)ದಲ್ಲಿ ಹಡಗುಗಳ ಸುರಕ್ಷಿತ ಸಂಚಾರ ದೃಢಪಡಿಸಲು ಅಮೆರಿಕ ಕೂಡಾ ಉಕ್ರೇನ್ ಮತ್ತು ರಷ್ಯಾ ಜತೆ ಪ್ರತ್ಯೇಕ ಒಪ್ಪಂದಗಳಿಗೆ ಸಹಿ ಹಾಕಿದೆ ಎಂಬ ಮಾಹಿತಿಯನ್ನು ಶ್ವೇತಭವನ ನೀಡಿದೆ.

{ಮಮತಾ ಬ್ಯಾನರ್ಜಿ} ಪ.ಬಂಗಾಳ ಸಿಎಂ

ಅಲ್ಪಸಂಖ್ಯಾತರಿಗೆ ಸಮಸ್ಯೆಯಾದರೆ ಬಿಜೆಪಿ ನಾಯಕರು ಸಂವಿಧಾನ ಬದಲಾಯಿಸುವರೆ? ಜನರನ್ನು ವಿಭಜಿಸುವ ಬಿಜೆಪಿ 'ಜುಮ್ಲಾ ರಾಜಕೀಯ' ಮಾಡುತ್ತಿದೆ. ಪ.ಬಂಗಾಳ ಸರಕಾರ ಅಲ್ಪಸಂಖ್ಯಾತರ ಪರವಾಗಿದೆ. ಹಾಗಾಗಿ ರಾಜ್ಯದಲ್ಲಿ ಯಾರೂ ಉದ್ವಿಗ್ನತೆ ಉಂಟು ಮಾಡಲು ಸಾಧ್ಯವಿಲ್ಲ. ನಾನು ಪ್ರಾಣ ಬಿಡುತ್ತೇನೆ. ಆದರೆ ತತ್ವಗಳಿಂದ ವಿಮುಖಳಾಗುವುದಿಲ್ಲ.

ಛತ್ತೀಸ್‌ಗಢದ ದಾಂತೇವಾಡದಲ್ಲಿ ಮಹತ್ವದ ಕಾರ್ಯಾಚರಣೆ | 39 ವರ್ಷಗಳಿಂದ ನಕ್ಸಲ್ ಚಳವಳಿ ಭಾಗವಾಗಿದ್ದ ಗುಮ್ಮದೇವೆಲಿ ರೇಣುಕಾ

45 ಲಕ್ಷ ರು.ಇನಾಮು ಹೊತ್ತ ನಕ್ಸಲ್ ನಾಯಕಿ ಹತ್ಯೆ

ದಾಂತೇವಾಡ: ಛತ್ತೀಸ್‌ಗಢ ರಾಜ್ಯದಲ್ಲಿ ಕಳೆದೊಂದು ವಾರದಿಂದ ನಡೆಯುತ್ತಿರುವ ನಕ್ಸಲರ ವಿರುದ್ಧದ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಮಹತ್ವದ ಸಾಧನೆ ಮಾಡಿವೆ. ತಲೆಗೆ ಒಟ್ಟು 45 ಲಕ್ಷ ರು. ಇನಾಮು ಹೊಂದಿದ್ದ ನಕ್ಸಲ್ ನಾಯಕಿ, ಕಾನೂನು ಪದವೀಧರೆ ಗುಮ್ಮದೇವೆಲಿ ರೇಣುಕಾ ಅಲಿಯಾಸ್ ಭಾನುವನ್ನು ದಾಂತೇವಾಡದಲ್ಲಿ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆಯಲ್ಲಿ ಕೊಂದಿವೆ.

ಬಸ್ತಾರ್ ಪ್ರದೇಶದ ದಾಂತೇವಾಡ ಮತ್ತು ಬಿಜಾಪುರ ಜಿಲ್ಲೆಗಳ ಗಡಿಯಲ್ಲಿರುವ ಕಾಡಿನಲ್ಲಿ ಬೆಳಗ್ಗೆ 9ರ ವೇಳೆ ನಕ್ಸಲ್ ನಿಗ್ರಹ ಕಾರ್ಯಾಚರಣೆಗೆ ಭದ್ರತಾ ಸಿಬ್ಬಂದಿಗಳ ಜಂಟಿ ತಂಡ ಹೋಗುತ್ತಿದ್ದಾಗ ಹಠಾತ್ ಎದುರಾದ ನಕ್ಸಲರ ಗುಂಪು ಗುಂಡಿನ ಚಕಮಕಿ ನಡೆಸಿತು. ಈ ವೇಳೆ ಭದ್ರತಾಪಡೆಗಳು ತಕ್ಕ ಪ್ರತ್ಯುತ್ತರ ನೀಡಿದವು. ಆಗ ನಕ್ಸಲ್ ನಾಯಕಿ ಬಾನು ಹತಳಾದಳು ಎಂದು ದಾಂತೇವಾಡ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರೈ ತಿಳಿಸಿದ್ದಾರೆ.

ಮಾವೋವಾದಿ ನಕ್ಸಲರು ಮತ್ತು ಭದ್ರತಾ ಪಡೆಗಳ ಜಂಟಿ ತಂಡದ ನಡುವೆ ನೆಲಗೋಡಾ, ಇಕೇಲಿ, ಬೆಲ್ನಾರ್ ಗ್ರಾಮಗಳನ್ನು ಒಳಗೊಂಡ ಬೆಟ್ಟ ಪ್ರದೇಶದಲ್ಲಿನ ಅರಣ್ಯದಲ್ಲಿ ನಡೆದ ನಿರಂತರ ಗುಂಡಿನ ಚಕಮಕಿಯಲ್ಲಿ ಸೋಮವಾರ ಬೆಳಗ್ಗೆ 9 ಗಂಟೆಯಲ್ಲಿ ರೇಣುಕಾ ಹತಳಾದಳು. ಆಕೆಯ ಮೃತದೇಹವನ್ನು ವಶಪಡಿಸಿಕೊಂಡು ನಕ್ಸಲ್ ನಿಗ್ರಹ ಪಡೆಯ ಜಂಟಿ ತಂಡದ ಪೊಲೀಸರು, ಆ ಬಳಿಕ ಆಕೆಯೇ ರೇಣುಕಾ ಎಂಬುದನ್ನು ದೃಢಪಡಿಸಿಕೊಂಡರು. ಜಿಲ್ಲಾ ಮೀಸಲು ಪೊಲೀಸ್ ಪಡೆ ಹಾಗೂ ಸಿಆರ್‌ಪಿಎಫ್ ಮತ್ತು ಎಸ್‌ಟಿಎಫ್ ತಂಡಗಳ ಜಂಟಿ ಭದ್ರತಾ ಪಡೆಗಳು ಛತ್ತೀಸ್‌ಗಢ ರಾಜ್ಯದ ಗಡಿ ಪ್ರದೇಶವಾದ ದಾಂತೇವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಮಾವೋವಾದಿ ನಕ್ಸಲರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿವೆ. ಬಾನು ಹತಳಾದ ಸ್ಥಳದಲ್ಲಿ ಒಂದು ಸ್ವಯಂಚಾಲಿತ ಬಂದೂಕು(ಎಸ್‌ಎಲ್‌ಆರ್) ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೂರು ತಿಂಗಳಲ್ಲಿ 135 ನಕ್ಸಲರ ಅಂತ್ಯ

ಸುಕ್ಮಾ ಜಿಲ್ಲೆಯ ಕೆರ್ಲಾಪಾಲ್ ಪ್ರದೇಶದಲ್ಲಿ ಶನಿವಾರ ನಡೆದ ಕಾರ್ಯಾಚರಣೆಯಲ್ಲಿ 18 ನಕ್ಸಲರನ್ನು ಕೊಂದು ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡು ವಶಪಡಿಸಿಕೊಳ್ಳಲಾಗಿದೆ. ಕಳೆದ ವಾರ ಸುಕ್ಮಾ ಜಿಲ್ಲೆ ಯಲ್ಲಿ ಉನ್ನತ ನಕ್ಸಲ್ ನಾಯಕನನ್ನು ಕೊಲ್ಲಲಾಗಿದೆ. ಬಸ್ತಾರ್ ಜಿಲ್ಲೆಯಲ್ಲಿ ಹಲವು ಕಾರ್ಯಾ ಚರಣೆಗಳಲ್ಲಿ 119 ನಕ್ಸಲರು ಹೊಡೆದುರುಳಿಸಲಾಗಿದೆ. 2025ರ ಮೊದಲ 3 ತಿಂಗಳ ಲ್ಲಿಯೇ ರಾಜ್ಯದಲ್ಲಿ ಒಟ್ಟು 135 ನಕ್ಸಲರನ್ನು ಕೊಲ್ಲ ಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ರೇಣುಕಾ ಕಾನೂನು ಪದವೀಧರೆ

ತೆಲಂಗಾಣದ ವಾರಂಗಲ್ ಜಿಲ್ಲೆಯ ಕಾಡವೆಂಡಿ ಗ್ರಾಮದ ನಿವಾಸಿಯಾಗಿದ್ದ ರೇಣುಕಾ, ಕಾನೂನು ಪದವೀಧರೆಯಾಗಿದ್ದಳು. ಆಕೆಗೆ ನಕ್ಸಲರ ಮಾಧ್ಯಮ ತಂಡದ ಉಸ್ತುವಾರಿ ವಹಿಸಲಾಗಿತ್ತು. ಈಕೆ 1996ರಿಂದಲೂ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿದ್ದಳು. ಈಕೆಯ ಬಂಧನಕ್ಕೆ ನೆರವಾದವರಿಗೆ ಛತ್ತೀಸ್‌ಗಢ ಸರಕಾರ 25 ಲಕ್ಷ ರು. ಹಾಗೂ ತೆಲಂಗಾಣ ಸರಕಾರ 20 ಲಕ್ಷ ರು. ಬಹುಮಾನ ನೀಡುವುದಾಗಿ ಘೋಷಿಸಿದ್ದವು. ಮಾವೋವಾದಿ ನಕ್ಸಲ್ ಸಂಘಟನೆಗಳಲ್ಲಿಯೇ ಅತಿಬಲಿಷ್ಠವಾದ 'ದಂಡಕಾರಣ್ಯ ಸ್ಪೆಷಲ್ ಜೋನಲ್ ಕಮಿಟಿ'ಯ ಪ್ರಮುಖ ಸದಸ್ಯೆಯಾಗಿದ್ದ ನಕ್ಸಲ್ ನಾಯಕಿ ರೇಣುಕಾ, ಸೆರೆಗೆ ನೆರವಾದವರಿಗೆ ತೆಲಂಗಾಣ ಮತ್ತು ಛತ್ತೀಸ್‌ಗಢ ರಾಜ್ಯ ಸರಕಾರಗಳು ಒಟ್ಟು 45 ಲಕ್ಷ ರು.ಗಳ ಬಹುಮಾನ ನೀಡುವುದಾಗಿ ಘೋಷಿಸಿದ್ದವು. 1996ರಲ್ಲಿ ನಕ್ಸಲ್ ಚಟುವಟಿಕೆ ಸೇರಿ, 2003ರಲ್ಲಿ ಡಿವಿಷನಲ್ ಕಮಿಟಿ ಸದಸ್ಯೆ ಶ್ರೇಣಿಗೇರಿದ ರೇಣುಕಾಗೆ ಹಲವು ಗುಪ್ತನಾಮಗಳಿದ್ದವು. ಭಾನು, ಚೈತೇಯ್, ಸರಸ್ವತಿ, ಧಮಯಂತಿ ಎಂಬ ಹೆಸರುಗಳೂ ಇದ್ದವು. ವಿಶೇಷ ವಲಯ ಸಮಿತಿಯ ಹಿರಿಯ ನಕ್ಸಲ್ ಆಂಧ್ರಪ್ರದೇಶದ ಕೃಷ್ಣ ಅಣ್ಣಾ ಮತ್ತು ರಾಮಣ್ಣ ಹಾಗೂ ಕೇಂದ್ರ ಸಮಿತಿ ಸದಸ್ಯ ದುಲಾ ದಾದಾ ಜತೆಗೂ ರೇಣುಕಾ ಕೆಲಸ ಮಾಡಿದ್ದಳು. 2005ರಲ್ಲಿ ಶಂಕಮುರಿ ಅಪ್ಪಾರಾವ್ ಅಲಿಯಾಸ್ ರವಿ ಜತೆ ವಿವಾಹವಾಗಿತ್ತು. ಶಂಕಮುರಿ 2010ರಲ್ಲಿ ಆಂಧ್ರದಲ್ಲಿ ಪೊಲೀಸ್ ಗುಂಡಿನಿಂದ ಮಡಿದ.

50 ನಕ್ಸಲರ ಶರಣಾಗತಿ

ಬಸ್ತಾರ್: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ 68 ಲಕ್ಷ ರು. ಬಹುಮಾನ ಘೋಷಿಸಲಾಗಿದ್ದ 14 ನಕ್ಸಲ್ ಪ್ರಮುಖರು ಸೇರಿದಂತೆ 50 ನಕ್ಸಲರು ಭಾನುವಾರ ರಾಜ್ಯ ಪೊಲೀಸರು ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್)ಯ ಹಿರಿಯ ಅಧಿಕಾರಿಗಳೆದುರು ಶಸ್ತ್ರಾಸ್ತ್ರಗಳನ್ನು ತಂದೊಪ್ಪಿಸಿ ಶರಣಾಗಿದ್ದಾರೆ. ಇವರಲ್ಲಿ 6 ನಕ್ಸಲ್ ಪ್ರಮುಖರ ಸೆರೆಗೆ ನೆರವಾದವರಿಗೆ ತಲಾ 8 ಲಕ್ಷ ರು.ಗಳ ಬಹುಮಾನ ಘೋಷಿಸಲಾಗಿತ್ತು. ಮೂವರ ಸೆರೆಗೆ ನೆರವಾದವರಿಗೆ ತಲಾ 5 ಲಕ್ಷ ರು.ಗಳ ಬಹುಮಾನವಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜಿಲ್ಲಾ ಮೀಸಲು ಗಾರ್ಡ್ (ಡಿಆರ್‌ಜಿ), ಬಸ್ತಾರ್ ಫೈಟರ್ಸ್, ರಾಜ್ಯ ಪೊಲೀಸರ ವಿಶೇಷ ಕಾರ್ಯಪಡೆ(ಎಸ್‌ಟಿಎಫ್), ಸಿಆರ್‌ಪಿಎಫ್ ಮತ್ತು 'ಕಮಾಂಡೊ ಬೆಟಾಲಿಯನ್ ಫಾರ್ ರೆಸಲ್ಯೂಟ್ ಆಕ್ಷನ್(ಕೋಬ್ರಾ) ಪಡೆಗಳು 50 ನಕ್ಸಲರ ಶರಣಾಗತಿ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಅಧಿಕಾರಿಗಳು ಮಾಧ್ಯಮಗಳಿಗೆ ವಿವರ ನೀಡಿದ್ದಾರೆ.

ಆಳಸಮುದ್ರ ಗಣಿಗಾರಿಕೆ ವಿರುದ್ಧ ಪ್ರಧಾನಿಗೆ ಪತ್ರ

ದೆಹಲಿ: ಆಳ ಸಮುದರ ಗಣಿಗಾರಿಕೆ ಟೆಂಡರ್‌ಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಲೋಕಸಭೆ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.



ಕೇರಳ, ಗುಜರಾತ್, ಅಂಡಮಾನ್-ನಿಕೋಬಾರ್ ದ್ವೀಪ ಸಮೂಹಗಳ ಬಳಿ ಆಳಸಮುದ್ರ ಗಣಿಗಾರಿಕೆಗೆ ಅವಕಾಶ ಮಾಡಿಕೊಡುವ ಕೇಂದ್ರ ಸರಕಾರದ ಟೆಂಡರ್‌ಗಳನ್ನು ತಕ್ಷಣವೇ ರದ್ದುಗೊಳಿಸಲು ಕ್ರಮ ಕೈಗೊಳ್ಳಿ ಎಂದು ರಾಹುಲ್ ಪತ್ರದಲ್ಲಿ ಒತ್ತಾಯಿಸಿದ್ದಾರೆ. ಸ್ಥಳೀಯರ ಜತೆ ಸಮಾಲೋಚನೆ ಮಾಡದೇ, ಆಯಾ ಪ್ರದೇಶದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಸರಿಯಾಗಿ ಅಧ್ಯಯನ ಮಾಡದೇ ಆಳ ಸಮುದ್ರ ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟಿರುವುದು ಸರಿಯಲ್ಲ. ಈ ಆಳ ಸಮುದ್ರ ಗಣಿಗಾರಿಕೆಯಿಂದ ಮತ್ಸೋದ್ಯಮದ ಮೇಲೆ ಪ್ರತಿಕೂಲ ಪರಿಣಾಮವಾಗಲಿದೆ. ಇದೇ ವಿಚಾರವಾಗಿ ಸ್ಥಳೀಯರು ಪ್ರತಿಭಟನೆ ನಡೆಸಿದ್ದಾರೆ. ಹಾಗಾಗಿ ತಕ್ಷಣವೇ ಟೆಂಡರ್‌ಗಳನ್ನು ರದ್ದುಗೊಳಿಸಿ ಎಂದು ರಾಯ್‌ಬರೇಲಿ ಸಂಸದ ರಾಹುಲ್ ಆಗ್ರಹಿಸಿದ್ದಾರೆ. ಪ್ರಧಾನಿ ಪತ್ರ ಬರೆದಿರುವ ವಿಚಾರವಾಗಿ ವಾಟ್ಸಾಪ್ ಚಾನೆಲ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಔರಂಗಜೇಬ್ ಸಮಾಧಿ: ಆರೆಸ್ಸೆಸ್, ಎಂಎನ್ಎಸ್ ಮೃದುಧೋರಣೆ

ನಾಗಪುರ: ಮೊಘಲ್ ದೊರೆ ಔರಂಗಜೇಬನ ಸಮಾಧಿಯನ್ನು ಮಹಾರಾಷ್ಟ್ರದ ಸಂಭಾಜಿ ನಗರದಿಂದ ತೆಗೆದುಹಾಕಬೇಕೆಂದು ಹಿಂದೂ ಸಂಘಟನೆಗಳು ಆಗ್ರಹಿಸುತ್ತಿರುವ ಮಧ್ಯೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಮತ್ತು ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್) ಭಿನ್ನ ಧ್ವನಿಯಲ್ಲಿ ಮಾತನಾಡಿವೆ.

ನಾಗಪುರದಲ್ಲಿ ನಡೆದ ಯುಗಾದಿ ಕಾರ್ಯಕ್ರಮ ಸಂದರ್ಭ ಸುದ್ದಿಗಾರರ ಜತೆ ಮಾತನಾಡಿದ ಹಿರಿಯ ಆರ್‌ಎಸ್‌ಎಸ್ ನಾಯಕ ಸುರೇಶ್ ಜೋಶಿ(ಭಯ್ಯಾಜಿ), ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದಲ್ಲಿರುವ ಔರಂಗಜೇಬ್ ಸಮಾಧಿಗೆ ನಂಬಿಕೆ ಇದ್ದವರು ಹೋಗುತ್ತಾರೆ. ಆ ಬಗ್ಗೆ ಹೊಸದಾಗಿ ಚರ್ಚೆ ಹುಟ್ಟು ಹಾಕುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ.

ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ, ಔರಂಗಜೇಬನ ಸಮಾಧಿ ಕುರಿತು ಕೋಮು ಉದ್ವಿಗ್ನತೆ ಉಂಟು ಮಾಡುವ ಪ್ರಯತ್ನಗಳನ್ನು ಖಂಡಿಸಿದರು. ಇತಿಹಾಸವನ್ನು ಜಾತಿ ಮತ್ತು ಧರ್ಮದ ಕನ್ನಡಕದಿಂದ ನೋಡಬಾರದು. ಇತಿಹಾಸದ ಓದಿಗೆ ವಾಟ್ಸಾಪ್ ಫಾರ್ವರ್ಡ್ ಸಂದೇಶಗಳನ್ನು ಅವಲಂಬಿಸಬಾರದು ಎಂದು ಹೇಳಿದ್ದಾರೆ. ಶಿವಾಜಿ ಎಂಬ ಚಿಂತನೆಯನ್ನು ಕೊಲ್ಲಲು ಬಯಸಿದ್ದ ಮೊಘಲ್ ದೊರೆ ವಿಫಲನಾದ. ಬಳಿಕ ಮಹಾರಾಷ್ಟ್ರದಲ್ಲಿ ನಿಧನರಾದ. ಹಾಗಾಗಿ ಆತನ ಸಮಾಧಿ ಈ ನೆಲದಲ್ಲಾಗಿದೆ. ಬಿಜಾಪುರದ ಜನರಲ್ ಅಫ್ಜಲ್ ಖಾನ್‌ನನ್ನು ಪ್ರತಾಪ್‌ಗಢ ಕೋಟೆಯ ಬಳಿ ಸಮಾಧಿ ಮಾಡಲಾಯಿತು. ಛತ್ರಪತಿ ಶಿವಾಜಿ ಮಹಾರಾಜರ ಅನುಮತಿ ಇಲ್ಲದೇ ಹಾಗೆ ಮಾಡಲು ಸಾಧ್ಯವೇ? ಎಂದು ಪ್ರಶ್ನೆ ಮಾಡಿದ್ದಾರೆ.

ಪ್ರಿಯಾಂಕಾ ಬೆಂಗಾವಲು ಕಾರಿಗೆ ಅಡ್ಡಿ: ಯುಟ್ಯೂಬರ್ ಬಂಧನ

ತ್ರಿಶೂರ್: ವಯನಾಡು ಸಂಸದೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಅವರ ಬೆಂಗಾವಲು ಪಡೆ ವಾಹನಕ್ಕೆ ಅಡ್ಡಿಪಡಿಸಿದ ಆರೋಪದಡಿ ಯುಟ್ಯೂಬರ್, ಎಲನಾಡು ನಿವಾಸಿ ಅನೀಶ್ ಅಬ್ರಹಾಂ ಎಂಬಾತನನ್ನು ಕೇರಳದ ಮನ್ನುತ್ತಿ ಪೊಲೀಸರು ಬಂಧಿಸಿದ್ದಾರೆ. ಬಳಿಕ ಸ್ಟೇಷನ್ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿ ಮಾಧ್ಯಮಗಳಿಗೆ ಸೋಮವಾರ ತಿಳಿಸಿದ್ದಾರೆ. ಯುಟ್ಯೂಬರ್ ಕಾರನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ಪ್ರಿಯಾಂಕಾ ವಾದ್ರಾ, ವಯನಾಡು ಕ್ಷೇತ್ರ ಮತ್ತು ಮಲಪ್ಪುರಂ ಜಿಲ್ಲೆಯಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಲಪ್ಪುರಂನ ವಂದೂರಿನಿಂದ ಕೊಚ್ಚಿ ವಿಮಾನ ನಿಲ್ದಾಣಕ್ಕೆ ಶನಿವಾರ ರಾತ್ರಿ 9.30ರಲ್ಲಿ ಪ್ರಯಾಣಿಸುತ್ತಿದ್ದಾಗ ಮನ್ನುತ್ತಿ ಬೈಪಾಸ್ ಜಂಕ್ಷನ್‌ನಲ್ಲಿ ಯುಟ್ಯೂಬರ್ ಸಂಚಾರಕ್ಕೆ ಅಡ್ಡಿಪಡಿಸಿದ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸಂಸದರ ಪೈಲಟ್ ವಾಹನದ ಸೈರನ್‌ನಿಂದ ಸಿಟ್ಟಾಗಿದ್ದ ಯುಟ್ಯೂಬರ್ ಸಂಸದರ ಬೆಂಗಾವಲು ಪಡೆ ವಾಹನಗಳ ಸಾಲಿನ ಮುಂದೆ ತನ್ನ ಕಾರನ್ನು ನಿಲ್ಲಿಸಿ ಸಂಚಾರಕ್ಕೆ ಅಡ್ಡಿಪಡಿಸಿದ. ಮನ್ನುತ್ತಿ ಸಬ್ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ಪೊಲೀಸರು ಕಾರು ತೆರವುಗೊಳಿಸಲೆತ್ನಿಸಿದಾಗ ಯುಟ್ಯೂಬರ್ ಪೊಲೀಸರೊಂದಿಗೆ ಸಂಘರ್ಷಕ್ಕಿಳಿದ ಎಂದು ವರದಿಯಾಗಿದೆ.

ಸಂಸದರ ಬೆಂಗಾವಲು ಪಡೆ ವಾಹನಗಳ ಮಧ್ಯೆ ಉದ್ದೇಶಪೂರ್ವಕವಾಗಿ ವಾಹನ ಚಲಾಯಿಸಿರುವುದು, ಜೀವಕ್ಕೆ ಅಪಾಯಉಂಟು ಮಾಡುವ ಯತ್ನ ಮತ್ತು ಪೊಲೀಸರ ಸೂಚನೆ ಪಾಲಿಸದೇ ಇದ್ದುದಕ್ಕಾಗಿ ಯುಟ್ಯೂಬರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ದೇಶದ ವಿವಿಧೆಡೆಯೂ ಅಧಿಕ ತಾಪ

ಏಪ್ರಿಲ್-ಜೂನ್‌ನಲ್ಲಿ ಕರ್ನಾಟಕಕ್ಕೆ ಬಿಸಿಲಾಘಾತ

ದೆಹಲಿ: ಕರ್ನಾಟಕ ಸೇರಿದಂತೆ ದೇಶದ ವಿವಿಧೆಡೆ ಏಪ್ರಿಲ್-ಜೂನ್‌ನಲ್ಲಿ ಅಧಿಕ ಬಿಸಿಲು ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಸೋಮವಾರ ಮುನ್ಸೂಚನೆ ನೀಡಿದೆ.



ಪಶ್ಚಿಮ ಮತ್ತು ಪೂರ್ವ ಭಾರತದ ಕೆಲವು ಪ್ರದೇಶ ಹೊರತು ದೇಶದ ಬಹುತೇಕ ಕಡೆ ಹೆಚ್ಚಿನ ತಾಪಮಾನ ಇರಲಿದೆ. ಬಹುತೇಕ ಪ್ರದೇಶಗಳಲ್ಲಿ ಕನಿಷ್ಠ ತಾಪಮಾನವೂ ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ. ಉತ್ತರ, ಪೂರ್ವ, ಮಧ್ಯಭಾರತದ ಬಹುತೇಕ ಭಾಗಗಳು ಮತ್ತು ವಾಯುವ್ಯ ಭಾರತದ ಬಯಲು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ 2ರಿಂದ 4 ಪಟ್ಟು ಬಿಸಿಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಮುಖ್ಯಸ್ಥ ಮೃತ್ಯುಂಜಯ್ ಮೊಹಾಪಾತ್ರ ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ಸೋಮವಾರ ಹೇಳಿದ್ದಾರೆ. ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕ ಮತ್ತು ತಮಿಳುನಾಡಿನ ಉತ್ತರ ಭಾಗ, ರಾಜಸ್ಥಾನ, ಗುಜರಾತ್, ಹರಿಯಾಣ, ಪಂಜಾಬ್, ಮಧ್ಯಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ಛತ್ತೀಸ್‌ಗಢದಲ್ಲಿ ಹೆಚ್ಚಿನ ಬಿಸಿಲು ದಾಖಲಾಗಲಿದೆ ಎಂದಿದ್ದಾರೆ.

ಪಾಕ್‌ನ ಕರಾಚಿಯಲ್ಲಿ ಘಟನೆ

ಎಲ್‌ಇಟಿ ಉಗ್ರ ಖಾರಿಗೆ ಗುಂಡಿಕ್ಕಿದ ಅಪರಿಚಿತ

ಕರಾಚಿ: ವಿಶ್ವದ ವಿವಿಧೆಡೆ ಇರುವ ಭಾರತ ವಿರೋಧಿ ಉಗ್ರಗಾಮಿ ಸಂಘಟನೆಗಳ ಪ್ರಮುಖರು ಒಬ್ಬರಾದ ಮೇಲೊಬ್ಬರಂತೆ ಗುಂಡೇಟಿಗೆ ಬಲಿಯಾಗುತ್ತಿದ್ದಾರೆ. ಲಷ್ಕರ್ ಎ ತಯ್ಯಬಾ(ಎಲ್‌ಇಟಿ) ಉಗ್ರ ಸಂಘಟನೆಯ ಪ್ರಮುಖ ಹಫೀಜ್ ಸಯೀದ್‌ನ ಸಂಬಂಧಿ ಮತ್ತು ಎಲ್‌ಇಟಿ ಉಗ್ರ ಸಂಘಟನೆಯ ಹಣಕಾಸು ನೆರವುಗಾರ ಖಾರಿ ಅಬ್ದು ರೆಹಮಾನ್ ಪಾಕಿಸ್ತಾನದ ಕರಾಚಿಯಲ್ಲಿ 'ಬಂದೂಕುಧಾರಿ' ಗುಂಡೇಟಿನಿಂದ ಸಾವಿಗೀಡಾಗಿದ್ದಾನೆ.

ಕರಾಚಿಯಲ್ಲಿನ ಶೆರ್ಪಾವೊ ಕಾಲೋನಿಯ ಅಂಗಡಿಯಲ್ಲಿದ್ದಾಗ ಉಗ್ರ ಖಾರಿ ಅಬ್ದು ರೆಹಮಾನ್‌ಗೆ ಮೋಟಾರ್ ಬೈಕ್‌ನಲ್ಲಿ ಬಂದ ಶಸ್ತ್ರಸಜ್ಜಿತ ಅಪರಿಚಿತ ಗುಂಡು ಹಾರಿಸಿದ. ರಕ್ತದ ಮಡುವಿನಲ್ಲಿ ನರಳುತ್ತಾ ಬಿದ್ದಿದ್ದ ಉಗ್ರ ಖಾರಿ ಅಬ್ದು ರೆಹಮಾನ್‌ನನ್ನು ನೆರೆಹೊರೆ ಯವರು ಜಿನ್ನಾ ಆಸ್ಪತ್ರೆಗೆ ಕರೆದೊಯ್ದರೂ ಅಷ್ಟರಲ್ಲಾಗಲೇ ಆತ ಪ್ರಾಣ ಬಿಟ್ಟಿದ್ದ. ಬಂದೂಕುಧಾರಿಗಳ ದಾಳಿ ದೃಶ್ಯಗಳು ಅಂಗಡಿಯಲ್ಲಿದ್ದ ಸಿಸಿಟಿವಿಯಲ್ಲಿ ಸೆರೆಯಾಗಿದೆ ಎಂದು ಹೈದಾಬಾದ್ ಪೊಲೀಸ್ ಎಸ್‌ಎಚ್‌ಒ ರಾಣಾ ಖುಷಿ ಮೊಹಮ್ಮದ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಖಾರಿ ಅಬ್ದು ರೆಹಮಾನ್ ಕೊಲೆ ಟಾರ್ಗೆಟ್ ಕಿಲ್ಲಿಂಗ್‌ನ ಮುಂದುವರೆದ ಭಾಗ ಎಂದು ಪಾಕ್ ಅಧಿಕಾರಿಗಳು ಹೇಳಿದ್ದು, ಇದೊಂದು ಭಯೋತ್ಪಾದಕ ಕೃತ್ಯ ಎಂದು ಟೀಕಿಸಿದ್ದಾರೆ. ಖಾರಿ ಅಬ್ದು ರೆಹಮಾನ್ ಭಾರತದ ಮೋಸ್ಟ್ ವಾಂಟೆಂಡ್ ಲಷ್ಕರ್ ನಾಯಕ, ಮುಂಬೈ ದಾಳಿ ರೂವಾರಿ ಹಫೀಜ್ ಸಯೀದ್‌ನ ಸಂಬಂಧಿ. ಖಾರಿ ಲಷ್ಕರೆ ಸಂಘಟನೆಯ ಪ್ರಮುಖ ಕಮಾಂಡರ್ ಆಗಿದ್ದ. ಕರಾಚಿಯಲ್ಲಿ ಅಹ್ಲೆ ಸುನ್ನತ್ ವಾಲ್ಜಮಾತ್‌ನ ಸ್ಥಳೀಯ ನಾಯಕನಾಗಿದ್ದ.

ಮ್ಯಾನ್ಮಾರ್ ಭೂಕಂಪ: ಸಾವು 2056ಕ್ಕೆ, 270 ಮಂದಿ ಕಾಣೆ

ನೈಪೈದಾ: ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ ಸಾವಿಗೀಡಾದವರ ಸಂಖ್ಯೆ 2056ಕ್ಕೆ ಏರಿಕೆಯಾಗಿದೆ. ಮ್ಯಾನ್ಮಾರ್ ಸರಕಾರ ಒಂದು ವಾರ ರಾಷ್ಟ್ರೀಯ ಶೋಕಾಚರಣೆ ಘೋಷಿಸಿದೆ.

ಅಲ್ಲದೇ, 3900ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. 270 ಮಂದಿ ಕಾಣೆಯಾಗಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಸೋಮವಾರ ಹೇಳಿದ್ದಾರೆ. ಶುಕ್ರವಾರ ಬೆಳಗ್ಗೆ ರಿಕ್ಟರ್ ಮಾಪಕದಲ್ಲಿ 7.7ರಷ್ಟು ಮತ್ತ 6.4ರಷ್ಟು ತೀವ್ರತೆಯ ಭೂಕಂಪಗಳು ಸಂಭವಿಸಿವೆ.

ಆ ಬಳಿಕವೂ ಪದೇ ಪದೇ ಭೂಮಿ ಕಂಪಿಸಿದೆ. ಪರಿಣಾಮ, ಭಾರೀ ಪ್ರಮಾಣದಲ್ಲಿ ಮೂಲ ಸೌಕರ್ಯ ವ್ಯವಸ್ಥೆಗೆ ಹಾನಿಯಾಗಿದೆ. ಸತತ ನಾಲ್ಕು ದಿನಗಳಿಂದ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದರೂ ಇನ್ನೂ ಸಾವಿರಾರು ಜನರು ಅವಶೇಷಗಳಡಿ ಸಿಲುಕಿರುವ ಶಂಕೆ ಇದೆ. ಭೂಕಂಪದಿಂದ 35 ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಸಂತಾಪ ಸೂಚಕವಾಗಿ ಏ.6ರವರೆಗೂ ರಾಷ್ಟ್ರಧ್ವಜಗಳನ್ನು ಅರ್ಧಕ್ಕೆ ಇಳಿಸಲಾಗುತ್ತದೆ ಎಂದು ಆಡಳಿತಾರೂಢ ಜುಂಟಾ ಹೇಳಿಕೆಯಲ್ಲಿ ತಿಳಿಸಿದೆ.

ಭಾರತ, ಅಮೆರಿಕ, ಚೀನಾ ಸೇರಿದಂತೆ ವಿವಿಧ ದೇಶಗಳು ಮ್ಯಾನ್ಮಾರ್‌ಗೆ ನೆರವು ನೀಡಿವೆ. ನೆರವಾಗುವುದರಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಪರಿಹಾರ ಕಾರ್ಯಕ್ಕೆ 80 ಮಂದಿಯ ಎನ್‌ಡಿಆರ್‌ಎಫ್ ತಂಡ ಕಳುಹಿಸಿರುವ ಭಾರತ, ಆಪರೇಷನ್ ಬ್ರಹ್ಮ ಹೆಸರಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ.

ಗ್ರೀನ್‌ಲ್ಯಾಂಡ್ ಮೇಲೇಕೆ ಟ್ರಂಪ್ ಕಣ್ಣು!?

ಡ್ಯಾನಿಷ್ ಆಡಳಿತದ ವಶದಲ್ಲಿರುವ ಅರೆ ಸ್ವಾಯತ್ತ ಪ್ರದೇಶವಾದ ಗ್ರೀನ್‌ಲ್ಯಾಂಡನ್ನು ಅಮೆರಿಕದ ವಶಕ್ಕೆ ತೆಗೆದುಕೊಳ್ಳಬೇಕೆಂಬುದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಯಕೆ. 'ಅದಕ್ಕಾಗಿ ಎಷ್ಟೇ ದೂರವಾದರೂ ಹೋಗಲು ಸಿದ್ಧ' ಎಂದಿದ್ದಾರೆ ಟ್ರಂಪ್. ಏಕೆಂದರೆ, ಅಮೆರಿಕದ ಆರ್ಥಿಕತೆಗೆ ಹಲವು ತಲೆಮಾರುವರೆಗೆ ಶಕ್ತಿ ನೀಡಬಲ್ಲ ಅಪರೂಪದ ಖನಿಜ ಪದಾರ್ಥಗಳು ಅಪಾರ ಪ್ರಮಾಣದಲ್ಲಿ ಆ ಭೂಪ್ರದೇಶದಲ್ಲಿವೆ.



ಗ್ರೀನ್‌ಲ್ಯಾಂಡ್‌ನ ಆರ್ಥಿಕತೆ

ಮತ್ಸ್ಯೋದ್ಯಮ ಅವಲಂಬಿತ. ರಫ್ತಿನಲ್ಲಿ ಮೀನುಗಾರಿಕೆಯದ್ದೇ ಶೇ.95ರ ಪಾಲು. ಉಳಿದಂತೆ ಡೆನ್ಮಾರ್ಕ್ ಸಬ್ಸಿಡಿ ಅವಲಂಬಿತ.

ಗ್ರೀನ್‌ಲ್ಯಾಂಡ್‌ಗಾಗಿ ಡೆನ್ಮಾರ್ಕ್‌ನಿಂದ ವಾರ್ಷಿಕ ಕೇವಲ 100 ಕೋಟಿ ಡಾಲರ್ ವೆಚ್ಚ. ಪ್ರತಿ ನಿವಾಸಿಗೆ ತಲಾ 17,500 ಡಾಲರ್.

ಗ್ರೀನ್‌ಲ್ಯಾಂಡ್ ಜನಸಂಖ್ಯೆ 57,000 (ಅಂದಾಜು)



ಗ್ರೀನ್‌ಲ್ಯಾಂಡ್ ಮೇಲೆ ಟ್ರಂಪ್ ಆಸಕ್ತಿಗೆ ಕಾರಣ

1. ದ್ವೀಪ ಇರುವ ಪ್ರದೇಶ ಬಲು ಕಾರ್ಯತಾಂತ್ರಿಕ, ದ್ವೀಪ ಸಂಪನ್ಮೂಲಗಳ ಖಜಾನೆ.
2. ಯೂರೋಪ್-ಉತ್ತರ ಅಮೆರಿಕ ಮಾರ್ಗದಲ್ಲಿ ಅಂತರ ತಗ್ಗಿಸುವ ಭೂಪ್ರದೇಶ.
3. ಖಂಡಾಂತರ ಕ್ಷಿಪಣಿ ದಾಳಿ ಎಚ್ಚರಿಕೆ ಸಂದೇಶ ವ್ಯವಸ್ಥೆಗೆ ಅಮೆರಿಕ ಸೇನೆಗೆ ಸೂಕ್ತ ಸ್ಥಳ.

ಪ್ರಸ್ತುತ ಅಮೆರಿಕ ಉಪಸ್ಥಿತಿ

ಗ್ರೀನ್‌ಲ್ಯಾಂಡ್‌ನ ಫಿಟುಫಿಕ್ ವಾಯುನೆಲೆ ಅಮೆರಿಕ ಸೇನೆಯೇ ಖಾಯಂ ನಿರ್ವಹಣೆಯಲ್ಲಿದೆ. 1951ರಲ್ಲಿ ಅಮೆರಿಕ- ಡೆನ್ಮಾರ್ಕ್ ನಡುವಿನ ಒಪ್ಪಂದದ ಪ್ರಕಾರ ಗ್ರೀನ್‌ಲ್ಯಾಂಡ್‌ನಲ್ಲಿ ಮುಕ್ತ ಸಂಚಾರಕ್ಕೆ, ಸೇನಾ ನೆಲೆಗಳ ಸ್ಥಾಪನೆಗೆ ಅಮೆರಿಕಕ್ಕೆ ಹಕ್ಕಿದೆ.

ಗ್ರೀನ್‌ಲ್ಯಾಂಡ್‌ಗೆ ಬೇಕಿರುವುದೇನು?

ಗ್ರೀನ್‌ಲ್ಯಾಂಡ್ ಜನತೆ ಸ್ವತಂತ್ರವಾಗಿರುವುದನ್ನೇ ಬಯಸುತ್ತಾರೆ. ಆದರೆ, ಸಮಯದ ನಿಗದಿ ಮತ್ತು ಅದರಿಂದ ಜೀವನದ ಮಟ್ಟದ ಮೇಲಿನ ಪರಿಣಾಮ ವಿಚಾರದಲ್ಲಿ ದ್ವೀಪವಾಸಿಗಳಲ್ಲಿ ಭಿನ್ನಮತವಿದೆ. ಅವರಿಗೆ, ಮತ್ತೊಬ್ಬ ವಸಾಹತು ನಿಯಂತ್ರಕ ಬೇಕಿಲ್ಲ.

ಗ್ರೀನ್‌ಲ್ಯಾಂಡ್‌ನ ಪ್ರಸ್ತುತ ಸ್ಥಿತಿಗತಿ

1953

ವಾಸ್ತವದಲ್ಲಿ ಗ್ರೀನ್‌ಲ್ಯಾಂಡ್, ನಾರ್ಡಿಕ್ ರಾಜರ ಆಳ್ವಿಕೆಗೆ ಒಳಪಟ್ಟಿದೆ. ಡೆನ್ಮಾರ್ಕ್ ಸಂವಿಧಾನ ದಲ್ಲೂ ಅದರ ಉಲ್ಲೇಖವಿದೆ. ಹಿಂದೆ ಈ ಭೂಪ್ರದೇಶ ಡೆನ್ಮಾರ್ಕ್ ವಸಾಹತು ಆಗಿತ್ತು.

2009

ಸ್ವಂತವಾಗಿ ಆಳ್ವಿಕೆ ಮಾಡುವ ಅವಕಾಶ ಗ್ರೀನ್‌ಲ್ಯಾಂಡ್‌ಗೆ ಲಭಿಸಿದೆ. ಅಲ್ಲದೇ, ಡೆನ್ಮಾರ್ಕ್‌ನಿಂದ ಸ್ವತಂತ್ರಗೊಳ್ಳುವುದನ್ನು ಘೋಷಿಸುವ ಹಕ್ಕೂ ಅದಕ್ಕಿದೆ.

ಮಾ.11ರಲ್ಲಿ ನಡೆದ ಚುನಾವಣೆಯಲ್ಲಿ ವರ್ತಕರ ಪರವಾದ ಡೆಮಾಕ್ರೆಟ್ಸ್ ಪಕ್ಷ ದ್ವೀಪದ ಮೇಲೆ ಅಮೆರಿಕದ ನಿಯಂತ್ರಣ ಸಾಧಿಸುವುದಕ್ಕೆ ಸಹಭಾಗಿತ್ವ ಮತ್ತು ಒಗ್ಗಟ್ಟಿನ ಪ್ರದರ್ಶನ ಇಚ್ಚಿಸಿದೆ. ಅಲ್ಲದೇ ಡೆನ್ಮಾರ್ಕ್‌ನಿಂದ ಗ್ರೀನ್‌ಲ್ಯಾಂಡ್ ಹಂತ ಹಂತವಾಗಿ ಸ್ವತಂತ್ರಗೊಳ್ಳಲಿ ಎಂದೂ ಬಯಸುತ್ತಿದೆ.

ಡೆನ್ಮಾರ್ಕ್ ನಿಲುವು

ಡೊನಾಲ್ಡ್ ಟ್ರಂಪ್ ಮೊದಲ ಬಾರಿ ಅಮೆರಿಕ ಅಧ್ಯಕ್ಷರಾದಾಗಲೇ ಗ್ರೀನ್‌ಲ್ಯಾಂಡ್ ಖರೀದಿಗೆ ಇಚ್ಛಿಸಿದ್ದರು. ಆದರೆ, ಡೆನ್ಮಾರ್ಕ್ ಪ್ರಧಾನಿ ಯಾಗಿದ್ದ ಮೆಟ್ಟೆ ಫ್ರೆಡರಿಕ್‌ಸನ್, ಟ್ರಂಪ್ ಪ್ರಸ್ತಾವವನ್ನು ಅಸಂಬದ್ಧ ಎಂದು ಕರೆದಿದ್ದರು. ಟ್ರಂಪ್ ಈಗ ಮತ್ತೆ ಆಸಕ್ತಿ ತೋರಿದ್ದಾರೆ. ಈಗ ಫ್ರೆಡರಿಕ್‌ಸನ್, 'ತಮ್ಮ ಭವಿಷ್ಯವನ್ನು ಗ್ರೀನ್‌ಲ್ಯಾಂಡ್ ಜನರೇ ನಿರ್ಧರಿಸಲಿ' ಎಂದಿದ್ದಾರೆ. ಅಲ್ಲದೇ, ಆಕೆ, 'ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಅಮೆರಿಕ ತಡೆಯಲಾಗದಷ್ಟು ಒತ್ತಡ ಹಾಕುತ್ತಿದೆ' ಎಂದೂ ಹೇಳಿದ್ದಾರೆ. ಈ ಒತ್ತಡ ಡೆನ್ಮಾರ್ಕ್ ತಡೆಯಬಲ್ಲದೇ?

ಸಮಾಚಾರ ಸಣ್ಣದಲ್ಲ

ನಿರ್ದೇಶಕ ಸನೋಜ್ ಮಿಶ್ರಾ ಬಂಧನ

ದೆಹಲಿ: ಮಹಾಕುಂಭ ಮೇಳದಲ್ಲಿ ರಾತ್ರೋ ರಾತ್ರಿ ಪ್ರಸಿದ್ಧಿಯಾಗಿದ್ದ ಮೊನಾಲಿಸಾ ಭೋಸ್ಲೆ ಅವರಿಗೆ ಸಿನಿಮಾದಲ್ಲಿ ನಟಿಸಲು ಆಫರ್ ನೀಡಿದ್ದ ನಿರ್ದೇಶಕ ಸನೋಜ್ ಮಿಶ್ರಾ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಚಿತ್ರದಲ್ಲಿ ನಟಿಸಲು ಅವಕಾಶ ನೀಡುವುದಾಗಿ ನಂಬಿಸಿ, ಯುವತಿಯೊಬ್ಬರ ಮೇಲೆ ಹಲವು ಬಾರಿ ಅತ್ಯಾಚಾರ ಎಸಗಿರುವ ಆರೋಪದಡಿ ಮಿಶ್ರಾ ಅವರನ್ನು ಬಂಧಿಸಲಾಗಿದೆ. ಮಿಶ್ರಾ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ದೆಹಲಿ ಹೈಕೋರ್ಟ್ ತಿರಸ್ಕರಿಸಿದ ನಂತರ ಸನೋಜ್ ಮಿಶ್ರಾ ಅವರನ್ನು ಭಾನುವಾರ ಗಾಜಿಯಾಬಾದ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೊಸ ಮಾರ್ಗಗಳಲ್ಲಿ ಬಸ್ ಸಂಚಾರ

ಬೆಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ನಗರದ ಎರಡು ಹೊಸ ಮಾರ್ಗಗಳಲ್ಲಿ ಬಿಎಂಟಿಸಿಯು ಹೆಚ್ಚುವರಿ ಬಸ್‌ಸಂಚಾರ ಆರಂಭಿಸಲು ಮುಂದಾಗಿದೆ. ನಗರಿಗರ ಅನುಕೂಲಕ್ಕಾಗಿ ಏಪ್ರಿಲ್ 2 ರಿಂದ ಬಿಎಂಟಿಸಿ ಎರಡು ಹೊಸ ಮಾರ್ಗಗಳಲ್ಲಿ ಬಸ್ ಸಂಚಾರ ಆರಂಭಿಸಲು ಮುಂದಾಗಿದ್ದು, ಈ ಬಸ್‌ಗಳು ಪ್ರಯಾಣಿಕರ ಸೇವೆಗೆ ಲಭ್ಯ ಆಗಲಿದೆ ಎಂದು ತಿಳಿಸಿದೆ.

ಮಾರ್ಗಗಳು: ಕೆ.ಆರ್.ಮಾರುಕಟ್ಟೆ, ಉಪಾಧ್ಯಾಯ ಬಡಾವಣೆ, ಸಿರ್ಸಿ ಸರ್ಕಲ್, ನಾಯಂಡಹಳ್ಳಿ, ಬೆಂಗಳೂರು ವಿವಿ ಗೇಟ್, ಚಂದ್ರಮೌಳೇಶ್ವರ ದೇವಸ್ಥಾನ, ಭೈರವನಗರ ಹಾಗೂ ಕೆಂಪೇಗೌಡ ಬಸ್ ನಿಲ್ದಾಣ, ಜ್ಞಾನ ಭಾರತಿ ಲೇಔಟ್ 1ನೇ ಬ್ಲಾಕ್, ನಾಯಂಡಹಳ್ಳಿ ಮಾರ್ಗಗಳಲ್ಲಿ ಬಸ್ ಸೇವೆ ಆರಂಭಿಸಲು ಮುಂದಾಗಿದೆ.

ಮಾರ್ಗ , ಸಮಯಗಳ ವಿವರ

- **ಮಾರ್ಗ ಸಂಖ್ಯೆ 220-ಬಿ/1 ಕೆ.ಆರ್. ಮಾರುಕಟ್ಟೆಯಿಂದ ಬೆಳಗ್ಗೆ 6.50, 8.40, 10.15 ಬಿಡಲಿದೆ. ಮಧ್ಯಾಹ್ನ 2.45, 4.15, ಸಂಜೆ 6.05, 7.45, ರಾತ್ರಿ 9.20.**
- **ಉಪಾಧ್ಯಾಯ ಬಡಾವಣೆಯಿಂದ ಬೆಳಗ್ಗೆ 6.10, 7.35, 9.25, 11, ಮಧ್ಯಾಹ್ನ 3.30, ಸಂಜೆ 5.15, 6.55, ರಾತ್ರಿ 8.35ಕ್ಕೆ ಹೊರಡಲಿದೆ.**
- **ಮಾರ್ಗ ಸಂಖ್ಯೆ: 220-ಸಿ/1 ಕೆಂಪೇಗೌಡ ಬಸ್ ನಿಲ್ದಾಣದಿಂದ ಬೆಳಗ್ಗೆ 6.15, 8.00, 9.50, ಮಧ್ಯಾಹ್ನ 3.15, ಸಂಜೆ 5.15, 7.10, ರಾತ್ರಿ 9.05ಕ್ಕೆ ಹೊರಡಲಿದೆ.**
- **ಜ್ಞಾನಭಾರತಿ ಲೇಔಟ್ 1ನೇ ಬ್ಲಾಕ್‌ನಿಂದ ಬೆಳಗ್ಗೆ 5.30, 7.05, 8.50, 11.10, ಸಂಜೆ 4.05, 6.10, ರಾತ್ರಿ 9.05ಕ್ಕೆ ಹೊರಡಲಿದೆ.**

ಕೊಲಿಜಿಯಂ ವ್ಯವಸ್ಥೆಯ ಬದಲು ಸ್ವತಂತ್ರ ಆಯೋಗದ ರಚನೆ ಮರು ಪ್ರಸ್ತಾಪ

ನ್ಯಾಯಾಂಗ ನೇಮಕ, ವರ್ಗ ಚರ್ಚೆ ಮುನ್ನೆಲೆಗೆ

ದೆಹಲಿ: ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಪ್ರಕರಣ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದೆ. ನ್ಯಾಯಾಧೀಶರ ಮನೆಗೆ ಬೆಂಕಿ ಬಿದ್ದಿದ್ದರಿಂದ ಅವರ ಮನೆಯಲ್ಲಿದ್ದ ರಾಶಿ ರಾಶಿ ಹಣದ ಕಂತೆಗಳು ಪತ್ತೆಯಾಗಿದ್ದವು. ಇದರ ಬೆನ್ನಲ್ಲೇ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾಯಿಸಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ. ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿಕೆ ಉಪಾಧ್ಯಾಯ ಈ ವಿಷಯದ ಬಗ್ಗೆ ಆಂತರಿಕ ತನಿಖೆ ನಡೆಸುವಂತೆ ಆದೇಶಿಸಿದ ನಂತರ ಯಶವಂತ ವರ್ಮಾ ಅವರನ್ನು ವರ್ಗಾವಣೆ ನಡೆದಿದೆ. ನ್ಯಾಯಮೂರ್ತಿ ವರ್ಮಾ ಅವರು ಮಾತ್ರ ತಾನು ನಿರಪರಾಧಿ ತಮಗೂ ಇದಕ್ಕೂ ಸಂಬಂಧವೇ ಇಲ್ಲ , ಪಿತೂರಿ ನಡೆದಿದೆ ಎಂದು ಹೇಳುತ್ತಿದ್ದಾರೆ. ಅದೇನೆ ಇರಲಿ ಭಾರತದಲ್ಲಿ ನ್ಯಾಯಾಧೀಶರ ವರ್ಗಾವಣೆ ಪ್ರಕ್ರಿಯೇ ಹೇಗಿರುತ್ತದೆ? ಯಾವ ಸಂದರ್ಭದಲ್ಲಿ ತಕ್ಷಣವೇ ಅವರನ್ನು ವರ್ಗಾವಣೆ ಮಾಡಲು ಆದೇಶ ನೀಡಲಾಗುತ್ತದೆ. ವರ್ಗಾವಣೆಗೆ ಎಷ್ಟು ದಿನಗಳು ಬೇಕು ಇವೆಲ್ಲವೂ ಆಸಕ್ತಿಯ ವಿಷಯಗಳು.

ಭಾರತದಲ್ಲಿ, ನ್ಯಾಯಮೂರ್ತಿಗಳ ವರ್ಗಾವಣೆಯು ದೀರ್ಘ ಪ್ರಕ್ರಿಯೆಗೆ ಒಳಗಾಗುತ್ತದೆ, ಅಲ್ಲಿ ಮುಖ್ಯ ನ್ಯಾಯಮೂರ್ತಿಗಳು ನಿರ್ದಿಷ್ಟ ನ್ಯಾಯಮೂರ್ತಿಯನ್ನು ಯಾವ ರಾಜ್ಯಕ್ಕೆ ಮತ್ತು ಯಾವ ಹೈಕೋರ್ಟ್‌ಗೆ ವರ್ಗಾಯಿಸಬೇಕೆಂದು ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರೆ. ಮುಖ್ಯ ನ್ಯಾಯಮೂರ್ತಿ ಜೊತೆ ಪೂರ್ವ ಸಮಾಲೋಚನೆ ನಡೆಸಿದ ನಂತರ ರಾಷ್ಟ್ರಪತಿಗಳು ನ್ಯಾಯಮೂರ್ತಿ ಒಂದು ನ್ಯಾಯಾಲಯದಿಂದ ಮತ್ತೊಂದು ನ್ಯಾಯಾಲಯಕ್ಕೆ ವರ್ಗಾಯಿಸುತ್ತಾರೆ. 222 ನೇ ವಿಧಿಯು ನ್ಯಾಯಾಧೀಶರನ್ನು ಒಂದು ಹೈಕೋರ್ಟ್‌ನಿಂದ ಮತ್ತೊಂದು ನ್ಯಾಯಾಲಯಕ್ಕೆ ವರ್ಗಾಯಿಸಲು ಅವಕಾಶವನ್ನು ಒದಗಿಸುತ್ತದೆ. ಮೊದಲ ನ್ಯಾಯಮೂರ್ತಿ ಪ್ರಕರಣ ಎಂದೂ ಕರೆಯಲ್ಪಡುವ ಎಸ್‌ಪಿ ಗುಪ್ತಾ ವರ್ಸಸ್ ಭಾರತದ ರಾಷ್ಟ್ರಪತಿ (1981) ಪ್ರಕರಣದಲ್ಲಿ, ನ್ಯಾಯಾಂಗ ನೇಮಕಾತಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಗಳ ಅಧಿಕಾರಗಳನ್ನು ಸುಪ್ರೀಂ ಕೋರ್ಟ್ ಉಲ್ಲೇಖಿಸಿದೆ. ಅಂತಿಮವಾಗಿ ರಾಷ್ಟ್ರಪತಿಗಳು ನ್ಯಾಯಾಂಗವನ್ನು ಸಂಪರ್ಕಿಸಬೇಕು, ಆದರೆ ನ್ಯಾಯಾಧೀಶರನ್ನು ವಜಾ ಗೊಳಿಸುವ ಇಲ್ಲವೇ ನೇಮಕ ಮಾಡುವ ಅಂತಿಮ ಅಧಿಕಾರವು ಮಂತ್ರಿ ಮಂಡಳದ ಸಲಹೆಯ ಮೇರೆಗೆ ಕಾರ್ಯನಿರ್ವಹಿಸುವ ಕಾರ್ಯಾಂಗದ ಮೇಲಿದೆ ಎಂದು ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್ ಅಡ್ವೊಕೇಟ್ಸ್ ವರ್ಸಸ್- ದಿ ಯೂನಿಯನ್ ಆಫ್ ಇಂಡಿಯಾ (1993) ಎಂದು ಕರೆಯಲ್ಪಡುವ ಎರಡನೇ ನ್ಯಾಯಮೂರ್ತಿ ಪ್ರಕರಣವು ನ್ಯಾಯಾಂಗ ನೇಮಕಾತಿಗಳಿಗಾಗಿ ಕೊಲಿಜಿಯಂ ವ್ಯವಸ್ಥೆಯನ್ನು ಸ್ಥಾಪಿಸಿತು. ನ್ಯಾಯಾಧೀಶರ ನೇಮಕಾತಿ ಮತ್ತು ವರ್ಗಾವಣೆಯಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಮತ್ತು ಹಿರಿಯ ನ್ಯಾಯಮೂರ್ತಿಗಳ ಸಮಿತಿಗೆ ಪ್ರಾಮುಖ್ಯತೆಯನ್ನು ನೀಡಿತು.

1998 ರ ಸುಪ್ರೀಂ ಕೋರ್ಟ್ ಅಭಿಪ್ರಾಯವಾದ ಮೂರನೇ ನ್ಯಾಯಮೂರ್ತಿಗಳ ಪ್ರಕರಣವು ನ್ಯಾಯಾಂಗ ನೇಮಕಾತಿಗಳಲ್ಲಿ ಸಮಾಲೋಚನೆಯ ಅರ್ಥವನ್ನು ಸ್ಪಷ್ಟಪಡಿಸಿತು. ಕೊಲಿಜಿಯಂ ವ್ಯವಸ್ಥೆಯನ್ನು ಕೇವಲ ಮುಖ್ಯ ನ್ಯಾಯಮೂರ್ತಿ ಮತ್ತು ಇಬ್ಬರು ಹಿರಿಯ ನ್ಯಾಯಮೂರ್ತಿ ಬದಲಿಗೆ ಭಾರ

ತದ ಮುಖ್ಯ ನ್ಯಾಯಮೂರ್ತಿ ಮತ್ತು ನಾಲ್ವರು ಹಿರಿಯ ನ್ಯಾಯಮೂರ್ತಿಗಳನ್ನು ಸೇರಿಸಲು ವಿಸ್ತರಿಸಿತು. 1998 ರಲ್ಲಿ, ಆಗಿನ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಸಂವಿಧಾನದ 143 ನೇ ವಿಧಿಯ ಅಡಿಯಲ್ಲಿ ಈ ಆದೇಶವನ್ನು ಹೊರಡಿಸಲಾಗಿತ್ತು. ಆದರೆ 2015 ರಲ್ಲಿ ಇದನ್ನು ರದ್ದುಗೊಳಿಸಲಾಗಿತ್ತು.

ಟೀಕೆಗಳೇನು?: ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಜ್ಞರ ಆಯೋಗದ ಇತ್ತೀಚಿನ ವರದಿಯು ಭಾರತದಲ್ಲಿ ನ್ಯಾಯಾಂಗ ಸ್ವಾತಂತ್ರ್ಯದ ಬಗ್ಗೆ ಗಂಭೀರ ಕಳವಳಗಳನ್ನು ಹುಟ್ಟುಹಾಕಿದೆ. ಹೆಚ್ಚುತ್ತಿರುವ ಕಾರ್ಯಾಂಗದ ಹಸ್ತಕ್ಷೇಪ, ಆಡಳಿತದಲ್ಲಿ ಪಾರದರ್ಶಕತೆಯನ್ನು ಮರೆಮಾಚುತ್ತದೆ ಎಂದು ವರದಿ ಹೇಳಿದೆ. ನ್ಯಾಯಾಧೀಶರ ಒಪ್ಪಿಗೆ ಇಲ್ಲದೆ ಮಾಡುವ ವರ್ಗಾವಣೆ ಅಸಂಬದ್ಧ ಎಂದು ಅದು ಹೇಳಿದೆ.

ಕಾಯ್ದೆ ಏನು ಹೇಳುತ್ತದೆ?: ಕೊಲಿಜಿಯಂ ವ್ಯವಸ್ಥೆಯ ಅಪಾರದರ್ಶಕತೆಯ ಬಗ್ಗೆ ಇರುವ ಕಳವಳಗಳನ್ನು ಪರಿಹರಿಸಲು, ನರೇಂದ್ರ ಮೋದಿ ಸರಕಾರ 2014 ರಲ್ಲಿ ನ್ಯಾಯಾಂಗ ನೇಮಕಾತಿಗಳಲ್ಲಿ ವ್ಯಾಪಕ ಸುಧಾರಣೆಗಳನ್ನು ಪ್ರಸ್ತಾಪಿಸಿತು. ಆಗಸ್ಟ್‌ನಲ್ಲಿ, ಸಂಸತ್ತು 2014 ರ ಸಂವಿಧಾನ (99 ನೇ ತಿದ್ದುಪಡಿ) ಕಾಯ್ದೆ ಮತ್ತು ರಾಷ್ಟ್ರೀಯ ನ್ಯಾಯಾಂಗ ನೇಮಕಾತಿಗಳನ್ನು ಜಾರಿಗೆ ತಂದಿತು. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಿಸುವ ಕೊಲಿಜಿಯಂ ವ್ಯವಸ್ಥೆಯನ್ನು ಬದಲಿಸಲು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸುವ ಆಯೋಗ (ಎನ್‌ಜೆಎಸಿ) ಕಾಯ್ದೆಯನ್ನು ಪರಿಚಯ ಮಾಡಿದೆ. ಆ ಸಮಿತಿ ಒಳಗೆ ಸುಪ್ರೀಂ ಕೋರ್ಟ್‌ನ ಇಬ್ಬರು ಹಿರಿಯ ನ್ಯಾಯಮೂರ್ತಿಗಳು, ಕೇಂದ್ರ ಕಾನೂನು ಸಚಿವರು ಮತ್ತು ಇಬ್ಬರು ಗಣ್ಯ ನಾಗರಿಕರನ್ನು ಒಳಗೊಂಡಿತ್ತು. ಸಂಸತ್ತಿನಲ್ಲಿ ಬಹುತೇಕ ಸಂಪೂರ್ಣ ಒಮ್ಮತದೊಂದಿಗೆ -ಹಿರಿಯ ನ್ಯಾಯಶಾಸ್ತ್ರಜ್ಞ ರಾಮ್ ಜೇಠ್ಮಲಾನಿಯವರ ಏಕೈಕ ಭಿನ್ನಾಭಿಪ್ರಾಯದೊಂದಿಗೆ ಇದನ್ನು ಅಂಗೀಕರಿಸಲಾಗಿತ್ತು. ಬಳಿಕ 16 ರಾಜ್ಯ ಶಾಸಕಾಂಗಗಳು ಅನುಮೋದಿಸಿದವು.

ಇದು ಜಾರಿಗೆ ಬಂದ ಕೆಲವೇ ದಿನಗಳಲ್ಲಿ, ಕಾನೂನನ್ನು ಸುಪ್ರೀಂಕೋರ್ಟ್‌ನಲ್ಲಿ ಈ ಸಮಿತಿ ಕುರಿತು ಪ್ರಶ್ನಿಸಲಾಯಿತು. ಎನ್‌ಜೆಎಸಿಯಲ್ಲಿ ಮಹಿಳೆಯರಿಗೆ ಹಾಗೂ ಹಿಂದುಳಿದ ವರ್ಗಕ್ಕೆ ಮೀಸಲಾತಿ ನೀಡಲಾಗಿತ್ತು. ಈ ಸಮಿತಿಯಲ್ಲಿದ್ದವರಿಗೆ ವಿಟೋ ಅಧಿಕಾರವನ್ನು ನೀಡಲಾಗಿತ್ತು. ಆದರೆ ಅಕ್ಟೋಬರ್ 16, 2015 ರಂದು, ಐದು ನ್ಯಾಯಾಧೀಶರ ಪೀಠವು 4:1 ಬಹುಮತದೊಂದಿಗೆ ಎನ್‌ಜೆಎಸಿ ಸಂವಿಧಾನಬಾಹಿರವಾಗಿದೆ ಎಂದು ತಿರಸ್ಕರಿಸಿತ್ತು.

ಮತ್ತೆ ಸುದ್ದಿಯಲ್ಲಿ ಎನ್‌ಜೆಎಸಿ

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಎನ್‌ಜೆಎಸಿ ಕುರಿತು ಮತ್ತೆ ಮಾತನಾಡಿದ್ದಾರೆ. ಎನ್‌ಜೆಎಸಿ ಇದ್ದಿದ್ದರೆ ಈ ವಿಷಯಗಳು ವಿಭಿನ್ನವಾಗಿರುತ್ತಿದ್ದವು ಎಂದು ಹೇಳಿದ್ದಾರೆ. ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾರ್ಯನಿರ್ವಹಿಸುತ್ತಿದ್ದರೆ, ಸುಪ್ರೀಂ ಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಾಧೀಶರ ಕೊಲಿಜಿಯಂ ನ್ಯಾಯಮೂರ್ತಿ ವರ್ಮಾ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವಾಪಸ್ ಕಳುಹಿಸಬೇಕೆ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುತ್ತಿರಲಿಲ್ಲ. ವರ್ಮಾ ಅವರನ್ನು ಅಲಹಾಬಾದ್‌ನಿಂದ ವರ್ಗಾವಣೆ ಮಾಡಲಾಗುತ್ತಿರಲಿಲ್ಲ. ನ್ಯಾ. ಯಶವಂತ್ ವರ್ಮಾ ವಿರುದ್ಧದ ಆರೋಪಗಳ ತನಿಖೆಗೆ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್. ಸಂಧವಾಲಿಯಾ ಮತ್ತು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಅವರನ್ನು ಒಳಗೊಂಡ ಮೂವರು ಸದಸ್ಯರ ಸಮಿತಿಯನ್ನು ರಚಿಸಿದ್ದರು. ಇದೀಗ ಯಶವಂತ್ ವರ್ಮಾ ಅವರನ್ನು ಅಲಹಾಬಾದ್‌ಗೆ ವರ್ಗಾವಣೆ ಮಾಡಲಾಗಿದೆ. ತನಿಖೆ ಮುಗಿಯುವ ಮೊದಲೇ ವರ್ಗಾವಣೆ ಮಾಡಿರುವುದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಆಕ್ರೋಶವನ್ನು ಉಂಟು ಮಾಡಿದೆ.

ನಾಳೆ ವಕ್ಫ್ ತಿದ್ದುಪಡಿ ಮಸೂದೆ ಮಂಡನೆ

ದೆಹಲಿ: ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿ ಸಿದಂತೆ ಪ್ರಮುಖ ವಿಷಯ ಬಹಿರಂಗವಾಗಿದೆ. ಕೇಂದ್ರ ಸರಕಾರವು ಬುಧವಾರ ಲೋಕಸಭೆ ಯಲ್ಲಿ ವಕ್ಫ್ ತಿದ್ದುಪಡಿ ಮಸೂದೆಯನ್ನು ಮಂಡಿಸಲಿದೆ ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಬಿಜೆಪಿ ಎನ್‌ಡಿಎ ಮಿತ್ರಪಕ್ಷಗಳಿಗೆ ತಿಳಿಸಿದೆ. ಸರಕಾರದ ಹಿರಿಯ ಸಚಿವರು ಸರಕಾರದ ಮೈತ್ರಿ ಪಕ್ಷಗಳ ನಾಯಕರಿಗೆ ಕರೆ ಮಾಡಿ ಮಾಹಿತಿ ನೀಡಿ ಅವರ ಬೆಂಬಲ ಕೋರಿದ್ದಾರೆ ಎಂದು ವರದಿಯಾಗಿದೆ.

ಸಂಸತ್ತಿನ ಪ್ರಸ್ತುತ ಬಜೆಟ್ ಅಧಿವೇಶನ ಏಪ್ರಿಲ್ 4ರಂದು ಕೊನೆಗೊಳ್ಳಲಿದೆ. ಅದೇ ಸಮಯದಲ್ಲಿ, ಈ ಮಸೂದೆಯನ್ನು ಕಾನೂನ ನ್ನಾಗಿ ಮಾಡಲು, ಅದನ್ನು ಸಂಸತ್ತಿನ ಎರಡೂ ಸದನಗಳಲ್ಲಿ (ಲೋಕಸಭೆ ಮತ್ತು ರಾಜ್ಯಸಭೆ) ಅಂಗೀಕರಿಸಬೇಕಾಗುತ್ತದೆ. ಈ ಮಸೂದೆಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತ ವ್ಯವಹಾರ ಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಲು ಸರಕಾರ ಸಂಪೂರ್ಣವಾಗಿ ಸಿದ್ಧವಾಗಿದೆ. ಸಂಸತ್ತಿನ ಸಭೆಯ ನಂತರ ಮಸೂದೆಯನ್ನು ಮಂಡಿಸುವ ಸಮಯವನ್ನು ನಿರ್ಧರಿಸಲಾಗುವುದು ಎಂದು ಸೋಮವಾರ ಹೇಳಿದ್ದರು.

ಮಸೂದೆಯನ್ನು ಮಂಡಿಸುವ ಸಮಯದ ಕುರಿತು ಮಂಗಳವಾರ ವಿವಿಧ ಪಕ್ಷಗಳ ನಾಯಕರೊಂದಿಗೆ ಚರ್ಚಿಸುವುದಾಗಿ ಕೇಂದ್ರ ಸರಕಾರ ಸೂಚಿಸಿದೆ. ಇದಾದ ನಂತರ ಬುಧವಾರ ಲೋಕಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆ.



ಕೆಲವು ಪಕ್ಷಗಳು ಮತ್ತು ಸಂಘಟನೆಗಳು ಸಮಾಜವನ್ನು ದಾರಿತಪ್ಪಿಸುವಲ್ಲಿ ತೊಡಗಿವೆ. ಈ ಜನರು ಸುಳ್ಳನ್ನು ಆಶ್ರಯಿಸುತ್ತಿದ್ದಾರೆ. ಸತ್ಯವೆಂದರೆ ಈ ಮಸೂದೆ ಮುಸ್ಲಿಮರ ಹಿತದೃಷ್ಟಿಯಿಂದ. ಈದ್ ಹಬ್ಬದಂದು ಮುಸ್ಲಿಮರು ಕಪ್ಪು ಪಟ್ಟಿ ಧರಿಸಿ ಮಸೂದೆಯನ್ನು ವಿರೋಧಿಸುವಂತೆ, ಜನರನ್ನು ಬೀದಿಗಿಳಿಯುವಂತೆ ಪ್ರಚೋದಿಸುವುದು ಒಳ್ಳೆಯದಲ್ಲ.

- ಕಿರಣ್ ರಿಜಿಜು ಕೇಂದ್ರ ಸಚಿವ

ಸಿಎಂಆರ್ ವಿವಿ ಘಟಿಕೋತ್ಸವ ಸಮಾರಂಭ

ಬೆಂಗಳೂರು: ನಗರದ ಪ್ರತ್ತಿತ ಸಿಎಂಆರ್ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 34 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ 24 ಪಿಎಚ್.ಡಿ ಪದವೀಧರರಿಗೆ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದರು.

2023-24 ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದ 2,188 ವಿದ್ಯಾರ್ಥಿಗಳಿಗೆ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ಮಾಜಿ ರಾಜ್ಯಸಭಾ ಸದಸ್ಯ ಡಾ.ಕೆ.ಸಿ.ರಾಮಮೂರ್ತಿ ಮತ್ತು ಸಿಎಂಆರ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಸಬಿತಾ ರಾಮಮೂರ್ತಿ ಪದವಿ ಪ್ರಮಾಣ ಪತ್ರ ಪ್ರದಾನ ಮಾಡಿ ಗೌರಸಿದರು.

ಮೌಲ್ಯಯುತ ಶಿಕ್ಷಣ: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಮಾತನಾಡಿ, ಸಿಎಂಆರ್ ವಿಶ್ವವಿದ್ಯಾಲಯ ಗುಣಾತ್ಮಕ, ಮೌಲ್ಯಯುತ ಶಿಕ್ಷಣ ನೀಡುತ್ತಿದ್ದು, ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗಳಿಸಿದೆ. ಪ್ರತಿಭಾವಂತ ವಿದ್ಯಾರ್ಥಿ ಸಮುದಾಯವನ್ನು ದೇಶಕ್ಕೆ ನೀಡುವ ಮೂಲಕ ಭಾರತವನ್ನು ವಿಶ್ವಮಾನ್ಯ ಮಾಡುವ ನಿಟ್ಟಿನಲ್ಲಿ ಸಿಎಂಆರ್ ವಿಶ್ವವಿದ್ಯಾಲಯ ಶೈಕ್ಷಣಿಕವಾಗಿ ಶ್ರಮಿ ಸುತ್ತಿರುವುದು ಶ್ಲಾಘನೀಯ ಎಂದರು.

ಪರಿಣಾಮಕಾರಿ ಉನ್ನತ ಶಿಕ್ಷಣ: ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾತನಾಡಿ, ಉನ್ನತ ಶಿಕ್ಷಣ ಭಾರತದಲ್ಲಿ ಪರಿಣಾಮಕಾರಿಯಾಗಿ ಬೆಳೆಯುತ್ತಿದ್ದು, ವಿದ್ಯಾರ್ಥಿ ಸಮುದಾಯ ದೇಶವನ್ನು ಸದೃಢವಾಗಿ ಕಟ್ಟುತ್ತಿದೆ. ಈ ನಿಟ್ಟಿನಲ್ಲಿ ಸಿಎಂಆರ್ ವಿಶ್ವವಿದ್ಯಾಲಯ ಗುಣಾತ್ಮಕ ಶಿಕ್ಷಣದ ಜತೆಗೆ ಸಮಾಜಕ್ಕೆ ಸಾಕಷ್ಟು ಮಾನವೀಯ ಕೆಲಸಗಳನ್ನು ಮಾಡುತ್ತಿದೆ. ಇಂದು ದೇಶದ ಜ್ಞಾನ, ತಂತ್ರಜ್ಞಾನ ಬೆಳವಣಿಗೆಯಲ್ಲಿ ಕೃತಕ ಬುದ್ಧಿಮತ್ತೆ ದೇಶದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಸ್ಪರ್ಧಾತ್ಮಕವಾಗಿ ಬೆಳೆಯುವ ಮೂಲಕ ದೇಶವನ್ನು ಬಲಿಷ್ಠವಾಗಿ ಕಟ್ಟಬೇಕು. ಈ ನಿಟ್ಟಿನಲ್ಲಿ ಸಿಎಂಆರ್ ವಿಶ್ವವಿದ್ಯಾಲಯ ದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಒತ್ತು ನೀಡಿದೆ ಎಂದರು.

ಅದ್ದೂರಿಯಾಗಿದೆ 45 ಟೀಸರ್

ವಿಭಿನ್ನ ಶೀರ್ಷಿಕೆಯಿಂದಲೇ ಸದ್ದು ಮಾಡಿರುವ 45 ಆರಂಭದಿಂದಲೂ ಭರ್ಜರಿ ಕುತೂಹಲ ಮೂಡಿಸಿದೆ. ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್, ಉಪೇಂದ್ರ ಈ ಚಿತ್ರದಲ್ಲಿ ಒಟ್ಟಿಗೆ ನಟಿಸಿರುವುದು ವಿಶೇಷ. ಸಂಗೀತ ನಿರ್ದೇಶಕರಾಗಿ ಪ್ರಸಿದ್ಧಿ ಪಡೆದಿದ್ದ ಅರ್ಜುನ್ ಜನ್ಯ ಈ ಚಿತ್ರವನ್ನು ನಿರ್ದೇಶನ ಮಾಡಿರುವುದು ಮತ್ತೂ ವಿಶೇಷ. ಯುಗಾದಿ ಹಬ್ಬದ ಶುಭದಿನದಂದು ಸಿನಿಮಾದ ಟೀಸರ್ ರಿಲೀಸ್ ಆಗಿದೆ. ಶಿವರಾಜಕುಮಾರ್ ಟೀಸರ್ ಅನಾವರಣ ಮಾಡಿದರು. ಟೀಸರ್ ಅದ್ಭುತವಾಗಿ ಮೂಡಿಬಂದಿದ್ದು 45ನಲ್ಲಿ ಆ್ಯಕ್ಷನ್, ಥ್ರಿಲ್ಲಿಂಗ್ ಎಲ್ಲವೂ ಬೆರೆತಿದೆ. ಶಿವಣ್ಣ ಅವರ ಡೈಲಾಗ್ ಕೇಳುವುದೇ ಆನಂದ. ಇನ್ನು ಉಪೇಂದ್ರ ವಿಭಿನ್ನ ಗೆಟಪ್‌ನಲ್ಲಿ ಮಿಂಚಿದ್ದು, ಹಿಂದೆಂದು ಕಂಡಿರದ ಪಾತ್ರದಲ್ಲಿ ನಟಿಸಿದ್ದಾರೆ. ಹಿನ್ನೆಲೆ ಸಂಗೀತ ಟೀಸರ್‌ಗೆ ಶಕ್ತಿತುಂಬಿದೆ. ಅದ್ದೂರಿಯಾಗಿ ಮೂಡಿಬಂದಿರುವ ಈ ಚಿತ್ರವನ್ನು ರಮೇಶ್ ರೆಡ್ಡಿ ನಿರ್ಮಾಣ ಮಾಡಿದ್ದಾರೆ. ಸತ್ಯ ಹೆಗಡೆ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಈ ಚಿತ್ರ ಆಗಲು ಮುಖ್ಯ ಕಾರಣ ಶಿವಣ್ಣ. ಸಿನಿಮಾ ಅಂದು ಕೊಂಡ ಹಾಗೆ ಮೂಡಿಬಂದಿದೆ ಎಂದರೆ ಅದಕ್ಕೆ ನಿರ್ಮಾಪಕ ರಮೇಶ್ ರೆಡ್ಡಿ ಅವರೇ ಕಾರಣ. 45 ಎನ್ನುವ ಶೀರ್ಷಿಕೆಯನ್ನು ಸುಮ್ಮನೆ ಇಟ್ಟಿಲ್ಲ. ಚಿತ್ರದ ಟೀಸರ್‌ನಲ್ಲಿ ಕಥೆ ಹೇಳುವ ಪ್ರಯತ್ನ ಮಾಡಿದ್ದೇವೆ. ಅದು ಏನು ಎಂಬುದನ್ನು ಪ್ರೇಕ್ಷಕರೇ ಗೆಸ್ ಮಾಡಲಿ. ಚಿತ್ರದಲ್ಲಿ ಗ್ರಾಫಿಕ್ ಕೆಲಸ ಹೆಚ್ಚಿಗೆ ಇದ್ದು ಕೆನಡಾದಲ್ಲಿ ಪರಿಣಿತ ತಂತ್ರಜ್ಞರ ತಂಡದಿಂದ ಸಿಜಿ ಕೆಲಸ ನಡೆಯುತ್ತಿದೆ. ಆಗಸ್ಟ್ 15ರಂದು ವಿಶ್ವಾದ್ಯಂತ ಚಿತ್ರ ಬಿಡುಗಡೆಯಾಗಲಿದೆ. ಅದಕ್ಕೂ ಮುನ್ನ ಮತ್ತೊಂದು ಟೀಸರ್, ಹಾಡುಗಳು ಹಾಗೂ ಟ್ರೇಲರ್ ಅನ್ನು ವಿಭಿನ್ನವಾಗಿ ಅನಾವರಣ ಮಾಡುವ ಯೋಚನೆ ಇದೆ ಎಂದು ಅರ್ಜುನ್ ಜನ್ಯ ತಿಳಿಸಿದರು.

ಡಿ.ಕೆ.ಡಿ ರಿಯಾಲಿಟಿ ಶೋ ಸಮಯದಲ್ಲಿ ಅರ್ಜುನ್ ಜನ್ಯ ಈ ಚಿತ್ರದ ಕಥೆ ಹೇಳಿದರು. ಕಥೆ ಕೇಳಿ ಥ್ರಿಲ್ ಆದೆ. ಕಥೆ ಕೊಟ್ಟು ಬಿಡುತ್ತೇನೆ ಯಾರಾದರೂ ನಿರ್ದೇಶನ ಮಾಡಲಿ ಎಂದು ಅರ್ಜುನ್ ಜನ್ಯ ಹೇಳಿದರು. ನೀವು ಕಥೆ ಚೆನ್ನಾಗಿ ಹೇಳಿದ್ದೀರಾ. ನೀವೇ ನಿರ್ದೇಶನ ಮಾಡಿ ಅಂತ ಹೇಳಿದೆ. ಅಂತೆಯೇ ಅರ್ಜುನ್ ನಿರ್ದೇಶನಕ್ಕೆ ಒಪ್ಪಿದರು. ಪ್ರೀತ್ಸೆ, ಲವ ಕುಶ ಚಿತ್ರಗಳಲ್ಲಿ ನಟ ಉಪೇಂದ್ರ ಜತೆಗೆ ನಟಿಸಿದ್ದೆ. ಈಗ ಮತ್ತೆ ಅವರೊಂದಿಗೆ ಅಭಿನಯಿಸಿದ್ದೇನೆ. ಟೀಸರ್‌ನಲ್ಲೇ ಅರ್ಜುನ್ ಜನ್ಯ ಬಹಳ ಕುತೂಹಲ ಮೂಡಿಸಿದ್ದಾರೆ.

-ಶಿವರಾಜ್ ಕುಮಾರ್

ಅರ್ಜುನ್ ಜನ್ಯ ಬರೀ ಸಂಗೀತ ನಿರ್ದೇಶಕ ಮತ್ತು ನಿರ್ದೇಶಕ ಮಾತ್ರ ಅಲ್ಲ. ಒಳ್ಳೆಯ ನಟ ಕೂಡ. ಪ್ರತಿಯೊಬ್ಬ ಕಲಾವಿದರಿಗೂ ಹೇಗೆ ನಟಿಸಬೇಕೆಂದು ಅವರು ಹೇಳುತ್ತಿರಲಿಲ್ಲ. ನಟಿಸಿ ತೋರಿಸುತ್ತಿದ್ದರು. ಇನ್ನೂ ಚಿತ್ರರಂಗಕ್ಕೆ ರಮೇಶ್ ರೆಡ್ಡಿ ಅವರಂತಹ ನಿರ್ಮಾಪಕರು ಬೇಕಾಗಿದ್ದಾರೆ. ಈ ಸಿನಿಮಾ ಖಂಡಿತಾ ಯಶಸ್ವಿಯಾಗುತ್ತದೆ.

-ಉಪೇಂದ್ರ

ಚಿತ್ರ : ಬ್ಯಾಡ್
ನಿರ್ದೇಶನ : ಪಿ.ಸಿ.ಶೇಖರ್
ನಿರ್ಮಾಣ ವೆಂಕಟೇಶ್ ಗೌಡ
ತಾರಾಗಣ : ನಕುಲ್, ಮಾನ್ವಿತಾ, ಅಪೂರ್ವಾ, ಅಶ್ವಿನಿ ಮುಂತಾದವರು
ರೇಟಿಂಗ್ : ★★★

ರಿವೇಂಜ್ ಸ್ಟೋರಿಗೆ ಆ್ಯಕ್ಷನ್ ಸ್ಪರ್ಶ

ಬ್ಯಾಡ್ ಚಿತ್ರದ ಶೀರ್ಷಿಕೆಯೇ ಕುತೂಹಲ ಮೂಡಿಸಿತ್ತು, ಅಂತೆಯೇ ಸಿನಿಮಾ ಕೂಡ ವಿಭಿನ್ನ ನೆಲೆಗಟ್ಟಿನಲ್ಲಿ ಸಾಗುತ್ತದೆ. ಇದೊಂಥರ ರಿವರ್ಸ್ ಸ್ಕ್ರೀನ್ ಪ್ಲೇ ಅನ್ನಬಹುದು. ಸಿನಿಮಾ ಆರಂಭವಾಗುತ್ತಿದ್ದಂತೆ ನಾಯಕ ತನಗೆ ಕೇಡು ಬಯಸುವವರನೆಲ್ಲಾ ಎಳೆದು ತಂದು ಕೂಡಿ ಹಾಕುತ್ತಾನೆ. ಇದು ಯಾಕೆ ಎಂಬುದು ಅಚ್ಚರಿ ಮೂಡಿಸುತ್ತಾ ಸಾಗುತ್ತದೆ. ಏನೋ ಕಳೆದುಕೊಂಡವನಂತೆ ನಾಯಕ ಚಡಪಡಿಸುತ್ತಿರುತ್ತಾರೆ. ಈ ನಡುವೆ ಪ್ರೇಮಕಥೆ ತೆರೆದುಕೊಳ್ಳುತ್ತದೆ. ಅದರ ಜತೆಗೆ ಪ್ರೇಕ್ಷಕರು ಸಾಗುತ್ತಾರೆ. ನೈಜವಾದ ಕಥೆ ತೆರೆದುಕೊಳ್ಳುವುದೇ ಸೆಕೆಂಡ್ ಹಾಫ್‌ನಲ್ಲಿ, ಬ್ಯಾಡ್ ಚಿತ್ರದಲ್ಲಿ ಪೊಲಿಟಿಕಲ್ ರಿವೇಂಜ್ ಜತೆಗೆ ಕೌಟುಂಬಿಕ ಕಥೆಯೂ ಬೆರೆತಿದೆ. ಅದರ ಜತೆಗೆ ಒಂದಷ್ಟು ಸೆಂಟಿಮೆಂಟ್ ಹಾಗೂ ಕಾಮಿಡಿ ಬೆರೆತಿದೆ. ಪ್ರೀತಿಯ ಕಥೆ ಪ್ರೇಕ್ಷಕರ ಮನಗೆಲ್ಲುತ್ತದೆ. ಪ್ರೀತಿಯಲ್ಲಿ ಬಿದ್ದದ್ದ ನಾಯಕ ಇದ್ದಕ್ಕಿದ್ದ ಹಾಗೆ ಹೀಗೆ ವರ್ತಿಸಲು ಕಾರಣ ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಚಿತ್ರದ ಕ್ಲೈಮ್ಯಾಕ್ಸ್ ವಿಭಿನ್ನವಾಗಿದ್ದು ಸಿನಿಪ್ರಿಯರನ್ನು ಅಚ್ಚರಿಯಲ್ಲಿ ತೇಲಿಸುತ್ತದೆ.

ನಿರ್ದೇಶಕ ಪಿ.ಸಿ.ಶೇಖರ್ ರಿವೇಂಜ್ ಸ್ಟೋರಿಗೆ ಕೌಟುಂಬಿಕ ಆಯಾಮ ಬೆರೆಸಿ ಅದನ್ನು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ, ಅದಕ್ಕೆ ಇನ್ನೊಂದಷ್ಟು ಥ್ರಿಲ್ಲಿಂಗ್ ಕಥೆಯನ್ನು ಬೆರೆಸಿದ್ದರೆ ಚಿತ್ರ ಇನ್ನೂ ಉತ್ತಮವಾಗಿ ಮೂಡಿಬರುತ್ತಿತ್ತು ಎನ್ನಿಸುತ್ತದೆ. ಹಿಂದೆ ಲವ್ವರ್ ಬಾಯ್ ಆಗಿ ಮಿಂಚಿದ್ದ ನಕುಲ್ ಇಲ್ಲಿ ರಗಡ್ ಆಗಿ ಕಂಗೊಳಿಸಿದ್ದಾರೆ. ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುವ ಅವರ ಅಭಿನಯದ ಚಾಕಚಕ್ಯತೆಯನ್ನು ಮೆಚ್ಚಲೇಬೇಕು.

ಮಾನ್ವಿತಾ ಹಳ್ಳಿ ಹುಡುಗಿಯಾಗಿ ಗಮನ ಸೆಳೆಯುತ್ತಾರೆ. ಅವರ ಪಾತ್ರಕ್ಕೆ ಸಾಕಷ್ಟು ಒತ್ತು ನೀಡಿದ್ದು, ಮಾನ್ವಿತಾ ಮೆಚ್ಚುವ ಅಭಿನಯ ತೋರಿದ್ದಾರೆ. ಅಪೂರ್ವಾ ಭಾರದ್ವಜ್ ಹೊಸತನದ ಪಾತ್ರದಲ್ಲಿ ಮಿಂಚಿದ್ದಾರೆ. ಸ್ವಯಂವರ ಚಂದ್ರು ಪಾತ್ರಕ್ಕೆ ನ್ಯಾಯದಗಿ ಸಿದ್ದಾರೆ. ಒಟ್ಟಾರೆ ಬ್ಯಾಡ್ ಕುಟುಂಬ ಸಮೇತ ಕುಳಿತು

ಚಂದನವನಕ್ಕೆ ಬಂದ ಖುಷಿ

ನಟಿಯಾಗಬೇಕು ಎಂದು ಆಸೆ ಹೊತ್ತು ಚಿತ್ರರಂಗಕ್ಕೆ ಬಂದವರಿಗೆ ಅವಕಾಶ ಸಿಗದಾಗ ಆಗುವ ಬೇಸರ ಅಷ್ಟಿಷ್ಟಲ್ಲ, ಆದರೆ ಅದೇ ಬಯಸದೇ ಅಭಿನಯದ ಅವಕಾಶ ಸಿಕ್ಕರೆ ಆಗ ಆಗುವ ಖುಷಿ ಅಷ್ಟಿಷ್ಟಲ್ಲ, ಹೌದು ಇದಕ್ಕೆ ನಿದರ್ಶನ ನಟಿ ಖುಷಿ. ಹೌದು, ನೌಕರಿ ಅರಸಿ ಬೆಂಗಳೂರಿಗೆ ಬಂದ ಖುಷಿಗೆ ಸಿಕ್ಕಿದ್ದು ಮೇಕಪ್ ಆರ್ಟಿಸ್ಟ್ ಕೆಲಸ. ಸಿನಿಮಾದ ಸೆಟ್‌ನಲ್ಲಿ ಕಲಾವಿದರಿಗೆ ಬಣ್ಣಹಚ್ಚಿ ಅವರು ನಟಿಸುವಾಗ ನೋಡಿ ಖುಷಿಪಡುತ್ತಿದ್ದರು, ಅವರು ತೆರೆಯಲ್ಲಿ ಸುಂದರವಾಗಿ ಕಂಡರೆ ಹೆಮ್ಮೆಯಿಂದ ಬೀಗುತ್ತಿದ್ದರು. ಅಂದರೆ ಅಷ್ಟರಮಟ್ಟಿಗೆ ತಮ್ಮ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಆ ಬಳಿಕ ನಟನೆಯಂತೂ ನನಗೆ ಸಿಗೋದಿಲ್ಲ ಎಂದು ನೆನೆಸಿ ತಾವೇ ಒಂದು ಮೇಕಪ್ ಅಕಾಡೆಮಿ ಸ್ಥಾಪಿಸಿದರು. ಅಲ್ಲಿ ದೊಡ್ಡ ದೊಡ್ಡ ಕಲಾವಿದರಿಗೆ ಮೇಕಪ್ ಮಾಡಿದರು, ಅಂತರಾಷ್ಟ್ರೀಯ ಮಟ್ಟದ ಕೇಶ ವಿನ್ಯಾಸಕಾರರಾಗಿಯೂ ಗುರುತಿಸಿಕೊಂಡರು. ಹೀಗಿರುವಾಗಲೇ ಖುಷಿಗೆ ಬಯಸದೇ ಬಂದ ಭಾಗ್ಯ ಎಂಬಂತೆ ನಟಿಸಲು ಅವಕಾಶ ಅರಸಿ ಬಂತು. ಅದು ಶಿವಣ್ಣ ಅಭಿನಯದ ಶಿವಲಿಂಗ ಸಿನಿಮಾದಲ್ಲಿ ಎಂಬುದು ವಿಶೇಷ.

ಈ ಚಿತ್ರದಲ್ಲಿ ಖುಷಿ ನಾಯಕಿಯ ಗೆಳತಿಯಾಗಿ ಕಾಣಿಸಿಕೊಂಡರು, ಅವರ ಪಾತ್ರಕ್ಕೆ ಮಹತ್ವವೂ ಇತ್ತು. ಮೊದಲ ಚಿತ್ರದಲ್ಲಿಯೇ ಇಂತಹ ಅವಕಾಶ ಸಿಕ್ಕಿದ್ದು, ಖುಷಿಯ ಸಂತಸವನ್ನು ಇಮ್ಮಡಿಗೊಳಿಸಿತ್ತು. ಶಿವಣ್ಣನ ಜತೆಗೆ ನಟಿಸಿ ಹೆಮ್ಮೆಯಿಂದ ಕುಣಿದಾಡಿದರು.

ಆ ಬಳಿಕ ನಾನಿ ಚಿತ್ರದಲ್ಲಿ ಪುಟ್ಟಮ್ಮ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದರು. ಪುಟ್ಟಮ್ಮ ಇಡೀ ಚಿತ್ರದ ಕಥೆಗೆ ತಿರುವು ನೀಡುವ ಪಾತ್ರವಾಗಿತ್ತು. ತಮಗೆ ನೀಡಿದ ಪಾತ್ರವನ್ನು ಖುಷಿ ಬಲು ಅಚ್ಚುಕಟ್ಟಾಗಿ ನಿಭಾಯಿಸಿದರು. ಈ ಪಾತ್ರ ಪ್ರೇಕ್ಷಕರಿಗೆ ಮೆಚ್ಚುಗೆಯಾಯಿತು. ಪುಟ್ಟಮ್ಮನಾದ ಖುಷಿ, ನಂತರ ಅಪಾಯವಿದೆ ಎಚ್ಚರಿಕೆ ಚಿತ್ರತಂಡ ಸೇರಿದರು. ಈ ಸಿನಿಮಾದಲ್ಲಿಯೂ ಖುಷಿ, ಶಾಂತಮ್ಮ ಎಂಬ ಪಾತ್ರವನ್ನು ನಿರ್ವಹಿಸಿದರು. ತಮಗೆ ನೀಡಿದ ಪಾತ್ರಕ್ಕೆ ಜೀವತುಂಬಿ ಅಭಿನಯಿಸಿದರು. ನಟನೆಯಲ್ಲಿಯೇ ಮನಗೆದ್ದಿರುವ ಖುಷಿಗೆ ಈಗ ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸುವ ಅವಕಾಶಗಳು ಅರಸಿ ಬರುತ್ತಿವೆ.

ನನಗೆ ಇಂತಹದ್ದೇ ಪಾತ್ರಬೇಕು ಅಂತೇನು ಇಲ್ಲ, ಆದರೆ ಎಲ್ಲರೂ ಗುರುತಿಸುವ ಅಚ್ಚರಿಪಡುವ ಪಾತ್ರಗಳು ಸಿಕ್ಕಿದರೆ ನನಗೆ ಖುಷಿ.

ಶಿವಲಿಂಗ ಚಿತ್ರದಲ್ಲಿ ಶಿವಣ್ಣ ಅವರೊಂದಿಗೆ ನಟಿಸಿದ್ದು ಸಂತಸ ತಂದಿದೆ. ಮುಂದೆ ಒಂದಾದರೂ ಸಿನಿಮಾದಲ್ಲಿ ಶಿವಣ್ಣ ಅವರ ತಂಗಿಯ ಪಾತ್ರದಲ್ಲಿ ನಟಿಸಬೇಕು ಎಂಬ ಆಸೆ ಇದೆ.

ವಿಶ್ವವಾಣಿ ಅನುದಿನವೂ ವಿರಾಮಕ್ಕೊಂದು ನೆಪ

ಆರಾಮ

@vishwavaninews

ಬೆಂಗಳೂರು
01-04-2025
ಮಂಗಳವಾರ

ಚಿತ್ತವಿಹಾರ

ಅದೃಷ್ಟದ ಮೂಲ

ನಾವಾಡುವ ಮಾತುಗಳು ನಮ್ಮ ಭವಿಷ್ಯದ ಆಧಾರ ಸ್ತಂಭಗಳಲ್ಲಿ ಒಂದು. ಒಳ್ಳೆಯ ಮಾತುಗಳಾಗಿದ್ದೂ, ನಮ್ಮ ಮಾತುಗಳ ಬಗ್ಗೆ ನಮಗೆ ಸಂದೇಹವಿದ್ದರೆ ಅವು ಸಿದ್ಧಿಸುವುದು ಕಷ್ಟ. ಮಾತುಗಳನ್ನು ಬೆಂಬಲಿಸುವ ಅಭೀಪ್ಸೆಗಳು ಆಂತರ್ಯದಲ್ಲಿ ಬಲವಾಗಿ, ಪ್ರಜ್ಞಾಪೂರ್ವಕ ವಾಗಿ ವಾಸ್ತವದ ನೆಲೆಯಲ್ಲಿ ಕಾರ್ಯ ಯೋಜನೆ ರೂಪಿಸಿದಾಗ ಮಾತ್ರ ಆಡುವ ಮಾತುಗಳು ಫಲ ಪ್ರದವಾಗುತ್ತವೆ. ಪ್ರತಿದಿನ ಹೊರಗಿನಿಂದ ಹಾರೈಕೆ ಗಳನ್ನು ನಿರೀಕ್ಷಿಸುತ್ತಾ, ಅದೇ ಸಮಯದಲ್ಲಿ ತಮಗೆ ತಾವೇ ನಕಾರಾತ್ಮಕ ಆದೇಶಗಳನ್ನು ಸುಪ್ತ ಮನಸ್ಸಿಗೆ ನೀಡುತ್ತಾ ಹೋದರೆ, ಹೊರಗಿನವರ ಹಾರೈಕೆಗಳು ಫಲ ನೀಡಲಾರವು. ಒಳ್ಳೆಯ ಅದೃಷ್ಟವೇ ತಮ್ಮದಾಗಬೇಕೆಂದು ಬಯಸುವವ ರಲ್ಲಿ ಹಲವರು ಪದೇ ಪದೇ ತಮ್ಮ ಅದೃಷ್ಟವೇ ಸರಿ ಇಲ್ಲ ಎಂದು ಹಲುಬುತ್ತಿರುತ್ತಾರೆ. ಅವರಿಗೆ ದೈನಂದಿನ ಆಗುಹೋಗುಗಳೆಲ್ಲವೂ ಸಮಸ್ಯೆಗಳಾ ಗಿಯೇ ಕಾಣುತ್ತಿರುತ್ತವೆ.



ಅದ್ಭುತ ಅವಕಾಶದ ಬಾಗಿಲು ತೆರೆದುಕೊಂಡ ಸಂದರ್ಭದಲ್ಲೂ ಸಹ ಅದು ಅವಕಾಶವಾಗಿ ಕಾಣದೆ, ಅಲ್ಲಿ ಎದುರಾಗ ಬಹುದಾದ ಕಾರ್ಪಣ್ಯಗಳೇ ಕಾಣಲಾರಂಬಿಸು ತ್ತವೆ. ತಮ್ಮ ಅದೃಷ್ಟ ಕೆಟ್ಟದೆಂದು ಬಲವಾಗಿ ನಂಬಿ ರುವ ಅವರು, ಅದನ್ನೇ ಎದುರು ನೋಡುತ್ತಾ, ಅದರ ಬಗ್ಗೆಯೇ ಮಾತನಾಡುತ್ತಾ ಹೋಗುತ್ತಾರೆ. ಸುಪ್ತ ಮನಸ್ಸು ಅದನ್ನೆಲ್ಲಾ ಭದ್ರವಾಗಿ ದಾಖಲಿಸಿ ಕೊಂಡು, ಅದಕ್ಕೆ ತಕ್ಕಂತೆಯೇ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಾ, ಬಳಸಿಕೊಳ್ಳುತ್ತಾ ಸಾಗುತ್ತದೆ. ಅವರು ತಮ್ಮ ನಂಬಿಕೆಯೇ ನಿಜವೆಂದು ಎಲ್ಲರೆ ದಿರು ಸಾಬೀತುಪಡಿಸಲು ಮುಂದಾಗಿ, ಸಾಬೀತು ಪಡಿಸಿಯೇ ಬಿಡುತ್ತಾರೆ. ಇಲ್ಲಿ ತಮ್ಮ ಸೋಲೇ ಆದರೂ, ಒಳ ಮನಸ್ಸಿನಲ್ಲಿ ವಿಷಾದದ ಅಲೆಗಳೆದ್ದಿದ್ದರೂ, ಬಾಹ್ಯದಲ್ಲಿ ತಮ್ಮ ಭವಿಷ್ಯ ವಾಣಿ ನಿಜವಾಯಿತೆಂದು ಹೇಳಿಕೊಳ್ಳುವುದರಲ್ಲಿ ತೋರಿಕೆಯ ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಒಳ್ಳೆಯ ಅದೃಷ್ಟವೇ ತಮ್ಮದೆಂದು ನಂಬುವವರಿಗೆ ಹೆಚ್ಚಿನದೆಲ್ಲವೂ ಸಕಾರಾತ್ಮಕವಾಗಿಯೇ ಘಟಿಸುತ್ತಿರುತ್ತದೆ. ಅಂದರೆ ಎಲ್ಲವೂ ಅವರಿಗೆ ಬೇಕಾದಂತೆಯೇ ನಡೆಯುತ್ತಿರುತ್ತದೆ ಎಂದಲ್ಲ, ಅವರಿಗೆ ವಿರುದ್ಧದ ಪರಿಸ್ಥಿತಿಗಳೇ ಎದುರಾದರೂ, ಅದರ ಪರಿಹಾರದ ಬಗ್ಗೆಯೇ ಹೆಚ್ಚು ಗಮನಹರಿಸಿ ಆದಷ್ಟು ಬೇಗ ಸಮಸ್ಯೆಯಿಂದ ಆಚೆ ಬರುತ್ತಾರೆ. ಏಕೆಂದರೆ ಅವರ ಅದೃಷ್ಟದ ಬಗ್ಗೆ ಅವರಿಗೆ ದೃಢ ನಂಬಿಕೆ ಇರುತ್ತದೆ. ನಮ್ಮೊಳಗಿನ ಚೈತನ್ಯದ ಬಗ್ಗೆ ದೃಢ ನಂಬಿಕೆ ಇಟ್ಟು, ಕಾರ್ಯ ಪ್ರವೃತ್ತರಾಗುವುದೇ ನಿಜವಾದ ಅದೃಷ್ಟದ ಮೂಲ.

• ಮಾಯಾ ಬಾಲಚಂದ್ರ



ಸಂಬಳ

ತಿಂಗಳ ಕೊನೆಯ ದಿನ
ಹೊಟ್ಟೆ ತುಂಬಿಸಿಕೊಳ್ಳಲು
ಖುಷಿಯಿಂದಲೇ ಸಂಬಳ ಬಂತು
ಬಹುಪಾಲು ತಿಂದು ಹಾಕಿದ್ದು
ತೆರಿಗೆ ಮತ್ತು ಬ್ಯಾಂಕಿನ ಕಂತು

• ಮಹಾಂತೇಶ ಮಾಗನೂರ

ಹಲವು ರೀಲ್ಸ್‌ಗಳು ತಪ್ಪು ಮಾಹಿತಿ ನೀಡುತ್ತಿದ್ದು, ಅದನ್ನು ನಂಬುವ ಅಮಾಯಕರೂ ಇದ್ದಾರೆ!

• ಡಾ. ಸೌಮ್ಯ ಕೆ.ವಿ.

ಕಣ್ಣಿನ ರೆಪ್ಪೆ ಊದಿಕೊಂಡು ನೋವು ಅನುಭವಿಸುತ್ತಿರುವ ಶಾಲಿನಿ ಚಿಕಿತ್ಸೆಗೆ ಬಂದಿದ್ದರು. ಅವರಿಗೆ ಕನ್ನಡಕ ಹಾಕು ವುದನ್ನು ಬಿಟ್ಟಿದ್ದರು. ಯಾಕೆ ಎಂದಾಗ, ಅವರು ನೀಡಿದ ಉತ್ತರ ಅಚ್ಚರಿಯಾಗುವಂತಿತ್ತು. 'ಡ್ರೈ ಫ್ರೂಟ್ ಗಳಿಂದ ತಯಾ ರಿಸಲ್ಪಡುವ ಒಂದು ಪಾನೀಯವನ್ನು ನಿತ್ಯ ಸೇವನೆ ಮಾಡಿದರೆ ಶಾಶ್ವತವಾಗಿ ಕನ್ನಡಕದಿಂದ ಮುಕ್ತಿ ಪಡೆಯಬಹುದು' ಎಂಬ ಸಲಹೆ ಸಿಕ್ಕಿತಂತೆ! ಎಲ್ಲಿ ಎಂದರೆ, ರೀಲ್ಸ್‌ನಲ್ಲಿ ಎಂದರು! ಪ್ರತಿ ದಿನ ಆ ರೀಲಿನಲ್ಲಿ ತಿಳಿಸಿದ ಹಾಗೆ ಡ್ರೈ ಫ್ರೂಟ್ಸ್ ಜ್ಯೂಸ್ ಕುಡಿಯುತ್ತಿದ್ದಾರೆ. ಆದರೆ ನಿತ್ಯ ತಲೆ ನೋವು, ಕಣ್ಣಿನ ನೋವು ಅನುಭವಿಸುತ್ತಿದ್ದು ಈಗ ಮೂರು ದಿನಗಳಿಂದ ಕಣ್ಣು ರೆಪ್ಪೆ ಊದಿಬಿಟ್ಟಿದೆ! ತಕ್ಷಣ ಅವರಿಗೆ ಚಿಕಿತ್ಸೆ ನೀಡಿ, ಕನ್ನಡಕ ಧರಿಸುವಂತೆ ಹೇಳಿದೆ.

ಇಂದು ಸ್ನೇಹಿತ, ಸಂಗಾತಿ, ಮಾರ್ಗದರ್ಶಕ, ಥೆರಪಿಸ್ಟ್ ಹೀಗೆ ಎಲ್ಲವೂ ಆಗಿರುವ ರೀಲ್ಸ್ ಎಂಬ ಮಾಯಾವಿ ಬಹು ರೂಪಿಯಾಗುತ್ತಿದೆ. ಎಷ್ಟೋ ವಿಷಯಗಳನ್ನು ಅತಿ ಕಡಿಮೆ ಸಮಯದಲ್ಲಿ ತಿಳಿಸಿಕೊಡುವ ರೀಲ್ಸ್‌ಗೆ ಹಲವು ಮುಖಗಳಿವೆ. ಕೆಲವು ತಜ್ಞರು ರೀಲ್ಸ್ ಮಾಡಿ ಸಮಾಜ ಸೇವೆ ಮಾಡುತ್ತಿದ್ದಾರೆ. ಇನ್ನು ಕೆಲವರು ತಜ್ಞರ ರೀತಿ ಯುನಿಫಾರಂ ಹಾಕಿಕೊಂಡು, ಖಚಿತವಲ್ಲದ ವಿಷಯಗಳನ್ನು ಹರಿಬಿಡುತ್ತಿದ್ದಾರೆ. ಅವರಿಗೆ ಹೆಚ್ಚು ಹೆಚ್ಚು ವ್ಯೂಸ್ ಅಂದರೆ, ಹೆಚ್ಚು ಜನ ನೋಡು ವುದೇ ಮುಖ್ಯ ಹೊರತು, ತಾವು ಮಾಡಿದ ರೀಲ್ಸ್ ನೋಡಿದವರು, ಅದನ್ನು ನಂಬಿದರೆ ಉಂಟಾಗುವ ಎಡವಟ್ಟುಗಳು ಮುಖ್ಯವಲ್ಲ!

ಮೂವತ್ತು ನಲವತ್ತು ಸೆಕೆಂಡುಗಳಲ್ಲಿ ಮಹಾಪಂಡಿತ ನಂತೆ, ಸ್ಪೆಶಲಿಸ್ಟ್ ಡಾಕ್ಟರಂತೆ ಸಲಹೆ ನೀಡಿದಾಗ ಸುಲಭವಾಗಿ ನಂಬಿಬಿಡುತ್ತೇವೆ. ಅಡಿಗೆ ಮಾಡುವ, ಒಳಾಂಗಣವನ್ನು ಅಲಂಕರಿಸುವ, ಗಿಡಗಳನ್ನು ಬೆಳೆಸುವ, ವ್ಯಾಯಾಮ ಮಾಡಿ ತೂಕ ಇಳಿಸುವಂತಹ ರೀಲ್ಸ್ ಸಲಹೆಗಳು ಉಪಯುಕ್ತ ವಾಗಿಯೂ ಇರುತ್ತವೆ. ಆದರೆ ಇದರಲ್ಲಿನ ಎಲ್ಲ ಮಾಹಿತಿಯೂ ನೂರಕ್ಕೆ ನೂರು ಸರಿ ಎಂದು ನಂಬುವ ಅಮಾಯಕತೆಯಿಂದ ಹೊರಬರಬೇಕಿದೆ.

'ಇವಳಿಗೆ ರಕ್ತ ಕಡಿಮೆಯಾಗಿದೆಯ ನೋಡಿ' ಎಂದು ಪತಿ ಪತ್ನಿಯನ್ನು ತಪಾಸಣೆಗೆ ಕರೆತಂದಿದ್ದರು. ರಕ್ತ ಪರೀಕ್ಷೆ ನಾರ್ಮಲ್ ಎಂದು ಬಂದರೂ ಸಮಾಧಾನವಿರಲಿಲ್ಲ. ಏಕೆ ಎಂದಾಗ, ಅವರ ಉತ್ತರ ಗಾಬರಿ ಬೀಳು ವಂತಿತ್ತು. ಅವರು ಇನ್ಸ್ಟಾಗ್ರಾಮಿನಲ್ಲಿ ನೋಡಿದರಂತೆ: ಬೇಸಿಗೆಯ ಸೆಕೆಗೆ ಬರೀ ನೆಲದ ಮೇಲೆ ಮಲಗುತ್ತಿದ್ದರೆ, ನೆಲವು ರಕ್ತ ಹೀರಿಬಿಡ ಬಹುದು ಎಚ್ಚರಿಕೆ ಎಂದು ಯಾರೋ ಹೇಳಿದ್ದಾರಂತೆ. ಸೆಕೆ ಎಂದು ಬರೀ ನೆಲದ ಮೇಲೆ ಮಲಗುವ ಅಭ್ಯಾಸ ಪತ್ನಿಗೆ ಇದ್ದುದರಿಂದ ಅವರಿಗೆ ರಕ್ತ ಕಡಿಮೆ ಇರಲೇಬೇಕೆಂದು ಬಲವಾಗಿ ನಂಬಿದ್ದರು ಅವರ ಪತಿ!

'ಬೋರಲಾಗಿ ಮಲಗಿದರೆ ಹೃದಯಾಘಾತವಾಗ ಬಹುದು! ಅಂಗಾತ ಮಲಗಿದರೆ ದುಃಸ್ವಪ್ನಗಳಿಂದ ನಿದ್ದೆ ಕೆಡಬಹುದು' ಇಂತಹ ಎಷ್ಟೋ ವಿಡಿಯೋ ತುಣುಕುಗಳನ್ನು ನೀವೂ ನೋಡಿರಬಹುದು. ಇವುಗಳನ್ನು ಸತ್ಯ ಎಂದು ಬಲ ವಾಗಿ ನಂಬುವವರು ಹಲವಾರು ಜನ. ಹಣ್ಣುಗಳನ್ನು ಹಾಗೇ ತಿನ್ನುವ ಬದಲು ಜ್ಯೂಸ್ ಮಾಡಿ ಕುಡಿದರೆ ಖನಿಜಗಳು ಹೆಚ್ಚು ಹೀರಲ್ಪಡುತ್ತವೆ ಎಂದು ಒಂದೆಡೆ ತಿಳಿಸಿದರೆ ಮತ್ತೊಂದೆಡೆ ಜ್ಯೂಸ್ ಕುಡಿಯುವುದು ಆರೋಗ್ಯಕ್ಕೆ ಹೇಗೆ ಹಾನಿಕರ ಎಂದು ವಿವರಿಸಲಾಗುತ್ತದೆ.

ಹೀಗೇ ಸುಮ್ಮನೆ ಸಮಯ ಕಳೆಯಲು ನೋಡುವ ರೀಲ್ಸ್ ಬೇಕಾದ ಬೇಡವಾದ ಎಷ್ಟೋ ಸಂಗತಿಗಳನ್ನು ತಂದು ನಮ್ಮ ಮಿದುಳನ್ನು ಕಸದ ಬುಟ್ಟಿಯಾಗಿಸುತ್ತಿದೆ. ಹಾಗೆಂದು ಎಲ್ಲಾ ಸುಳ್ಳು ಎಂದಲ್ಲ! ಅತಿ ಕಡಿಮೆ ಸಮಯದಲ್ಲಿ ಲಕ್ಷಾಂತರ ಜನರಿಗೆ ಉತ್ತಮ ಹೆಲ್ತ್ ಟಿಪ್ ನೀಡುವ ಉದಾಹರಣೆಗಳೂ ಸಾಕಷ್ಟಿವೆ.

ಆರೋಗ್ಯದ ಕುರಿತ ರೀಲ್ಸ್ ನೋಡಿದ ನಂತರ, ಅದನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳುವ ಮೊದಲು, ತಜ್ಞರ ಮಾರ್ಗದರ್ಶನ ಪಡೆಯಿರಿ. ರೀಲ್ಸ್‌ನ ತಪ್ಪು ಮಾಹಿತಿಗಳನ್ನು ಬಲವಾಗಿ ನಂಬಿದವರಿಗೆ, ರೀಲ್ಸ್ ಜ್ಞಾನವನ್ನು ಅರೆದು ಕುಡಿ ದವರಿಗೆ ಚಿಕಿತ್ಸೆ ನೀಡುವುದು ವೈದ್ಯರ ಸಹನೆಗೆ ಸವಾಲೇ ಸರಿ!



ಮುಂದೇನೆಂಬ ಭಯ ಬೇಡ

ಇನ್ನೇನು ಮತ್ತೇನು ಗತಿಯೆಂದು ಬೆದರಿದರು!
ನಿನ್ನ ಕೈಯೊಳಗಿಹುದೆ ವಿಧಿಯ ಲೆಕ್ಕಣಿಕೆ ?
ಕಣ್ಣಿಗೆಟುಕದೆ ಸಾಗುತಿಹುದು ದೈವದ ಸಂಚು!
ತಣ್ಣಗಿರಿಸಾತ್ಮವನು – ಮಂಕುತಿಮ್ಮ

ನಮ್ಮಯ ಜೀವನ ಅನಿಶ್ಚಿತತೆಯ ಆಗರ. ಜೀವನದ ಹಾದಿಯಲಿ ಯಾವಾಗ ಏನು ಬಂದೊದುಗುತ್ತದೆಯೋ ಬಲ್ಲವರಾರು? ಸೂತ್ರ ಹಿಡಿದು ಆಡಿಸುವ ಭಗವಂತನ ಲೀಲೆಯ ಕಂಡವರಾದರೂ ಯಾರು? ಈ ಹಂತದಲ್ಲಿ ನಮಗೆ ಜೀವನದಲ್ಲಿ ಏನು ಬರುತ್ತದೆಯೋ? ಇನ್ನೇನು ಬಂದೊದಗುತ್ತದೆಯೋ? ಮತ್ತೇನು ಘಟಿಸುತ್ತದೆಯೋ? ಎಂಬ ಆತಂಕದಿಂದ ನೀನು ಬೆದರದಿರು. ನಿನ್ನ ಜೀವನದಲ್ಲಿ ನೀನಂದುಕೊಂಡಂತೆ ನೀ ನಡೆಯಲು ಆ ವಿಧಿಯ ಲೇಖನಿಯೇನಾದರೂ ಅದು ನಿನ್ನ ಕೈನಲ್ಲಿರುವುದೇ? ಕಣ್ಣಿಗೆ ಕಾಣದಂತೆ, ಮನಸ್ಸಿಗೆ ಎಟಕದಂತೆ ಆ ದೈವದ ಸಂಚು ನಡೆಯುತ್ತಿದೆ ಹಾಗೆಯೇ ನಡೆಯುತ್ತಲೂ ಇರುತ್ತದೆ. ಎಲ್ಲವನ್ನೂ ದೈವದ ಬುಡಕ್ಕಿಟ್ಟು ನೀನು ನಿನ್ನಯ ಆತ್ಮವನ್ನು ತಣ್ಣಗಿರಿಸಿಕೋ. ನಾಳೆಗಳ ಬಗ್ಗೆ ಬೆದರು, ಆತಂಕ, ಉದ್ವೇಗ, ಕಕ್ಕುಲತೆಗಳ ಅವಶ್ಯಕತೆ ಇಲ್ಲಿ ಬೇಕಾಗಿಲ್ಲ. ನಮ್ಮಯ ಜೀವನದಲ್ಲಿ ನಾವೇನೋ ಅಂದುಕೊಂಡು, ಯಾವುದೋ ಒಂದು ಕಾರ್ಯವನ್ನು ಮಾಡುತ್ತೇವೆ, ಆದರೆ ಆ ಕಾರ್ಯವು ಸಫಲವಾಗದೆ ಇದ್ದಾಗ ನಮಗೆ ಭಯ, ಉದ್ವೇಗ, ಹಿಂಸೆಗಳೊಂದಿಗೆ ಭವಿಷ್ಯದ ಬಗ್ಗೆ ಆತಂಕವೂ ಉಂಟಾಗುತ್ತದೆ. ಒಮ್ಮೆ ಆತಂಕ ಮನದಲ್ಲಿ ಮನೆಮಾಡಿದರೆ ಚಡಪಡಿಕೆ, ಹೇಳಲಾರದ ತಪನೆಗಳೆಲ್ಲವೂ ಮನಸ್ಸಿನ ಹಂದರದಲ್ಲಿ ಮೂಡುತ್ತವೆ. ಅದಕ್ಕೆಲ್ಲಾ ಈ ಕಗ್ಗದಲ್ಲಿ ಒಂದು ಸಲಹೆಯನ್ನು ಮಾನ್ಯರು ನೀಡಿದ್ದಾರೆ. ನಿನ್ನ ಕೆಲಸಗಳನ್ನ ನೀನು ಮಾಡುತ್ತಲಿರು. ಕೈಗೊಂಡಿರುವ ಕೆಲಸ ಕಾರ್ಯಗಳು ಕೈಗೂಡುತ್ತವೋ? ಬಿಡುತ್ತವೋ? ಅದರ ಬಗೆಗೆ ಇನ್ನೇನೋ ಮತ್ತೇನೋ ಗತಿ ಎಂದು ಬೆದರದಿರು, ಮುಂದೆ ಏನಾಗುತ್ತದೆಯೋ ಎಂಬ ಆತಂಕ ಏಕೆ? ನಿನ್ನ ಭವಿಷ್ಯದ ಬಗ್ಗೆ ಚಿಂತೆಗಳೇಕೆ? ಇಲ್ಲಿ ಯಾವುದೇ ಕಾರಣಕ್ಕೂ ನೀನು ಬೆದರುವ ಅವಶ್ಯಕತೆ ಇಲ್ಲ. ಎಲ್ಲವನ್ನೂ ವಿಧಿರಾಯನೆಂಬ ಸಮಯವು ನಿರ್ಧರಿಸುತ್ತದೆ. ಆ ವಿಧಿರಾಯನ ಆಣತಿಯಂತೆಯೇ ಇಲ್ಲಿ ಎಲ್ಲವೂ ಜರುಗುವುದು, ಏಕೆಂದರೆ ಆ ವಿಧಿಯ ಕೈನಲ್ಲಿರುವ ಲೇಖನಿ ಏನಾದರೂ ನಿನ್ನ ಕೈನಲ್ಲಿದೆಯೇ? ಆ ವಿಧಿಯ ಲೇಖನಿಯಿಂದ ನಿನಗಿಷ್ಟ ಬಂದಂತೆ ನೀನು ನಿನ್ನ ಹಣೆ ಬರಹವನ್ನು ಬರೆಯಲಾದೀತೆ? ಅದು ಎಂದಿಗೂ ಸಾಧ್ಯವಿಲ್ಲದ ಮಾತು. ಆ ವಿಧಿಯೂ ಹಾಗೂ ಆ ದೈವವು ನಿನ್ನ ಕಣ್ಣಳತೆಗೆ, ಮನಸ್ಸಿಗೂ ಮೀರಿದ ಶಕ್ತಿಯಾಗಿದ್ದು ಅವುಗಳಾಣತಿಯಂತೆಯೇ ಇಲ್ಲಿ ಎಲ್ಲವೂ ಜರುಗುವುದು. ಹಾಗಾಗಿ ನೀನು ನಿನ್ನ ಕರ್ಮಗಳನ್ನು ಮಾಡುತ್ತಾ ನಿಶ್ಚಿಂತೆ ಯಿಂದ ನಿನ್ನ ಜೀವನವನ್ನು ಸಾಗಿಸು. ಎಲ್ಲವೂ ನಾವಂದುಕೊಂಡಂತೆ ಜರುಗಿದರೆ ಆ ದೈವಕ್ಕೂ, ವಿಧಿಗೂ ಬೆಲೆ ಏನಾದರೂ ಇರುತ್ತದೆಯೇ? ಆಯಾ ಸಮಯಕ್ಕೆ ಏನಾಗ ಬೇಕೆಂದು ಪೂರ್ವ ನಿರ್ಧಾರವಾಗಿರು ತ್ತದೋ ಅದೇ ರೀತಿ ಇಲ್ಲಿ ಎಲ್ಲವೂ ಜರುಗುತ್ತಿ ರುತ್ತದೆ. ಆದುದರಿಂದ ನಿನ್ನ ಕೆಲಸ ಕಾರ್ಯಗಳ ಬಗ್ಗೆ, ಭವಿಷ್ಯದ ಬಗ್ಗೆ, ಇನ್ನೇನಾಗು ವುದೋ? ಮತ್ತೇನಾಗುವುದೋ? ಎಂಬ ಆತಂಕ, ಭಯ, ಚಡಪಡಿಕೆಗಳನ್ನು ಬಿಟ್ಟು, ನಿಷ್ಕಾಮದಿಂದ ನಿನ್ನ ಕರ್ತವ್ಯ ಮಾಡು, ನಮಗರಿವಿಲ್ಲದೆ ಆ ದೈವದ ಸಂಚೊಂದು ಬೇರೆಯೇ ಇರುತ್ತದೆ. ಆದುದರಿಂದ ನಿನ್ನ ಆತ್ಮವನ್ನು ನೀನು ತಣ್ಣಗಿರಿಕೊಂಡು ಶಾಂತವಾಗಿ, ನಿರುಮ್ಮಳನಾಗಿ ನಿನ್ನ ಜೀವನವನ್ನು ಮಾಡುವುದು ಸೂಕ್ತವಾಗಿದೆ. ನಾಳೆ ಎಂಬುವುದರ ಬಗ್ಗೆ ಇಂದೆಯೇ ನಾವು ಚಿಂತಿತರಾದರೆ ಇಂದಿನ ಮನಸ್ಸಿನ ಶಾಂತಿಯೂ ಹಾಳಾಗುತ್ತದೆ. ನಿನ್ನೆ ಎಂಬುದು ಆಗಲೇ ಸತ್ತು ಹೋಗಿದೆ, ನಾಳೆ ಎಂಬುದು ಹುಟ್ಟಬೇಕಿದೆ, ಆದರೆ ಇಂದು ಎನ್ನುವುದೇ ವಾಸ್ತವ ಹಾಗೂ ಸತ್ಯ. ಹುಟ್ಟಬೇಕಾಗಿರುವ ನಾಳೆಗಳ ಬಗ್ಗೆ ಇಂದಿರುವ ವಾಸ್ತವತೆಯಲ್ಲಿ ಆತಂಕ, ಭಯ, ದುಗುಡ, ಚಡಪಡಿಕೆಗಳಿದ್ದರೆ ಮನಸ್ಸಿಗೆ ಶಾಂತಿ ಎಂಬುದೆಲ್ಲಿದೆ? ಮದುವೆ ಆದಲ್ಲಿ ಉತ್ತಮ ಪತಿಯೋ, ಪತ್ನಿಯೋ ದೊರಕುತ್ತಾಳೋ ಇಲ್ಲವೋ ಎಂಬ ನಾಳೆಗಳ ಆತಂಕ, ಮದುವೆಯಾದಲ್ಲಿ ಹುಟ್ಟುವ ಮಕ್ಕಳು ಉತ್ತಮವೋ ಅಲ್ಲವೋ ಅನ್ನುವ ಆತಂಕ ಕಂಡು ಬಂದರೆ ಈ ಜಗತ್ತು ಎಂಬ ವಿಶ್ವಥ ಮರ ಚಿರಾಯುವಾಗುವಾದದರೂ ಹೇಗೆ ಅಲ್ಲವೇ? ಆದುದರಿಂದ ನಮ್ಮ ಪಾಲಿನ ಕೆಲಸ ಕಾರ್ಯಗಳನ್ನು, ಕರ್ಮಗಳನ್ನು ನಾವು ಮಾಡಬೇಕು, ಮಾಡಿದ ಕೆಲಸಗಳಿಗೆ ನಾಳಿನ, ಭವಿಷ್ಯದ ಆತಂಕವನ್ನು ತೊಲಗಿಸಿ, ನಮ್ಮ ಆತ್ಮವನ್ನು ಶಾಂತತೆಯಲ್ಲಿಟ್ಟುಕೊಳ್ಳುವುದೇ ಈ ಜೀವನದ ನಿಜ ಸೂತ್ರ.

ಶುಭೋದಯಕ್ಕೊಂದು ಕಗ್ಗ

ರವೀ ಚೆಕ್ಕನಾಯಕನಹಳ್ಳಿ

ಮೈಕ್ರೋನೇಷ್ಯಾದ ತುರಿಮಣೆ!

• ಮಂಜುನಾಥ ಡಿ. ಎಸ್.

ಅಮೆರಿಕದ ದಕ್ಷಿಣ ಕ್ಯಾಲಿಫೋರ್ನಿಯದಲ್ಲಿರುವ ಬೋವರ್ಸ್ ಮ್ಯೂಸಿಯಂನಲ್ಲಿ ಅನಿರೀಕ್ಷಿತವಾಗಿ ಕಂಡುಬಂದ ಈ ತುರಿಯುವ ಪೀಠ ಅಚ್ಚರಿ ಮೂಡಿಸಿತು. 'ತೆಂಗು ತುರಿಯುವ ಸಾಧನ' ಎಂಬ ಫಲಕದೊಂದಿಗೆ, ಅದರ ವಿವರಗಳನ್ನು ಅಲ್ಲಿ ಬರೆದು, ಪ್ರದರ್ಶಿಸಿದ್ದರು. ಈ ಪೀಠ ಹಲವು ಕಾರಣಗಳಿಂದಾಗಿ ವಿಶೇಷ ಎನಿಸಿತು. ನಮ್ಮಲ್ಲಿ ಬಳಸುವ ತೆಂಗು ತುರಿಯುವ ಮಣೆಗಿಂತ ವಿಭಿನ್ನವಾದ ಸುಂದರ ವಿನ್ಯಾಸ ಮೊದಲ ಕಾರಣ. ಶಾಂತ ಮಹಾಸಾಗರ ದಲ್ಲಿನ ಸಣ್ಣ ಸಣ್ಣ ದ್ವೀಪಗಳನ್ನು ಹೊಂದಿರುವ (ಸುಮಾರು 2,000 ದ್ವೀಪಗಳು) ಮೈಕ್ರೊನೇಷಿಯದಲ್ಲಿ ಇದನ್ನು ಬಹಳಷ್ಟು ಹಿಂದೆಯೇ ತಯಾರಿಸುತ್ತಿದ್ದರು ಹಾಗು ಬಳಸುತ್ತಿದ್ದರು ಎಂಬುದು ಇನ್ನೊಂದು ಕಾರಣ. ತೆಂಗಿನಕಾಯಿ ತುರಿಯುವ ಶ್ರಮವನ್ನು ಕಡಿಮೆ ಮಾಡಲು ನೆರವಾಗುವ ಈ ಅಂದದ ಪೀಠ ಇಪ್ಪತ್ತನೆಯ ಶತಮಾನಕ್ಕೆ ಸೇರಿದ್ದು ಎಂದು ಅಲ್ಲಿನ ಟಿಪ್ಪಣಿ ಯಿಂದ ತಿಳಿಯಿತು. ಇದು ಈ ದ್ವೀಪವಾಸಿಗಳ ಕಲಾತ್ಮಕತೆ, ಜಾಣ್ಮೆ ಹಾಗು ಕೌಶಲ್ಯದ ಪ್ರತೀಕವಾಗಿಯೂ ಕಂಡಿತು.

ಅಡುಗೆಯಲ್ಲಿ ತೆಂಗಿಗೆ ವಿಶೇಷ ಸ್ಥಾನವಿರುವುದು ಸರ್ವವೇದ್ಯ. ಅದರ ಬಳಕೆಯ ಹರಹೂ ವ್ಯಾಪಕ. ಸಿಹಿಯಾದ ಕೊಬ್ಬರಿ ಮಿಠಾಯಿ ಬಾಯಲ್ಲಿ ನೀರೂರಿಸುತ್ತದೆ. ಕೋಡುಬಳೆ, ಕೋಸಂಬರಿ, ಪಲ್ಯ, ಹುಳಿ, ಮಜ್ಜಿಗೆ ಹುಳಿ, ಅವಲಕ್ಕಿ, ಚಟ್ನಿ, ಕಾಯಿ ಚಿತ್ರಾನ್ನ, ಹೀಗೆ ಹಲವಾರು ವೈವಿಧ್ಯಮಯ ಖಾದ್ಯಗಳನ್ನು ರುಚಿಕರವಾಗಿಸುವಲ್ಲಿ ತೆಂಗು ಪ್ರಮುಖ ಪಾತ್ರ ವಹಿಸುತ್ತದೆ. ತೆಂಗು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬ ಎಚ್ಚರಿಕೆಯ ಹೊರತಾಗಿಯೂ ತೆಂಗಿನ ಬಳಕೆ ಹೆಚ್ಚುತ್ತಲೇ ಇದೆ. ನಮ್ಮ ದೇಶವೂ ಸೇರಿದಂತೆ, ಹಲವು ಪ್ರದೇಶಗಳಲ್ಲಿ ತೆಂಗು ಜನಪ್ರಿಯ. ಆಸ್ಟ್ರೇಲಿಯಾದಿಂದಾಚೆ ಇರುವ ಮೈಕ್ರೊನೇಷ್ಯದ ದ್ವೀಪವಾಸಿ ಗಳು, ಇಂತಹ ಒಂದು ತೆಂಗಿನ ತುರಿಮಣೆಯನ್ನು ಉಪಯೋಗಿಸುವುದು ನಿಜಕ್ಕೂ ವಿಶೇಷ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	2		■	3	4			5
■		■	6	■		■	■	
7				■	■	8		
■		■	9	10			■	
11	■	12	■		■		■	
	■	13			14	■	15	■
16			■	■	17			
	■	■	18	■				■
19					■	20		

ಎಡದಿಂದ ಬಲಕ್ಕೆ

1. ಆಕಾಶಕ್ಕೆ ಮತ್ತೊಂದು ಹೆಸರು (3)
3. ಸದಾಕಾಲ ಎನ್ನುವುದನ್ನು ಹೀಗೆ ಹೇಳಬಹುದು (5)
7. ಹೊಸತಲ್ಲ, ಇದು ಹಳೆಯ ಕಾಲದ್ದು (4)
8. ಪರವಾಗಿಲ್ಲ, ಇದು ಚಿಗುರು (3)
9. ಮನೋಹರವಾದ ಎಂದರ್ಥ (4)
13. ಎಷ್ಟು ಬೇಕೋ ಅಷ್ಟೇ ಖರ್ಚು ಮಾಡುವಿಕೆ (4)
16. ಆನೆಗೆ ಮತ್ತೊಂದು ಹೆಸರು (3)
17. ಹೇಳಿದ್ದನ್ನೇ ಪುನಃ ಹೇಳುವುದು ಇಲ್ಲಿ ತಿರುಗಿ ಬಂದಿದೆ (4)
19. ಅಪಹರಿಸು ಎಂದರ್ಥ (5)
20. ಕೊಡುಗೆ ಅಥವಾ ದಾನ (3)

ಮೇಲಿನಿಂದ ಕೆಳಕ್ಕೆ

2. ಪ್ರಜೆಗಳಿಂದ ನಡೆಸಲ್ಪಡುವ ರಾಜ್ಯ (4)
4. ಮೂಗುತಿಗೆ ಮತ್ತೊಂದು ಹೆಸರು (2)
5. ಮುಗ್ಗರಿಸು ಅಥವಾ ತೊದಲು ಎನ್ನುವ ಪದ (5)
6. ತಮಟೆ, ಭೇರಿ ಎಂದರ್ಥ (3)
8. ಒಂದೆಡೆಯಿಂದ ಮತ್ತೊಂದೆಡೆಗೆ ಪ್ರವಾಸ ಹೋಗುವುದು (3)
10. ಪೌರಾಣಿಕ ಹಿನ್ನೆಲೆಯ ಒಂದು ಪರ್ವತದ ಹೆಸರು (3)
11. ಕಿವಿಯಲ್ಲಿ ಹಾಕಿಕೊಳ್ಳುವ ಆಭರಣ (5)
12. ಕತ್ತಲೆ ಅಥವಾ ಅಜ್ಞಾನ (3)
14. ತನ್ನದೇ ಆದ ವಿಶಿಷ್ಟ ಗುಣ (3)
15. ಸೂರ್ಯನಿಗೆ ಮತ್ತೊಂದು ಹೆಸರಿದು (4)
18. ನಿಷ್ಠೆಗೆ ಹೆಸರಾದ ಪ್ರಾಣಿ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಆಗಸ 3. ಅನವರತ
7. ಪುರಾತನ 8. ಪಲ್ಲವ
9. ಕಮನೀಯ 13. ಮಿತಯವ್ಯ
16. ಕುಂಜರ 17. ಕ್ತಿರುನಪು
19. ಲಪಟಾಯಿಸು 20. ದೇಣಿಗೆ

ಮೇಲಿನಿಂದ ಕೆಳಕ್ಕೆ
2. ಗಣರಾಜ್ಯ 4. ನತ್ತು 5. ತಡವರಿಸು 6. ಆನಕ 8. ಪಯಣ
10. ಮಲಯ 11. ಕರ್ಣಕುಂಡಲ
12. ತಿಮಿರ 14. ವ್ಯಕ್ತಿತ್ವ 15. ದಿನಮಣಿ 18. ನಾಯಿ

ಶ್ರೀರಾಮ ರಕ್ಷಾಸ್ತೋತ್ರ ಏಕೆ ಪಠಿಸಬೇಕು?

ಬಾಲ್ಯದಿಂದಲೇ ಅರಮನೆ ವೈಭೋಗಕ್ಕೆ ಒಡ್ಡಿಕೊಳ್ಳದೆ ಗುರುಕುಲ ಋಷ್ಯಾಶ್ರಮ ಕಾಡು-ಮೇಡುಗಳಲ್ಲಿ ಕಳೆದವನು ರಾಮ. ಅರಮನೆಗೆ ಬಂದ ಕೆಲವೇ ದಿನಗಳಲ್ಲಿ ಮಹರ್ಷಿ ವಿಶ್ವಾಮಿತ್ರರು ಬಂದು, ಕಾಡಿನಲ್ಲಿ ಯಜ್ಞ ಯಾಗಗಳ ಅನುಷ್ಠಾನಕ್ಕೆ ತೊಂದರೆ ಕೊಡುತ್ತಿದ್ದ ರಾಕ್ಷಸರನ್ನು ಸಂಹರಿಸಲು ರಾಮ ಲಕ್ಷ್ಮಣರನ್ನು ಕರೆದುಕೊಂಡು ಹೋದರು. ಮುಂದೆ ವಿಶ್ವಾಮಿತ್ರರ ಆದೇಶದಂತೆ ಮಿಥಿಲಾ ರಾಜ್ಯದ ಜನಕ ಮಹಾರಾಜನ ಮಗಳು ಸೀತೆಯನ್ನು ಕಲ್ಯಾಣವಾಗಿ ಅಯೋಧ್ಯೆಗೆ ಬಂದು ಸ್ವಲ್ಪ ಕಾಲ ಕಳೆದಿತ್ತಷ್ಟೇ. ಸ್ವಂತ ತಾಯಿ ಅಲ್ಲದ ಕೈಕೆಯ ಮಾತನ್ನು ಪ್ರಶ್ನಿಸದೆ ತಂದೆಯ ಮಾತೆಂದು ತಿಳಿದು, ರಾಜ್ಯ -ಅಧಿಕಾರಗಳಿಗೆ ಆಸೆ ಪಡದೆ ನಾರು ಮಡಿಯುಟ್ಟು ಹದಿನಾಲ್ಕು ವರ್ಷ ವನವಾಸ ಮಾಡಿ ಪಿತೃವಾಕ್ಯ ಪರಿಪಾಲಕನಾದನು ರಾಮ. ಲಕ್ಷ್ಮಣ- ಭರತ- ಶತ್ರುಘ್ನರಿಗೆ ಪ್ರೀತಿ ತೋರಿಸಿ ಭ್ರಾತೃತ್ವ ಪ್ರೇಮ ತೋರಿಸಿ ಕೊಟ್ಟ ರಾಮ. ರಾಮನ ಪ್ರೀತಿಗಾಗಿ ಹಂಬಲಿಸಿ ಲಕ್ಷ್ಮಣ ವನವಾಸಕ್ಕೆ ಹೋದರೆ, ಭರತ ಅಣ್ಣನಿಗೆ ಇಲ್ಲದ ಸುಖ ತನಗೂ ಬೇಡ ವೆಂದು ನಂದಿ ಗ್ರಾಮದಲ್ಲಿ ಕುಟೀರ ಕಟ್ಟಿಕೊಂಡು ಋಷಿಗಳಂತೆ ಬದುಕಿದ. ಅಣ್ಣಂದಿರ ಮಾತೇ ವೇದ ವಾಕ್ಯವೆಂದ ಶತ್ರುಘ್ನ ಭರತನ ಆಣತಿಯಂತೆ ರಾಜ್ಯ ಭಾರ ಮಾಡಿದ. ವನವಾಸಕ್ಕೆ ಹೊರಟ ರಾಮನಿಗೆ ರಥದ ಸಾರಥಿ, ದೋಣಿಯಲ್ಲಿ ಗಂಗಾ ನದಿ ದಾಟಿಸಿದ ಅಂಬಿಗ 'ಗುಹಾ' ತನ್ನ ಸರ್ವಸ್ವವನ್ನು ಅರ್ಪಿಸಲು ಮುಂದಾದನು. ಮೇಲು ಕೀಳೆನ್ನದ ರಾಮ ಅವನನ್ನೂ ಮರೆಯಲಿಲ್ಲ. ರಾಮ ಪಟ್ಟಾಭಿಷಿಕ್ತ ನಾದ ಮೇಲೆ ಅಂಬಿಗನನ್ನು ಆದರಿಸಿ ಗೌರವಿಸಿ 'ಸ್ನೇಹಕ್ಕೆ' ಆದರ್ಶನಾದ. 'ಶಬರಿ'ಯ ಎಂಜಲ ಫಲಗಳನ್ನು ತಿಂದು, ಭೇದ ಭಾವವನ್ನು ಭಕ್ತ ವತ್ಸಲನಾದ ರಾಮ . ಕಿಷ್ಕಿಂದೆಯಲ್ಲಿ ಹೆದರಿ ಅಡಗಿ ಕುಳಿತಿದ್ದ ಸುಗ್ರೀವ ಹಾಗೂ ಜೊತೆಗಾರರಿಗೆ ಧೈರ್ಯ ಹೇಳಿ ಆತ್ಮಸ್ಥೈರ್ಯ ತುಂಬಿ ಅವರ ಅಪಾರ ಶಕ್ತಿಯನ್ನು ಜಗತ್ತಿಗೆ ಸಾರಿದ ಶ್ರೀರಾಮ, ತಾಯಿ ಕೈಕೆಯ ಕುರಿತು ಅಪ್ಪಿ ತಪ್ಪಿಯೂ ಸೊಲ್ಲೆತ್ತಲಿಲ್ಲ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ರಾವಣ ಸೀತೆಯನ್ನು ಅಪಹರಿಸಿದಾಗ, ಅರಸರಂತೆ ಮತ್ತೆ ವಿವಾಹ ವಾಗಲಿಲ್ಲ. ಸ್ತ್ರೀಯರನ್ನು ಅಪಹರಿಸುವುದು ತಪ್ಪೆಂದು ತೋರಿಸಲು, ಸಮುದ್ರಕ್ಕೆ ಸೇತುವೆ ಕಟ್ಟಿ ರಾವಣನೊಡನೆ ಯುದ್ಧ ಮಾಡಿ ಅವನನ್ನು ಸಂಹರಿಸಿ, ಸೀತಾಮಾತೆಯನ್ನು ರಕ್ಷಿಸಿದ. ಲಂಕಾ ನಗರವನ್ನು ಗೆದ್ದು ರಾಮನೆ ಅರಸನಾಗ ಬಹುದಿತ್ತು ಆದರೆ ಅನ್ಯರ ಸ್ವತ್ತಿಗೆ ಆಸೆ ಪಡದೆ ವಿಭೀಷಣನಿಗೆ ಪಟ್ಟ ಕಟ್ಟಿ 'ಜನ್ಮಭೂಮಿಯೇ ಸ್ವರ್ಗ' ಎಂದು ಅಯೋಧ್ಯಾಪತಿಯಾಗಿ ರಾಜ್ಯ ಭಾರ ಮಾಡಿದ. ಪ್ರಜೆಗಳನ್ನು ತನ್ನ ಮಕ್ಕಳೆಂದು, ಪ್ರಜೆಗಳೇ ರಾಜ್ಯದ ಪ್ರಭುಗಳು ಅವರ ಅಭಿಪ್ರಾಯಗಳೇ ಮುಖ್ಯ ಎಂದು ಆಗಸನ ಮಾತಿಗೂ ಗಮನ ಕೊಟ್ಟು ಗರ್ಭಿಣಿ ಸೀತೆಯನ್ನು ಕಾಡಿಗೆ ಕಳಿಸಿದ. ಪ್ರಾಣಕ್ಕಿಂತ ಮಾನಕ್ಕೆ ಹೆದರಿದ. ಅಪವಾದಗಳಲ್ಲದ ಅಪವಾದಗಳನ್ನು ಸ್ವೀಕರಿಸಿ ಕಷ್ಟದಿಂದ ಬದುಕಿ ಉತ್ತಮ ಮಾರ್ಗದಲ್ಲಿ ನಡೆದು ಜಗತ್ತಿಗೆ ಆದರ್ಶಪ್ರಾಯ ಮಾನವತಾವಾದಿಯಾಗಿ, ರಾಜ್ಯ ಎಂದರೆ 'ರಾಮ ರಾಜ್ಯದಂತೆ', ದೊರೆ ಎಂದರೆ 'ಶ್ರೀರಾಮನಂತೆ' ಇರಬೇಕೆಂದು ಸಾಧಿಸಿ ತೋರಿಸಿದ ಪ್ರಭು ಶ್ರೀರಾಮಚಂದ್ರ. ಈ ಜಗತ್ತು ಇರುವ ತನಕವೂ ಎಲ್ಲರೂ ಕೊಂಡಾಡುವಂತೆ ಆದರ್ಶಪ್ರಾಯನಾಗಿ, ಜಗತ್ತಿಗೆ ಜಗತ್ತೆ ಮೆಚ್ಚಿ ಪೂಜಿಸಲ್ಪಡುವ ಎಲ್ಲಾ ಭಕ್ತರಿಗೆ ದೇವರಾದನು.

ಇಂಥ ಪ್ರಭುವಿನ 'ಶ್ರೀರಾಮ ರಕ್ಷಾ' ಸ್ತೋತ್ರ ಓದುವುದರಿಂದ ಕಷ್ಟದಲ್ಲಿರುವಾಗ ನಮಗಿಂತಲೂ ಕಷ್ಟದಲ್ಲಿರುವವರನ್ನೂ, ಕಷ್ಟಗಳನ್ನೆಲ್ಲ ಮೆಟ್ಟಿ ಮುನ್ನಡೆದ ಶೂರರನ್ನೂ, ಧೀರರನ್ನೂ ನೆನೆಸಿಕೊಂಡಾಗ ನಮ್ಮ ಕಷ್ಟ ಕ್ಷುಲ್ಲಕ ಎನಿಸುವುದು. ಇಂತಹ ಪೌರಾಣಿಕ ವ್ಯಕ್ತಿತ್ವಗಳನ್ನು ನಮ್ಮ ಜೀವನದಲ್ಲಿ ಪರಿಚಯಿಸಿ ಕಷ್ಟ ಬಂದಾಗ ಹೇಗೆ ಮೆಟ್ಟಿ ನಿಲ್ಲಬೇಕು, ಎದೆ ಎಂದಿಗೂ ನಮ್ಮ ಆದರ್ಶವನ್ನು ಬಿಟ್ಟು ಕೊಡಬಾರದು ಎಂದು ತಿಳಿಸಿ ಕೊಡುವುದಕ್ಕೆ ನಮ್ಮ ಹಿರಿಯರು ಇಂತಹ ಸ್ತೋತ್ರ ಪಠನಗಳನ್ನು ನಮ್ಮ ಜೀವನದ ಒಂದು ಭಾಗವಾಗಿಸಿದ್ದಾರೆ. ಇದನ್ನೆಲ್ಲಾ ಕೇವಲ ಪದ್ಧತಿಯನ್ನಾಗಿ ಮಾಡದೆ, ನಮ್ಮ ಜೀವನಕ್ಕೆ ಬೇಕಾದ ಪಾಠವನ್ನಾಗಿ ಸ್ವೀಕರಿಸುತ್ತಾ ನಮ್ಮ ಮಕ್ಕಳೂ ಕೂಡ ಇದನ್ನು ಸತ್ಸಂಪ್ರದಾಯ ಮನೆಯಲ್ಲಿ ಬೆಳೆಸಿದಾಗ ಖಂಡಿತ ರಾಮನ ಆದರ್ಶಗಳು ಅವರಿಗೆ ಜೀವನದ ಆದರ್ಶವಾಗಿ ದಾರಿ ತೋರುತ್ತದೆ.

ಆಯ್ದ ಫಲವಿಲ್ಲ

ಕೃಷ್ಣ ಹೇಳುತ್ತಾನೆ: ಮೋಹ ತ್ಯಜಿಸಿದ ಯೋಗಿಗಳು ಆತ್ಮ ಶುದ್ಧಿಗಾಗಿ, ಇಂದ್ರಿಯ, ದೇಹ, ಮನಸ್ಸು ಮತ್ತು ಬುದ್ಧಿ ಉಪಯೋಗಿಸಿ ಮಾತ್ರ ಕರ್ಮ ಮಾಡುತ್ತಾರೆ. (5.11) ಒಬ್ಬನು ಸದ್ಯದ ಕ್ಷಣದಲ್ಲಿ ಮೋಹ ತೊರೆದರೂ ಅವನು ಹಿಂದಿನ ಕರ್ಮ ಬಂಧನದ ಬಗ್ಗೆ ಗಮನ ಕೊಡ ಬೇಕಾಗುತ್ತದೆ ಎಂಬ ವ್ಯಾಖ್ಯೆ ಕೊಡಲಾಗುತ್ತದೆ. ಆದ್ದರಿಂದ ಅವನು ಕರ್ಮ ಮಾಡುತ್ತಾ ಹೋಗುತ್ತಾನೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಒಮ್ಮೆ ಮೋಹವನ್ನು ತೊರೆದ ಮೇಲೆ ಈ ಭೌತಿಕ ಅಥವಾ ಪ್ರಕಟಿತ ಜಗತ್ತಿನಲ್ಲಿ ಅವನು ಪಡೆಯುವದು ಏನೂ ಇರುವುದಿಲ್ಲ ಹಾಗೂ ಎಲ್ಲಾ ಕರ್ಮಗಳು ಆತ್ಮ ಶುದ್ಧಿಯ ಕಡೆಗೆ ಒಯ್ಯುತ್ತವೆ.

ಮುಂದುವರಿದು ಕೃಷ್ಣ ಹೇಳುತ್ತಾನೆ: ಸಮಚಿತ್ತ ಹೊಂದಿದ ವ್ಯಕ್ತಿ ಯುಕ್ತ ಕರ್ಮಫಲವನ್ನು ತ್ಯಜಿಸಿ ಪರಮ ಶಾಂತಿಯನ್ನು ಪಡೆಯುತ್ತಾನೆ. ಆದರೆ ಸಮ ಚಿತ್ರ ಇಲ್ಲದವನು ಆಯುಕ್ತ ಆಸೆಯ ಒತ್ತಡದಿಂದಾಗಿ ಹಾಗೂ ಕರ್ಮಫಲ ಬಯಸಿ ಬಂಧನಕ್ಕೆ ಒಳಗಾಗು ತ್ತಾನೆ. (5.12) ನಮಗೆ ಕರ್ಮದ ಮೇಲೆ ಹಕ್ಕು ಇದೆ ಹೊರತು ಕರ್ಮ ಫಲದ ಮೇಲಲ್ಲ ಎನ್ನುವುದೇ ಗೀತೆಯ ಆಧಾರ ಸ್ತಂಭಗಳಲ್ಲಿ ಒಂದಾಗಿದೆ. (2.47) ಕರ್ಮ ಫಲವನ್ನು ತ್ಯಜಿಸುವದೆಂದರೆ ಯಾವುದೇ ನಿರ್ದಿಷ್ಟ ಫಲದ ಬಗ್ಗೆ ಅವನಿಗೆ ಆಯ್ಕೆ ಇರು ವುದಿಲ್ಲ ಯಾಕೆಂದರೆ ಅದು ಎಷ್ಟೇ ಅದ್ಭುತ ವಾಗಿರಲಿ ಅಥವಾ ಭಯಾನಕ ವಾಗಿರಲಿ ಅವನು ಸಮಚಿತ್ತದಿಂದ ಅದನ್ನು ಸ್ವೀಕರಿಸಲು ಸಿದ್ಧನಿರು ತ್ತಾನೆ. ಕೃಷ್ಣ ಈ ಮೊದಲೇ ತಿಳಿಸಿದ್ದೇನೆಂದರೆ, ಸಮಚಿತ್ತ ಹೊಂದಿರದ ವ್ಯಕ್ತಿಗೆ ಬುದ್ಧಿಯು ಇರುವುದಿಲ್ಲ, ಭಾವನೆಯು ಇರುವುದಿಲ್ಲ, ಆದರಿಂದ ಅವನಿಗೆ ಶಾಂತಿ ಆಗಲಿ ಆನಂದವಾಗಲಿ ಸಿಗುವುದಿಲ್ಲ (2.66).

ಕೃಷ್ಣ ಮುಂದುವರಿದು ಹೇಳುತ್ತಾನೆ : ಮಾನಸಿಕವಾಗಿ ಎಲ್ಲಾ ಕರ್ಮಗಳನ್ನು ತ್ಯಜಿಸಿ ಸ್ವಯಂತ್ರಣ ಹೊಂದಿದ್ದರೆ ಉಳಿದೆಲ್ಲ ಒಂಬತ್ತು ದ್ವಾರಗಳನ್ನು ಹೊಂದಿದ ಪಟ್ಟಣ ದಲ್ಲಿ (ಭೌತಿಕ ದೇಹ) ಸಂತೋಷವಾಗಿರುತ್ತವೆ. ಕರ್ಮ ಮಾಡುವುದೂ ಇಲ್ಲ, ಕರ್ಮಕ್ಕೆ ಕಾರಣವಾಗುವುದೂ ಇಲ್ಲ. (5.13)

ಮುಖ್ಯವಾದದ್ದೆಂದರೆ ಕರ್ಮ ಮಾಡುತ್ತಾ ಅಥವಾ ಕರ್ಮಕ್ಕೆ ಕಾರಣವಾಗುತ್ತಾ ಎಲ್ಲಾ ಕರ್ಮಗಳನ್ನು ತ್ಯಜಿಸುವುದು. ನಾವು ಮಾಡಲಿ ಅಥವಾ ಬಿಡಲಿ ಕರ್ಮಗಳು ನಡೆಯುತ್ತಲೇ ಇರುತ್ತವೆ ಮತ್ತು ನಾವು ಕೇವಲ ಅವುಗಳ ಭಾಗವಾಗಿರುತ್ತೇವೆ. ಆಹಾರ ಸೇವಿ ಸಿದ ನಂತರ ಅದು ನಮ್ಮ ದೇಹದ ಭಾಗವಾಗುವ ಮೊದಲು ನೂರಾರು ಕಾರ್ಯಗಳು ನಡೆಯುತ್ತವೆ ಮತ್ತು ನಮಗೆ ಅದಾವುದರ ಕುರುಹು ತಿಳಿದಿರುವುದಿಲ್ಲ. ನಿಜವಾಗಿ ಜೀರ್ಣ ಕ್ರಿಯೆಯಂತಹ ಅದ್ಭುತ ನಡೆದಾಗ ನಾವು ಅವುಗಳ ಭಾಗವಾಗಿರುವುದಿಲ್ಲ ಹಾಗೂ ಮಾನಸಿಕವಾಗಿ ತೊಡಗಿ ಕೊಂಡಿರುವುದೂ ಇಲ್ಲ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ದಕ್ಷಿಣ ಪಿನಾಕಿನಿ ನದಿನೀರು ಹಂಚಿಕೆ ಸಂಬಂಧದ ವ್ಯಾಜ್ಯದ ಇತ್ಯರ್ಥಕ್ಕೆ ಕೇಂದ್ರದ ವತಿಯಿಂದ 15 ದಿನಗಳ ಹಿಂದೆ ಸಂಧಾನ ಸಭೆಯೊಂದನ್ನು ಕರೆಯಲಾಗಿತ್ತು; ಆದರೆ ಈ ಸಭೆಯನ್ನು ಬಹಿಷ್ಕರಿಸುವ ಮೂಲಕ ತಮಿಳುನಾಡು ಮತ್ತದೇ ಹಠಮಾರಿತನ ತೋರಿದೆ. ಈ ವಿವಾದವನ್ನು ಸುತ್ತುವರಿದಿರುವ ಸಂಗತಿಗಳ ಪಕ್ಷಿನೋಟ ಇಲ್ಲಿದೆ.

ದಕ್ಷಿಣ ಪಿನಾಕಿನಿ ಪಿರಿಪಿರಿ

ಸಂಧಾನ ಸಭೆಗೆ ತಮಿಳುನಾಡು ತಾರಮ್ಮಯ್ಯ!

ಯಗಟಿ ರಘು ನಾಡಿಗ್

ಬೆಂಕಿಯು ಉಗ್ರವಾದಾಗ ನೀರನ್ನು ಎರಚಿ ಅದನ್ನು ನಂದಿಸಲು ಹರಸಾಹಸ ಪಡುವುದು ವಾಡಿಕೆ. ಆದರೆ ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯೆ 'ವ್ಯಾಜ್ಯ-ವಿವಾದದ ಬೆಂಕಿ' ಉಗ್ರವಾಗುವುದಕ್ಕೆ 'ನೀರು' ಮುಖ್ಯ ಕಾರಣವಾಗಿರುವುದು ವಿಷಾದನೀಯ. ಉಭಯ ರಾಜ್ಯಗಳ ನಡುವೆ ಕಾವೇರಿ ನದಿ ನೀರು ಹಂಚಿಕೆಯ ವಿಷಯವು ದಶಕಗಳಿಂದಲೂ ವ್ಯಾಜ್ಯದ ಹೊಗೆಯಾಡಿಸುತ್ತಿರುವುದನ್ನು ಬಿಡಿಸಿ ಹೇಳಬೇಕಿಲ್ಲ. ಈ ಪಟ್ಟಿಗೆ ಮತ್ತೊಂದು ಸೇರ್ಪಡೆ ದಕ್ಷಿಣ ಪಿನಾಕಿನಿ ನದಿ ನೀರು ಹಂಚಿಕೆಯ ವಿವಾದ. ಇದನ್ನು ಬಗೆಹರಿಸಲು ಕೇಂದ್ರದ ಜಲಶಕ್ತಿ ಸಂಪನ್ಮೂಲ ಖಾತೆ ಸಚಿವ ಸಿ.ಆರ್.ಪಾಟೀಲ್ ಅವರು ಸಂಧಾನ ಸಭೆಯನ್ನು ಕರೆದಿದ್ದರು. ಆದರೆ ಈ ಸಭೆಯನ್ನು ತಮಿಳುನಾಡು ಬಹಿಷ್ಕರಿಸಿದೆ. ಇದರಿಂದಾಗಿ, ಕೂಲಂಕಷ ಮಾತುಕತೆಯ ಮೂಲಕ ಜಲವಿವಾದದ ಇತ್ಯರ್ಥಕ್ಕೆ ತವಕಿಸುತ್ತಿದ್ದ ಕರ್ನಾಟಕಕ್ಕೆ ನಿರಾಸೆಯಾಗಿದೆ.

ತಮಿಳುನಾಡು ಹಠಮಾರಿತನ

ದಕ್ಷಿಣ ಪಿನಾಕಿನಿ ಜಲವಿವಾದದ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಸರ್ವೋಚ್ಚ ನ್ಯಾಯಾಲಯವು ಮಾತುಕತೆಯ ಮೂಲಕ ಸದರಿ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಳ್ಳಲು ನಿರ್ದೇಶನ ನೀಡಿತ್ತು. ಇದರನ್ವಯ, ಕೇಂದ್ರದ ವತಿಯಿಂದ ಸಭೆಯೊಂದನ್ನು ಆಯೋಜಿಸಿ ಇದರಲ್ಲಿ ಪಾಲ್ಗೊಳ್ಳುವಂತೆ ಕರ್ನಾಟಕದ ಜಲಸಂಪನ್ಮೂಲ ಖಾತೆ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ತಮಿಳುನಾಡು ಹಾಗೂ ಪುದುಚೇರಿಯ ಜಲಸಂಪನ್ಮೂಲ ಸಚಿವರನ್ನು ಆಹ್ವಾನಿಸಲಾಗಿತ್ತು. ಆದರೆ ಈ ಸಭೆಗೆ ತಮಿಳುನಾಡಿನ ಪ್ರತಿನಿಧಿ ಗೈರಾದ ಕಾರಣ ಸಭೆ ರದ್ದಾಯಿತು. ಪ್ರತ್ಯೇಕವಾಗಿ ಸಭೆ ನಡೆಸಬೇಕೆಂಬ ತಮಿಳುನಾಡಿನ ಆಗ್ರಹ ಮತ್ತು ಹಠಮಾರಿತನವೇ ಈ ಪರಿಸ್ಥಿತಿಗೆ ಕಾರಣ ಎನ್ನಲಾಗಿದೆ.

ಜಲವಿವಾದದ ಮೂಲವಿದು

ಕೋಲಾರ, ಬಂಗಾರಪೇಟೆ, ಮಾಲೂರು ತಾಲೂಕುಗಳ ಒಂದಿಷ್ಟು ಹಳ್ಳಿಗಳು ಮತ್ತು ಪಟ್ಟಣಗಳಿಗೆ ಕುಡಿಯುವ ನೀರನ್ನು ಪೂರೈಸುವ ಆಶಯದೊಂದಿಗೆ ಕರ್ನಾಟಕ ಸರಕಾರವು ದಕ್ಷಿಣ ಪಿನಾಕಿನಿ ನದಿಯ ಕಣಿವೆ ಪ್ರದೇಶದಲ್ಲಿ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಮ್ ಅನ್ನು ನಿರ್ಮಿಸಿದೆ. ಈ ಯೋಜನೆಗೆ ಪೂರಕವಾಗಿ, ಹೊಸಕೋಟೆ ಪ್ರದೇಶದವರೆಗೆ ಬೆಂಗಳೂರಿನ ಎಲೆಮಲ್ಲಪ್ಪ ಕೆರೆಯಿಂದ ಹಾಗೂ ಬ್ಯಾಲಹಳ್ಳಿ ಗ್ರಾಮದ ಸಮೀಪದ ದಕ್ಷಿಣ ಪಿನಾಕಿನಿ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಆದರೆ, ಹೀಗೆ ದಕ್ಷಿಣ ಪಿನಾಕಿನಿ ನದಿಯ ನೀರು ಬಳಸಿಕೊಳ್ಳುವ ಈ ಯೋಜನೆಗೆ ತಮಿಳುನಾಡು ಸರಕಾರವು ಅಪಸ್ವರವನ್ನೆತ್ತಿ ಕರ್ನಾಟಕ ಸರಕಾರ ಮತ್ತು ಕೇಂದ್ರ ಸರಕಾರದ ವಿರುದ್ಧ 2018ರ ಮೇ ತಿಂಗಳಿನಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿತು. ಇಲ್ಲಿಂದ ದಕ್ಷಿಣ ಪಿನಾಕಿನಿಯ 'ನೀರು' ವಿವಾದದ 'ಬೆಂಕಿ' ಹೊತ್ತಿಕೊಳ್ಳಲು ಕಾರಣವಾಯಿತು.

ಮುಂದುವರಿದ ಹಗ್ಗಜಗ್ಗಾಟ

ನ್ಯಾಯಾಲಯದ ಬಾಗಿಲು ಬಡಿದಿದ್ದಷ್ಟಕ್ಕೇ ಸುಮ್ಮನಾಗದ ತಮಿಳುನಾಡು ಸರಕಾರ, ಸದರಿ ಜಲವಿವಾದದ ಇತ್ಯರ್ಥಕ್ಕೆ ನ್ಯಾಯಮಂಡಳಿಯನ್ನು ಸ್ಥಾಪಿಸುವಂತೆ 2019ರ ನವೆಂಬರ್‌ನಲ್ಲಿ ಕೇಂದ್ರ ಸರಕಾರಕ್ಕೆ ಮನವಿಯೊಂದನ್ನು ಸಲ್ಲಿಸಿತು. ಇದಕ್ಕೆ ಮನ್ನಣೆ ನೀಡಿದ ಕೇಂದ್ರದ ಜಲಸಂಪನ್ಮೂಲ ಸಚಿವಾಲಯವು 2020ರಲ್ಲಿ ಸಂಧಾನ ಸಭೆಯೊಂದನ್ನು ನಡೆಸಿತಾದರೂ, ಚರ್ಚಾವಿಷಯದ ಕುರಿತಂತೆ ಸಂಬಂಧಿತ ರಾಜ್ಯ ಸರಕಾರಗಳಿಂದ ಸಹಮತ ವ್ಯಕ್ತವಾಗಲಿಲ್ಲ. ಹೀಗಾಗಿ ಹೊಸದಾಗಿ ಸಂಧಾನ ಸಭೆ ನಡೆಸಬೇಕೆಂದು ಕರ್ನಾಟಕ ಸರಕಾರವು ಕೇಂದ್ರವನ್ನು 2024ರ ಜೂನ್‌ನಲ್ಲಿ ಆಗ್ರಹಿಸಿತು.



ಹೀಗಿದೆ ದಕ್ಷಿಣ ಪಿನಾಕಿನಿ ನದಿಯ ಹರಿವಿನ ಪಥ...

ಮಂಡಳಿ ಸ್ಥಾಪನೆಗೆ ಚೌಕಾಸಿ

ದಾವೆಗೆ ಸಂಬಂಧಿಸಿದ ವಾದ-ಪ್ರತಿವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಸಿ.ಟಿ.ರವಿಕುಮಾರ್ ಅವರನ್ನು ಒಳಗೊಂಡ ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯ ನ್ಯಾಯಪೀಠವು, ಜಲವಿವಾದದ ಇತ್ಯರ್ಥಕ್ಕೆಂದು 'ದಕ್ಷಿಣ ಪಿನಾಕಿನಿ ಜಲವಿವಾದ ನ್ಯಾಯಮಂಡಳಿ'ಯನ್ನು ರಚಿಸಲು ಕೇಂದ್ರ ಸರಕಾರಕ್ಕೆ 3 ತಿಂಗಳ ಕಾಲಾವಕಾಶ ನೀಡಿತು. ನ್ಯಾಯಮಂಡಳಿಯ ಸ್ಥಾಪನೆ ಸಂಬಂಧದ ಕಾರ್ಯವಿಧಾನಗಳ ಅನುಸರಣೆಗೆ 6 ತಿಂಗಳು ಬೇಕಾಗುತ್ತವೆ ಎಂದು ಕೇಂದ್ರ ಸರಕಾರದ ಪರ ವಕೀಲರು ಮಾಡಿದ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿತು. ಆದರೆ, ವಿವಾದದ ಇತ್ಯರ್ಥಕ್ಕೆ ನ್ಯಾಯಮಂಡಳಿ ರಚಿಸಬೇಕೆಂಬ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಿದ ಕರ್ನಾಟಕ ಸರಕಾರವು, ಮಾತುಕತೆಯ ಮೂಲಕ ಈ ವಿವಾದವನ್ನು ಸೌಹಾರ್ದಯುತವಾಗಿ ಇತ್ಯರ್ಥ ಮಾಡಬೇಕೆಂದು ಕೋರಿ ಕೇಂದ್ರದ ಜಲಶಕ್ತಿ ಆಯೋಗಕ್ಕೆ ಪತ್ರ ಬರೆಯಿತು.

ಸಂಧಾನ ಸಮಿತಿ ರಚನೆ

ತರುವಾಯದಲ್ಲಿ, ''ಈ ವಿವಾದವನ್ನು ಪರಸ್ಪರ ಮಾತುಕತೆಯ ಮೂಲಕ ಇತ್ಯರ್ಥ ಪಡಿಸಲು ಸಂಧಾನ ಸಮಿತಿಯೊಂದನ್ನು ರೂಪಿಸಲಾಗಿದ್ದು, ನ್ಯಾಯಾಧಿಕರಣವನ್ನು ರಚಿಸಲು ಈ ಸಮಿತಿಯು ತಾತ್ವಿಕ ಅನುಮೋದನೆ ನೀಡಿದೆ'' ಎಂದು ಕೇಂದ್ರ ಸರಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಸಿತು. ಜಲವಿವಾದಕ್ಕೆ ಸಂಬಂಧಿಸಿ ಸದರಿ ಸಂಧಾನ ಸಮಿತಿ ನೀಡುವ ವರದಿಯನ್ನು ಎರಡು ವಾರಗಳಲ್ಲಿ ಸಲ್ಲಿಸಬೇಕು ಎಂದು ನ್ಯಾಯಾಲಯವು 2024ರ ನವೆಂಬರ್‌ನಲ್ಲಿ ಕೇಂದ್ರ ಸರಕಾರಕ್ಕೆ ಸೂಚಿಸಿತ್ತು.

ನಿರ್ದೇಶನದ ಪಾಲನೆ

ಈ ಮಧ್ಯೆ, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ, ಜಲಸಂಪನ್ಮೂಲ ಸಚಿವಾಲಯವು ಹೊಸ ಸಂಧಾನ ಸಮಿತಿಯೊಂದನ್ನು ರಚಿಸಿತು. ಕೇಂದ್ರ ಜಲ ಆಯೋಗದ ಅಧ್ಯಕ್ಷರ ನೇತೃತ್ವದ ಈ ಸಮಿತಿಯು ಉಭಯ ರಾಜ್ಯಗಳ ಪ್ರತಿನಿಧಿಗಳನ್ನು ಒಳಗೊಂಡ ಬರೋಬ್ಬರಿ 9 ಸಭೆಗಳನ್ನು ನಡೆಸಿತು. ಜತೆಗೆ, ಯೋಜನಾ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿ, ''ಕರ್ನಾಟಕವು ಮಳೆಗಾಲದ ಅವಧಿಯಲ್ಲಿ ಕೋಲಾರದ ಯರಗೋಳ್ ಜಲಾಶಯದಿಂದ, ಹಿಂದಿನ ದಿನದ ಸರಾಸರಿ ಹರಿವಿನ ಶೇ.15ರಷ್ಟು ನೀರು ಹರಿಸಬೇಕು'' ಎಂದು ಶಿಫಾರಸು ಮಾಡಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ಕರ್ನಾಟಕ ಸರಕಾರವು ಈ ಶಿಫಾರಸಿನಲ್ಲಿ ಕೊಂಚ ಪರಿಷ್ಕರಣೆ ಮಾಡುವಂತೆ ಕೋರಿ, ''ಯರಗೋಳ್ ಜಲಾಶಯದಿಂದ ಶೇ.7.5ರಷ್ಟು ಹಾಗೂ ಮಾಸ್ತಿನದಿ ಉಪ ಜಲಾನಯನ ಪ್ರದೇಶದಿಂದ ಶೇ. 7.5ರಷ್ಟು ನೀರು ಹರಿಸಲಾಗುವುದು'' ಎಂದಿತ್ತು. ಆದರೆ, ಸಮಿತಿಯ ಈ ಶಿಫಾರಸು ಮತ್ತು ಕರ್ನಾಟಕದ ಪ್ರತಿಸ್ಪಂದನೆಯನ್ನು ಒಪ್ಪದ ತಮಿಳುನಾಡು ಸರಕಾರವು ಜಲವಿವಾದದ ಇತ್ಯರ್ಥಕ್ಕೆ ನ್ಯಾಯಮಂಡಳಿಯ ಸ್ಥಾಪನೆಯಾಗಲೇಬೇಕು ಎಂದು ಪಟ್ಟುಹಿಡಿಯಿತು.

ಮಾರ್ಕಂಡೇಯ ನದಿಗೆ ಕಟ್ಟಲಾಗಿರುವ ಅಣೆಕಟ್ಟು.

ದಕ್ಷಿಣ ಪಿನಾಕಿನಿ ಜಾತಕ

ಕರ್ನಾಟಕ ರಾಜ್ಯದ ಪ್ರಮುಖ ನದಿಗಳಲ್ಲಿ ಒಂದು ಎನಿಸಿಕೊಂಡಿರುವ ದಕ್ಷಿಣ ಪಿನಾಕಿನಿಯು ಚಿಕ್ಕಬಳ್ಳಾಪುರದ ನಂದಿಬೆಟ್ಟದಲ್ಲಿ ಹುಟ್ಟುತ್ತದೆ. ಕರ್ನಾಟಕ ಮತ್ತು ತಮಿಳುನಾಡಿನ ಮೂಲಕ ಹರಿದು ಬಂಗಾಳ ಕೊಲ್ಲಿಯನ್ನು ಸೇರುವ ಈ ನದಿಯು ಒಟ್ಟು 497 ಕಿ.ಮೀ.ನಷ್ಟು ಉದ್ದವಿದ್ದು, ಕಾವೇರಿಯ ನಂತರ ತಮಿಳುನಾಡಿನಲ್ಲಿ ಹರಿಯುವ ಎರಡನೇ ಉದ್ದದ ನದಿ ಎನಿಸಿಕೊಂಡಿದೆ. ತಮಿಳಿನಲ್ಲಿ ಇದಕ್ಕೆ ತೆನ್‌ಪೆಣ್ಣೈ, ಪೆಣ್ಣೈಯಾರ್, ದಕ್ಷಿಣ ಪೆನ್ನಾರ್ ಎಂಬ ಹೆಸರುಗಳೂ ಇವೆ. ಈ ನದಿಗೆ ತಮಿಳುನಾಡಿನ ಹೊಸೂರು ಮತ್ತು ಕೃಷ್ಣಗಿರಿ ಬಳಿ ಎರಡು ಜಲಾಶಯಗಳನ್ನು ಹಾಗೂ ತಿರುವಣ್ಣಾಮಲೈ ಬಳಿ ಒಂದು ದೊಡ್ಡ ಅಣೆಕಟ್ಟನ್ನು ನಿರ್ಮಿಸಲಾಗಿದೆ. 'ಪಂಬಾರ್' ನದಿಯು ದಕ್ಷಿಣ ಪಿನಾಕಿನಿಯ ಉಪನದಿ.

ಕೊಡವರ ಬೆಸುಗೆ ಹಾಕಿ ಕೊಡುಗೆ

ಕಾಫಿ ಬೀಡಿನಲ್ಲೀಗ ಕೊಡವರ ಹಾಕಿ ಸಡಗರ | ಹಾಕಿ ಉತ್ಸವಕ್ಕೆ 25 ವರ್ಷಗಳ ಬೆಳ್ಳಿ ಸಂಭ್ರಮ | ಎರಡು ಕೋಟಿ ರು. ವೆಚ್ಚದಲ್ಲಿ ಪಂದ್ಯಾವಳಿ | 'ಮುದ್ದಂಡ ಕಪ್'ಗಾಗಿ 390 ಕುಟುಂಬ ತಂಡ | ವಿಜೇತ ತಂಡಕ್ಕೆ 5 ಲಕ್ಷ ರುಪಾಯಿ ನಗದು ಬಹುಮಾನ

ಜಿಲ್ಲಾ ನೋಟ

ಅನಿಲ್ ಎಚ್.ಟಿ. ಮಡಿಕೇರಿ

ಮಡಿಕೇರಿಯಲ್ಲೀಗ ಸಂಭ್ರಮದ ಹಾಕಿ ಉತ್ಸವ.. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ಆಯೋಜಿತ ಕೊಡವ ಕುಟುಂಬಗಳ ನಡುವಿನ ಹಾಕಿ ಪಂದ್ಯಾವಳಿಗೆ ಸಡಗರದ ಚಾಲನೆ ದೊರಕಿದೆ. ಈ ವರ್ಷ ಕೊಡವರ ಹಾಕಿ ಹಬ್ಬಕ್ಕೆ 25 ವರ್ಷಗಳ ಸಂಭ್ರಮ. ಬೆಳ್ಳಿ ಮಹೋತ್ಸವದ ಉಮೇದಿನಲ್ಲಿ ಕೊಡವ ಹಾಕಿ ಪಂದ್ಯಾವಳಿಯ ಆಯೋಜಕರಾದ ಮುದ್ದಂಡ ಕುಟುಂಬಸ್ಥರಿದ್ದಾರೆ.

ಹಾಕಿ ಸ್ಟಿಕ್ ಬದಲಿ ಬ್ಯಾಟ್

ಭಾರತೀಯ ಸೇನೆ ಮತ್ತು ಹಾಕಿ ಕ್ರೀಡೆಗೆ ಕೊಡವರ ಕೊಡುಗೆ ಅನನ್ಯವಾದದ್ದು. ಪಂಜಾಬ್ ಹೊರತುಪಡಿಸಿದಂತೆ ಭಾರತದ ಸೇನೆ ಮತ್ತು ಹಾಕಿ ಕ್ರೀಡೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕೊಡವರಿದ್ದಾರೆ. ಹೀಗಿರುವಾಗ ಎರಡೂವರೆ ದಶಕಗಳ ಹಿಂದೆ ಹಾಕಿ ಕ್ರೀಡೆಯತ್ತ ಕೊಡವರು ಆಕರ್ಷಣೆ ಕಳೆದುಕೊಳ್ಳುತ್ತಿದ್ದಾರೆ ಎಂಬ ಭಾವನೆ ಕಂಡುಬಂತು. ಆಗಷ್ಟೇ ಜನಪ್ರಿಯವಾಗುತ್ತಿದ್ದ ಕ್ರಿಕೆಟ್ ಕೊಡಗಿನ ಮೈದಾನಗಳಲ್ಲಿಯೂ ಕಂಗೊಳಿಸತೊಡಗಿತ್ತು. ಹಾಕಿ ಸ್ಟಿಕ್ ಬದಲಿಗೆ, ಕ್ರಿಕೆಟ್ ಬ್ಯಾಟ್ ಗಳು ಕೊಡವರ ಮನೆಗಳಲ್ಲಿ ಕಾಣಿಸತೊಡಗಿದ್ದವು.

ಕಾಫಿ ಬೆಳೆಗಾರರ ಕನಸು

ಹೀಗೆಯೇ ಮುಂದುವರೆದಲ್ಲಿ ಕೊಡವ ಯುವಕರು ಹಾಕಿಯಿಂದ ವಿಮುಖರಾಗುತ್ತಾರೆ ಎಂಬ ಆತಂಕ ಕೊಡವ ಹಿರಿಯರನ್ನು ಕಾಡತೊಡಗಿತು. ಈ ಸಂದರ್ಭ ಕೊಡವರಲ್ಲಿ ಮತ್ತೆ ಹಾಕಿ ಕ್ರೀಡೆಯತ್ತ ಒಲವು ಮೂಡಿಸುವಂತ ಪ್ರಯತ್ನ ಆಗಲೇಬೇಕೆಂಬ ಚಿಂತನೆಯಿಂದ ವಿರಾಜಪೇಟೆ ಬಳಿಯ ಕರಡ ಎಂಬ ಪುಟ್ಟ ಗ್ರಾಮದ ಕಾಫಿ ಬೆಳೆಗಾರ ಪಾಂಡಂಡ ಕುಟ್ಟಪ್ಪ ಮತ್ತು ಕಾಶಿ ಎಂಬ ಸಹೋದರರು ಕೊಡವರ ಕುಟುಂಬ ತಂಡಗಳ ನಡುವೆ ಹಾಕಿ ಪಂದ್ಯಾವಳಿ ಆಯೋಜಿಸಬಾರದೇಕೆ ಎಂದು ಯೋಚಿಸಿದರು. ಇವರ ಚಿಂತನೆಗೆ ಹಲವರು ಹಾಸ್ಯವಾಡಿದರು.

ಕೌಟುಂಬಿಕ ಹಾಕಿ

ಇದೆಲ್ಲಾ ಆಗುವ ಕೆಲಸವೇ ಎಂದು ನಿರುತ್ಸಾಹದ ಮಾತನಾಡಿದ್ದರು. ಆದರೂ ಛಲ ಬಿಡದ ಪಾಡಂಡ ಸಹೋದರರು 1997ರಲ್ಲಿ ಸ್ವಂತ ಖರ್ಚಿನಿಂದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಕರಡ ಗ್ರಾಮದಲ್ಲಿ ಪ್ರಾರಂಭಿಸಿಯೇ ಬಿಟ್ಟರು. ಆರಂಭದ ವರ್ಷ 60 ಕುಟುಂಬ ತಂಡಗಳು ಪಾಲ್ಗೊಂಡಿದ್ದವು. ಮೊದಲ ವರ್ಷವೇ ಕೊಡವರು ಈ ಪಂದ್ಯಾವಳಿ ಬಗ್ಗೆ ತೋರಿದ ಉತ್ಸಾಹ ನಂತರದ ವರ್ಷಗಳಲ್ಲಿ ಕೌಟುಂಬಿಕ ಹಾಕಿ ಮುಂದುವರೆಯುವಂತೆ ಮಾಡಿತು.

ತಂಡಗಳ ಸಂಖ್ಯೆ ವೃದ್ಧಿ:

ಪ್ರತೀ ವರ್ಷವೂ ಕೊಡವ ಕುಟುಂಬ ತಂಡಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಒಂದೇ ಊರಿಗೆ ಹಾಕಿ ಪಂದ್ಯಾಟ ಸೀಮಿತಗೊಳಿಸುವ ಬದಲಿಗೆ ಕೊಡಗಿನ ಬೇರೆ ಬೇರೆ ಊರುಗಳಲ್ಲಿ ಪಂದ್ಯಾವಳಿ ಆಯೋಜಿಸುವ ಮೂಲಕ ಹಾಕಿಯ ಸಂಭ್ರಮವನ್ನು, ಕೊಡವರ ಒಗ್ಗೂಡುವಿಕೆಯನ್ನು ಜಿಲ್ಲೆಯಾದ್ಯಂತ ವಿಸ್ತರಿಸಲಾಯಿತು. ಹೀಗಾಗಿ, ಕರಡ, ಮಡಿಕೇರಿ, ನಾಪೋಕ್ಲು, ಅಮ್ಮತ್ತಿ, ಪೊನ್ನಂಪೇಟೆ, ಹುದಿಕೇರಿ, ವಿರಾಜಪೇಟೆ ಬಾಳುಗೋಡು, ಮಾದಾಪುರಗಳಲ್ಲಿಯೂ ಈವರೆಗೆ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ನಡೆದಿದೆ.

ಕೊಡವರ ಬೆಸುಗೆ

ಕೊಡವರು ಈ ಹಾಕಿ ಪಂದ್ಯಾವಳಿ ಮೂಲಕ ಹಾಕಿ ಮಾತ್ರವೇ ಅಲ್ಲದೇ ತಮ್ಮ ಒಗ್ಗಟ್ಟನ್ನೂ ಪ್ರದರ್ಶಿಸುವಂತಾಗಿದೆ. ಕೊಡವ ಯುವಕ - ಯುವತಿಯರ ಸಂಬಂಧಗಳ ಬೆಸುಗೆಗೆ ಹಾಕಿ ಪಂದ್ಯಾವಳಿ ಕಾರಣವಾಗಿದೆ. ಆಸ್ತಿ ವಹಿವಾಟು, ಕೊಡು, ಕೊಳ್ಳುವಿಕೆಗೂ ಪಂದ್ಯಾವಳಿ ಗ್ಯಾಲರಿ ಸಾಕ್ಷಿಯಾಗಿದೆ. ಅನೇಕ ಕುಟುಂಬಗಳಿಗೆ ವರ್ಷಂಪ್ರತಿ ನಡೆಯುವ ಹಾಕಿ ಪಂದ್ಯಾವಳಿ ಸಂಭ್ರಮಿಸಲು ಅವಕಾಶ ಕಲ್ಪಿಸಿದೆ.

ನೂರಾರು ಹಾಕಿ ಪಟುಗಳು ಈ ಪಂದ್ಯಾವಳಿ ಮೂಲಕ ಬೆಳಕಿಗೆ ಬಂದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕ್ರೀಡಾಪಟುಗಳಾಗಿ ಗುರುತಿಸಿಕೊಂಡಿದ್ದಾರೆ. ಹಲವರಿಗೆ ಕ್ರೀಡಾಕೋಟಾದಡಿ ಉದ್ಯೋಗವೂ ದೊರಕಿದೆ. ಮನೆ ಮೂಲೆ ಸೇರಿದ್ದ ಹಾಕಿ ಸ್ಟಿಕ್ ಈ ಪಂದ್ಯಾವಳಿಯಿಂದಾಗಿ ಮನೆಯ ಮುಂಭಾಗಕ್ಕೆ ಬಂದಂತಾಗಿದೆ.

390 ಕುಟುಂಬ ತಂಡಗಳು

ಇದೀಗ ಕೊಡವರ ಹಾಕಿ ಹಬ್ಬಕ್ಕೆ 25 ವರ್ಷಗಳ ಸಂಭ್ರಮ. ಈ ಬಾರಿ ಮುದ್ದಂಡ ಕುಟುಂಬಸ್ಥರು 2 ಕೋಟಿ ರುಪಾಯಿ ಅಂದಾಜು ವೆಚ್ಚದಲ್ಲಿ ವಿಜೃಂಭಣೆಯಿಂದ ಹಾಕಿ ಉತ್ಸವ ಆಯೋಜಿಸುತ್ತಿದ್ದಾರೆ. 30 ಮಳಿಗೆಗಳಲ್ಲಿ ಆಹಾರ, ವಾಹನ, ಕರಕುಶಲ ಇತ್ಯಾದಿ ಪ್ರದರ್ಶನಗಳಿವೆ. 25 ಸಾವಿರ ಕ್ರೀಡಾಪ್ರೇಮಿಗಳಿಗೆ ಕೂರಲು ಸುಸಜ್ಜಿತ ಗ್ಯಾಲರಿಯೂ ನಿರ್ಮಾಣವಾಗಿದೆ. ಪ್ರತಿ ನಿತ್ಯ 3 ಮೈದಾನಗಳಲ್ಲಿ ಹಾಕಿ ಪಂದ್ಯಾವಳಿ ನಡೆಯಲಿದೆ. ಈವರೆಗಿನ ದಾಖಲೆ ಎಂಬಂತೆ 390 ಕೊಡವ ಕುಟುಂಬ ತಂಡಗಳು ಮುದ್ದಂಡ ಕಪ್‌ಗಾಗಿ ಸೆಣಸುತ್ತಿವೆ. ಅಂದರೆ, ಸುಮಾರು 6 ಸಾವಿರ ಕೊಡವ ಹಾಕಿಪಟುಗಳು ಮಡಿಕೇರಿಯ ಪಂದ್ಯಾವಳಿಯಲ್ಲಿ ಹಾಕಿ ಆಡುತ್ತಿದ್ದಾರೆ.

ವಿಜೇತ ತಂಡಕ್ಕೆ 5 ಲಕ್ಷ

ಇಷ್ಟಕ್ಕೂ ಇದು 1-2 ದಿನಗಳಿಗೆ ಸೀಮಿತವಾದ ಪಂದ್ಯಾಟವೇ ನಲ್ಲ, ಬರೋಬ್ಬರಿ 1 ತಿಂಗಳ ಕಾಲ ಅಂದರೆ ಏಪ್ರಿಲ್ 27 ರವರೆಗೆ ಮಡಿಕೇರಿಯಲ್ಲಿ ಮುದ್ದಂಡ ಕಪ್ ಹಾಕಿ ಆಯೋಜಿತವಾಗಿದೆ. ಫೈನಲ್ ನಲ್ಲಿ ವಿಜೇತ ತಂಡಕ್ಕೆ 5 ಲಕ್ಷ ರು. ನಗದು ಬಹುಮಾನ ಇದೆ. ರನ್ನರ್ ತಂಡಕ್ಕೆ 3 ಲಕ್ಷ ರು. ದೊರಕಲಿದೆ.

ಐನ್ ಮನೆಗಳಿಗೆ ಜ್ಯೋತಿ

ಮುದ್ದಂಡ ಕುಟುಂಬಸ್ಥರು ಈ ಬಾರಿಯ ವಿಶೇಷ ಎಂಬಂತೆ, ಈವರೆಗೂ ಕೊಡವ ಕೌಟುಂಬಿಕ ಪಂದ್ಯಾವಳಿ ಆಯೋಜಿಸಿದ್ದ 24 ತಂಡಗಳ ಐನ್ ಮನೆಗಳಿಗೆ ಕ್ರೀಡಾಜ್ಯೋತಿಯನ್ನು ಮೆರವಣಿಗೆ ಮೂಲಕ ಕೊಂಡೊಯ್ದು ಅವರ ಹಾರೈಕೆ ಪಡೆದುಕೊಂಡು ನಂತರ ಮುಖ್ಯಮೈದಾನಕ್ಕೆ ಪ್ರವೇಶಿಸಿ ಈ ಬಾರಿ ಪಂದ್ಯಾವಳಿಗೆ ಚಾಲನೆ ನೀಡಿ ಹೊಸತನ ತೋರಿದ್ದಾರೆ.

ಮುದ್ದಂಡ ಕಪ್ ಮೂಲಕ ಈ ವರ್ಷ ಮಹಿಳಾ ಹಾಕಿ ತಂಡಗಳೂ ಮೈದಾನಕ್ಕಿಳಿಯಲಿದೆ. ಏಪ್ರಿಲ್ 20 ರಿಂದ ಕೊಡವತಿಯರ 40 ತಂಡಗಳ ನಡುವೇ ಪೈಪೋಟಿ ಕಂಡುಬರಲಿದೆ. ಕೊಡವ ಹಾಕಿ ಪಂದ್ಯಾವಳಿಯ ಜನಕ ಪಾಂಡಂಡ ಕುಟ್ಟಪ್ಪ ನಿಧನರಾಗಿದ್ದು ಅವರ ಮಗ ಪಾಂಡಂಡ ಬೋಪಣ್ಣ ಇದೀಗ ಕೊಡವ ಹಾಕಿ ಅಕಾಡೆಮಿಯ ಸಾರಥ್ಯ ವಹಿಸಿಕೊಂಡು ಕೊಡವ ಕೌಟುಂಬಿಕ ಹಾಕಿಯ ಪರಂಪರೆಯನ್ನು ಮುಂದುವರೆಸಿದ್ದಾರೆ.

ವಿಶ್ವದಾಖಲೆ ಹಾಕಿ

ಒಂದು ಕ್ರೀಡೆ ಒಂದು ಸಮುದಾಯದ ಆಟಗಾರರು, ಒಂದೇ ನಾಡಿನಲ್ಲಿ ಅತ್ಯಧಿಕ ತಂಡಗಳೊಂದಿಗೆ, ಅತೀ ಹೆಚ್ಚಿನ ದಿನಗಳ ಕಾಲ ಆಟವಾಡುವ ವಿಶ್ವದಾಖಲೆಗೆ ಈಗಾಗಲೇ ಕೊಡವ ಹಾಕಿ ಪಂದ್ಯಾವಳಿ ಸೇರ್ಪಡೆಯಾಗಿದೆ. ಭಾರತ ಮಾತ್ರವಲ್ಲ ವಿಶ್ವದ ಬೇರೆಲ್ಲೂ ಒಂದು ಜನಾಂಗ (ಕೊಡವ) ಒಂದು ಕ್ರೀಡೆಯನ್ನು (ಹಾಕಿ), ಅತ್ಯಧಿಕ ತಂಡಗಳು (390), ಅತೀ ಹೆಚ್ಚಿನ ದಿನ (30 ದಿನಗಳು) ಆಡುವ ನಿದರ್ಶನ ಇಲ್ಲ, ಹೀಗಾಗಿಯೇ ಕೊಡವ ಕುಟುಂಬಗಳ ಹಾಕಿ ವಿಭಿನ್ನ, ವಿನೂತನವಾಗಿದೆ. ಮುದ್ದಂಡ ಕಪ್ ಹಾಕಿಯ ಸಂಭ್ರಮ ಕಣ್ತುಂಬಿಕೊಳ್ಳಲು ನೀವೂ ಮಂಜಿನ ನಗರಿಗೆ ಬನ್ನಿ.. !!

ಸಂಗೀತ ಹಾಡುವ ಶಿಲೆಗಳು!

ಕರಿಕಲ್ಲು ಗುಡ್ಡದಲ್ಲಿ ಕುಟ್ಟುಚಿತ್ರಗಳ ಪತ್ತೆ
ವಿಜಯನಗರ ತಿರುಗಾಟ ತಂಡದಿಂದ ಸಾಧನೆ
ಮಹತ್ವದ ಸಂಗೀತದ ನಾದ ಕಲ್ಲುಗಳ ಶೋಧ

ಜಿಲ್ಲಾ ನೋಟ

ಅನಂತ ಪದ್ಮನಾಭ ರಾವ್ ಹೊಸಪೇಟೆ

ಹೊಸಪೇಟೆ-ಬಳ್ಳಾರಿ ಹೆದ್ದಾರಿಯ ಧರ್ಮಸಾಗರ ಗ್ರಾಮದ ಬಳಿ ಕರೆಕಲ್ಲು ಗುಡ್ಡದಲ್ಲಿ ಸಂಗೀತ ಹೊರಹೊಮ್ಮಿಸುವ ಕಲ್ಲುಗಳು ಹಾಗೂ ಆದಿಮಾನವರು ರಚಿಸಿದ ಕುಟ್ಟು ಚಿತ್ರಗಳನ್ನು ವಿಜಯನಗರ ತಿರುಗಾಟ ಸಂಶೋಧನಾ ತಂಡದ ಸದಸ್ಯರು ಪತ್ತೆ ಮಾಡಿದ್ದಾರೆ. ಹಂಪಿಯ ವಿಜಯವಿಠಲ ದೇವಸ್ಥಾನದಲ್ಲಿ ಸಂಗೀತ ಹೊರಹೊಮ್ಮಿಸುವ ಕಲ್ಲುಗಳನ್ನು ಇಲ್ಲಿಂದಲೇ ಒಯ್ದಿರಬಹುದು ಅಥವಾ ಹಂಪಿ ಭಾಗದಲ್ಲೇ ಇಂತಹ ಕಲ್ಲುಗಳು ಇದ್ದಿರಬಹುದು ಎಂಬ ಚಿಂತನೆಗೆ ಆಸ್ಪದ ನೀಡಿದೆ.

ಆದಿಮಾನವನ ಕುರುಹು

ಹಂಪಿಯಿಂದ 20 ಕಿ.ಮೀ ದೂರದಲ್ಲಿ ಧರ್ಮಸಾಗರ ತಿರುವು ರಸ್ತೆಯಿಂದ ದೇವಲಾಪುರಕ್ಕೆ ಸಾಗುವ ಮಾರ್ಗದ ಬಳಿ ಕರೆಕಲ್ಲು ಗುಡ್ಡ ಇದೆ. ಕ್ರಿ.ಪೂ 3,000ದಲ್ಲಿ ಆದಿಮಾನವರು ಈ ಭಾಗದಲ್ಲಿ ನೆಲೆಸಿದ್ದರು ಎಂಬುದಕ್ಕೆ ಕುರುಹಾಗಿ ಇಲ್ಲಿ ಕುಟ್ಟುಚಿತ್ರಗಳಿವೆ ಎಂದು ತಿರುಗಾಟ ತಂಡದ ಪ್ರೊ.ಗೋವಿಂದ ತಿಳಿಸಿದರು.

ಸುನಾದ ಸಂಗೀತ

ನಾಲ್ಕು-ಐದು ಕಲ್ಲುಗುಂಡುಗಳಿಗೆ ಕಲ್ಲಿನಿಂದ ಕುಟ್ಟಿದಾಗ, ಸಂಗೀತದ ನಾದವು ಹೊರ ಹೊಮ್ಮುತ್ತದೆ. ಈ ಕಲ್ಲುಗಳಲ್ಲಿ ಒಂದು ಕಲ್ಲು ಚಪ್ಪಟೆ ಆಕಾರವಾಗಿದ್ದು, ಅದು 8 ಅಡಿ ಎತ್ತರ ಮತ್ತು 4 ಅಡಿ ಅಗಲವಿದೆ. ಅದರ ಪಕ್ಕದ ಇನ್ನಿತರೆ ಮೂರು ಹಾಸು ಗುಂಡು ಕಲ್ಲುಗಳಿಂದಲೂ ಸುನಾದ ಸಂಗೀತ ಕೇಳುತ್ತದೆ.

ಸಂಗನಕಲ್ಲಿನಲ್ಲೂ ಇದೇ ರೀತಿ ಸಂಗೀತ ನಾದ ಹೊರಹೊಮ್ಮುವ ಕಲ್ಲುಗಳಿವೆ. ರಸ್ತೆ ಪಕ್ಕದಲ್ಲಿರುವ ಈ ಗುಂಡುಕಲ್ಲುಗಳನ್ನು ರಕ್ಷಿಸಬೇಕಿದೆ. ಕರೆಕಲ್ಲು ಗುಡ್ಡದಲ್ಲಿ ಆದಿಮಾನವರು ಗುಂಪು ಗುಂಪಾಗಿ ವಾಸವಿದ್ದಿರಬಹುದು. ಆಗ ಕುಟ್ಟು ಚಿತ್ರಗಳನ್ನು ಕೆತ್ತಿರಬಹುದು ಎನ್ನುತ್ತಾರೆ ತಿರುಗಾಟದ ತಂಡದ ಎಚ್. ತಿಪ್ಪೇಸ್ವಾಮಿ. ತಿರುಗಾಟ ತಂಡದಲ್ಲಿ ಗೋವರ್ಧನ್, ಕೃಷ್ಣಗೌಡ, ವೀರಾಂಜನೇಯ, ಕೆ. ವೀರಭದ್ರ, ಗೌಡ, ರವಿ, ಮಂಜು, ಭೈರಪ್ಪ, ಶಂಕರ್ ಇದ್ದಾರೆ.

ಕಾವಲು ಗೋಪುರ

ಹೊಸಪೇಟೆಯಿಂದ ಬಳ್ಳಾರಿಗೆ ತೆರಳುವ ಧರ್ಮಸಾಗರ ಗ್ರಾಮದ ತಿರುವು ರಸ್ತೆಯಿಂದ ದೇವಲಾಪುರಕ್ಕೆ ಸಾಗುವ ಮಾರ್ಗ ಮಧ್ಯೆದಲ್ಲಿಯ ಅಪ್ಪಳಪ್ಪನ ಕೆರೆಯ ಅನತಿ ದೂರದಲ್ಲಿರುವ ಕರಡಿ ವೀಕ್ಷಣೆಗಾಗಿ ಕಟ್ಟಿಸಿದ ಕಾವಲು ಗೋಪುರ ಪಕ್ಕದಲ್ಲಿದೆ. ಈ ಕರೆಕಲ್ಲು ಗುಡ್ಡದಲ್ಲಿ ಸಂಗೀತದ ಕಲ್ಲುಗಳೊಂದಿಗೆ, ಕ್ರಿ. ಪೂ 3000 ಕಾಲಮಾನದ ಆದಿಮಾನವ ನೆಲೆಸಿದನೆನ್ನಲಿಕ್ಕೆ ಕುರುಹಾಗಿ ಅಲ್ಲಿನ ಬಹುತೇಕ ಗುಂಡುಕಲ್ಲುಗಳಿಗೆ ಆದಿಮಾನವ ಕುಟ್ಟಿದ ಕುಟ್ಟು ಚಿತ್ರಗಳಿವೆ.

ಪ್ರಾಣಿಗಳ ಚಿತ್ರಗಳು

ಇದರಲ್ಲಿ ವಿಶೇಷವಾಗಿ ಸುಂದರವಾದ ಗೂಳಿ ಚಿತ್ರವಿದ್ದು, ಇದು ಆರು ಇಂಚು ಉದ್ದ ನಾಲ್ಕು ಇಂಚು ಅಗಲದ ಆ ಗೂಳಿಯ ಹಿಂದೆ ಮಾನವನ ಚಿತ್ರವಿದೆ. ಅಲ್ಲದೇ ಗುಡ್ಡದ ಬಹುತೇಕ ಕಲ್ಲುಗಳಿಗೆ ಇತರೆ ಪ್ರಾಣಿಗಳ ಚಿತ್ರಗಳಿವೆ. ಅದರಲ್ಲೂ ಹುಲಿಯ ಚಿತ್ರ ತುಂಬಾ ಸುಂದರವಾಗಿ ಚಿತ್ರಿಸಿದ್ದಾರೆ. ಇವು ಅಲ್ಲದೇ ಆದಿ ಮಾನವ ಬೇಟೆಯಾಡುವ, ಹಾಗೂ ಎತ್ತರದ ಮನುಷ್ಯನ ಚಿತ್ರಗಳನ್ನು ಕುಟ್ಟಿರುವುದು ಕಂಡು ಬಂದಿವೆ. ಇನ್ನಿತರೆ ಗುಂಡು ಕಲ್ಲುಗಳಿಗಿರುವ ಕುಟ್ಟು ಚಿತ್ರಗಳು ಗಾಳಿ, ಮಳೆ, ಬಿಸಿಲಿನಿಂದ ಸವೆದು ಹೋಗಿವೆ. ಇವುಗಳನ್ನು ಪುರಾತತ್ವ ಇಲಾಖೆ ಇಲ್ಲವೇ ಆಡಳಿತಾಂಗವು ಸಂರಕ್ಷಣೆ ಮಾಡಬೇಕೆನ್ನುತ್ತಾರೆ ಡಾ. ಗೋವಿಂದ.

ಈ ಕಲ್ಲುಗಳಲ್ಲಿ ಒಂದು ಕಲ್ಲು ಚಪ್ಪಟೆಯಾಕಾರವಾಗಿದ್ದು, ಅದು ಎಂಟು ಅಡಿ ಎತ್ತರ ನಾಲ್ಕು ಅಡಿ ಅಗಲವಾಗಿದೆ. ಅದರ ಪಕ್ಕದ ಇನ್ನಿತರೆ ಮೂರು ಹಾಸು ಗುಂಡು ಕಲ್ಲುಗಳಿಂದಲೂ ಸುಮಧುರ ಸಂಗೀತ ಕೇಳುತ್ತದೆ. ಈ ಸಂಗೀತ ನಾದ ಮೊಳಗುವುದನ್ನು ಆದಿ ಮಾನವರು ಗುರುತಿಸಿ ಅವರು ಕುಟ್ಟಿದ ಗುರುತು ಈಗಲೂ ಕಾಣಿಸುತ್ತವೆ.

ಸಂಗನಕಲ್ಲಿನಲ್ಲಿ ಸಹ ಸಂಗೀತ ನಾದ

ಇದೇ ರೀತಿ ಈಗಾಗಲೇ ಪ್ರಾಗೈತಿಹಾಸಿಕ ಸ್ಥಳವೆಂಬ ಖ್ಯಾತಿಗೆ ಗುರಿಯಾಗಿರುವ ಸಂಗನಕಲ್ಲಿನಲ್ಲಿ ಸಹ ಇದೇ ರೀತಿಯ ಸಂಗೀತ ನಾದ ಹೊರಹೊಮ್ಮುವ ಕಲ್ಲುಗಳು ಕಂಡು ಬರುತ್ತವೆ. ರಸ್ತೆ ಪಕ್ಕದಲ್ಲಿರುವ ಈ ಗುಂಡುಕಲ್ಲುಗಳ ಸುತ್ತಲೂ ರಕ್ಷಣೆ ಮಾಡಬೇಕಾದ ಅವಶ್ಯಕತೆ ಇದೆ.

ಕ್ಲೀನ್ ಬೌಲ್ಡ್

ಮಲೈಕಾ ಮತ್ತೆ ಡೇಟಿಂಗ್?

ಮುಂಬೈ: ಬಾಲಿವುಡ್ ನಟಿ ಮಲೈಕಾ ಆರೋರಾ ಒಂದಲ್ಲ ಒಂದು ವಿಚಾರದಿಂದ ಸುದ್ದಿಯಲ್ಲಿರುತ್ತಾರೆ. ನಟ ಅರ್ಜುನ್ ಕಪೂರ್ ಜತೆ ಬ್ರೇಕಪ್ ಮಾಡಿಕೊಂಡ ಬಳಿಕ ಅಷ್ಟಾಗಿ ಎಲ್ಲೂ ಕಾಣಿಸಿಕೊಳ್ಳದ ಅವರು ಇದೀಗ ಶ್ರೀಲಂಕಾದ ಮಾಜಿ ಆಟಗಾರ ಕುಮಾರ ಸಂಗಕ್ಕರ ಜತೆ ಕಾಣಿಸಿಕೊಂಡಿದ್ದಾರೆ. ಭಾನುವಾರ ನಡೆದಿದ್ದ ರಾಜಸ್ಥಾನ ರಾಯಲ್ ಮತ್ತು ಚೆನ್ನೈ ವಿರುದ್ಧದ ಪಂದ್ಯವನ್ನು ಇಬ್ಬರು ಜತೆಯಾಗಿ ಕುಳಿತು ವೀಕ್ಷಿಸುತ್ತಿರುವ ಫೋಟೊವೊಂದು ಇದೀಗ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿದೆ. ಮಲೈಕಾ ಅರೋರಾ ಅವರು ಮಾಜಿ ಪತಿ ಅರ್ಬಾಜ್ ಖಾನ್‌ನಿಂದ 2017ರಲ್ಲಿ ವಿಚ್ಛೇದನ ಪಡೆದ ನಂತರ, 2018ರಲ್ಲಿ ಅರ್ಜುನ್ ಕಪೂರ್ ಅವರೊಂದಿಗೆ ಡೇಟಿಂಗ್ ಪ್ರಾರಂಭಿಸಿದ್ದರು. ವಯಸ್ಸಿನ ಅಂತರದ ಹೊರತಾಗಿಯೂ ಅವರಿಬ್ಬರೂ ಬಹಳ ವರ್ಷಗಳಿಂದ ಬಹಿರಂಗವಾಗಿಯೇ ಡೇಟಿಂಗ್‌ನಲ್ಲಿದ್ದರು. ಇದೀಗ ಮಲೈಕಾ ಸಂಗಕ್ಕರ ಜತೆ ಕಾಣಿಸಿಕೊಂಡಿದ್ದು, ನೆಟ್ಟಿಗರು ಮಲೈಕಾ ಅವರು ಸಂಗಕ್ಕರ ಜತೆ ಡೇಟಿಂಗ್ ಮಾಡುತ್ತಿದ್ದಾರಾ? ಎಂದು ಪ್ರಶ್ನೆ ಮಾಡಿದ್ದಾರೆ.

ಸ್ಕೋರ್ ಬೋರ್ಡ್

116/10 (16.2 ಓವರ್)

ಕೋಲ್ಕತ್ತಾ ನೈಟ್ ರೈಡರ್ಸ್		ರನ್	ಎಸೆತ
ಡಿ ಕಾಕ್	ಬೌಲರ್ ▸▸ ಚಾಹರ್, ಕ್ಯಾಚ್ ▸▸ ಅಶ್ವನಿ	1	3
ನರೈನ್	ಬೌಲರ್ ▸▸ ಬೌಲ್ಟ್	0	2
ರಹಾನೆ	ಬೌಲರ್ ▸▸ ಅಶ್ವನಿ, ಕ್ಯಾಚ್ ▸▸ ವರ್ಮಾ	11	7
ರಘುವಂಶಿ	ಬೌಲರ್ ▸▸ ಪಾಂಡ್ಯ, ಕ್ಯಾಚ್ ▸▸ ಧೀರ್	26	16
ಅಯ್ಯರ್	ಬೌಲರ್ ▸▸ ಚಾಹರ್, ಕ್ಯಾಚ್ ▸▸ ರಿಕಲ್ಟನ್	3	9
ರಿಂಕುಸಿಂಗ್	ಬೌಲರ್ ▸▸ ಅಶ್ವನಿ, ಕ್ಯಾಚ್ ▸▸ ಧೀರ್	17	14
ಪಾಂಡೆ	ಬೌಲರ್ ▸▸ ಕುಮಾರ್	19	14
ರಸೆಲ್	ಬೌಲರ್ ▸▸ ಕುಮಾರ್	5	11
ರಮಣದೀಪ್	ಬೌಲರ್ ▸▸ ಸ್ಯಾಂಟ್ನರ್, ಕ್ಯಾಚ್ ▸▸ ಪಾಂಡ್ಯ	22	12
ರಾಣಾ	ಬೌಲರ್ ▸▸ ವಿಘ್ನೇಶ್, ಕ್ಯಾಚ್ ▸▸ ಧೀರ್	4	8
ಜಾನ್ಸನ್	ನಾಟೌಟ್*	1	3

ಮುಂಬೈ	ಓವರ್	ರನ್	ವಿಕೆಟ್
ಬೌಲ್ಟ್	4	23	1
ಚಾಹರ್	2	19	2
ಅಶ್ವನಿ	3	24	4
ಪಾಂಡ್ಯ	2	10	1
ವಿಘ್ನೇಶ್	2	21	1
ಸ್ಯಾಂಟ್ನರ್	3.2	17	1

ಕೋಲ್ಕತ್ತಾ	ಓವರ್	ರನ್	ವಿಕೆಟ್
ಜಾನ್ಸನ್ 2	14	0	
ರಾಣಾ	2	28	0
ವರುಣ್	3	12	0
ರಸೆಲ್	2.5	35	2
ನರೈನ್	3	32	0

121/2 (12.5 ಓವರ್)

ಮುಂಬೈ ಇಂಡಿಯನ್ಸ್		ರನ್	ಎಸೆತ
ರೋಹಿತ್	ಬೌಲರ್ ▸▸ ರಸೆಲ್, ಕ್ಯಾಚ್ ▸▸ ರಾಣಾ	13	12
ರಿಕಲ್ಟನ್	ನಾಟೌಟ್*	62	41
ಜ್ಯಾಕ್ಸ್	ಬೌಲರ್ ▸▸ ರಸೆಲ್, ಕ್ಯಾಚ್ ▸▸ ರಹಾನೆ	16	17
ಸೂರ್ಯಕುಮಾರ್	ನಾಟೌಟ್*	27	9

ಪೂರನ್
ಲಖನೌ
145
ರನ್

ಎಂ. ನೂರ್
ಚೆನ್ನೈ
9
ವಿಕೆಟ್

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	02	02	00	04
ಡೆಲ್ಲಿ	02	02	00	04
ಲಖನೌ	02	01	01	02
ಗುಜರಾತ್	01	01	01	02
ಪಂಜಾಬ್	01	01	00	02
ಮುಂಬೈ	03	01	02	02
ಚೆನ್ನೈ	03	01	02	02
ಹೈದರಾಬಾದ್	03	01	02	02
ರಾಜಸ್ಥಾನ್	03	01	02	02
ಕೋಲ್ಕತ್ತಾ	03	01	02	02

ಆಸ್ಟ್ರೇಲಿಯಾಗೆ ಭಾರತ ಮಹಿಳಾ ತಂಡ

ಸಿಡ್ನಿ: ಭಾರತ ಮಹಿಳಾ ಕ್ರಿಕೆಟ್ ತಂಡವು ಮೂರೂ ಮಾದರಿಯ ಸರಣಿಯಲ್ಲಿ ಆಡಲು 2026ರ ಆರಂಭದಲ್ಲಿ ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ. ಫೆಬ್ರುವರಿ 15ರಿಂದ ಮಾರ್ಚ್ 9ರ ವರೆಗಿನ ಈ ಪ್ರವಾಸದ ಅವಧಿಯಲ್ಲಿ ಉಭಯ ತಂಡಗಳು, ಒಂದು ಟೆಸ್ಟ್ ಹಾಗೂ ತಲಾ 3 ಏಕದಿನ ಹಾಗೂ ಟಿ20 ಪಂದ್ಯಗಳನ್ನು ಆಡಲಿವೆ.

01-04-2025 ಮಂಗಳವಾರ
vishwavani.news

ಇಂದಿನ ಪಂದ್ಯ

7.30 PM

ಲಖನೌ ಸೂಪರ್ ಜೈಂಟ್ಸ್ vs ಪಂಜಾಬ್ ಕಿಂಗ್ಸ್

ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ ಲಖನೌ



ಧೋನಿ ಬಗ್ಗೆ ಫ್ಲೆಮಿಂಗ್ ಸ್ಪಷ್ಟನೆ

'ಧೋನಿ ಕೀಪಿಂಗ್ ಜತೆಗೆ 10 ಓವರ್ ಬ್ಯಾಟಿಂಗ್ ಮಾಡಲು ಸಾಧ್ಯವಿಲ್ಲ. ಅವರು ಮೊಣಕಾಲಿನ ಗಾಯದಿಂದ ಬಳಲುತ್ತಿದ್ದಾರೆ, ಹಾಗಾಗಿ ಅವರು ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯಗಳ ಆಯಾ ದಿನದ ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ಕ್ರಮಾಂಕದ ಕುರಿತು ನಿರ್ಣಯಿಸುತ್ತಾರೆ. ಧೋನಿ ಶ್ರೇಷ್ಠ ಆಟಗಾರ ಎಂಬುವುದರಲ್ಲಿ ಯಾವ ಅನುಮಾನವಿಲ್ಲ' ಎಂದು ಚೆನ್ನೈ ಸೂಪರ್ ಕಿಂಗ್ಸ್ ಕೋಚ್ ಸ್ಟೀಫನ್ ಫ್ಲೆಮಿಂಗ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಈ ಸಲದ ಐಪಿಎಲ್ ಟೂರ್ನಿಯಲ್ಲಿ ಮಾಜಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡ ಆಡಿದ ಮೂರು ಪಂದ್ಯಗಳ ಪೈಕಿ ಎರಡು ಪಂದ್ಯಗಳನ್ನು ಸೋತಿದ್ದು, ತಂಡದ ಸೋಲಿಗೆ ಮಹೇಂದ್ರ ಸಿಂಗ್ ಧೋನಿಯ ಬ್ಯಾಟಿಂಗ್ ಕ್ರಮಾಂಕವೇ ಮುಖ್ಯ ಕಾರಣ ಎಂದು ಚೆನ್ನೈ ಅಭಿಮಾನಿಗಳೇ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು.

ಅಶ್ವನಿ ಕುಮಾರ್ ಮಾರಕ ಬೌಲಿಂಗ್
ರಿಕೆಲ್ಟನ್ ಬಿರುಸಿನ ಬ್ಯಾಟಿಂಗ್

ಗೆಲುವಿನ ಖಾತೆ ತೆರೆದ ಮುಂಬೈ

ಮುಂಬೈ: ಯುವ ಎಡಗೈ ವೇಗಿ ಅಶ್ವನಿ ಕುಮಾರ್(24 ರನ್‌ಗಳಿಗೆ 4 ವಿಕೆಟ್) ಅವರ ಮಾರಕ ಬೌಲಿಂಗ್ ದಾಳಿಗೆ ನಲುಗಿದ ಹಾಲಿ ಐಪಿಎಲ್ ಚಾಂಪಿಯನ್ ಕೋಲ್ಕತ್ತಾ ತಂಡವು ಸೋಮವಾರದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 8 ವಿಕೆಟ್ ಅಂತರದ ಹೀನಾಯ ಸೋಲು ಕಂಡಿದೆ. ಇದು ಈ ಆವೃತ್ತಿಯಲ್ಲಿ ಮುಂಬೈಗೆ ಒಲಿದ ಮೊದಲ ಗೆಲುವಾಗಿದ್ದು, ಇದಕ್ಕೂ ಮುನ್ನ ಆಡಿದ ಎರಡು ಪಂದ್ಯಗಳಲ್ಲಿ ಅದು ಸೋಲನ್ನು ಕಂಡಿತ್ತು.

ಇಲ್ಲಿನ ವಾಖೆಂಡೆ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ದುಕೊಂಡ ಮುಂಬೈ ನಾಯಕನ ಆಯ್ಕೆಯನ್ನು ಬೌಲರ್‌ಗಳು ಸಮರ್ಥಿಸಿಕೊಂಡರು. ಸತತ ವಿಕೆಟ್ ಕಳೆದುಕೊಂಡ ಕೆಕೆಆರ್ ತಂಡವು 16.2 ಓವರ್‌ಗಳಲ್ಲಿ 116 ರನ್‌ಗೆ ಆಲೌಟ್ ಆಯಿತು. ಸುಲಭ ಮೊತ್ತದ ಗುರಿ ಬೆನ್ನಟ್ಟಿದ ಮುಂಬೈ ತಂಡವು ರಯಾನ್ ರಿಕೆಲ್ಟನ್ ಅರ್ಧ ಶತಕದ ನೆರವಿನಿಂದ 12.5 ಓವರ್‌ಗಳಲ್ಲಿ 2 ವಿಕೆಟ್‌ಗೆ 121 ರನ್ ಬಾರಿಸಿ ಗೆಲುವನ್ನು ತನ್ನದಾಗಿಸಿಕೊಂಡಿತು. ಗುರಿ ಬೆನ್ನಟ್ಟಿದ್ದ ವೇಳೆ ರಯಾನ್ ರಿಕೆಲ್ಟನ್ ಬಿರುಸಿನ ಬ್ಯಾಟಿಂಗ್ ಮೂಲಕ ಅರ್ಧಶತಕ ಬಾರಿಸಿದರು. ಇಂಪ್ಯಾಕ್ಟ್ ಆಟಗಾರನಾಗಿ ಕಣಕ್ಕಿಳಿದು, 12 ಎಸೆತಗಳನ್ನು ಎದುರಿಸಿದ ರೋಹಿತ್ ಶರ್ಮ(13) ಈ ಪಂದ್ಯದಲ್ಲೂ ವಿಫಲರಾದರು. ಸೂರ್ಯಕುಮಾರ್ ಯಾದವ್ ಅಜೇಯ 27 ರನ್ ಬಾರಿಸಿದರು. ಇದೇ ವೇಳೆ ಅವರು ಟಿ20ಯಲ್ಲಿ 8 ಸಾವಿರ ರನ್ ಪೂರೈಸಿದ ಸಾಧನೆಯನ್ನೂ ಅವರು ಮಾಡಿದರು. ಕೊನೆಯ ತನಕ ಬ್ಯಾಟಿಂಗ್ ನಡೆಸಿದ ರಿಕೆಲ್ಟನ್ 5 ಸಿಕ್ಸರ್ ಮತ್ತು 4 ಬೌಂಡರಿ ಸಹಿತ 62 ರನ್ ಗಳಿಸಿದರು. ಕೆಕೆಆರ್ ಪರ ರೆಸೆಲ್ 2 ವಿಕೆಟ್ ಕಿತ್ತರು.

ಚೊಚ್ಚಲ ಎಸೆತದಲ್ಲೇ ಅಶ್ವನಿಗೆ ವಿಕೆಟ್: ಚೊಚ್ಚಲ ಪಂದ್ಯವನ್ನಾಡಿದ 23 ವರ್ಷದ ಅಶ್ವನಿ ಕುಮಾರ್ ತಾನೆಸೆದ ಮೊದಲ ಎಸೆತದಲ್ಲೇ ವಿಕೆಟ್ ಪಡೆದರು. ನಾಯಕ ಅಜಿಂಕ್ಯ ರಹಾನೆ ಅವರ ವಿಕೆಟ್ ಕಿತ್ತು ಐಪಿಎಲ್ ವಿಕೆಟ್ ಖಾತೆ ತೆರೆದ ಅವರು, ಒಟ್ಟು ಮೂರು ಓವರ್ ಬೌಲಿಂಗ್ ದಾಳಿ ನಡೆಸಿ 4 ವಿಕೆಟ್ ಕಿತ್ತು ಮಿಂಚಿದರು.

ಕೆಕೆಆರ್ ಪರ ಅಂಗ್‌ಕ್ರಿಸ್ ರಘುವಂಶಿ (26), ರಮಣ್‌ದೀಪ್ ಸಿಂಗ್(22) ಹೊರತುಪಡಿಸಿ ಉಳಿದವರೆಲ್ಲ ವಿಫಲರಾದರು. ಆರಂಭಿಕ ಆಟಗಾರರಾದ ಡಿ ಕಾಕ್ ಒಂದು ರನ್ ಗಳಿಸಿದರೆ, ನಾರಾಯಣ್ ಶೂನ್ಯ ಸುತ್ತಿದರು. ಕನ್ನಡಿಗ ಮನೀಷ್ ಪಾಂಡೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿ ಕೊಳ್ಳಲು ವಿಫಲರಾದರು. ಒಂದು ಸಿಕ್ಸರ್ ಮತ್ತು 2 ಬೌಂಡರಿ ನೆರವಿನಿಂದ 19 ರನ್ ಗಳಿಸಿದರು. ಮುಂಬೈ ಪರ ದೀಪಕ್ ಚಹರ್ 2, ಟ್ರೆಂಡ್ ಬೌಲ್ಟ್ ಒಂದು ವಿಕೆಟ್ ಕಿತ್ತರು.

ಚೊಚ್ಚಲ ಪಂದ್ಯದಲ್ಲೇ ಅಶ್ವನಿ ದಾಖಲೆ

ಮುಂಬೈ ತಂಡದ ಯುವ ಎಡಗೈ ವೇಗಿ ಅಶ್ವನಿ ಕುಮಾರ್ ಚೊಚ್ಚಲ ಪಂದ್ಯದಲ್ಲೇ ದಾಖಲೆ ನಿರ್ಮಿಸಿದ್ದಾರೆ. ಕೆಕೆಆರ್ ನಾಯಕ ರಹಾನೆ ವಿಕೆಟ್ ಕೀಳುವ ಮೂಲಕ ಐಪಿಎಲ್ ವೃತ್ತಿಜೀವನದ ಮೊದಲ ಎಸೆತದಲ್ಲೇ ವಿಕೆಟ್ ಕಿತ್ತ ಮುಂಬೈ ತಂಡದ 4ನೇ ಬೌಲರ್ ಎನಿಸಿಕೊಂಡರು, ಈ ಸಾಧನೆಗೈದ ವಿಶ್ವದ 10ನೇ ಬೌಲರ್ ಎಂಬ ಹೆಗ್ಗಳಿಕೆಗೂ ಪಾತ್ರ ರಾದರು. ಕೆಕೆಆರ್ ವಿರುದ್ಧ 3 ಓವರ್ ಬೌಲಿಂಗ್ ನಡೆಸಿದ ಅಶ್ವನಿ ಕುಮಾರ್ 24 ರನ್ ಕೊಟ್ಟು ಪ್ರಮುಖ 4 ವಿಕೆಟ್ ಕಿತ್ತು ಮಿಂಚಿದರು.

ದಂಡಕ್ಕೆ ಗುರಿಯಾದ ಪರಾಗ್

ಗುವಾಹಟಿ: ಸತತ ಎರಡು ಸೋಲಿನಿಂದ ಕಂಗೆಟ್ಟಿದ್ದ ರಾಜಸ್ಥಾನ್ ರಾಯಲ್ಸ್ ಭಾನುವಾರ ರಾತ್ರಿ ನಡೆದಿದ್ದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ ತಂಡವನ್ನು 6 ರನ್‌ಗಳಿಂದ ಮಣಿಸಿ ಗೆಲುವು ಸಾಧಿಸಿತ್ತು, ಆದರೆ ಪಂದ್ಯದಲ್ಲಿ ನಿಧಾನಗತಿ ಓವರ್ ರೇಟ್‌ಗಾಗಿ ಉಸ್ತುವಾರಿ ನಾಯಕ ರಿಯಾನ್ ಪರಾಗ್‌ಗೆ 12 ಲಕ್ಷ ರು. ದಂಡ ವಿಧಿಸಲಾಗಿದೆ. 'ಐಪಿಎಲ್‌ನ ನೀತಿ ಸಂಹಿತೆಯ ಅಡಿ ಯಲ್ಲಿ, ಕನಿಷ್ಠ ಓವರ್ ರೇಟ್ ಅಪರಾಧ ಗಳಿಗೆ ಸಂಬಂಧಿಸಿದಂತೆ, ರಾಜಸ್ಥಾನ ತಂಡದ ಈ ಋತುವಿನ ಮೊದಲ ಅಪರಾಧವಾಗಿರುವುದರಿಂದ, ನಾಯಕ ನಿಗೆ 12 ಲಕ್ಷ ದಂಡ ವಿಧಿಸಲಾಗಿದೆ' ಎಂದು ಐಪಿಎಲ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಸದ್ಯಕ್ಕೆ ಬುಮ್ರಾ ಅಲಭ್ಯ

ಮುಂಬೈ: ಐಪಿಎಲ್ 2025ರ ಮೊದಲ ಎರಡು ಸುತ್ತಿನ ಪಂದ್ಯಗಳು ಈಗಾಗಲೇ ಮುಗಿದಿದ್ದು, ಮುಂಬೈ ಇಂಡಿಯನ್ಸ್ ತಂಡದ ವೇಗಿ ಜಸ್‌ಪ್ರೀತ್ ಬುಮ್ರಾ ತಂಡಕ್ಕೆ ಯಾವಾಗ ಮರಳುತ್ತಾರೆ ಎಂಬುದರ ಕುರಿತು ಇನ್ನೂ ಸ್ಪಷ್ಟತೆ ಇಲ್ಲ. ಆಸ್ಟ್ರೇಲಿಯಾ ಪ್ರವಾಸದ ಸಮಯದಲ್ಲಿ ಬೆನ್ನು ನೋವಿನ ಸಮಸ್ಯೆಗೆ ಸಿಲುಕಿದ ಬಳಿಕ ಕ್ರಿಕೆಟ್‌ನಿಂದ ಬುಮ್ರಾ ದೂರ ಉಳಿದಿದ್ದರಲ್ಲದೆ, ಚಾಂಪಿಯನ್ಸ್ ಟ್ರೋಫಿಯನ್ನು ಕೂಡ ತಪ್ಪಿಸಿಕೊಂಡಿ ದ್ದರು. ಇದೀಗ ಎನ್‌ಸಿಎಯ ಅಧಿಕಾರಿಯೊಬ್ಬರು ನೀಡಿದ ಮಾಹಿತಿ ಪ್ರಕಾರ ಬುಮ್ರಾ ಐಪಿಎಲ್ ಆಡಲು ಇನ್ನೂ ಎರಡು ವಾರ ಕಾಲಾವಕಾಶ ಬೇಕಾಗಬಹುದು ಎಂದು ಹೇಳಿದ್ದಾರೆ.

ಮೇ ಕೊನೆಯ ವಾರದಲ್ಲಿ ಕೊನೆಗೊಳ್ಳುವ ಐಪಿಎಲ್ ಟೂರ್ನಿಯ ನಂತರ, ಭಾರತೀಯ ಕ್ರಿಕೆಟ್ ತಂಡ ಜೂನ್ ಮೂರನೇ ವಾರದಿಂದ ಟೆಸ್ಟ್ ಸರಣಿಗಾಗಿ ಇಂಗ್ಲೆಂಡ್‌ಗೆ ಹಾರಲಿದೆ. ಈ ಸರಣಿಗೆ ಬುಮ್ರಾ ಲಭ್ಯರಿದ್ದಾರಾ ಎನ್ನುವುದು ಕೂಡ ಸದ್ಯದ ಕುತೂಹಲವಾಗಿದೆ. ಐಪಿಎಲ್ ಆರಂಭಕ್ಕೂ ಮುನ್ನವೇ ಬುಮ್ರಾ ಅವರನ್ನು ಬಿಸಿಸಿಐ ವೈದ್ಯಕೀಯ ತಂಡ ಮತ್ತು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಕ್ರೀಡಾ ವಿಜ್ಞಾನ ತಂಡವು ಮೇಲ್ವಿಚಾರಣೆ ಮಾಡುತ್ತಿದೆ. ಬೆನ್ನುನೋವಿನಿಂದ ಗುಣಮುಖರಾಗಿದ್ದರೂ ಕೂಡ ಬೌಲಿಂಗ್ ಮಾಡುವ ಫಿಟ್‌ನೆಸ್ ಹೊಂದಿಲ್ಲ. ಒಂದೊಮ್ಮೆ ಬುಮ್ರಾ ಮುಂದಿನ ಎರಡು ವಾರದ ಒಳಗೆ ಫಿಟ್ ಆಗದಿದ್ದರೆ, ಐಪಿಎಲ್‌ನಿಂದಲೇ ಹೊರಬೀಳುವ ಸಾಧ್ಯತೆ ಇದೆ. ಮುಂಬೈ ಇಂಡಿಯನ್ಸ್ ತಂಡದ ಬೌಲಿಂಗ್ ಕೋಚ್ ಶೇನ್ ಬಾಂಡ್ ಅವರು ಇತ್ತೀಚೆಗೆ ಪದೇಪದೆ ಬೆನ್ನುನೋವಿನ ಗಾಯಕ್ಕೆ ಒಳಗಾಗುತ್ತಿರುವ ಬುಮ್ರಾ ಅವರ ಕ್ರಿಕೆಟ್ ವೃತ್ತಿ ಬದುಕು ಅಪಾಯದಲ್ಲಿದೆ ಎಂದು ಹೇಳಿದ್ದರು. ಬಾಂಡ್ ಕೂಡ ವೃತ್ತಿಜೀವನದ ಉತ್ತುಂಗ ದಲ್ಲಿದ್ದಾಗಲೇ ಬೆನ್ನು ನೋವಿನಿಂದ ಕ್ರಿಕೆಟ್ ಕೆರಿಯರ್‌ಗೆ ವಿದಾಯ ಹೇಳಿದ್ದರು.

ಪಾಂಡ್ಯ-ಜಾಸ್ಮಿನ್ ಸುತ್ತಾಟ?

ಮುಂಬೈ: ಹಾರ್ದಿಕ್ ಪಾಂಡ್ಯ ಅವರು ಕಳೆದ ವರ್ಷ ನತಾಸಾ ಸ್ಟಾಂಕೋವಿಕ್‌ಗೆ ವಿಚ್ಛೇದನ ನೀಡಿದ ಬಳಿಕ ಬ್ರಿಟಿಷ್ ಗಾಯಕಿ ಮತ್ತು ಟೆಲಿವಿಷನ್ ತಾರೆ ಜಾಸ್ಮಿನ್ ವಾಲಿಯಾ ಜತೆ ಡೇಟಿಂಗ್ ನಡೆಸುತ್ತಿದ್ದಾರೆ ಎಂದು ಸುದ್ದಿಯಾಗಿತ್ತು. ಇತ್ತೀಚೆಗೆ ಮುಕ್ತಾಯ ಕಂಡಿದ್ದ ಚಾಂಪಿಯನ್ಸ್ ಟ್ರೋಫಿ ವೇಳೆಯೂ ಜಾಸ್ಮಿನ್ ಭಾರತದ ಪಂದ್ಯದ ವೇಳೆ ಗ್ಯಾಲರಿಯಲ್ಲಿ ಕಾಣಿಸಿಕೊಂಡಿದ್ದರು.

ಇದೀಗ ಐಪಿಎಲ್‌ನಲ್ಲಿ ಪಾಂಡ್ಯ ಆಡುವ ಮುಂಬೈ ಪಂದ್ಯದ ವೇಳೆ ಜಾಸ್ಮಿನ್ ಮತ್ತೆ ಪ್ರತ್ಯಕ್ಷವಾಗಿದ್ದಾರೆ. ಈ ಹಿಂದೆ ಗ್ರೀಸ್‌ನಲ್ಲಿ ಪಾಂಡ್ಯ ಮತ್ತು ಜಾಸ್ಮಿನ್ ಜತೆಯಾಗಿ ಕಾಣಿಸಿಕೊಂಡಿದ್ದರು. ಇದೀಗ ಈ ಜೋಡಿ ಡೇಟಿಂಗ್ ನಡೆಸುತ್ತಿದ್ದಾರೆ ಎನ್ನುವುದಕ್ಕೆ ಪುಷ್ಠಿ ನೀಡುವಂತೆ ಐಪಿಎಲ್‌ನ ಗುಜರಾತ್ ವಿರುದ್ಧದ ಪಂದ್ಯ ದಲ್ಲಿ ಮುಂಬೈ ತಂಡದ ಆಟಗಾರರ ಕುಟುಂಬ ಸದಸ್ಯರ ಜತೆ ಗ್ಯಾಲರಿಯಲ್ಲಿ ಕುಳಿತು ಪಂದ್ಯ ವೀಕ್ಷಿಸಿದ ವಿಡಿಯೊ ಮತ್ತು ಫೋಟೊಗಳು ವೈರಲ್ ಆಗಿದೆ, ಜತೆಗೆ ಪಾಂಡ್ಯ ಬೌಲಿಂಗ್ ಮತ್ತು ಫೀಲ್ಡಿಂಗ್ ಮಾಡುತ್ತಿದ್ದ ವೇಳೆ ಹಲವಾರು ಬಾರಿ ಸ್ಟ್ಯಾಂಡ್‌ಗಳಲ್ಲಿ ಹಾರ್ದಿಕ್ ಪಾಂಡ್ಯರನ್ನು ಹುರಿದುಂಬಿಸುತ್ತಿರು ವುದು ಕೂಡ ಕಂಡು ಬಂದಿದೆ. ಜಾಸ್ಮಿನ್ ವಾಲಿಯಾ ಇಂಗ್ಲೆಂಡ್‌ನ ಎಸೆಕ್ಸ್‌ನಲ್ಲಿ ಜನಿಸಿದ್ದರೂ, ಅವರ ಕುಟುಂಬಸ್ಥರು ಭಾರತೀಯ ಮೂಲದವರು.

ಆರ್‌ಸಿಬಿ ಸೇರಿದ ವಿಕಿಪೀಡಿಯಾ ವಿಕಾಸ್

ಬೆಂಗಳೂರು: ಕನ್ನಡಿಗರ ನೆಚ್ಚಿನ ಐಪಿಎಲ್ ಫ್ರಾಂಚೈಸಿ ಆರ್‌ಸಿಬಿ ತಂಡ ಪ್ರತಿ ಆವೃತ್ತಿಯಲ್ಲೂ ಒಂದಲ್ಲ ಒಂದು ಹೊಸ ಪ್ರಯೋಗದ ಮೂಲಕ ತನ್ನ ಅಭಿಮಾನಿಗಳಿಗೆ ಇನ್ನಷ್ಟು ಹತ್ತಿರ ವಾಗುವ ಪ್ರಯತ್ನ ನಡೆಸುತ್ತಲೇ ಇರುತ್ತದೆ. ನಟ ಡ್ಯಾನಿಶ್ ಸೇಠ್ ಆರ್‌ಸಿಬಿಯ ಮಿಸ್ಟರ್ ನ್ಯಾಗ್ಸ್ ಇನ್‌ಸೈಡರ್ ಶೋ ಎಂಬ ಕಾರ್ಯಕ್ರಮದ ಮೂಲಕ ಅಭಿಮಾನಿಗಳನ್ನು ರಂಜಿಸುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಇದೀಗ ಅಭಿಮಾನಿಗಳಿಗೆ ಮತ್ತಷ್ಟು ಮನರಂಜನೆ ನೀಡಲು ಫ್ರಾಂಚೈಸಿ ವಿಕಿಪೀಡಿಯಾ ವಿಕಾಸ್ ಅವರನ್ನು ಕರೆತಂದಿದೆ.

ಸೋಮು ಅಂಕಲ್ ಹೆಸರಿನಲ್ಲಿ ವಿಕಾಸ್ ಆರ್‌ಸಿಬಿ ಅಭಿಮಾನಿಗಳಿಗೆ ರಂಜನೆ ನೀಡಲಿದ್ದಾರೆ. ವಿಕಾಸ್ ಅವರನ್ನು ಮೆಂಟರ್ ಮತ್ತು ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ಆರ್‌ಸಿಬಿಗೆ ಸ್ವಾಗತಿಸಿದ್ದಾರೆ. 'ನಾನು ನಂದಿನಿ, ಬೆಂಗಳೂರಿಗೆ ಬಂದೀನಿ' ಎಂಬ ಹಾಡಿನ ಮೂಲಕ ಕರ್ನಾಟಕದ ಮನೆ ಮಾತಾಗಿದ್ದ ವಿಕಿಪೀಡಿಯಾ ವಿಕಾಸ್ ಹಲವಾರು ಇದೇ ರೀತಿಯ ಹಾಡುಗಳನ್ನು ರಚಿಸಿ ಖ್ಯಾತಿಗಳಿಸಿದ್ದು, ಇದೀಗ ಆರ್‌ಸಿಬಿ ತಂಡವನ್ನು ಸೇರಿದ್ದು ಮತ್ತಷ್ಟು ಮನರಂಜನೆ ನೀಡಲು ಸಜ್ಜಾಗಿದ್ದಾರೆ.

ಇನ್‌ಸ್ಟಾದಲ್ಲೂ ಆರ್‌ಸಿಬಿಯದ್ದೇ ಹವಾ

ದೆಹಲಿ: ಈ ಐಪಿಎಲ್‌ನಲ್ಲಿ ಈ ವರೆಗೆ ಆಡಿರುವ ಎರಡೂ ಪಂದ್ಯಗಳನ್ನು ಏಕಪಕ್ಷೀಯವಾಗಿ ಗೆದ್ದು ಕೊಂಡಿರುವ ಆರ್‌ಸಿಬಿಗೆ ಇದೀಗ ಮತ್ತೊಂದು ಸಿಹಿ ಸುದ್ದಿ ಸಿಕ್ಕಿದೆ. ತನ್ನ ಎರಡನೇ ಪಂದ್ಯದಲ್ಲಿ ಸಿಎಸ್‌ಕೆ ತಂಡವನ್ನು 50 ರನ್‌ಗಳಿಂದ ಮಣಿಸಿದ್ದ ಆರ್‌ಸಿಬಿ, ಇದೀಗ ಸೋಶಿಯಲ್ ಮೀಡಿಯಾ ಫ್ಲಾಟ್‌ಫಾರ್ಮ್ ಇನ್‌ಸ್ಟಾಗ್ರಾಮ್‌ನಲ್ಲೂ ಚೆನ್ನೈ ತಂಡವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ ಅತ್ಯಧಿಕ ಫಾಲೋವರ್ಸ್‌ಗಳನ್ನು ಹೊಂದಿರುವ ಐಪಿಎಲ್ ತಂಡಗಳ ಪೈಕಿ ಇಷ್ಟು ದಿನ ಚೆನ್ನೈ ಸೂಪರ್ ಕಿಂಗ್ಸ್ ತಂಡ ಅಗ್ರಸ್ಥಾನದಲ್ಲಿತ್ತು, ಆದರೆ ಈ ಸೀಸನ್‌ನಲ್ಲಿ ಕಳಪೆ ಪ್ರದರ್ಶನ ನೀಡುತ್ತಿರುವ ಸಿಎಸ್‌ಕೆ ಇನ್‌ಸ್ಟಾಗ್ರಾಮ್‌ನಲ್ಲಿ ತನ್ನ ಫಾಲೋವರ್ಸ್‌ಗಳ ಸಂಖ್ಯೆಯಲ್ಲಿ ಇಳಿಮುಖ ಕಂಡಿದ್ದು, ಎರಡನೇ ಸ್ಥಾನಕ್ಕೆ ಇಳಿದಿದೆ. ಆರ್‌ಸಿಬಿ ಮೊದಲ ಸ್ಥಾನಕ್ಕೆ ಏರಿದೆ.

ರಾಯುಡು ವಿರುದ್ಧ ಆಕ್ರೋಶ

ಮುಂಬೈ: ಇದುವರೆಗೂ ಆರ್‌ಸಿಬಿ ಮತ್ತು ತಂಡದ ಅಭಿಮಾನಿಗಳನ್ನು ಅಪಹಾಸ್ಯ ಮಾಡುವ ಮಾಡುತ್ತಿದ್ದ ಮಾಜಿ ಆಟಗಾರ ಅಂಬಟಿ ರಾಯುಡು ಇದೀಗ ದಿಗ್ಗಜ ಆಟಗಾರ ರಾಹುಲ್ ದ್ರಾವಿಡ್ ಬಗ್ಗೆ ಮಾತನಾಡುವ ಮೂಲಕ ಭಾರೀ ಟೀಕೆಗೆ ಗುರಿಯಾಗಿದ್ದು, ಅವರ ವಿರುದ್ಧ ಆಕ್ರೋಶ ಕೂಡ ವ್ಯಕ್ತವಾಗಿದೆ. ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ್ ವಿರುದ್ಧದ ಪಂದ್ಯದ ವೇಳೆ ಭಾನುವಾರದಂದು ರಾಜಸ್ಥಾನ್ ತಂಡದ ಮುಖ್ಯ ಕೋಚ್ ಆಗಿರುವ ದ್ರಾವಿಡ್ ವೀಲ್‌ಚೇರ್‌ನಲ್ಲಿ ಕುಳಿತು ಪಿಚ್ ವೀಕ್ಷಣೆ ಮಾಡಿ ದ್ದರು. ಅವರ ಆ ಬದ್ಧತೆ ಕಂಡು ಅನೇಕರು ಮೆಚ್ಚುಗೆ ಸೂಚಿಸಿದರೆ, ರಾಯುಡು ವ್ಯಂವ್ಯವಾಡಿ, ಕ್ರಿಕೆಟ್ ಅಭಿಮಾನಿಗಳ ಆಕ್ರೋಶಕ್ಕೆ ಕಾರಣ ರಾಗಿದ್ದಾರೆ. ಚೆನ್ನೈ ಪಂದ್ಯಕ್ಕೂ ಮುನ್ನ ದ್ರಾವಿಡ್ ಪಿಚ್ ವೀಕ್ಷಣೆಗೆ ಬಂದು ಅಲ್ಲಿದ್ದ ಅಧಿಕಾರಿಗಳ ಜತೆ ಮಾತುಕತೆ ನಡೆಸಿದ್ದರು. ಈ ವೇಳೆ ಸಂಜಯ್ ಮಾಂಜ್ರೇಕರ್ ಜತೆ ಹಿಂದಿ ಕಾಮೆಂಟ್ರಿ ಮಾಡುತ್ತಿದ್ದ ರಾಯುಡು, 'ದ್ರಾವಿಡ್‌ಗೆ ವೀಲ್‌ಚೇರ್‌ನಲ್ಲಿ ಪಿಚ್ ಬಳಿ ಬರಲು ಅನುಮತಿ ಕೊಟ್ಟಿದ್ದು ಯಾರು? ಇದಕ್ಕೆ ಅವಕಾಶ ಇದೆಯೇ?' ಎಂದು ಪ್ರಶ್ನೆ ಮಾಡಿದ್ದಾರೆ. ಇದು ದ್ರಾವಿಡ್ ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಯಿತು. ಆದರೆ ಮಾಂಜ್ರೇಕರ್ ಅವರು ದ್ರಾವಿಡ್ ಕರ್ತವ್ಯ ನಿಷ್ಠೆಗೆ ಮೆಚ್ಚುಗೆ ಸೂಚಿಸಿ, ಈ ರೀತಿ ಕರ್ತವ್ಯ ನಿರ್ವಹಿಸಲು ಅದು ದ್ರಾವಿಡ್ ಅವರಿಂದ ಮಾತ್ರ ಸಾಧ್ಯ. ಅವರು ಯಾವುದೇ ಒಂದು ಕಾರ್ಯವನ್ನು ಕೈಗೆತ್ತಿಕೊಂಡರೆ ಅದನ್ನು ಪೂರ್ಣ ಮಾಡದೆ ಬಿಡುವುದಿಲ್ಲ, ನಿಜವಾಗಿಯೂ ನಾವು ಅವರಿಗೆ ಮೆಚ್ಚುಗೆ ಸೂಚಿಸಲೇ ಬೇಕು ಎಂದಿದ್ದರು. ರಾಯುಡು ಅತಿರೇಕ ಕಂಡ ಅನೇಕ ನೆಟ್ಟಿಗರು ತಕ್ಷಣ ಅವರನ್ನು ಐಪಿಎಲ್ ಕಾಮೆಂಟ್ರಿ ಪ್ಯಾನೆಲ್‌ನಿಂದ ಕಿತ್ತೊಗೆ ಯುವಂತೆ ಆಗ್ರಹಿಸಿದರು. ಇತ್ತೀಚೆಗಷ್ಟೇ ಇರ್ಫಾನ್ ಪಠಾಣ್ ಪಕ್ಷಪಾತಿಯಾಗಿ ಕಾಮೆಂಟರಿ ಮಾಡುತ್ತಾರೆ ಎಂಬ ಕಾರಣಕ್ಕೆ ಐಪಿಎಲ್ ಕ್ಯಾಮೆಂಟರಿ ಪ್ಯಾನೆಲ್‌ನಿಂದಲೇ ಕಿತ್ತು ಹಾಕಲಾಗಿತ್ತು.

ಲಖನೌಗೆ ನಿಕೋಲಸ್ ಪೂರನ್, ಶಾರ್ದೂಲ್ ಠಾಕೂರ್ ಬಲ | ಪಂಜಾಬ್‌ಗೆ ಅಯ್ಯರ್ ಮೇಲೆ ನಿರೀಕ್ಷೆ

ತವರಿನಲ್ಲಿಂದು ಲಖನೌಗೆ ಪಂಜಾಬ್ ಸವಾಲು

ಲಖನೌ: ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆ ಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಲಖನೌ ಸೂಪರ್ ಜೈಂಟ್ಸ್ ತಂಡವು ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಈ ಆವೃತ್ತಿಯ ಟೂರ್ನಿಯಲ್ಲಿ ಈಗಾಗಲೇ ಲಖನೌ ತಂಡವು 2 ಪಂದ್ಯಗಳನ್ನು ಆಡಿದ್ದು, ಒಂದರಲ್ಲಿ ಗೆಲುವು ಮತ್ತು ಇನ್ನೊಂದು ಪಂದ್ಯದಲ್ಲಿ ಸೋಲನ್ನು ಕಂಡಿದೆ. ಮಾರ್ಚ್ 24ರಂದು ನಡೆದಿದ್ದ ಪಂದ್ಯದಲ್ಲಿ ಲಖನೌ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ಲಖನೌ 8 ವಿಕೆಟ್‌ಗೆ 209 ರನ್ ಗಳಿಸಿತ್ತು. ಆ ಮೊತ್ತವನ್ನು ಬೆನ್ನಟ್ಟಿದ್ದ ದೆಹಲಿ ತಂಡವು ಪಂದ್ಯದ ಕೊನೆಯ ಓವರ್‌ನ ವರೆಗೂ ಲಖನೌ ಕೈಯಲ್ಲಿದ್ದ ಜಯವನ್ನು ಕಸಿದುಕೊಂಡು ಒಂದು ವಿಕೆಟ್ ಗೆಲುವು ಸಾಧಿಸಿತ್ತು. ಆ ಪಂದ್ಯದಲ್ಲಿ ಲಖನೌ ಪರ ಪೂರನ್ 75 ರನ್ ಹಾಗೂ ಮಾರ್ಷ್ 72 ರನ್ ಗಳಿಸಿದ್ದರು. ಬೌಲಿಂಗ್‌ನಲ್ಲಿ ಶಾರ್ದೂಲ್ ಠಾಕೂರ್, ದಿಗ್ವೇಶ್ ಹಾಗೂ ಸಿದ್ಧಾರ್ಥ್ ತಲಾ ಎರಡು ವಿಕೆಟ್ ಗಳಿಸಿ ಮಿಂಚಿದ್ದರೂ, ಲಖನೌ ತಂಡಕ್ಕೆ ಆ ಪಂದ್ಯದಲ್ಲಿ ದೆಹಲಿ ವಿರುದ್ಧ ಸೋಲನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ.

ಮಾರ್ಚ್ 27ರಂದು ನಡೆದ ಪಂದ್ಯದಲ್ಲಿ ಲಖನೌ ತಂಡವು ಹೈದರಾಬಾದನ್ನು ಬಗ್ಗು ಬಡಿದಿತ್ತು. ಮೊದಲು ಬ್ಯಾಟಿಂಗ್ ನಡೆಸಿದ್ದ ಹೈದರಾಬಾದ್ 9 ವಿಕೆಟ್‌ಗೆ 190 ರನ್ ಗಳಿಸಿತ್ತು. ಆ ಗುರಿ ಬೆಂಬತ್ತಿದ್ದ ಲಖನೌ 5 ವಿಕೆಟ್ ಗೆಲುವು ಪಡೆದು ಸಂಭ್ರಮಿಸಿತ್ತು. ತಂಡದ 2ನೇ ಪಂದ್ಯದಲ್ಲೂ 70 ರನ್ ಗಳಿಸಿ ಪೂರನ್ ಮತ್ತೆ ಮಿಂಚಿದ್ದರು. ಆ ಪಂದ್ಯದಲ್ಲಿ ಮಾರ್ಷ್ 52 ರನ್ ಗಳಿಸಿದ್ದರು. ಶಾರ್ದೂಲ್ ಠಾಕೂರ್ 4 ವಿಕೆಟ್ ಗಳಿಸಿ ಹೈದರಾಬಾದ್ ವಿರುದ್ಧ ಲಖನೌ ಜಯ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಂಗಳವಾರ ಎದುರಿಸಲಿರುವ ಪಂಜಾಬ್ ಕಿಂಗ್ಸ್ ಈ ಐಪಿಎಲ್‌ನಲ್ಲಿ ಮಾರ್ಚ್ 25ರಂದು ಮಾತ್ರ ಒಂದು ಪಂದ್ಯ ಆಡಿದ್ದು, ಗುಜರಾತ್ ವಿರುದ್ಧ ಅಂದಿನ ಪಂದ್ಯದಲ್ಲಿ ಅದು 11 ರನ್‌ಗಳ ರೋಚಕ ಗೆಲುವನ್ನು ಪಡೆದಿತ್ತು. ಮೊದಲು ಬ್ಯಾಟ್ ಮಾಡಿದ್ದ ಪಂಜಾಬ್ 5 ವಿಕೆಟ್‌ಗೆ 243 ರನ್ ಗಳಿಸಿತ್ತು. ಆ ಗುರಿ ಬೆನ್ನಟ್ಟಿದ್ದ ಗುಜರಾತ್ 232 ರನ್ ಗಳಿಸಿ ಪಂಜಾಬ್ ವಿರುದ್ಧ 11 ರನ್ ಸೋಲೊಪ್ಪಿಕೊಂಡಿತ್ತು. ಅಂದಿನ ಪಂದ್ಯದಲ್ಲಿ ಪಂಜಾಬ್ ಪರ ನಾಯಕ ಶ್ರೇಯಸ್ ಅಯ್ಯರ್ ಅಜೇಯ 97 ರನ್ ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರೆ, ಪಿಯೂಶ್ ಆರ್ಯ 47 ರನ್ ಗಳಿಸಿದ್ದರು. ಗುಜರಾತ್ ವಿರುದ್ಧದ ಪಂದ್ಯದಲ್ಲಿ ಪಂಜಾಬ್ ಪರ ಅರ್ಶದೀಪ್ ಸಿಂಗ್ 2 ವಿಕೆಟ್ ಗಳಿಸಿದ್ದರೆ, ಮ್ಯಾಕ್ಸ್‌ವೆಲ್ ಮತ್ತು ಮಾರ್ಕೊ ಜಾನ್ಸನ್ ತಲಾ ಒಂದು ವಿಕೆಟ್ ಗಳಿಸಿದ್ದರು.

ಈ ವರೆಗೂ ಐಪಿಎಲ್‌ನಲ್ಲಿ ಲಖನೌ ಮತ್ತು ಪಂಜಾಬ್ ಒಟ್ಟು 4 ಬಾರಿ ಮುಖಾಮುಖಿ ಆಗಿವೆ. ಲಖನೌ ತಂಡವು 3 ಬಾರಿ ಜಯ ಗಳಿಸಿದ್ದರೆ, ಪಂಜಾಬ್ ಒಂದು ಪಂದ್ಯದಲ್ಲಿ ಮಾತ್ರ ಗೆಲುವು ಪಡೆದಿತ್ತು. ಈ ಐಪಿಎಲ್‌ನಲ್ಲಿ ತಾನು ಆಡಿರುವ 2 ಪಂದ್ಯಗಳ ಪೈಕಿ ಒಂದು ಪಂದ್ಯ ಗೆದ್ದಿರುವ ಲಖನೌ ಅಂಕಪಟ್ಟಿಯಲ್ಲಿ 2 ಅಂಕ ಸಂಪಾದಿಸಿದ್ದರೆ, ಪಂಜಾಬ್ ಆಡಿರುವ ಏಕೈಕ ಪಂದ್ಯದ ಮೂಲಕ 2 ಅಂಕಗಳನ್ನು ಸಂಪಾದಿಸುವಲ್ಲಿ ಯಶಸ್ವಿಯಾಗಿದೆ. ತನ್ನ ತವರಿನಲ್ಲಿ ಪಂದ್ಯ ನಡೆಯಲಿ ರುವ ಕಾರಣ ಸಹಜವಾಗಿಯೇ ಲಖನೌ ತಂಡಕ್ಕೆ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರ ಬೆಂಬಲ ಸಿಗುವುದು ಖಚಿತ. ಈ ಐಪಿಎಲ್‌ನಲ್ಲಿ ಗೆಲುವಿನ ಶುಭಾರಂಭ ಮಾಡಿರುವ ಪಂಜಾಬ್ ತಂಡ ಲಖನೌವನ್ನು ಈ ಪಂದ್ಯದಲ್ಲಿ ಹೇಗೆ ಕಟ್ಟಿ ಹಾಕಲಿದೆ ಎಂಬುದು ನಿಜಕ್ಕೂ ಕುತೂಹಲಕಾರಿ ಸಂಗತಿ.

ಲಖನೌ	
ರಿಷಭ್ ನಾಯಕ	ಅವೇಶ್ ಖಾನ್
ಪೂರನ್	ಜುಯಲ್
ರವಿ ಬಿಷ್ಣೋಯ್	ಆಕಾಶ್‌ದೀಪ್
ಬದೋನಿ	ಎಂ. ಸಿದ್ಧಾರ್ಥ್
ಮಿಲ್ಲರ್	ದಿಗ್ವೇಶ್ ಸಿಂಗ್
ಮಾರ್ಕ್ರಮ್	ಆಕಾಶ್ ಸಿಂಗ್
ಮಿಚೆಲ್ ಮಾರ್ಷ್	ಪ್ರಿನ್ಸ್ ಯಾದವ್

ಪಂಜಾಬ್	
ರಿಷಭ್ ನಾಯಕ	ಅವೇಶ್ ಖಾನ್
ಪೂರನ್	ಜುಯಲ್
ರವಿ ಬಿಷ್ಣೋಯ್	ಆಕಾಶ್‌ದೀಪ್
ಬದೋನಿ	ಎಂ. ಸಿದ್ಧಾರ್ಥ್
ಮಿಲ್ಲರ್	ದಿಗ್ವೇಶ್ ಸಿಂಗ್
ಮಾರ್ಕ್ರಮ್	ಆಕಾಶ್ ಸಿಂಗ್
ಮಿಚೆಲ್ ಮಾರ್ಷ್	ಪ್ರಿನ್ಸ್ ಯಾದವ್